# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997

2021ರವರೆಗಿನ ತಿದ್ದುಪಡಿಗಳನ್ನು ಒಳಗೊಂಡಿದೆ.

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004

2015ರವರೆಗಿನ ತಿದ್ದುಪಡಿಗಳನ್ನು ಒಳಗೊಂಡಿದೆ.

ಪ್ರಕಟಣೆ :

ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿ ನಿಯಮಿತ
“ಸೌಹಾರ್ದ ಸಹಕಾರಿ ಸೌಧ” ನಂ.68,
18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560055
www.souharda.coop

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997

2021ರ ವರೆಗಿನ ತಿದ್ದುಪಡಿಗಳನ್ನು ಒಳಗೊಂಡಿದೆ

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997**

ಪರಿಷ್ಕೃತ ಆವೃತ್ತಿ : ಫೆಬ್ರುವರಿ 2022

ಪ್ರಕಾಶಕರು : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಂ.68, 17 & 18 ಅಡ್ಡರಸ್ತೆ ನಡುವೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560010
ದೂರವಾಣಿ: 91-80-23378375-80
ಇ-ಮೇಲ್: souharda@souharda.coop
ವೆಬ್‌ಸೈಟ್: www.souharda.coop

ಬೆಲೆ : ರೂ. 100/-

ಮುದ್ರಕರು :

Note: Utmost care is taken to publish this Act as in the original. Readers are requested to refer the original Gazette Publication for further clarifications.

While efforts is taken to avoid errors or omissions in this Publication, any mistake or omission that may have crept in is not intentional. It may be taken note of that neither publisher nor the author will be responsible for any damage or loss of any kind arising to any one in any manner on account of such errors and omissions

## ಮೊದಲ ಮಾತು

ಭಾರತದಲ್ಲಿ ಸಹಕಾರಿ ಕಾಯ್ದೆ ಜಾರಿಗೆ ಬಂದು ನೂರು ವರ್ಷಗಳು ಸಂದಿವೆ. 1904 ಮಾರ್ಚ 25 ರಿಂದ ಜಾರಿಗೆ ಬಂದ The Cooperative Credit Societies Act, 1904 ನಮ್ಮ ದೇಶದ ಮೊದಲ ಸಹಕಾರಿ ಕಾಯ್ದೆ. ಧಾರವಾಡ ಜಿಲ್ಲೆಯ (ಈಗಿನ ಗದಗ) ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು 8 ಜುಲೈ 1905 ರಂದು 12 ಜನ ಸದಸ್ಯರೊಂದಿಗೆ 2 ಸಾವಿರ ರೂಪಾಯಿ ಶೇರು ಬಂಡವಾಳದೊಂದಿಗೆ ಆರಂಭಿಸಿದ ಕೃಷಿ ಪತ್ತಿನ ಸಹಕಾರ ಸಂಘವು ದೇಶದ ಮೊದಲ ಸಹಕಾರ ಕಾಯ್ದೆಯಡಿಯ ಮೊದಲ ಸಹಕಾರ ಸಂಘ ಎಂಬುದು ಕರ್ನಾಟಕದ ರಾಜ್ಯದ ಹೆಗ್ಗಳಿಕೆ. 1904 ರಲ್ಲಿ ಜಾರಿಗೆ ಬಂದ ಕಾಯ್ದೆಯು ಕೇವಲ ಪತ್ತಿನ ಸಹಕಾರಿ ಸಂಘಗಳಿಗಾಗಿತ್ತು. ನಂತರ 1912 ರಲ್ಲಿ ಬೇರೆ ಬೇರೆ ಚಟುವಟಿಕೆಗಳನ್ನು ನಡೆಸಲು ಅನುವು ಮಾಡಿಕೊಡುವ The Cooperative Societies Act, 1912 ಜಾರಿಗೆ ಬಂದಿತು. 1919 ರ ಭಾರತ ಸರಕಾರ ಕಾಯ್ದೆಯಂತೆ ಸಹಕಾರ ವಿಷಯವು ಪ್ರಾಂತೀಯ ಸರಕಾರಗಳ ವಿಷಯ ಪಟ್ಟಿಯಲ್ಲಿ ಬಂದಾಗ ಪ್ರಾಂತೀಯ ಸರಕಾರಗಳು ಸಹಕಾರ ಕಾಯ್ದೆಗಳನ್ನು ರೂಪಿಸುವಾಗ 1912ರ ಕಾಯ್ದೆಯು ಅವುಗಳಿಗೆ ಮಾದರಿ ಆಗಿತ್ತು. ಸ್ವಾತಂತ್ರ್ಯಾನಂತರ ವಿವಿಧ ರಾಜ್ಯ ಸರಕಾರಗಳು ತಮ್ಮದೇ ಆದ ಸಹಕಾರಿ ಕಾಯ್ದೆಯನ್ನು ಮತ್ತು ಕೇಂದ್ರ ಸರಕಾರವು ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಚಟುವಟಿಕೆ ನಡೆಸುವ ಸಹಕಾರಿ ಸಂಸ್ಥೆಗಳಿಗೆ ಬಹುರಾಜ್ಯಗಳ ಸಹಕಾರಿ ಕಾಯ್ದೆಯನ್ನು ಜಾರಿಗೆ ತಂದವು. ಈ ಕಾಯ್ದೆಗಳಿಗೂ 1912 ರ ಕಾಯ್ದೆಯೇ ಮಾದರಿಯಾಗಿತ್ತು.

ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗವನ್ನು ತೊಡಗಿಸಲು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣವನ್ನು ಶೇರು ಹಣ, ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಿದವು. ಗ್ರಾಮಕ್ಕೊಂದು ಪಂಚಾಯಿತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ಥಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಸುರಿದವು. ಆದರೂ ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಅನೇಕ ವೇದಿಕೆಗಳ ಮೂಲಕ ಚರ್ಚೆ ಆರಂಭವಾಯಿತು. ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಿಲ್ಲ ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆ ಎಂಬ ಸಹಕಾರಿಗಳ ಕೂಗು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ ಶ್ರೀ ಅರ್ಧ ನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಅಧ್ಯಯನ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು 1987ರಲ್ಲಿ ವರದಿ ನೀಡಿ ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು ಹೇಳಿತು. ಸಹಕಾರಿ ಚಳುವಳಿ ವಿಫಲವಾದರೂ ಜನಸಾಮಾನ್ಯರು

ತಮ್ಮ ಆರ್ಥಿಕ ಏಳ್ಗೆಗಾಗಿ ತಾವೇ ಸ್ವಯಂಸ್ಫೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರಕಾರದ ಹಸ್ತಕ್ಷೇಪ ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ 1991 ರಲ್ಲಿ ವಿವಿಧ ರಾಜ್ಯಗಳ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಕೇಂದ್ರ ಸರಕಾರವು ಎಲ್ಲ ರಾಜ್ಯ ಸರಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ ಫಲವಾಗಿ ಯೋಜನಾ ಆಯೋಗ ರೂಪಿಸಿದ ಮಾದರಿ ಸಹಕಾರಿ ಕಾಯ್ದೆಗನುಗುಣವಾಗಿ ನಮ್ಮ ರಾಜ್ಯದಲ್ಲಿ ಜಾರಿಗೆ ತಂದ ಕಾಯ್ದೆಯೇ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997"

ಕರ್ನಾಟಕದಲ್ಲಿ 2001 ಜನೇವರಿ 1 ರಿಂದ ಜಾರಿಗೆ ಬಂದ ಈ ಕಾಯ್ದೆಯಡಿ ಈಗಾಗಲೇ 5400 ಕ್ಕೂ ಹೆಚ್ಚು ಸಹಕಾರಿಗಳು ನೋಂದಣಿಗೊಂಡು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕಾಯ್ದೆಯಡಿಯ ಶಾಸನಬದ್ಧ ಉಸ್ತುವಾರಿ ಸಂಸ್ಥೆಯಾದ ಸಂಯುಕ್ತ ಸಹಕಾರಿಯು ಇಪ್ಪತ್ತು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದೆ.

ಇದು ಸೌಹಾರ್ದ ಸಹಕಾರಿಗಳಿಗೆ ಉಪಯುಕ್ತವಾದ ಹಾಗೂ ಸೌಹಾರ್ದ ಕಾಯ್ದೆಗೆ ಹೆಚ್ಚಿನ ಶಕ್ತಿ ನೀಡುವ ಪುಸ್ತಕವಾಗಲಿ ಎಂದು ಆಶಿಸುತ್ತೇವೆ.

– ಪ್ರಕಾಶಕ

01 ಫೆಬ್ರುವರಿ 2022

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997

## ವಿಷಯಾನುಕ್ರಮಣಿಕೆ

ಪ್ರಕರಣದ ಸಂಖ್ಯೆ ಪುಟ ಸಂಖ್ಯೆ

### ಅಧ್ಯಾಯ I
### ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ........ 1
2. ಪರಿಭಾಷೆಗಳು ........ 1


### ಅಧ್ಯಾಯ II
### ನೋಂದಣಿ


3. ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಉಪ ರಿಜಿಸ್ಟ್ರಾರ್ ಮತ್ತು ಸಹಾಯಕ ರಿಜಿಸ್ಟ್ರಾರ್ ........ 7
4. ನೋಂದಣಿ ಮಾಡಬಹುದಾದ ಸಹಕಾರಿಗಳು ........ 7
5. ಸಹಕಾರಿಯ ನೋಂದಣಿಗಾಗಿ ಅರ್ಜಿ ........ 8
6. ನೋಂದಣಿ ಪ್ರಮಾಣಪತ್ರ ........ 11
7. ಸಹಕಾರಿಯು ನಿಗಮಿತ ನಿಕಾಯವಾಗಿರುವುದು. ........ 11
8. ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಣಿ. ........ 11
9. ಹೆಸರು, ಮುಂತಾದುವುಗಳನ್ನು ಪ್ರದರ್ಶಿಸುವುದು ........ 11
10. ಉಪವಿಧಿಗಳು ........ 12
11. ಉಪವಿಧಿಗಳ ತಿದ್ದುಪಡಿ ........ 15
12. ಸಹಕಾರಿಗಳ ಹೊಣೆಗಾರಿಕೆಗಳ ಬದಲಾವಣೆ, ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ, ವಿಭಜನೆ ಮತ್ತು ವಿಲೀನತೆ ........ 17
13. ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ, ವಿಭಜನೆ ಮತ್ತು ವಿಲೀನತೆಯ ಪರಿಣಾಮಗಳು ........ 20
14. ಸಹಕಾರಿಗಳ ಪಾಲುದಾರಿಕೆ ........ 20
15. ಪೂರಕ ಸಂಸ್ಥೆಗಳ ಪ್ರಾರಂಭ ........ 21
16. ಸಹಕಾರಿಗಳಿಂದ ಸಹೋದ್ಯಮ ........ 21


### ಅಧ್ಯಾಯ III
### ನಿಧಿಗಳು


17. ನಿಧಿಗಳ ಸಂಗ್ರಹಣೆ ........ 22
17ಎ. ಷೇರುಗಳನ್ನು ಹೊಂದುವುದರ ಮೇಲಿನ ನಿರ್ಬಂಧ ........ 22
18. ನಿಧಿಗಳ ಹೂಡಿಕೆ ........ 22

19. ಸಹಕಾರಿಯಿಂದ ವಂತಿಗೆಯ ಬಗ್ಗೆ ನಿರ್ಬಂಧಗಳು ............ 22
19ಎ. ಕೆಲವು ಸಂದರ್ಭಗಳಲ್ಲಿ ಸಹಕಾರಿಯ ಕ್ಲೇಮುಗಳನ್ನು ಪೂರೈಸಲು ವೇತನದಿಂದ ಕಡಿತ ............ 23

## ಅಧ್ಯಾಯ IV

## ಸಹಕಾರಿಯ ಆಡಳಿತ ನಿರ್ವಹಣೆ

20. ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದಾದ ಮತ್ತು ಮುಂದುವರೆಸಬಹುದಾದ ವ್ಯಕ್ತಿಗಳು ............ 24
20ಎ. ಸದಸ್ಯತ್ವವನ್ನು ಒಪ್ಪುವುದು ಅಥವಾ ನಿರಾಕರಿಸುವುದು ............ 25
20ಬಿ. ಸದಸ್ಯನ ಮತದಾನದ ಹಕ್ಕು ............ 26
21. ............ 26
21ಎ. ನಾಮ ಮಾತ್ರ ಸದಸ್ಯರು ............ 26
21ಬಿ. ಸಹ ಸದಸ್ಯತ್ವ ............ 27
22. ಸದಸ್ಯೇತರರಿಗೆ ಸೇವೆಗಳ ನಿರ್ಬಂಧ ............ 28
23. ಸಾಮಾನ್ಯ ನಿಕಾಯ ............ 28
23ಎ. ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು ತೆರೆಯುವುದು ............ 30
23ಬಿ.ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆ ............ 30
24. ಮಂಡಲಿಯ ರಚನೆ ............ 31
25. ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ ............ 32
25ಎ. ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ. ............ 35
26. ಮಂಡಲಿಯ ಚುನಾವಣೆ ............ 35
26ಎ. ಸಹಕಾರ ಚುನಾವಣಾ ಆಯೋಗ ............ 35
27. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ............ 36
28. ಪದಾಧಿಕಾರಿಗಳನ್ನು ಚುನಾಯಿಸುವುದು ............ 37
28ಎ. ಸಹಕಾರಿಯ ಮಂಡಲಿಯ ಸದಸ್ಯ ಅಥವಾ ಪದಾಧಿಕಾರಿಯ ರಾಜೀನಾಮೆ ............ 38
29. ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು ............ 38
30. ಸಭೆಗಳು ............ 39
31. ನೌಕರರು ............ 40

## ಅಧ್ಯಾಯ V
## ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವಿಚಾರಣೆ


32. ದಾಖಲೆಗಳು, ಲೆಕ್ಕಪತ್ರ ಇತ್ಯಾದಿಗಳನ್ನು ಇಡುವುದು ................................ 43
32ಎ. ........................................................................................ 44
33. ಲೆಕ್ಕಪರಿಶೋಧನೆ. ........................................................................ 44
34. ಮಾಹಿತಿಯನ್ನು ಒದಗಿಸುವುದು ............................................................ 52
35. ವಿಚಾರಣೆ................................................................................. 53
36. ವ್ಯಕ್ತಿಗಳನ್ನು ಮತ್ತು ದಸ್ತಾವೇಜುಗಳನ್ನು ಸಮನುಮಾಡಲು
ಮತ್ತು ಪರಿಶೀಲಿಸಲು ಅಧಿಕಾರ .............................................................. 54
37. ವಿಚಾರಣಾ ವರದಿಯ ಬಗ್ಗೆ ಕ್ರಮ ........................................................ 56
37ಎ. ಅಧಿಭಾರ (ಸರ್ಚಾರ್ಜ್) ................................................................ 56


## ಅಧ್ಯಾಯ VI
## ರದ್ದಿಯಾತಿ


38. ರದ್ದಿಯಾತಿ ............................................................................... 58
38ಎ. ವಿಶೇಷಾಧಿಕಾರಿಯ ನೇಮಕ ............................................................... 60
38ಬಿ. ಪುಸ್ತಕಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ. ...................... 61


## ಅಧ್ಯಾಯ VII
## ವಿವಾದಗಳ ಇತ್ಯರ್ಥ


39. ತೀರ್ಮಾನಕ್ಕಾಗಿ ಕಳುಹಿಸಬಹುದಾದ ವಿವಾದಗಳು ................................ 62
40. ಕಾಲ ಪರಿಮಿತಿಯ ಅವಧಿ .................................................................. 64
41. ವಿವಾದಗಳ ವಿಲೆ .......................................................................... 64
42. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ ........................................ 66
43. ಆದೇಶಗಳು ಮುಂತಾದವುಗಳ ಅಮಲ್ಜಾರಿ ................................................ 66
43ಎ. ಶುಲ್ಕಗಳು ................................................................................ 69
44. ಅವಾರ್ಡ್ ಅಥವಾ ಆದೇಶಕ್ಕೆ ಮುಂಚೆ ಸ್ವತ್ತಿನ ಜಪ್ತಿ ................................ 69
45. ವಿವಾದಗಳ ಇತ್ಯರ್ಥದ ಕಾರ್ಯವಿಧಾನ ಹಾಗೂ ರಿಜಿಸ್ಟ್ರಾರನ
ಅಥವಾ ವಿವಾದವನ್ನು ತೀರ್ಮಾನಕ್ಕಾಗಿ ಕಳಿಸಿರುವ
ಬೇರೊಬ್ಬ ವ್ಯಕ್ತಿಯ ಅಧಿಕಾರ................................................................ 70
46. ಅಪೀಲು ..................................................................................... 72

## ಅಧ್ಯಾಯ VIII
### ಸಹಕಾರಿಗಳ ಸಮಾಪನ


47. ಸಹಕಾರಿಯ ಸಮಾಪನ ........ 74
48. ರಿಜಿಸ್ಟ್ರಾರನಿಂದ ಸಮಾಪನ ........ 75
49. ಸಮಾಪಕನ ಕರ್ತವ್ಯಗಳು ........ 77
50. ಸಮಾಪಕನ ಅಧಿಕಾರಗಳು ........ 79
51. ಅಂತಿಮ ಲೆಕ್ಕಪತ್ರಗಳು ........ 80
52. ಸಮಾಪನದ ಹಂತದಲ್ಲಿರುವ ಸಹಕಾರಿಯ ಆಸ್ತಿಗಳ ವಿಲೆ ........ 81
52ಎ. ಹೆಚ್ಚುವರಿ ನಿಧಿ, ಠೇವಣಿಗಳು ಮತ್ತು ಆಸ್ತಿಗಳ ವರ್ಗಾವಣೆ ........ 81


## ಅಧ್ಯಾಯ IX
### ಸಂಯುಕ್ತ ಸಹಕಾರಿ


53. ಸಂಯುಕ್ತ ಸಹಕಾರಿಯ ರಚನೆ, ಪ್ರಕಾರ್ಯಗಳು ಹಾಗೂ ನಿರ್ವಹಣೆ ........ 82
53ಎ. ಸಂಯುಕ್ತ ಸಹಕಾರಿಯ ಉಪವಿಧಿಗಳು ........ 84
53ಬಿ. ನಿರ್ದೇಶಕರುಗಳ ಅನರ್ಹತೆ ........ 86
54. ಸಂಯುಕ್ತ ಸಹಕಾರಿಯ ಮಂಡಲಿ ........ 86
55. ಚುನಾಯಿತನಾಗಲು ಅಥವಾ ನಿರ್ದೇಶಕನಾಗಿ ಮುಂದುವರಿಯಲು ಅನರ್ಹತೆ ........ 87
56. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ........ 88
57. ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಅಧಿಕಾರಗಳ ಮತ್ತು ಪ್ರಕಾರ್ಯಗಳು ........ 90
57ಎ. ಆಡಳಿತ ಮಂಡಲಿಯ ರದ್ದತಿ ಅಥವಾ ಅಮಾನತ್ತು ........ 91
58. ಚುನಾವಣೆಗಳು ........ 91
59. ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು ........ 91
60. ಸಭೆಗಳು ........ 92
61. ಸಂಯುಕ್ತ ಸಹಕಾರಿಯ ನೌಕರರು ........ 93
62. ಸಂಯುಕ್ತ ಸಹಕಾರಿಯ ನಿಧಿಗಳು ........ 95
62ಎ. ಸಹಕಾರ ಶಿಕ್ಷಣ ಮತ್ತು ತರಬೇತಿ ........ 96
63. ಲೆಕ್ಕಪತ್ರಗಳು ........ 96
63ಎ. ಸದಸ್ಯರಿಗೆ ಮಾಹಿತಿ ಒದಗಿಸುವುದು ........ 97
64. ಲೆಕ್ಕ ಪರಿಶೋಧನೆ ........ 97
64ಎ. ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಗಳನ್ನು ನೀಡುವುದು ........ 97

65. ವಿಚಾರಣೆ ........................................................................................ 98
66. ವಿಚಾರಣಾ ವರದಿಯ ಮೇಲೆ ಕ್ರಮ ..................................................... 99

## ಅಧ್ಯಾಯ X
### ಸಹಕಾರಿ ತತ್ವಗಳು

67. ಸಹಕಾರಿ ತತ್ವಗಳು ................................................................ 100

## ಅಧ್ಯಾಯ X-A
### ವಿಮೆ ಮಾಡಿಸಲಾದ ಬ್ಯಾಂಕುಗಳಿಗಾಗಿ ವಿಶೇಷ ಉಪಬಂಧಗಳು

67ಎ.ರಿಜರ್ವ್ ಬ್ಯಾಂಕು ಆದೇಶ ಹೊರಡಿಸಲು ಅಗತ್ಯಪಡಿಸಿದ್ದರೆ
ರಿಜಿಸ್ಟ್ರಾರನು ಹೊರಡಿಸಬೇಕಾದ ಕೆಲವು ಆದೇಶಗಳು ............................ 102
67ಬಿ.ಸಮಾಪಕರು ಠೇವಣಿ ವಿಮಾ ನಿಗಮಕ್ಕೆ ಹಣ ತುಂಬಿಕೊಡುವುದು ...........103

## ಅಧ್ಯಾಯ XI
### ಅಪರಾಧಗಳು ಮತ್ತು ದಂಡಗಳು

68. ಅಪರಾಧಗಳು ಮತ್ತು ದಂಡಗಳು ...................................................... 104

## ಅಧ್ಯಾಯ XII
### ಸಂಕೀರ್ಣಗಳು

69. ಅಪರಾಧದ ಸಂಜ್ಞೇಯತೆ ....................................................................107
69ಎ. ಅಪರಾಧಗಳ ಕುರಿತು ದೂರು ..........................................................107
69ಬಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ. ............................................107
70. ತೊಂದರೆಗಳನ್ನು ನಿವಾರಿಸಲು ಅಧಿಕಾರ ..............................................107
71. ನಿಯಮ ರಚನಾಕಾರ ..........................................................................107
72. ಉಳಿಸುವಿಕೆ ......................................................................................108

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004

## ಅಧ್ಯಾಯ – I
### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ........................................................... 111
2. ಪರಿಭಾಷೆಗಳು ...................................................................................... 111

## ಅಧ್ಯಾಯ II
### ಪರಿಭಾಷೆಗಳು

3. ಸಹಕಾರಿಗಳ ನೋಂದಣಿ ಮತ್ತು ಅವುಗಳ ಉಪವಿಧಿಗಳು ...................... 113
3ಎ. ಉಪವಿಧಿ ತಿದ್ದುಪಡಿಗೆ ಶುಲ್ಕ................................................................ 116

4. ಸದಸ್ಯರಿಗೆ ಗುರುತಿನ ಕಾರ್ಡನ್ನು ನೀಡುವುದು ........................................ 116

## ಅಧ್ಯಾಯ III

## ಸಹಕಾರಿಯ ಮಂಡಳಿಯ ಚುನಾವಣೆ

5. ಸಹಕಾರಿಯ ಚುನಾವಣೆ ಆಯೋಗ (ಸಿಇಸಿ) ........................................ 117
5ಎ. ಆಡಳಿತ ಮಂಡಳಿಗಳಿಗೆ ಸಾಮಾನ್ಯ ಚುನಾವಣೆ ನಡೆಸುವುದು ................. 117
5ಬಿ. ಮತದಾರರ ಪಟ್ಟಿ ತಯಾರಿಕೆ ಮತ್ತು ಚುನಾವಣಾ ಪ್ರಕ್ರಿಯೆ ..................... 117
5ಸಿ. ರಿಟರ್ನಿಂಗ್ ಅಧಿಕಾರಿ ಮತ್ತು ಅವರ ಪ್ರಕಾರ್ಯಗಳು ........................... 120
5ಡಿ. ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಚುನಾವಣಾ ಸಿಬ್ಬಂದಿ ನೇಮಕಾತಿ ........123
5ಇ. ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆ ............................................ 124
5ಎಫ್. ನಾಮಪತ್ರ ಸಲ್ಲಿಕೆ ..............................................................125
5ಜಿ. ನಾಮಪತ್ರಗಳ ಪರಿಶೀಲನೆ ......................................................126
5ಹೆಚ್. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವಿಕೆ ...........................128
5ಐ. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ತಯಾರಿಕೆ ...........................................128
5ಜೆ. ಚಿಹ್ನೆಗಳ ಹಂಚಿಕೆ ..............................................................129
5 ಕೆ. ಮತದಾನಕ್ಕೆ ಮುಂಚೆ ಅಭ್ಯರ್ಥಿಯ ಮರಣ .......................................130
5ಎಲ್. ಸ್ಪರ್ಧಿಸಿದ ಮತ್ತು ಸ್ಪರ್ಧಿಸದ ಚುನಾವಣೆಯಲ್ಲಿ ಕಾರ್ಯವಿಧಾನ ......... 131
5ಎಂ. ತುರ್ತುಸ್ಥಿತಿಯಲ್ಲಿ ಮತದಾನ ಮುಂದೂಡಿಕೆ ........................................ 131
5ಎನ್. ಮತಪೆಟ್ಟಿಗೆಗಳ ನಾಶ ಇತ್ಯಾದಿ ಸಂದರ್ಭಗಳಲ್ಲಿ ಹೊಸ ಮತದಾನ ....... 133
5ಒ. ಮತಗಟ್ಟೆ ವಶಪಡಿಸುವ ಕಾರಣದ ಮೇಲೆ ಚುನಾವಣೆಯ
ರದ್ದುಪಡಿಸುವಿಕೆ ಅಥವಾ ಮತದಾನದ ಮುಂದೂಡುವಿಕೆ .......................134
5ಪಿ. ಮತದಾನ ಮಾಡುವ ರೀತಿ ......................................................135
5ಕ್ಯೂ. ಮತಪತ್ರ ಮತ್ತು ಮತಪೆಟ್ಟಿಗೆ ................................................136
5ಆರ್. ಮತದಾನ ಕೇಂದ್ರಗಳಲ್ಲಿನ ವ್ಯವಸ್ಥೆ ...........................................136
5ಎಸ್. ಮತದಾನ ಕೇಂದ್ರಗಳಿಗೆ ಪ್ರವೇಶ ..............................................137
5ಟಿ. ಮತದಾರರ ಗುರುತಿಸುವಿಕೆ ......................................................137
5ಯು. ಮತದಾನಕ್ಕಾಗಿ ಮತಪೆಟ್ಟಿಗೆಗಳ ಸಿದ್ಧತೆ ..........................................138
5ವಿ . ಮತದಾರರಿಗೆ ಮತಪತ್ರಗಳನ್ನು ಕೊಡುವುದು .................................138
5ಡಬ್ಲ್ಯೂ. ಮತದಾನ ಕೇಂದ್ರದೊಳಗೆ ಮತದಾರರು ಮತದಾನದ
ಬಗ್ಗೆ ರಹಸ್ಯವನ್ನು ಕಾಪಾಡುವುದು ಮತ್ತು ಮತದಾನ ಪ್ರಕ್ರಿಯೆ ................. 139
5ಎಕ್ಸ್ . ದೃಷ್ಟಿಹೀನ ಮತ್ತು ಅಶಕ್ತ ಮತದಾರರ ಮತಗಳನ್ನು ದಾಖಲು
ಮಾಡುವುದು ........................................................................ 139

5ವೈ. ಮತದಾನದ ಮುಕ್ತಾಯ ..................................................... 139
5ಜಡ್. ಮತದಾನದ ತರುವಾಯ ಮತಪೆಟ್ಟಿಗೆಗಳನ್ನು ಮೊಹರು ಮಾಡುವುದು 140
5ಎಎ. ಮತಪತ್ರಗಳ ಲೆಕ್ಕ ..................................................... 140
5ಎಬಿ. ಇತರೆ ಪ್ಯಾಕೆಟ್ಟುಗಳನ್ನು ಮೊಹರು ಮಾಡುವುದು ............................ 140
5ಎಸಿ. ಮತಗಳ ಎಣಿಕೆ ..................................................... 140
5ಎಡಿ. ಚುನಾವಣಾ ಫಲಿತಾಂಶದ ಘೋಷಣೆ ಮತ್ತು ಚುನಾವಣಾ ವಿವರ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸುವುದು ................ 141
5ಎಇ. ಚುನಾಯಿತ ಉಮೇದುವಾರರಿಗೆ ಚುನಾವಣೆ ಪ್ರಮಾಣ ಪತ್ರವನ್ನು ಕೊಡುವುದು ..................................................... 142
5ಎಎಫ್. ಚುನಾವಣಾ ವೆಚ್ಚಗಳು ..................................................... 142
5ಎಜಿ. ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಸಂರಕ್ಷಣೆ ..................................................... 142
5ಎಹೆಚ್. ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ ..................................................... 143
5ಎಐ. ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ವಿಲೇವಾರಿ ...................... 143
5ಎಜೆ. ಉಮೇದುವಾರರ ಠೇವಣಿಯನ್ನು ಹಿಂತಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು ..................................................... 144
5ಎಕೆ. ಸಹಕಾರಿಯಲ್ಲಿ ಉದ್ಭವಿಸುವ ಆಕಸ್ಮಿಕ ಖಾಲಿ ಸ್ಥಾನವನ್ನು ವರದಿ ಮಾಡುವುದು ..................................................... 145
6. ಪದಾಧಿಕಾರಿಗಳ ಚುನಾವಣೆ ..................................................... 145
6ಎ. ನೋಂದಣಿಯ ನಂತರದ ಪ್ರಥಮ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು ..................................................... 149
6ಬಿ. ಪ್ರಥಮ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆ.................... 149
6ಸಿ. ಸಾಮಾನ್ಯ ಸಭೆಗಳು ..................................................... 149
6ಡಿ. ವಿಶೇಷ ಸಾಮಾನ್ಯ ಸಭೆಗಳು ..................................................... 153
6ಇ. ಆಡಳಿತ ಮಂಡಳಿಯ ಸಭೆಗಳು ..................................................... 153
6ಎಫ್. ಪ್ರತಿನಿಧಿಗಳ ಚುನಾವಣೆ ..................................................... 156
6ಜಿ. ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿನಿಧಿಗಳ ಸಂಖ್ಯೆ ......................... 156
6ಹೆಚ್. ಸಹಕಾರಿಯ ಸಾಮಾನ್ಯ ಚುನಾವಣೆಯಲ್ಲಿ ಮತದಾರರಗಣ ................ 157
6ಐ. ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಮತ್ತು ಹಿಂದುಳಿದವರ ವರ್ಗದವರಿಗೆ ಮೀಸಲಾತಿ .......... 157

6ಐ(ಎ). ಹಿಂದುಳಿದ ವರ್ಗಗಳ ಮೀಸಲಾತಿ ಸ್ಥಾನಗಳ ಸರದಿ........................ 158
6ಜೆ. ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು ....... 158
6ಕೆ. ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ ..... 160
6ಎಲ್. ಸಹಕಾರಿಯ ಅಧಿಕಾರಿಗಳ ಮತ್ತು ನೌಕರರ ನೇರ ನೇಮಕಾತಿ ............ 161

## ಅಧ್ಯಾಯ IV

7. ಮೀಸಲು ನಿಧಿಯ ಉದ್ದೇಶ ಮತ್ತು ಅದರ ವಿನಿಯೋಗ.......................... 162

## ಅಧ್ಯಾಯ V

## ಲೆಕ್ಕಪರಿಶೋಧನೆ

8. ಲೆಕ್ಕಪರಿಶೋಧನೆ ........................................................................ 165
8ಎ. ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ನೇಮಕವಾಗಲು ಅರ್ಹತೆ ........................................................... 168
8ಬಿ. ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಕಾರ್ಯವಿಧಾನ .................................................. 169
9. ಸಮಾಪನೆಯಲ್ಲಿರುವ ಸಹಕಾರಿಯ ಲೆಕ್ಕಪರಿಶೋಧನೆ ............................... 172
9ಎ. ಅಪೆಕ್ಸ್ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು ....................................................................... 173
9ಬಿ. ಸಾಮಾನ್ಯ ಸಭೆಯ ಕೋರಿಕೆ ಮೇರೆಗೆ ಯಾವುದೇ ಲೆಕ್ಕದ ಮರು ಪರಿಶೋಧನೆ ............................................................. 173
9ಸಿ. ರಾಜ್ಯ ಸಹಕಾರದ ಆದೇಶದ ಮೇರೆಗೆ ಲೆಕ್ಕಗಳ ಮರು ಪರಿಶೋಧನೆ....... 173
9ಡಿ. ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಕೊಡಮಾಡುವ ಸಂಭಾವನೆ.................................................................. 173
10. ಪ್ರಕರಣ 35ರ ಅಡಿಯಲ್ಲಿ ವಿಚಾರಣೆ ಕೋರಿ ಅರ್ಜಿ ............................... 173

## ಅಧ್ಯಾಯ VA

## ಸಹಕಾರ ಶಿಕ್ಷಣ ಮತ್ತು ತರಬೇತಿ

10ಎ. ಸಹಕಾರ ಶಿಕ್ಷಣ ನಿದಿಗೆ ಪಾವತಿ ......................................................... 174
10ಬಿ. ಶಿಕ್ಷಣ ನಿಧಿಯ ನಿರ್ವಹಣೆ ................................................................ 174
10ಸಿ. ಶಿಕ್ಷಣ ನಿಧಿಯನ್ನು ಬಳಕೆ ಮಾಡಬಹುದಾದ ಉದ್ದೇಶಗಳು .................... 175

## ಅಧ್ಯಾಯ VI

## ವಿವಾದಗಳ ಇತ್ಯರ್ಥ

11. ವಿವಾದಗಳನ್ನು ತೀರ್ಮಾನಕ್ಕೆ ಒಪ್ಪಿಸುವುದು ಮತ್ತು ಮಧ್ಯಸ್ಥಿಕೆಯ ಕಾರ್ಯ ವಿಧಾನ........................................................................ 177

12. ಸಮನುಗಳನ್ನು ಜಾರಿ ಮಾಡುವ ರೀತಿ ........ 181

## ಅಧ್ಯಾಯ VII

### ಅವಾರ್ಡು, ಡಿಕ್ರಿ, ಆದೇಶ ಮತ್ತು ತೀರ್ಮಾನಗಳ ಜಾರಿ

13. ವಸೂಲಿ ಅಧಿಕಾರಿಗೆ ಜಾರಿ ಮಾಡಲು ಅರ್ಜಿ ........ 184
14. ಜಾರಿಗೊಳಿಸುವ ಕಾರ್ಯ ವಿದಾನ ........ 185
15. ಜಮೀನಿನಲ್ಲಿ ಬೆಳೆದಿರುವ ಬೆಳಗಳ ಸಹಿತ ನಿರ್ದಿಷ್ಟ ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟ ........ 185
16. ಇತರ ಚರ ಆಸ್ತಿಗಳ ಜಪ್ತಿ ........ 190
17. ಸ್ಥಿರ ಸ್ವತ್ತಿನ ಜಪ್ತಿ ಮತ್ತು ಮಾರಾಟ ........ 194
18. ಮಾರಾಟ ಮಾಡಲಾಗದ ಸ್ವತ್ತಿನ ವರ್ಗಾವಣೆ ........ 201
19. ಡಿಕ್ರಿದಾರ ಅಥವಾ ಖರೀದಿದಾರರನು ಆಸ್ತಿಯ ಒಡೆತನದ ಸ್ವಾಧೀನ ಪಡೆಯಲು ಪ್ರತಿರೋಧ ........ 205
20. ಖಾಸಗಿ ಪರಭಾರೆ, ಇತ್ಯಾದಿಗಳ ಮೇಲೆ ಜಪ್ತಿಯ ಪರಿಣಾಮ ........ 206
21. ಭತ್ಯೆ / ವೆಚ್ಚಗಳು ಮತ್ತು ಹಣದ ಸಂದಾಯಗಳಿಗಾಗಿ ರಸೀದಿಗಳು ........ 206
22. ಜಪ್ತಿ ಮಾಡಲಾದ ಸ್ವತ್ತಿನ ಕ್ಲೇಮುಗಳ ತನಿಖೆ ........ 207
23. ಪ್ರಥಮ ಮಾರಾಟದಲ್ಲಿ ಖರೀದಿದಾರನು ಮಾಡಿದ ತಪ್ಪಿನಿಂದಾಗಿ ಮಾಡಿದ ಮರು ಮಾರಾಟದಲ್ಲಿ ಉಂಟಾದ ನಷ್ಟ ........ 207
24. ಡಿಕ್ರಿದಾರನ ತಪ್ಪಿನಿಂದಾಗಿ ಜಾರಿಗೊಳಿಸುವ ಅರ್ಜಿಯನ್ನು ವಜಾ ಮಾಡುವುದು ........ 208
25. ಅನೇಕ ಡಿಕ್ರಿಗಳ ಕ್ಲೇಮುಗಳಿರುವಾಗ ಆಸ್ತಿಗಳ ಹಂಚಿಕೆ ........ 208
26. ತೀರ್ಪುಋಣಿಯು ಮೃತನಾದಾಗ ಅವನ ಕಾನೂನು ಸಮ್ಮತ ಪ್ರತಿನಿಧಿಯ ವಿರುದ್ಧ ಜಾರಿ ........ 209
27. ತೀರ್ಮಾನಕ್ಕೆ ಮೊದಲು ಜಪ್ತಿ ಮಾಡುವ ವಿಧಾನ ........ 210

## ಅಧ್ಯಾಯ VIII

### ಸಂಕೀರ್ಣ ವಿಷಯಗಳು

28. ನ್ಯಾಯವಾದಿಗಳಾಗಿ ಹಾಜರಾಗುವ ವ್ಯಕ್ತಿಗಳ ಮೇಲೆ ನಿರ್ಬಂಧ ........ 211
29. ದಸ್ತಾವೇಜುಗಳ ಪರಿಶೀಲನೆ ........ 211
ವಿವಿಧ ನಮೂನೆಗಳು ........ 212–248

### ಅನುಬಂಧಗಳು

1. ಸಹಕಾರಿ ಇಲಾಖೆಯ ಅಧೀನ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನಾ ಆದೇಶ – 1 ........ 249

2. ಸೌಹಾರ್ದ ಸಹಕಾರಿಗಳಿಗೆ ಡಿ.ಸಿ.ಸಿ. ಬ್ಯಾಂಕಿನ ಸದಸ್ಯತ್ವದ ಬಗ್ಗೆ ಸುತ್ತೋಲೆ ........ 251
3. ಮಾರಾಟಾಧಿಕಾರಿಗಳ ಅಧಿಕಾರ ಪ್ರತ್ಯಾಯೋಜನಾ ಸುತ್ತೋಲೆ ........ 252
4. ಸೌಹಾರ್ದ ಸಹಕಾರಿಗಳಿಗೆ ಆರ್ಥಿಕ ನೆರವು ನೀಡುವಂತೆ ವಾಣಿಜ್ಯ ಬ್ಯಾಂಕುಗಳಿಗೆ ಭಾರತೀಯ ರಿಜರ್ವ ಬ್ಯಾಂಕಿನ ಸುತ್ತೋಲೆ ........ 254
5. ಸಹಕಾರಿಗಳ ನೋಂದಣಿ ನಂತರ ಬ್ಯಾಂಕ್ ಖಾತೆ ತೆರೆಯುವ ಕುರಿತು ಸ್ಪಷ್ಟೀಕರಣದ ಸುತ್ತೋಲೆ ........ 255
6. ಸಹಕಾರಿಗಳ ಉಪವಿಧಿ ನೊಂದಣಿ ಕುರಿತ ಸ್ಪಷ್ಟೀಕರಣದ ಸುತ್ತೋಲೆ ........ 256
7. ಸಹಕಾರಿ ಇಲಾಖೆಯ ಅಧೀನ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನಾ ಆದೇಶ – 2 ........ 258

**GOVERNEMNT OF KARNATAKA**

**NOTIFICATION**

No. CMW 61 CLM 2000, Bangalore, dated: 26.12.2000

In exercise of powers conferred by subsection (2) of Section 1 of the Karnataka Souharda Sahakari Act, 1997 (Karnataka Act 17 of 2000), the Government of Karnataka hereby appoint the first day of January 2001 as the date from which all the provisions of the said Act shall come into force.

# ಉದ್ದೇಶ ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

2000ದ ಅಧಿನಿಯಮ ಸಂಖ್ಯೆ 17.– 1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವು, ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುತ್ತದೆ:

(1) ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು;

(2) ನೋಂದಣಿ ಮತ್ತು ರದ್ದಿಯಾತಿಗಳನ್ನು ಬಿಟ್ಟು ಉಳಿದಂತೆ ಸಹಕಾರಿಗಳ ಮುಕ್ತ ಕಾರ್ಯಚರಣೆಗೆ ತಡೆಯೊಡ್ಡುವ ಸರ್ಕಾರದ ಎಲ್ಲ ರೀತಿಯ ನಿರ್ಬಂಧಗಳು ಮತ್ತ ನಿಯಂತ್ರಣಗಳು ಮತ್ತು ಹಸ್ತಕ್ಷೇಪವನ್ನು ನಿವಾರಿಸುವುದು;

(3) ಪೂರಕ ಸಂಸ್ಥೆಗಳಿಗೆ, ಸಹಕಾರಿಗಳ ನಡುವೆ ಪಾಲುದಾರಿಕೆಗೆ ಮತ್ತು ಸಹಕಾರಿಗಳು ಹಾಗೂ ಇತರ ಸಂಸ್ಥೆಗಳ ನಡುವೆ ಸಹೋದ್ಯಮಕ್ಕೆ ಉತ್ತೇಜನ ನೀಡುವುದು;

(4) ಮೇಲೆ ಹೇಳಿದ ಉದ್ದೇಶಗಳ ಮುಂದುವರಿಕೆಯಲ್ಲಿ ಸಹಕಾರಿಗಳು, ಒಕ್ಕೂಟ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯನ್ನು ನೋಂದಣಿ ಮಾಡುವುದು.

(5) 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳನ್ನು ಪ್ರಸ್ತಾವಿತ ಶಾಸನದ ಅಡಿ ಸಹಕಾರಿಯಾಗಿ ಪರಿವರ್ತಿಸುವುದು.

ಆದ್ದರಿಂದ ವಿಧೇಯಕ.

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997

**(2000ದ ಕರ್ನಾಟಕ ಅಧಿನಿಯಮ ಸಂಖ್ಯೆ : 17)**

***(2000ದ ಮೇ 10ನೇ ದಿನಾಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ.)***

***(2000ದ ಮಾರ್ಚ್ ಇಪ್ಪತ್ತೆಂಟನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ.)***

ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ–ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :–

## ಅಧ್ಯಾಯ I
# ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ –**

(1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು** – ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,–

[1][(ಎ) **'ಅಪೆಕ್ಸ್ ಸಹಕಾರಿ'** ಎಂದರೆ ಸಹಕಾರಿಗಳಿಗೆ ಮಾತ್ರ ಸದಸ್ಯತ್ವಕ್ಕೆ ಪ್ರವೇಶವಿರುವ ಮತ್ತು ಇಡೀ ರಾಜ್ಯದ ಕಾರ್ಯಕ್ಷೇತ್ರವನ್ನುಳ್ಳ ಸಹಕಾರಿ;

[2][(ಎ1) **'ಕಾರ್ಯಕ್ಷೇತ್ರ'** ಎಂದರೆ, ಸಹಕಾರಿಯ ನೋಂದಾಯಿತ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತಹ ಅಧಿಕಾರ ವ್ಯಾಪ್ತಿಯ ಪ್ರದೇಶ;]

[3][(ಎ2) **'ಹಿಂದುಳಿದ ವರ್ಗಗಳು'** ಎಂದರೆ, ಸಹಕಾರಿಗಳ ಮಂಡಲಿಯಲ್ಲಿ ಮೀಸಲಾತಿ ಉದ್ದೇಶಕಾಗಿ ಕಾಲಕಾಲಕ್ಕೆ ಸರ್ಕಾರದಿಂದ "ಎ" ಮತ್ತು "ಬಿ" ಪ್ರವರ್ಗಗಳು ಎಂಬುದಾಗಿ ವರ್ಗೀಕರಿಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳ ನಾಗರೀಕರು;]

(ಎ3) **'ಮಂಡಲಿ'** ಎಂದರೆ ಯಾವುದೇ ಹೆಸರಿನಿಂದ ಕರೆಯಲ್ಪಡುವ ಒಂದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯ ನಿಯಂತ್ರಣ ಮತ್ತು ಮಾರ್ಗದರ್ಶನವನ್ನು ವಹಿಸಿಕೊಟ್ಟ ನಿರ್ದೇಶಕರ ಮಂಡಲಿ ಅಥವಾ ಆಡಳಿತ ಮಂಡಲಿ;]

(ಬಿ) **'ಉಪವಿಧಿಗಳು'** ಎಂದರೆ 53ನೇ ಪ್ರಕರಣದ ಅಡಿ ನೋಂದಾಯಿತವಾದ ಸಂಯುಕ್ತ ಸಹಕಾರಿಯ ಉಪವಿಧಿಗಳೂ ಸೇರಿದಂತೆ 5ನೇ ಮತ್ತು 11ನೇ ಪ್ರಕರಣಗಳ ಅಡಿ ನೋಂದಾಯಿತವಾದ ಅಥವಾ ನೋಂದಾಯಿಸಲಾಗಿದೆಯೆಂದು ಭಾವಿಸಲಾದ ಸಹಕಾರಿಯ ಉಪವಿಧಿಗಳು;

(ಸಿ) **'ಮುಖ್ಯ ಕಾರ್ಯನಿರ್ವಾಹಕ'** ಎಂದರೆ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಉಪವಿಧಿಗಳ ಅಡಿ ಮುಖ್ಯ ಕಾರ್ಯನಿರ್ವಾಹಕನ

---

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಬದಲಾಯಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ಪ್ರಕಾರ್ಯಗಳನ್ನು ನಿರ್ವಹಿಸುವ, ಯಾವುದೇ ಪದನಾಮದಿಂದಾಗಲಿ ಕರೆಯಲ್ಪಡುವ, ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮಂಡಲಿಯಿಂದ ನೇಮಕಗೊಂಡ ಯಾವೊಬ್ಬ ನೌಕರ;

(ಡಿ) **'ಮುಖ್ಯ ಪ್ರವರ್ತಕ'** ಎಂದರೆ ಪ್ರವರ್ತಕರ ಸಭೆಯಲ್ಲಿ ಚುನಾಯಿತನಾದ ಮತ್ತು ರಿಜಿಸ್ಟ್ರಾರನಿಂದ ಸಹಕಾರಿಯ ನೋಂದಣಿಯಾಗುವ ಮೊದಲು ಪ್ರಾರಂಭಿಕ ಷೇರು ಬಂಡವಾಳವನ್ನು ಸಂಗ್ರಹಿಸಲು ಪ್ರಾಧಿಕೃತನಾದ ಮತ್ತು ಸಹಕಾರಿಯ ಅಥವಾ ಒಕ್ಕೂಟ ಸಹಕಾರಿಯ ನೋಂದಣಿಗಾಗಿ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಒಬ್ಬ ವ್ಯಕ್ತಿ;

[1][(ಇ) **'ಸಹಕಾರಿ'** ಎಂದರೆ 5ನೇ ಪ್ರಕರಣದ ಅಡಿ ನೋಂದಾಯಿಸಿದೆ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ ಸಂಖ್ಯೆ 10), ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ ಸಂಖ್ಯೆ 2), ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ ಸಂಖ್ಯೆ 47), ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981ರ (1981ರ ಕೇಂದ್ರ ಅಧಿನಿಯಮ ಸಂಖ್ಯೆ 67), ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ ಸಂಖ್ಯೆ 43), ಕರ್ನಾಟಕ ವೃತ್ತಿಗಳ, ಕಸುಬುಗಳ, ಆ ಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 35), ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ ಸಂಖ್ಯೆ 12), ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ, 2019ರ (2019ರ ಕೇಂದ್ರ ಅಧಿನಿಯಮ ಸಂಖ್ಯೆ 21), ಉದ್ದೇಶಗಳಿಗಾಗಿ **'ಸೌಹಾರ್ದ ಸಹಕಾರಿ ಸಂಘ'** ಎಂಬ ಹೆಸರಿನಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಸಹಕಾರಿ ಬ್ಯಾಂಕನ್ನು ಒಳಗೊಳ್ಳುವ ಸೌಹಾರ್ದ ಸಹಕಾರಿ ಸಂಘ ಮತ್ತು ಎಲ್ಲಾ ಕೇಂದ್ರ ಮತ್ತು ರಾಜ್ಯ ಶಾಸನಗಳಲ್ಲಿ ನಮೂದಿಸಿರುವ ಎಲ್ಲಾ ಉದ್ದೇಶಗಳಿಗಾಗಿ ಅದನ್ನು ಸಹಕಾರ ಸಂಘ ಎಂದು ಭಾವಿಸತಕ್ಕದ್ದು.]

[2][(ಇಇ) **'ಸಹಕಾರಿ ಬ್ಯಾಂಕ್'** ಎಂದರೆ, ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿರುವ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು [3][ತನ್ನ ಪ್ರಾಥಮಿಕ ಉದ್ದೇಶವಾಗಿ] ಹೊಂದಿರುವ ಒಂದು ಸಹಕಾರಿ.

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2. 2004 ರ ಕಾಯ್ದೆ 21 ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
3. 2005 ರ ಕಾಯ್ದೆ 16 ರಡಿ ಬದಲಾಯಿಸಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿರುತ್ತದೆ.

**ವಿವರಣೆ :** ಈ ಖಂಡದ ಉದ್ದೇಶಕ್ಕಾಗಿ 'ಬ್ಯಾಂಕಿಂಗ್' ಎಂಬುದು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) 5ನೇ ಪ್ರಕರಣದಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.]

[1][(ಇ1) [2]['ಸಹಕಾರಿ ಚುನಾವಣಾ ಪ್ರಾಧಿಕಾರ'] ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 39ಎಎ ಪ್ರಕರಣದ ಅಡಿಯಲ್ಲಿ ರಚಿತವಾದ [2][ಸಹಕಾರಿ ಚುನಾವಣಾ ಪ್ರಾಧಿಕಾರ];]

(ಎಫ್) 'ಸಹಕಾರಿ ತತ್ವಗಳು' ಎಂದರೆ ಅಧ್ಯಾಯ x ರಲ್ಲಿ ನಿರ್ದಿಷ್ಟಪಡಿಸಲಾದ ಸಹಕಾರಿ ತತ್ವಗಳು;

(ಜಿ) 'ಸಹಕಾರಿ ಸಂಘ' ಎಂದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿ ನೋಂದಾಯಿಸಲಾದ ಒಂದು ಸಹಕಾರಿ ಸಂಘ;

(ಹೆಚ್) 'ನಿಯಮಿತ ಹೊಣೆಗಾರಿಕೆಯ ಸಹಕಾರಿ' ಎಂದರೆ ಯಾವ ಸಹಕಾರಿಯು ಸಮಾಪನಗೊಂಡ ಸಂದರ್ಭದಲ್ಲಿ ಸಹಕಾರಿಯು ಸಾಲಗಳಿಗೆ ಸಂಬಂಧಿಸಿದಂತೆ ಅದರ ಸದಸ್ಯರ ಹೊಣೆಗಾರಿಕೆಯು ಅಂಥ ಸದಸ್ಯರು ವಂತಿಗೆ ನೀಡಿರುವ ಷೇರು ಮೊಬಲಗಿಗೆ ನಿಯಮಿತವಾಗಿರುವುದೋ ಆ ಸಹಕಾರಿ;

(ಐ) 'ಅನಿಯಮಿತ ಹೊಣೆಗಾರಿಕೆಯ ಸಹಕಾರಿ' ಎಂದರೆ ಯಾವ ಸಹಕಾರಿಯು ಸಮಾಪನೆಗೊಂಡ ಸಂದರ್ಭದಲ್ಲಿ ಅದರ ಎಲ್ಲ ಬಾಧ್ಯತೆಗಳಿಗೆ ಮತ್ತು ಬಾಧ್ಯತೆಗಳ ಸಂಬಂಧದಲ್ಲಿ ಮತ್ತು ಸಹಕಾರಿಯ ಸ್ವತ್ತುಗಳಲ್ಲಿ ಯಾವುದೇ ಕೊರತೆ ಇದ್ದಲ್ಲಿ, ಅದಕ್ಕೆ ಹಣ ನೀಡಲು ಅದರ ಸದಸ್ಯರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರುವರೋ ಆ ಸಹಕಾರಿ;

(ಜೆ) 'ಸಹಕಾರಿ ವರ್ಷ [3][***]' ಎಂದರೆ ಏಪ್ರಿಲ್ 1 ನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ;

(ಕೆ) 'ಕೊರತೆ' ಎಂದರೆ ಆದಾಯವನ್ನು ಮೀರಿದ ನಿವ್ವಳ ಹೆಚ್ಚಿನ ವೆಚ್ಚ;

[4][(ಕೆ1) 'ಡೆಲಿಗೇಟ್' ಎಂದರೆ, ಇತರ ಸಹಕಾರಿಗಳಲ್ಲಿ ಒಂದು ಸಹಕಾರಿಯನ್ನು ಪ್ರತಿನಿಧಿಸುವ ಅಂಥ ಸಹಕಾರಿಯ ಒಬ್ಬ ಸದಸ್ಯ;]

[5][(ಕೆಕೆ) 'ಠೇವಣಿ ವಿಮಾ ನಿಗಮ' ಎಂದರೆ, ಠೇವಣಿ ವಿಮಾ ಮತ್ತು ಸಾಲ

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
5. 2004 ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ಖಾತರಿ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47) 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ;]

[1][(ಎಲ್) 'ನಿರ್ದೇಶಕ' ಎಂದರೆ, ಮಂಡಳಿಯ ಚುನಾಯಿತನಾದ ಅಥವಾ ಸಹ ಆಯ್ಕೆಮಾಡಿಕೊಳ್ಳಲಾದ ಸದಸ್ಯ;]

[2][(ಎಲ್1) 'ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕ' ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ (2)ನೇ ಪ್ರಕರಣದ (ಎ–4) ಖಂಡದಲ್ಲಿ ಪರಿಭಾಷಿಸಲಾದ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕ;]

(ಎಂ) 'ಸಂಯುಕ್ತ ಸಹಕಾರಿ' ಎಂದರೆ 53ನೇ ಪ್ರಕರಣದ ಅಡಿ ರಚಿತವಾದ ಸಂಯುಕ್ತ ಸಹಕಾರಿ;

(ಎನ್) 'ಆರ್ಥಿಕ ನೆರವು ನೀಡುವ ಏಜೆನ್ಸಿ' ಎಂದರೆ ಒಂದು ಸಹಕಾರಿ ಅಥವಾ ವಾಣಿಜ್ಯ ಬ್ಯಾಂಕ್ ಮತ್ತು ಇದು ಒಂದು ಸಹಕಾರಿಗೆ ಹಣಕಾಸು ನೆರವು ನೀಡುವ ಇತರ ಯಾವುದೇ ನಿಕಾಯ ಅಥವಾ ನಿಗಮ ಅಥವಾ ಹಣಕಾಸು ಸಂಸ್ಥೆಯನ್ನು ಒಳಗೊಳ್ಳುತ್ತದೆ;

(ಓ) ಸಹಕಾರಿಯ ಸಂಬಂಧದಲ್ಲಿ 'ಸಾಮಾನ್ಯ ನಿಕಾಯ' ಎಂದರೆ [3][23ನೇ ಪ್ರಕರಣದ ಮತ್ತು 53ನೇ ಪ್ರಕರಣದ] ಅಡಿ ಸಹಕಾರಿಯ ಎಲ್ಲ ಸದಸ್ಯರ ಸಾಮಾನ್ಯ ನಿಕಾಯ ಮತ್ತು ಇದು ಸದಸ್ಯರ ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ಒಳಗೊಳ್ಳುತ್ತದೆ;

(ಪಿ) 'ಸಾಮಾನ್ಯ ಸಭೆ' ಎಂದರೆ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಸದಸ್ಯರ ಸಾಮಾನ್ಯ ನಿಕಾಯದ ಸಭೆ;

(ಕ್ಯೂ) 'ಸರ್ಕಾರ' ಎಂದರೆ ರಾಜ್ಯ ಸರ್ಕಾರ;

[4][(ಕ್ಯೂಕ್ಯೂ) 'ವಿಮೆ ಮಾಡಲಾದ ಬ್ಯಾಂಕ್' ಎಂದರೆ, ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47) 2ನೇ ಪ್ರಕರಣದ (ಐ) ಖಂಡದಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರುವ ಒಂದು ಸಹಕಾರಿ ಬ್ಯಾಂಕ್;]

(ಆರ್) 'ಸದಸ್ಯ' ಎಂದರೆ ಒಂದು ಸಹಕಾರಿಯು ನೋಂದಣಿಯಾಗುವ ಮೊದಲು ಷೇರು ಬಂಡವಾಳದ ಬಗ್ಗೆ ವಂತಿಗೆ ನೀಡಿರುವ ವ್ಯಕ್ತಿ ಮತ್ತು ಇದರಲ್ಲಿ ಅಂಥ ನೋಂದಣಿಯ ತರುವಾಯ ಅಧಿನಿಯಮ, ನಿಯಮ ಮತ್ತು

1. 2004 ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2004 ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
4. 2004 ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ಉಪವಿಧಿಗಳ ಅನುಸಾರ ಸದಸ್ಯತ್ವ ಪಡೆದುಕೊಳ್ಳಲಾದ ಒಬ್ಬ ವ್ಯಕ್ತಿ ಒಳಗೊಳ್ಳುತ್ತಾನೆ [1][ಮತ್ತು ಒಬ್ಬ ನಾಮಮಾತ್ರ ಸದಸ್ಯನನ್ನು [2][***]ಒಳಗೊಳ್ಳುತ್ತದೆ;]

[3][(ಆರ್‌ಆರ್) 'ರಾಷ್ಟ್ರೀಯ ಬ್ಯಾಂಕ್' ಎಂದರೆ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ ಅಧಿನಿಯಮ, 1981ರ (1981ರ ಕೇಂದ್ರ ಅಧಿನಿಯಮ 61) ಅಡಿಯಲ್ಲಿ ರಚಿತವಾದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್.

(ಎಸ್) 'ಪದಾಧಿಕಾರಿ' ಎಂದರೆ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ-ಸಭಾಪತಿ, [4][ಚುನಾಯಿತ ಕಾರ್ಯದರ್ಶಿ ಅಥವಾ ಖಜಾಂಚಿ, ವಿಶೇಷಾಧಿಕಾರಿ,] ಆಡಳಿತಗಾರ ಮತ್ತು ಸಮಾಪಕ ಮತ್ತು ಇದರಲ್ಲಿ ಉಪವಿಧಿಗಳ ಅನುಸಾರ ಪದಾಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸಲಾದ ಮಂಡಲಿಯ ಸದಸ್ಯ ಅಥವಾ ನೌಕರನಲ್ಲದ ಇತರ ಯಾವೊಬ್ಬ ವ್ಯಕ್ತಿ ಒಳಗೊಳ್ಳುತ್ತಾನೆ;

(ಟಿ) 'ಪ್ರಾಥಮಿಕ ಸಹಕಾರಿ' ಎಂದರೆ ಯಾವ ಸಹಕಾರಿಯ ಸದಸ್ಯತ್ವವನ್ನು ಬೇರೊಂದು ಸಹಕಾರಿಗೆ ನೀಡಲಾಗುವುದಿಲ್ಲವೋ ಆ ಸಹಕಾರಿ;

(i) (ಯು) 'ರಿಜಿಸ್ಟ್ರಾರ್' ಎಂದರೆ ಸಹಕಾರಿಗಳ ರಿಜಿಸ್ಟ್ರಾರನ ಪ್ರಕಾರ್ಯಗಳನ್ನು ನೆರವೇರಿಸಲು 3ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಬ್ಬ ಸರ್ಕಾರಿ ಅಧಿಕಾರಿ ಮತ್ತು ಇದರಲ್ಲಿ ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವಾಗ ಅವನಿಗೆ ನೆರವು ನೀಡಲು ನೇಮಕಗೊಂಡ ಸಹಕಾರಿಗಳ ಅಡಿಷನಲ್ ರಿಜಿಸ್ಟ್ರಾರ್, ಸಹಕಾರಿಗಳ ಜಂಟಿ ರಿಜಿಸ್ಟ್ರಾರ್, ಸಹಕಾರಿಗಳ ಉಪರಿಜಿಸ್ಟ್ರಾರ್ ಮತ್ತು ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್-ಇವರು ಒಳಗೊಳ್ಳುತ್ತಾರೆ ಮತ್ತು ಈ ಅಧಿನಿಯಮದ ಅಡಿ ರಿಜಿಸ್ಟ್ರಾರನ ಎಲ್ಲ ಅಥವಾ ಯಾವುದೇ ಅಧಿಕಾರಗಳು ಪ್ರದತ್ತವಾದ ಯಾವೊಬ್ಬ ಇತರ ವ್ಯಕ್ತಿ ಒಳಗೊಳ್ಳುತ್ತಾನೆ;

[5][(ಯು1) 'ಪ್ರತಿನಿಧಿ' ಎಂದರೆ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಗಳ ಬಿಡಿಸದಸ್ಯರ ಗುಂಪಿನಿಂದ ಅವರನ್ನು ಪ್ರತಿನಿಧಿಸಲು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮತ್ತು ಉಪವಿಧಿಗಳ ಅನುಸಾರವಾಗಿ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆಯಲ್ಲಿ ಆ ಗುಂಪನ್ನು

1. 2004 ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2004 ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
5. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಪ್ರತಿನಿಧಿಸಲು ಮತ್ತು ಅವರ ಪರವಾಗಿ ಭಾಗವಹಿಸಲು ಚುನಾಯಿತನಾದ ಒಬ್ಬ ವ್ಯಕ್ತಿ;

(ಯು2) 'ಪ್ರಾತಿನಿಧಿಕ ಸಾಮಾನ್ಯ ನಿಕಾಯ' ಎಂದರೆ, ಒಂದು ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಎಲ್ಲಾ ಪ್ರತಿನಿಧಿಗಳು;

(ಯು3) 'ಪ್ರಾತಿನಿಧಿಕ ಸಾಮಾನ್ಯ ಸಭೆ' ಎಂದರೆ, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಹಾಗೂ ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಕರೆದ ಮತ್ತು ನಡೆಸಲಾದ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಪ್ರತಿನಿಧಿಗಳ ಸಭೆ;]

[1][(ವಿ) 'ರಿಜರ್ವ್ ಬ್ಯಾಂಕ್' ಎಂದರೆ, ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2) ಅಡಿಯಲ್ಲಿ ರಚಿತವಾದ ಭಾರತದ ರಿಜರ್ವ್ ಬ್ಯಾಂಕ್;]

[2][(ಡಬ್ಲ್ಯು) 'ಮಾಧ್ಯಮಿಕ ಸಹಕಾರಿ' ಎಂದರೆ, ಇನ್ನೊಂದು ಸಹಕಾರಿಯೂ ತನ್ನ ಸದಸ್ಯತ್ವ ಹೊಂದಲು ಅವಕಾಶ ಇರುವ ಒಂದು ಸಹಕಾರಿ;]

[3][(ಡಬ್ಲ್ಯು1) 'ರಾಜ್ಯಮಟ್ಟದ ಸಹಕಾರಿ' ಎಂದರೆ, ಇಡೀ ರಾಜ್ಯದ ಕಾರ್ಯಕ್ಷೇತ್ರವನ್ನು ಹೊಂದಿರುವ ಸಹಕಾರಿ;]

[4][(ಎಕ್ಸ್)] 'ಹೆಚ್ಚುವರಿ' ಎಂದರೆ ವೆಚ್ಚವನ್ನು ಮೀರಿದ ಆದಾಯದ ನಿವ್ವಳ ಹೆಚ್ಚಳ;

[5][(ವೈ)] 'ಒಕ್ಕೂಟ ಸಹಕಾರಿ' ಎಂದರೆ 5ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ [6][ಇಪ್ಪತ್ತು] ಅಥವಾ ಹೆಚ್ಚಿನ ಸಹಕಾರಿಗಳ ಒಂದು ಸಹಕಾರಿ.

---

1. 2004 ರ ಕಾಯ್ದೆ 21 ರಡಿ ಸೇರಿಸಲ್ಪಟ್ಟು 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2004 ರ ಕಾಯ್ದೆ 21 ರಡಿ ಸೇರಿಸಲ್ಪಟ್ಟು 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2004ರ ಕಾಯ್ದೆ 21ರಡಿ ಮರು ಸಂಖ್ಯೆ ನೀಡಿ 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
5. 2004ರ ಕಾಯ್ದೆ 21 ರಡಿ ಮರು ಸಂಖ್ಯೆ ನೀಡಿ 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
6. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ II
## ನೋಂದಣಿ

**3. ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಉಪ ರಿಜಿಸ್ಟ್ರಾರ್ ಮತ್ತು ಸಹಾಯಕ ರಿಜಿಸ್ಟ್ರಾರ್ –**

(1) ಸರ್ಕಾರದ ಅಧಿಕಾರಿಯೊಬ್ಬನನ್ನು ರಾಜ್ಯದ ಸಹಕಾರಿಗಳ ರಿಜಿಸ್ಟ್ರಾರನನ್ನಾಗಿ ನೇಮಕ ಮಾಡಬಹುದು.

(2) ಸರ್ಕಾರವು, ರಿಜಿಸ್ಟ್ರಾರನ ಸಹಾಯುಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸರ್ಕಾರದ ಅಧಿಕಾರಿಗಳನ್ನು ಸಹಕಾರಿಗಳ ಅಡಿಷನಲ್ ರಿಜಿಸ್ಟ್ರಾರ್, ಸಹಕಾರಿಗಳ ಜಂಟಿ ರಿಜಿಸ್ಟ್ರಾರ್, ಸಹಕಾರಿಗಳ ಉಪ ರಿಜಿಸ್ಟ್ರಾರ್ ಮತ್ತು ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳನ್ನಾಗಿ ನೇಮಕ ಮಾಡಬಹುದು.

(3) ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಅಧಿನಿಯಮದ ಅಡಿ ರಿಜಿಸ್ಟ್ರಾರನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಸಹಕಾರಿಗಳ ಅಡಿಷನಲ್ ರಿಜಿಸ್ಟ್ರಾರ್, ಸಹಕಾರಿಗಳ ಜಂಟಿ ರಿಜಿಸ್ಟ್ರಾರ್, ಸಹಕಾರಿಗಳ ಉಪ ರಿಜಿಸ್ಟ್ರಾರ್ ಅಥವಾ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರನಿಗೆ ಪ್ರದತ್ತಗೊಳಿಸಬಹುದು.

**4. ನೋಂದಣಿ ಮಾಡಬಹುದಾದ ಸಹಕಾರಿಗಳು:**

[1][(1) ಯಾವುದೇ ಸಹಕಾರಿಯು,–

(ಎ) ತನ್ನ ಕಾರ್ಯಾಚರಣೆ ಪ್ರದೇಶದಲ್ಲಿನ ಸದಸ್ಯರ ಹಿತಾಸಕ್ತಿಗಾಗಿ ದುಡಿಯುವುದೇ ತನ್ನ ಮುಖ್ಯ ಉದ್ದೇಶವಾಗಿದ್ದ ಹೊರತು;

(ಬಿ) ಅದರ ಉಪವಿಧಿಗಳು, ಸಹಕಾರಿ ಮೂಲತತ್ವಗಳಿಗನುಸಾರವಾಗಿ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರು ಆರ್ಥಿಕ ಮತ್ತು ಸಾಮಾಜಿಕ ಪುರೋಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುತ್ತಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗತಕ್ಕದ್ದಲ್ಲ.]

[2][(2)] ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು,–

(ಎ) ಬೇರೆ ಬೇರೆ ಕುಟುಂಬಗಳಿಗೆ ಸೇರಿದ ಹತ್ತು ಜನರಿಗಿಂತ ಕಡಿಮೆಯಲ್ಲದ ವ್ಯಕ್ತಿಗಳು ಸಹಕಾರಿಯನ್ನು ರಚಿಸಲು ಉದ್ದೇಶಿಸಿದರೆ; ಅಥವಾ

(ಬಿ) ಒಂದು ಸಹಕಾರಿ ಸಂಘವು ಈ ಅಧಿನಿಯಮದ ಅಡಿ ಸಹಕಾರಿಯಾಗಿ

---

1. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2004ರ ಕಾಯ್ದೆ 21ರಡಿ ಮರು ಸಂಖ್ಯೆ ನೀಡಿ 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ಪರಿವರ್ತಿತವಾಗಲು, ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ; ಅಥವಾ

(ಸಿ) ಈ ಅಧಿನಿಯಮದ ಅಡಿ ನೋಂದಾಯಿತವಾದ [1][ಇಪ್ಪತ್ತು ಅಥವಾ ಅದಕ್ಕೂ ಹೆಚ್ಚಿನ ಸಹಕಾರಿಗಳು] ಒಂದು ಒಕ್ಕೂಟ ಸಹಕಾರಿಯಾಗಲು ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ,

–ಅಂಥವುಗಳನ್ನು [2][ಬೇರೆ ಬೇರೆ ಸಹಕಾರಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವ ಸಲುವಾಗಿ ಸಹಕಾರಿಯ ನೋಂದಣಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನ, ಸುತ್ತೋಲೆಗಳಿಗೊಳಪಟ್ಟು] ಈ ಅಧಿನಿಯಮದ ಅಡಿ ಸಹಕಾರಿಯೆಂಬುದಾಗಿ ನೋಂದಾಯಿಸಬಹುದು.

[3][ಪರಂತು, ಯಾವುದೇ ಸಹಕಾರಿಯು ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ಅದನ್ನು ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿಯ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಕಂಡು ಬಂದರೆ ಅದು ನೋಂದಾಯಿತವಾಗತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ಸಹಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರಿಯಾಗಿ ನೋಂದಾಯಿತವಾಗತಕ್ಕದ್ದಲ್ಲ ಮತ್ತು ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವು ಗೃಹ ನಿರ್ಮಾಣ ಸಹಕಾರಿಯಾಗಿ ಪರಿವರ್ತಿತವಾಗತಕ್ಕದ್ದಲ್ಲ.]

**5. ಸಹಕಾರಿಯ ನೋಂದಣಿಗಾಗಿ ಅರ್ಜಿ–**

(1) ಸಹಕಾರಿಯ ನೋಂದಣಿಗಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅರ್ಜಿಯೊಂದಿಗೆ–

(ಎ) ಸಹಕಾರಿಯ ಪ್ರವರ್ತಕರು ಅಥವಾ ಒಕ್ಕೂಟ ಸಹಕಾರಿಯನ್ನು ರಚಿಸಲು ಬಯಸುವ ಸಹಕಾರಿಗಳ ಪ್ರತಿನಿಧಿಗಳು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸಹಕಾರಿಯಾಗಿ ಪರಿವರ್ತಿತವಾಗಲು ಉದ್ದೇಶಿಸುವ ಸಹಕಾರಿ ಸಂಘದ ಸಾಮಾನ್ಯ ನಿಕಾಯವು ಅಂಗೀಕರಿಸಿದಂತೆ ಅಂಥ ಪ್ರಸ್ತಾವಿತ ಸಹಕಾರಿಯ ಉಪವಿಧಿಗಳ ಮೂಲ ಪ್ರತಿ ಹಾಗೂ ಅದರ ಐದು ಪ್ರತಿಗಳು;

(ಬಿ) ಒಂದು ಸಹಕಾರಿಯನ್ನು ರಚಿಸಲು ಉದ್ದೇಶಿಸುವ ವ್ಯಕ್ತಿಗಳ ಅಥವಾ

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
3. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ನೇ ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ಸಹಕಾರಿಗಳ ಹೆಸರುಗಳ ಪಟ್ಟಿ ಮತ್ತು ಒಂದು ಸಹಕಾರಿ ಸಂಘದ ಸಂದರ್ಭದಲ್ಲಿ, ಅಂಥ ಸಂಘದ ಸಮಿತಿಯ ಸದಸ್ಯರು ಹೆಸರು, ವಿಳಾಸ, ವೃತ್ತಿ ಮತ್ತು ಆರ್ಥಿಕ ಬಾಧ್ಯತೆಗಳೊಂದಿಗೆ ಅಂಥ ಸಂಘದ ಸದಸ್ಯರ ಹೆಸರುಗಳ ಪಟ್ಟಿ;

(ಸಿ) ಉಪವಿಧಿಯನ್ನು ಅಂಗೀಕರಿಸಲಾದ ಸಭೆಯಲ್ಲಿ ಹಾಜರಿದ್ದ ವ್ಯಕ್ತಿಗಳ ಅಥವಾ ಪ್ರವರ್ತಕರ ಅಥವಾ ಹಾಜರಿದ್ದ ಪ್ರತಿನಿಧಿಗಳ ಪೈಕಿ ಕೊನೆಯ ಪಕ್ಷ ಬಹುಸಂಖ್ಯೆಯ ವ್ಯಕ್ತಿಗಳು ಅಥವಾ ಪ್ರವರ್ತಕರು ಅಥವಾ ಪ್ರತಿನಿಧಿಗಳು ವಿಧ್ಯುಕ್ತವಾಗಿ ಸಹಿ ಮಾಡಿರುವ ಸಭಾ ನಡವಳಿಕೆಗಳ ಒಂದು ಯಥಾಪ್ರತಿ ಅಥವಾ ಒಂದು ಸಹಕಾರ ಸಂಘದ ಸಂದರ್ಭದಲ್ಲಿ ಸಾಮಾನ್ಯ ಸಭೆಯ ನಿರ್ಣಯದ ಹಾಗೂ ನಡವಳಿಕೆಗಳ ಒಂದು ಯಥಾ ಪ್ರತಿ;

(ಡಿ) ಕನಿಷ್ಠ ಐನೂರು ರೂಪಾಯಿಗಳು ಅಥವಾ ಗರಿಷ್ಠ ಐದು ಸಾವಿರ ರೂಪಾಯಿಗಳಿಗೊಳಪಟ್ಟು ಒಟ್ಟು ಅಧಿಕೃತ ಷೇರು ಬಂಡವಾಳದ, ಅದು ಯಾವುದೇ ಹೆಸರಿನಿಂದ ಕರೆಯಲ್ಪಡಲಿ, ಶೇಕಡ ಒಂದರಷ್ಟು ನೋಂದಣಿ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ಚಲನ್ನಿನ ಒಂದು ಪ್ರತಿ; ಮತ್ತು

(ಇ) ಒಂದು ಸಹಕಾರ ಸಂಘದ ಸಂದರ್ಭದಲ್ಲಿ, ಆ ಸಹಕಾರ ಸಂಘವು ಸರ್ಕಾರದಿಂದ ಯಾವುದೇ ಷೇರು ಬಂಡವಾಳ ಮತ್ತು ಯಾವುದೇ ಸಾಲಗಳು ಅಥವಾ ಖಾತರಿ ಮತ್ತು ಯಾವುದೇ ಸಹಕಾರ ಸಂಘದಿಂದ ಸಾಲಗಳು ಮತ್ತು ಖಾತರಿಯನ್ನು ಪಡೆದಿಲ್ಲವೆಂಬುದನ್ನು ತೋರಿಸುವ ದಸ್ತಾವೇಜುಗಳು,

– ಇವುಗಳು ಇರತಕ್ಕದ್ದು.

(3) ರಿಜಿಸ್ಟ್ರಾರನಿಗೆ, –

(ಎ) ಅರ್ಜಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಅನುಗುಣವಾಗಿದೆಯೆಂದು;

[1][(ಎಎ) ಪ್ರಸ್ತಾವಿತ ಸಹಕಾರಿಯು ಸುಸ್ಥಿತಿ ವ್ಯವಹಾರದ ಅಗತ್ಯತೆಗಳನ್ನು ಪಾಲಿಸುತ್ತದೆ ಎಂದು ಮತ್ತು ಅದು ಯಶಸ್ವಿಯಾಗುವ ಸಮಂಜಸ ಅವಕಾಶಗಳಿವೆಯೆಂದು;]

(ಬಿ) ಪ್ರಸ್ತಾವಿತ ಉಪವಿಧಿಗಳು 10ನೇ ಪ್ರಕರಣಕ್ಕೆ ಅನುಗುಣವಾಗಿದೆಯೆಂದು; ಮತ್ತು

(ಸಿ) ಪ್ರಸ್ತಾವಿತ ಸಹಕಾರಿಯ ಹೆಸರು ಮತ್ತು ಈ ಅಧಿನಿಯಮದ ಅಡಿ ಈಗಾಗಲೇ ನೋಂದಾಯಿತವಾಗಿರುವ ಒಂದು ಸಹಕಾರಿಯ ಹೆಸರು

1. 2004 ರ ಕಾಯ್ದೆ 21 ರ ಮೂಲಕ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ಒಂದೇ ಆಗಿಲ್ಲವೆಂದು ಅಥವಾ 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 7ನೇ ಪ್ರಕರಣದ ಅಡಿ ಈಗಾಗಲೇ ನೋಂದಾಯಿಸಲಾಗಿರುವ ಸಹಕಾರ ಸಂಘವು ಬಳಸಿರುವ ಹೆಸರು ಅದೇ ಆಗಿಲ್ಲವೆಂದು,

– ಮನದಟ್ಟಾದರೆ, ಅವನು ಸಹಕಾರಿಯನ್ನು ಮತ್ತು ಅದರ ಉಪವಿಧಿಗಳನ್ನು ಸಹ ನೋಂದಣಿ ಮಾಡತಕ್ಕದ್ದು ಮತ್ತು ತಾನು ರುಜು ಮಾಡಿ ಮೊಹರು ಹಾಕಿರುವ ನೋಂದಣಿ ಪ್ರಮಾಣ ಪತ್ರವನ್ನು ಮತ್ತು ನೋಂದಾಯಿತ ಉಪವಿಧಿಗಳ ಮೂಲ ಪ್ರತಿಯನ್ನು ಅರ್ಜಿಯಲ್ಲಿ ಹೇಳಲಾಗಿರುವ ಮುಖ್ಯ ಪ್ರವರ್ತಕನಿಗೆ ಅಥವಾ ಸಹಕಾರ ಸಂಘಕ್ಕೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು. ಅಂಥ ನೋಂದಣಿ ಪ್ರಮಾಣ ಪತ್ರದ ಒಂದು ಪ್ರತಿಯನ್ನು [1][ಉಪವಿಧಿಗಳ ಒಂದು ಪ್ರತಿಯೊಂದಿಗೆ ಮತ್ತು ಪ್ರವರ್ತಕರ ವಿವರಗನ್ನೂ ಸಹ ನೋಂದಣಿಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು.]

[2][ಪರಂತು, ಒಂದು [3][ಪ್ರಸ್ತಾವಿತ] ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಈ ಪ್ರಕರಣದಲ್ಲಿ ಹೇಳಿರುವಂತೆ ನೋಂದಣಿಯನ್ನು ರಿಜರ್ವ್ ಬ್ಯಾಂಕಿನ ಪೂರ್ವಾನುಮೋದನೆಯೊಡನೆ ಮಾತ್ರ ಮಾಡತಕ್ಕದ್ದು.]

(4) (3)ನೇ ಉಪ–ಪ್ರಕರಣದಲ್ಲಿ ವಿಧಿಸಲಾದ ಷರತ್ತುಗಳನ್ನು ಪೂರೈಸದಿದ್ದರೆ, ರಿಜಿಸ್ಟ್ರಾರನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ನೋಂದಣಿಯನ್ನು ನಿರಾಕರಿಸುವ ಆದೇಶವನ್ನು ನಿರಾಕರಣೆಯ ಕಾರಣಗಳೊಂದಿಗೆ, ರಿಜಿಸ್ಟರ್ಡ್ ಅಂಚೆಯ ಮೂಲಕ ಮುಖ್ಯ ಪ್ರವರ್ತಕನಿಗೆ ಅಥವಾ ಸಂದರ್ಭಾನುಸಾರ ಸಹಕಾರ ಸಂಘಕ್ಕೆ ತಿಳಿಸತಕ್ಕದ್ದು.

(5) (4)ನೇ ಉಪ–ಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ –

(ಎ) ಆದೇಶವನ್ನು ರಿಜಿಸ್ಟ್ರಾರನು ಹೊರಡಿಸಿದ್ದಲ್ಲಿ ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿದ್ದಲ್ಲಿ ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ,

– ಅಪೀಲು ಸಲ್ಲಿಸಬಹುದು.

(6) ರಿಜಿಸ್ಟ್ರಾರನು, (3)ನೇ ಅಥವಾ (4)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಂದಣಿ ಮಾಡಲು ಅಥವಾ ನೋಂದಣಿ ಮಾಡುವುದನ್ನು ನಿರಾಕರಿಸಲು ತಪ್ಪಿದರೆ, ಸದರಿ ಅವಧಿ ಮುಕ್ತಾಯವಾದ ತರುವಾಯ

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2. 2004 ರ ಕಾಯ್ದೆ 21 ರ ಮೂಲಕ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
3. 2013 ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಸಹಕಾರಿಯು ಈ ಅಧಿನಿಯಮದ ಅಡಿ ನೋಂದಾಯಿತವಾಗಿದೆಯೆಂದು ಭಾವಿಸತಕ್ಕದ್ದು.

**6. ನೋಂದಣಿ ಪ್ರಮಾಣಪತ್ರ –**

(1) ಒಂದು ಸಹಕಾರಿಯು ನೋಂದಾಯಿತವಾಗಿರುವಲ್ಲಿ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಿದಲ್ಲಿ, ರಿಜಿಸ್ಟ್ರಾರನು ವಿಧ್ಯುಕ್ತವಾಗಿ ರುಜು ಮಾಡಿ ಮೊಹರು ಹಾಕಿದ ಪ್ರಮಾಣಪತ್ರವು, ಅದರಲ್ಲಿ ನಮೂದಿಸಲಾದ ಸಹಕಾರಿಯು ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಸಹಕಾರಿಯಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(2) 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಲ್ಲಿ ಏನೇ ಇದ್ದರೂ, ಸಹಕಾರ ಸಂಘವನ್ನು ಸಹಕಾರಿಯಾಗಿ ಪರಿವರ್ತಿಸಿದ ನಂತರ ನೋಂದಣಿ ಪ್ರಮಾಣಪತ್ರವನ್ನು ಒಂದು ಸಹಕಾರಿಗೆ ನೀಡಿದಾಗ, ಈ ಅಧಿನಿಯಮದ ಅಡಿ ನೋಂದಣಿ ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಸಹಕಾರ ಸಂಘಗಳ ರಿಜಿಸ್ಟ್ರಾರನು, 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಡಿಯಲ್ಲಿನ ಅಂಥ ಸಹಕಾರ ಸಂಘದ ನೋಂದಣಿಯನ್ನು ರದ್ದುಗೊಳಿಸತಕ್ಕದ್ದು.

**7. ಸಹಕಾರಿಯು ನಿಗಮಿತ ನಿಕಾಯವಾಗಿರುವುದು.–** ಈ ಅಧಿನಿಯಮದ ಅಡಿ ನೋಂದಾಯಿತವಾಗಿರುವ ಸಹಕಾರಿಯು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಹಾಗೂ ಅದನ್ನು ಯಾವ ಹೆಸರಿನಿಂದ ನೋಂದಾಯಿಸಲಾಗಿದೆಯೋ ಆ ಹೆಸರುಳ್ಳ ನಿಗಮಿತ ನಿಕಾಯವಾಗಿರತಕ್ಕದ್ದು. ಅಂಥ ಸಹಕಾರಿಯು ಸ್ವತ್ತು ಅರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ, ಕರಾರು ಮಾಡಿಕೊಳ್ಳುವ, ದಾವೆ ಹೂಡುವ ಮತ್ತು ದಾವೆಗೆ ಗುರಿಯಾಗುವ ಮತ್ತು ಅದನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಯಿತೋ ಅದಕ್ಕೆ ಅಗತ್ಯವಾದ ಎಲ್ಲ ಇತರ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವುಳ್ಳದ್ದಾಗಿರತಕ್ಕದ್ದು.

**8. ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಣಿ.–** ಸಹಕಾರಿಯನ್ನು ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಾಯಿಸಬಹುದು. ಆದರೆ ಹೊಣೆಗಾರಿಕೆಯು ನಿಯಮಿತವಿದ್ದಾಗ, 'ನಿಯಮಿತ' ಎಂಬ ಪದವನ್ನು ಸಹಕಾರಿಯ ಹೆಸರಿನ ತರುವಾಯ ಸೇರಿಸತಕ್ಕದ್ದು.

**9. ಹೆಸರು, ಮುಂತಾದುವುಗಳನ್ನು ಪ್ರದರ್ಶಿಸುವುದು –** ಪ್ರತಿಯೊಂದು ಸಹಕಾರಿಯು, ಅದರ ಪೂರ್ಣ ಹೆಸರನ್ನು ಮತ್ತು ಈ ಅಧಿನಿಯಮದ ಅಡಿ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ಅದು ವ್ಯವಹಾರ ನಡೆಸುವ ನೋಂದಾಯಿತ ಕಛೇರಿ ಅಥವಾ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು. ನೋಂದಣಿ ಸಂಖ್ಯೆ, ಹೆಸರು ಮತ್ತು ನೋಂದಾಯಿತ ಕಚೇರಿಯ ವಿಳಾಸವನ್ನು,–

(ಎ) ಎಲ್ಲ ಸೂಚನಾ ಪತ್ರಗಳಲ್ಲಿ, ಇತರ ಅಧಿಕೃತ ಪ್ರಕಟಣೆಗಳಲ್ಲಿ ಮತ್ತು ಪತ್ರ ವ್ಯವಹಾರದಲ್ಲಿ;

(ಬಿ) ಅದರ ಎಲ್ಲ ಕರಾರುಗಳಲ್ಲಿ, ವ್ಯವಹಾರ ಪತ್ರಗಳಲ್ಲಿ, ಸರಕು ಬೇಡಿಕೆ ಪತ್ರಗಳಲ್ಲಿ ದರ ಪಟ್ಟಿಗಳಲ್ಲಿ, ಲೆಕ್ಕಪತ್ರಗಳಲ್ಲಿ, ರಸೀದಿಗಳಲ್ಲಿ ಮತ್ತು ನಂಬಿಕೆ ಪತ್ರಗಳಲ್ಲಿ;

(ಸಿ) ಎಲ್ಲ ವಿನಿಮಯ ಪತ್ರಗಳಲ್ಲಿ, ಪ್ರಾಮಿಸರಿ ನೋಟುಗಳಲ್ಲಿ, ಹಿಂಬರಹಗಳಲ್ಲಿ, ಅದು ಹಣಕ್ಕಾಗಿ ಸಹಿ ಮಾಡುವ ಅಥವಾ ಅದರ ಪರವಾಗಿ ಸಹಿ ಮಾಡುವ ಚೆಕ್ಕುಗಳಲ್ಲಿ ಮತ್ತು ಧನಾದೇಶಗಳಲ್ಲಿ; ಮತ್ತು

(ಡಿ) ನಿಗಮಿತ ಮೊಹರಿನಲ್ಲಿ.

–ಸೂಚಿಸತಕ್ಕದ್ದು.

**10. ಉಪವಿಧಿಗಳು –**

(1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ನಿಯಮಗಳಿಗೆ ಒಳಪಟ್ಟು, ಪ್ರತಿಯೊಂದು ಸಹಕಾರಿಯು ಅದರ ಉಪವಿಧಿಗಳಿಗೆ ಅನುಸಾರವಾಗಿ ಪ್ರಕಾರ್ಯ ನಿರ್ವಹಿಸತಕ್ಕದ್ದು. ಈ ಉಪವಿಧಿಗಳು ಸಾಧ್ಯವಿರುವಷ್ಟರಮಟ್ಟಿಗೆ ಸಹಕಾರಿ ತತ್ವಗಳಿಗೆ ಅನುಗುಣವಾಗಿರತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಉಪವಿಧಿಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು ಎಂದರೆ,–

(i) ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

(ii) ಸಹಕಾರಿಯ ಉದ್ದೇಶಗಳು;

(iii) ನಿರ್ದೇಶಕರು ಮತ್ತು ಪದಾಧಿಕಾರಿಗಳೂ ಸೇರಿದಂತೆ ಸದಸ್ಯತ್ವದ ಅರ್ಹತೆಯ ಷರತ್ತುಗಳು, ಸದಸ್ಯತ್ವಕ್ಕೆ ಅನರ್ಹತೆಗಳು ಹಾಗೂ ಸದಸ್ಯತ್ವವನ್ನು ನೀಡುವ, ಹಿಂತೆಗೆದುಕೊಳ್ಳುವ, ತೆಗೆದುಹಾಕುವ ಅಥವಾ ಮುಕ್ತಾಯಗೊಳಿಸುವ ಬಗೆಗಿನ ಕಾರ್ಯವಿಧಾನ;

[1][(iiiಎ) [2][ನಾಮಮಾತ್ರ ಸದಸ್ಯರದ್ದೂ] ಸೇರಿದಂತೆ ಸದಸ್ಯತ್ವದ ಹಕ್ಕುಗಳು, ವಿಶೇಷ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು;]

(iv) ಸಹಕಾರಿಯ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು;

(v) ಮಂಡಲಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನ, ಮತನೀಡುವ ಮತ್ತು ಚುನಾವಣೆಗಳಿಗೆ ಸ್ಪರ್ಧಿಸುವ ಹಕ್ಕೂ ಸೇರಿದಂತೆ ಸದಸ್ಯರ ಹಕ್ಕುಗಳು;

(vi) ಸದಸ್ಯನಿಂದ ಸಹಕಾರಿಗೆ ಬಾಕಿಯಿರುವ ಯಾವುದೇ ಮೊತ್ತ ಸಂದಾಯ ಮಾಡುವುದಕ್ಕೆ ತಪ್ಪಿದರೆ ಆಗುವ ಪರಿಣಾಮಗಳು;

1. 2004 ರ ಕಾಯ್ದೆ 21 ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(vii) ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದರೆ ಅದರ ಚುನಾವಣಾ ವಿಧಾನ ಮತ್ತು ಸಾಮಾನ್ಯ ನಿಕಾಯ ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದಲ್ಲಿ, ಅದು ವ್ಯವಹರಿಸಬೇಕಾದ ವಿಷಯಗಳು;

(viii) ಸಾಮಾನ್ಯ ಸಭೆಗಳನ್ನು ನಡೆಸಬೇಕಾದ ವಿಧಾನ ಮತ್ತು ಅಂತರ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

[1][(ix) ****]

(x) ಮಂಡಲಿಯ ರಚನೆ ಹಾಗೂ ಪದಾಧಿಕಾರಿಗಳ ಸಂಖ್ಯೆ [2][ಮತ್ತು ಮಂಡಲಿಯ ಅಧಿಕಾರಗಳು, ಪ್ರಕಾರ್ಯಗಳು ಹಾಗೂ ಕರ್ತವ್ಯಗಳು];

[3][(xಎ) ನಿರ್ದೇಶಕರ ಪ್ರಯಾಣ ಭತ್ಯೆ, ದಿನ ಭತ್ಯೆ, ಸಭಾ ಭತ್ಯೆ, ಮತ್ತು ಇತರ ಭತ್ಯೆಗಳು;]

(xi) ಷೇರು ಬಂಡವಾಳ, ಠೇವಣಿಗಳ, ಡಿಬೆಂಚರುಗಳ, ಸಾಲಗಳ ಮತು ಸರ್ಕಾರದ ವಂತಿಗೆಗಳಲ್ಲದೆ ಸದಸ್ಯರಿಂದ ಬರುವ ಇತರ ವಂತಿಗೆಗಳ ರೂಪದಲ್ಲಿ ನಿಧಿಗಳನ್ನು ಸಂಗ್ರಹಿಸುವ ವ್ಯಾಪ್ತಿ ಮತ್ತು ಷರತ್ತುಗಳು;

(xii) ಅಧ್ಯಕ್ಷ ಅಥವಾ ಸಭಾಪತಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xiii) ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xiv) ಸಹಕಾರಿಯು ಸದಸ್ಯೇತರರೊಂದಿಗೆ ವ್ಯವಹರಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು;

(xv) ಒಕ್ಕೂಟ ಸಹಕಾರಿಗಳಿಗೆ ಮತ್ತು ಸಂಯುಕ್ತ ಸಹಕಾರಿಗೆ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನ;

(xvi) ಸಹಕಾರಿಯ ಅಧಿಕೃತ ಷೇರುಬಂಡವಾಳದ ಸ್ವರೂಪ ಮತ್ತು ಮೊಬಲಗು;

(xvii) ಒಬ್ಬ ಸದಸ್ಯನು ಹೊಂದಬಹುದಾದ ಗರಿಷ್ಠ ಷೇರುಗಳು;

(xviii) ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಸಂದಾಯ ಮಾಡಬಹುದಾದ ಗರಿಷ್ಠ ಲಾಭಾಂಶ;

1. 2005 ರ ಕಾಯ್ದೆ 16 ರಡಿ ಕೈ ಬಿಡಲ್ಪಟ್ಟು 1 ಜೂನ್ 2005ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(xix) ನಿಧಿಗಳನ್ನು ಬಳಸಬಹುದಾದ ಉದ್ದೇಶಗಳು;

(xx) ಸಂಯುಕ್ತ ಸಹಕಾರಿ ನಿಧಿಗೆ ವಂತಿಗೆ ಮತ್ತು ವಿವಿಧ ನಿಧಿಗಳ ರಚನೆ ಮತ್ತು ಅವುಗಳ ಉದ್ದೇಶಗಳು;

[1][(xxi) ನಿವ್ವಳ ಲಾಭದಲ್ಲಿ ಮುಖ್ಯವಾಗಿ ಈ ಮುಂದಿನವುಗಳ ಬಗ್ಗೆ ಹಣದ ವಿನಿಯೋಗ,–

(ಎ) ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು;

[2][(ಎ–ಎ) ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಿದ ಸಹಕಾರ ಅಕಾಡೆಮಿ (ನೋಂ), ಮೈಸೂರು ಇದಕ್ಕೆ ಶೇಕಡ 0.50;]

(ಬಿ) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರ ಶಿಕ್ಷಣ ನಿಧಿಗೆ ಶೇಕಡ ಎರಡು;

ಪರಂತು ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ಕೊಡಲು ವಿಫಲವಾದ ಯಾವೊಂದು ಸಹಕಾರಿಯೂ ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ;

(ಸಿ) ಅನಿರೀಕ್ಷಿತ ನಷ್ಟ ಅಥವಾ ಸಾದಿಲ್ವಾರುಗಳನ್ನು ಭರಿಸಲು ಕಾರ್ಯಾಚರಣಾ ಮೀಸಲಿಗೆ ಶೇಕಡ ಇಪ್ಪತ್ತು;

(ಡಿ) ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡ ಐದು;

(ಇ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಶೇಷ ನಿಧಿಗಳ ರಚನೆ ಮತ್ತು ಅವುಗಳಿಗೆ ವಂತಿಗೆ;

(ಎಫ್) ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು;

(ಜಿ) ಸದಸ್ಯರಿಗೆ ಲಾಭಾಂಶ;]

(xxii) ಸಹಕಾರಿಗೆ ಉಂಟಾಗಿರುವ ಕಾರ್ಯಾಚರಣಾ ಕೊರತೆಯನ್ನು ಅದರ ಮೀಸಲು ನಿಧಿ ಮತ್ತು ಕಾರ್ಯಾಚರಣಾ ಮೀಸಲು ನಿಧಿಯಿಂದ ತುಂಬಲು ಪ್ರಮಾಣವನ್ನು ಮತ್ತು ಕಾರ್ಯವಿಧಾನವನ್ನು ನಿರ್ಧರಿಸುವುದು;

(xxiii) ಲೆಕ್ಕ ಪರಿಶೋಧಕರ ಅಥವಾ ಚಾರ್ಟರ್ಡ್ ಅಕೌಂಟೆಂಟರ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2017ರ ಕಾಯ್ದೆ 8ರಡಿ ಸೇರಿಸಸಲ್ಪಟ್ಟು 04 ಜನವರಿ 2017 ರಿಂದ ಜಾರಿಗೆ ಬಂದಿರುತ್ತದೆ.

ನೇಮಕಾತಿ ವಿಧಾನ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xxiv) ಸಹಕಾರಿಯು ಸಮಾಪನೆಗೊಳ್ಳುತ್ತಿರುವಾಗ ನಿಧಿಗಳನ್ನು ವಿಲೆ ಮಾಡುವ ವಿಧಾನ;

(xxv) ಸಹಕಾರಿಯನ್ನು ಸಮಾಪನ ಮಾಡುವ ಸಂದರ್ಭಗಳು ಮತ್ತು ವಿಧಾನ; ಮತ್ತು

(xxvi) ಉಪವಿಧಿಗಳಲ್ಲಿ ಉಪಬಂಧ ಕಲ್ಪಿಸುವ ಅಗತ್ಯವಿರುವ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯ.

[1][(3) ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದೇನೇ ಇದ್ದರೂ, ಒಂದು ಸಹಕಾರಿಯ ಸಂಬಂಧದಲ್ಲಿ, ಅದು ಠೇವಣಿಗಳನ್ನು ಸ್ವೀಕರಿಸುವುದಕ್ಕೆ, ನಿಧಿಗಳನ್ನು ಸಾಲವಾಗಿ ಪಡೆಯುವುದಕ್ಕೆ, ಮೀಸಲು ನಿಧಿಯ ನಿರ್ವಹಣೆಗೆ, ಲಾಭದ ವಿನಿಯೋಗಕ್ಕೆ, ಸಾಲ ನೀಡಿಕೆಗೆ, ಠೇವಣಿಗಳ ಮತ್ತು ಮುಂಗಡಗಳ ಮೇಲೆ ಬಡ್ಡಿ ದರಗಳನ್ನು ನಿಗಪಡಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 6ನೇ ಪ್ರಕರಣದ ಅಡಿಯಲ್ಲಿ ಹೇಳಲಾದ ಸಹಕಾರಿ ಸಂಘಗಳಿಗೆ ಅನ್ವಯವಾಗುವ ಅಂಥ ಇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ (2)ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಿದ ಉಪವಿಧಿಗಳು, ಸದರಿ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ಕಾಲಕಾಲಕ್ಕೆ ರಚಿಸಿದ ನಿಯಮಗಳ, ವಿನಿಯಮಗಳ ಉಪಬಂಧಗಳಿಗೆ ಅಥವಾ ಹೊರಡಿಸಿದ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.]

**11. ಉಪವಿಧಿಗಳ ತಿದ್ದುಪಡಿ –**

(1) ಒಂದು ಸಹಕಾರಿಯು ಅದರ ಉಪವಿಧಿಗಳ ಯಾವುದೇ ಉಪಬಂಧವನ್ನು, ಸಾಮಾನ್ಯ ಸಭೆ ಅಥವಾ ಪ್ರಾತಿನಿಧಿಕ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕುಳ್ಳ ಸದಸ್ಯರಲ್ಲಿ ಬಹು ಸದಸ್ಯರು ಅಥವಾ ಹಾಜರಿದ್ದು ಮತ ನೀಡಿದ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯ ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದು :

ಪರಂತು ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿಯೊಬ್ಬ ಸದಸ್ಯನಿಗೂ ಇಪ್ಪತ್ತು ಪೂರ್ಣ ದಿನಗಳಿಗೆ ಕಡಿಮೆಯಿಲ್ಲದಂತೆ ಸಭೆಯ ನೋಟೀಸನ್ನು ಪ್ರಸ್ತಾವಿತ ತಿದ್ದುಪಡಿಯ ಪ್ರತಿಯೊಂದಿಗೆ ನೀಡದ ಹೊರತು ಮತ್ತು ಸಭೆಯ ದಿನಾಂಕದ ನಿಕಟಪೂರ್ವದ ಇಪ್ಪತ್ತುದಿನಗಳ ಅವಧಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಅಂಥ

1. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ನೋಟೀಸನ್ನು ಮತ್ತು ಪ್ರಸ್ತಾವಿತ ತಿದ್ದುಪಡಿಯನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸದ ಹೊರತು ಅಂಥ ಯಾವುದೇ ನಿರ್ಣಯವನ್ನು ಅಂಗೀಕರಿಸತಕ್ಕದ್ದಲ್ಲ.

(2) ಸಹಕಾರಿಯು ತನ್ನ ಉಪವಿಧಿಯನ್ನು ತಿದ್ದುಪಡಿ ಮಾಡಿದ ಸಂದರ್ಭದಲ್ಲಿ, ತಿದ್ದುಪಡಿಯ ನೋಂದಣಿಗಾಗಿ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳೊಂದಿಗೆ ನಿರ್ಣಯದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ರಿಜಿಸ್ಟ್ರಾರನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು. [1][ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು. ವಿಳಂಬವಾಗಿ ಸಲ್ಲಿಸಿರುವ ಸಂದರ್ಭದಲ್ಲಿ, ವಿಳಂಬಕ್ಕೆ ಸಕಾರಣಗಳಿವೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅಂತಹ ವಿಳಂಬವನ್ನು ಮನ್ನಿಸಿ, ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಗಣಿಸಬಹುದು.]

(3) (2)ನೇ ಉಪ-ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಲಾದ ಪ್ರತಿಯೊಂದು ಅರ್ಜಿಯನ್ನು ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿರತಕ್ಕದ್ದು ಮತ್ತು ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ನಿರ್ಣಯದ ಮೂರು ಪ್ರತಿಗಳೊಂದಿಗೆ ಈ ಮುಂದಿನ ವಿವರಗಳು ಅರ್ಜಿಯೊಂದಿಗಿರತಕ್ಕದ್ದು, ಎಂದರೆ,-

(ಎ) ತಿದ್ದುಪಡಿಯನ್ನು ಅನುಮೋದಿಸಿದಂಥ ಸಭೆ ನಡೆದ ದಿನಾಂಕ;

(ಬಿ) ಅಂಥ ಸಭೆಯ ದಿನಾಂಕದಂದು ಸಹಕಾರಿಯ ಪಟ್ಟಿಯಲ್ಲಿರುವ ಮತ ನೀಡಲು ಅರ್ಹರಾಗಿದ್ದ ಸದಸ್ಯರ ಒಟ್ಟು ಸಂಖ್ಯೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ನಿರ್ಣಯಕ್ಕೆ ಮತ ನೀಡಿದ ಅರ್ಹ ಸದಸ್ಯರ ಸಂಖ್ಯೆ.

[2][(ಸಿ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಪ್ರಸ್ತಾವಿತ ತಿದ್ದುಪಡಿಗಳು 10ನೇ ಪ್ರಕರಣದ (3)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿವೆ ಎಂದು ತಿಳಿಸಿ ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರ.]

[3][(ಡಿ) ನಿಯಮಿಸಲಾದಂತೆ ನಿಗದಿಪಡಿಸುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿನಲ್ಲಿ ಖಜಾನೆ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಿರುವ ದಾಖಲೆ.]

(4) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ

---

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಾಯಿಸತಕ್ಕದ್ದು.

(5) ರಿಜಿಸ್ಟ್ರಾರನು, ನೋಂದಣಿಯಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಹಾಗೆ ನೋಂದಾಯಿಸಲಾದ ತಿದ್ದುಪಡಿಯ ಪ್ರತಿಯನ್ನು ತಾನು ಸಹಿ ಮಾಡಿ ಮೊಹರು ಹಾಕಿದ ಪ್ರಮಾಣಪತ್ರದೊಂದಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಸಹಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು ತಿದ್ದುಪಡಿಯು ವಿಧ್ಯುಕ್ತವಾಗಿ ನೋಂದಣಿಯಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ಅಂಥ ಪ್ರಮಾಣಪತ್ರದ ಮತ್ತು ನೋಂದಾಯಿತ ತಿದ್ದುಪಡಿಯ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು.

(6) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿಲ್ಲದಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು. ಇದಕ್ಕೆ ತಪ್ಪಿದರೆ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಅಂಥ ತಿದ್ದುಪಡಿಯ ನೋಂದಣಿಯನ್ನು ನಿರಾಕರಿಸುವ ಯಾವುದೇ ಆದೇಶವನ್ನು ಸಹಕಾರಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದ ಹೊರತು ಹೊರಡಿಸತಕ್ಕದ್ದಲ್ಲ.

(7) ರಿಜಿಸ್ಟ್ರಾರನು (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ನಿರಾಕರಣೆಯ ಆದೇಶವನ್ನು, ನಿರಾಕರಣೆಯ ಕಾರಣಗಳೊಂದಿಗೆ ಅದನ್ನು ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(8) (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಅಪೀಲನ್ನು ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ,-

(ಎ) ಆದೇಶವನ್ನು ರಿಜಿಸ್ಟ್ರಾರನು ಹೊರಡಿಸಿರುವಲ್ಲಿ, ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿರುವಲ್ಲಿ, ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ,

– ಸಲ್ಲಿಸಬಹುದು;

(9) ಉಪವಿಧಿಗಳ ತಿದ್ದುಪಡಿಯು ನೋಂದಣಿಯ ದಿನಾಂಕದಿಂದ ಅಥವಾ ನೋಂದಣಿಯಾಗಿದೆ ಎಂದು ಭಾವಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**12. ಸಹಕಾರಿಗಳ ಹೊಣೆಗಾರಿಕೆಗಳ ಬದಲಾವಣೆ, ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ, ವಿಭಜನೆ ಮತ್ತು ವಿಲೀನತೆ.-**

(1) ಸಹಕಾರಿಯು, ಅದರ ಸಾಮಾನ್ಯ ನಿಕಾಯದ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸುವ ಮೂಲಕ,-

(ಎ) ಅದರ ಹೊಣೆಗಾರಿಕೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು ಬದಲಾಯಿಸುವುದಕ್ಕಾಗಿ ಅದರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ನಿರ್ಧರಿಸಬಹುದು;

(ಬಿ) ಅದರ ಸ್ವತ್ತು ಮತ್ತು ಹೊಣೆಗಾರಿಕೆಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಥ ವರ್ಗಾವಣೆಯನ್ನು ಅದೇ ರೀತಿಯ ನಿರ್ಣಯದ ಮೂಲಕ ಅಂಗೀಕರಿಸಲು ಒಪ್ಪಿಕೊಂಡಿರುವಂಥ ಇತರ ಯಾವುದೇ ಸಹಕಾರಿಗೆ ವರ್ಗಾವಣೆ ಮಾಡಲು ನಿರ್ಧರಿಸಬಹುದು;

(ಸಿ) ಅದೇ ಸ್ವತಃ ಎರಡು ಅಥವಾ ಹೆಚ್ಚು ಸಹಕಾರಿಗಳಾಗಿ ವಿಭಜನೆ–ಯಾಗಬಹುದು.

(2) ಎರಡು ಅಥವಾ ಹೆಚ್ಚು ಸಹಕಾರಿಗಳು ಅವುಗಳ ಸಾಮಾನ್ಯ ಸಭೆಗಳಲ್ಲಿ ನಿರ್ಣಯವನ್ನು ಅಂಗೀಕರಿಸುವ ಮೂಲಕ ವಿಲೀನವಾಗಲು ಮತ್ತು ಹೊಸ ಸಹಕಾರಿಯನ್ನು ರಚಿಸಲು ನಿರ್ಧರಿಸಬಹುದು. ಸಹಕಾರಿಯ ಅಂಥ ಪ್ರತಿಯೊಂದು ನಿರ್ಣಯವನ್ನು ಅದರ ಸಾಮಾನ್ಯ ಸಭೆಯಲ್ಲಿ ಮತ ನೀಡಲು ಹಕ್ಕುಳ್ಳ ಒಟ್ಟು ಸದಸ್ಯರಲ್ಲಿ ಬಹುಸಂಖ್ಯೆಯ ಸದಸ್ಯರು ಅಥವಾ ಹಾಜರಿರುವ, ಮತ ನೀಡಲು ಹಕ್ಕುಳ್ಳ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯ ಸದಸ್ಯರು ಅಂಗೀಕರಿಸತಕ್ಕದ್ದು ಮತ್ತು ಅಂಥ ನಿರ್ಣಯವು ಸಂದರ್ಭಾನುಸಾರ ಹೊಣೆಗಾರಿಕೆ, ವರ್ಗಾವಣೆ, ವಿಭಜನೆ, ವಿಲೀನದ ವಿವರಗಳನ್ನು ಒಳಗೊಂಡಿರತಕ್ಕದ್ದು;

ಪರಂತು, ಪ್ರಸ್ತಾವಿತ ನಿರ್ಣಯದ ಪ್ರತಿಯೊಂದಿಗೆ ನೋಟೀಸನ್ನು ಅದರ ಎಲ್ಲ ಸದಸ್ಯರಿಗೆ, ಸಾಲಿಗರಿಗೆ, ಒಕ್ಕೂಟ ಸಹಕಾರಿಗೆ, ಅದು ಸಂಯೋಜನೆಯಾಗಿರುವಂಥ ಸಂಯುಕ್ತ ಸಹಕಾರಿಗೆ ನೀಡಿದ ಹೊರತು ಮತ್ತು ಸದಸ್ಯರ, ಸಾಲಿಗರ, ಒಕ್ಕೂಟ ಸಹಕಾರಿಯ ಮತ್ತು ಸಂಯುಕ್ತ ಸಹಕಾರಿಯ ಸಮ್ಮತಿಯನ್ನು ಪಡೆದ ಹೊರತು ಅಂಥ ಯಾವುದೇ ನಿರ್ಣಯವನ್ನು ಅಂಗೀಕರಿಸತಕ್ಕದ್ದಲ್ಲ.

[1][ಮತ್ತು ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, (1)ನೇ ಉಪ–ಪ್ರಕರಣದ ಅಥವಾ ಈ ಉಪ–ಪ್ರಕರಣದ ಅಡಿಯಲ್ಲಿಯ ಯಾವ ನಿರ್ಣಯವನ್ನೂ ರಿಜರ್ವ್ ಬ್ಯಾಂಕಿನ ಲಿಖಿತ ಪೂರ್ವ ಮಂಜೂರಾತಿ ಇಲ್ಲದೆ ಅಂಗೀಕರಿಸತಕ್ಕದ್ದಲ್ಲ.]

(3) ಯಾವುದೇ ಉಪವಿಧಿ ಅಥವಾ ಕರಾರಿನಲ್ಲಿ ಇದಕ್ಕೆ ವ್ಯತಿರಿಕ್ತವಾದುದು ಏನೇ ಇದ್ದರೂ, ನಿರ್ಣಯಕ್ಕೆ ಸಮ್ಮತಿಯನ್ನು ಕೊಡದೆ ಇರುವ ಯಾರೇ ಸದಸ್ಯನಿಗೆ, ಒಕ್ಕೂಟ ಸಹಕಾರಿಗೆ, ಸಂಯುಕ್ತ ಸಹಕಾರಿಗೆ ಅಥವಾ ಸಾಲಿಗನಿಗೆ,

1. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

(2)ನೇ ಉಪ-ಪ್ರಕರಣದ ಅಡಿಯಲ್ಲಿ ನೋಟೀಸನ್ನು ಸ್ವೀಕರಿಸಿದ ಒಂದು ತಿಂಗಳ ಅವಧಿಯೊಳಗೆ ಅವರ ಷೇರುಗಳನ್ನು, ಠೇವಣಿಗಳನ್ನು, ಸಾಲಗಳನ್ನು ಅಥವಾ ಸಂದರ್ಭಾನುಸಾರ ಸೇವೆಗಳನ್ನು ಹಿಂತೆಗೆದುಕೊಳ್ಳಲು ಆಯ್ಕೆ ಇರತಕ್ಕದ್ದು.

(4) ಒಕ್ಕೂಟ ಸಹಕಾರಿ, ಸಂಯುಕ್ತ ಸಹಕಾರಿ, ಅಥವಾ ಯಾವನೇ ಸದಸ್ಯ ಅಥವಾ ಸಾಲಿಗನು (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತನ್ನ ಆಯ್ಕೆಯನ್ನು ತಿಳಿಸದೇ ಇರುವಲ್ಲಿ ನಿರ್ಣಯಕ್ಕೆ ಸಮ್ಮತಿಯನ್ನು ಕೊಡಲಾಗಿದೆ ಎಂದು ಭಾವಿಸತಕ್ಕದ್ದು.

(5) ಹೊಣೆಗಾರಿಕೆಯನ್ನು ಬದಲಾಯಿಸುವ, ಸ್ವತ್ತುಗಳನ್ನು ಮತ್ತು ಹೊಣೆಗಾರಿಕೆಗಳನ್ನು ವರ್ಗಾವಣೆ ಮಾಡುವ, ವಿಭಜನೆ ಅಥವಾ ವಿಲೀನತೆಯ ಬಗೆಗಿನ ಸಹಕಾರಿಯ ಯಾವುದೇ ನಿರ್ಣಯವನ್ನು,-

(ಎ) ಹೊಣೆಗಾರಿಕೆಯ ಬದಲಾವಣೆ ಅಥವಾ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆಯ ಸಂದರ್ಭದಲ್ಲಿ,-

(i) ಸದಸ್ಯರು, ಒಕ್ಕೂಟ ಸಹಕಾರಿ, ಸಂಯುಕ್ತ ಸಹಕಾರಿ ಮತ್ತು ಸಾಲಿಗರು (3)ನೇ ಅಥವಾ ಸಂದರ್ಭಾನುಸಾರ (4)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಣಯಕ್ಕೆ ಸಮ್ಮತಿಯನ್ನು ನೀಡಿದ್ದ ಅಥವಾ ನೀಡಿದ್ದಾರೆಂದು ಭಾವಿಸಿದ ಹೊರತು; ಅಥವಾ

(ii) (3)ನೇ ಉಪ-ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದ ಆಯ್ಕೆಯನ್ನು ತಿಳಿಸಿರುವಂಥ ಸದಸ್ಯರ, ಒಕ್ಕೂಟ ಸಹಕಾರಿಯ, ಸಂಯುಕ್ತ ಸಹಕಾರಿಯ ಅಥವಾ ಸಾಲಿಗರ ಎಲ್ಲ ಕ್ಲೇಮುಗಳನ್ನು ಅದರಲ್ಲಿ ತಿಳಿಸಿರುವ ಅವಧಿಯೊಳಗೆ ಪೂರ್ಣವಾಗಿ ಭರಿಸಲಾದ ಅಥವಾ ಅನ್ಯಥಾ ಪೂರೈಸಿದ ಹೊರತು; ಮತ್ತು

(ಬಿ) ಸಂಬಂಧಪಟ್ಟ ಸಹಕಾರಿಯ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಿದ ಹೊರತು; ಮತ್ತು

(ಸಿ) ವಿಭಜನೆ ಅಥವಾ ವಿಲೀನತೆಯ ಸಂದರ್ಭದಲ್ಲಿ ಸಹಕಾರಿಯ ಅಥವಾ ಸಹಕಾರಿಗಳ ನೋಂದಣಿಯ ಪ್ರಮಾಣಪತ್ರವನ್ನು ನೀಡಿದ್ದ ಹೊರತು,

- ಅಂಗೀಕರಿಸಕ್ಕದ್ದಲ್ಲ.

(6) ಈ ಪ್ರಕರಣದ ಅಡಿಯಲ್ಲಿ ಅಂಗೀಕರಿಸಿದ ಒಂದು ನಿರ್ಣಯವು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆಯನ್ನು ಒಳಗೊಂಡಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ವರ್ಗಾವಣೆ ಪಡೆದವರಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ನಿಹಿತವಾಗುವುದಕ್ಕೆ

ಸಾಕೆನಿಸುವ ಒಂದು ವರ್ಗಾವಣೆ ಪತ್ರವಾಗಿರತಕ್ಕದ್ದು.

**13. ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ, ವಿಭಜನೆ ಮತ್ತು ವಿಲೀನತೆಯ ಪರಿಣಾಮಗಳು.–**

(1) ಒಂದು ಸಹಕಾರಿಯ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪೂರ್ಣವಾಗಿ ಮತ್ತೊಂದು ಸಹಕಾರಿಗೆ ವರ್ಗಾಯಿಸಿದಲ್ಲಿ ಮೊದಲನೇ ಸಹಕಾರಿಯ ನೋಂದಣಿಯು ರದ್ದಾಗತಕ್ಕದ್ದು ಮತ್ತು ಆ ಸಹಕಾರಿಯನ್ನು ವಿಘಟಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅದು ಒಂದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ಕೊನೆಗೊಳ್ಳತಕ್ಕದ್ದು.

(2) ಎರಡು ಅಥವಾ ಹೆಚ್ಚಿನ ಸಹಕಾರಿಗಳು ವಿಲೀನಗೊಂಡು ಹೊಸ ಸಹಕಾರಿಯಾದಲ್ಲಿ, ಹೊಸ ಸಹಕಾರಿಯ ನೋಂದಣಿಯ ನಂತರ ವೀಲಿನಗೊಳ್ಳುತ್ತಿರುವ ಪ್ರತಿಯೊಂದು ಸಹಕಾರಿಯ ನೋಂದಣಿಯು ರದ್ದಾಗತಕ್ಕದ್ದು ಮತ್ತು ಅಂಥ ಪ್ರತಿಯೊಂದು ಸಹಕಾರಿಯನ್ನು ವಿಘಟಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದು ಒಂದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ಕೊನೆಗೊಳ್ಳತಕ್ಕದ್ದು.

(3) ಒಂದು ಸಹಕಾರಿಯು ಎರಡು ಅಥವಾ ಹೆಚ್ಚಿನ ಸಹಕಾರಿಗಳಾಗಿ ವಿಭಜನೆ ಹೊಂದಿದ್ದಲ್ಲಿ, ಅಂಥ ಹೊಸ ಸಹಕಾರಿಗಳ ನೋಂದಣಿಯಾದ ಮೇಲೆ ಈ ಸಹಕಾರಿಯ ನೋಂದಣಿಯು ರದ್ದಾಗತಕ್ಕದ್ದು ಮತ್ತು ಆ ಸಹಕಾರಿಯನ್ನು ವಿಘಟಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ಕೊನೆಗೊಳ್ಳತಕ್ಕದ್ದು.

**14. ಸಹಕಾರಿಗಳ ಪಾಲುದಾರಿಕೆ.–**

(1) ಯಾವುದೇ ಎರಡು ಅಥವಾ ಹೆಚ್ಚು ಸಹಕಾರಿಗಳು, ಅಂಥ ಪ್ರತಿಯೊಂದು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಪೈಕಿ ನಾಲ್ಕನೆಯ ಮೂರರಷ್ಟು ಸದಸ್ಯರ ಬಹುಮತದಿಂದ ಅಂಗೀಕರಿಸಲಾದ ನಿರ್ಣಯದ ಮೂಲಕ, ಯಾವುದೇ ಒಂದು ಅಥವಾ ಹೆಚ್ಚು ನಿರ್ದಿಷ್ಟ ವ್ಯವಹಾರವನ್ನು ನಡೆಸುವುದಕ್ಕಾಗಿ ಪಾಲುದಾರಿಕೆಯಲ್ಲಿ ಸೇರಿಕೊಳ್ಳಬಹುದು. ಸಾಮಾನ್ಯ ಸಭೆಯ ದಿನಾಂಕದ ಲಿಖಿತ ನೋಟಿಸನ್ನು ಪ್ರತಿಯೊಬ್ಬ ಸದಸ್ಯನಿಗೂ ಅಂಥ ಸಭೆಯ ದಿನಾಂಕದ ಹತ್ತು ಪೂರ್ಣ ದಿನಗಳ ಮೊದಲು ನೀಡತಕ್ಕದ್ದು. [1][ಪರಂತು, ಒಂದು ಸಹಕಾರಿ ಬ್ಯಾಂಕು, ರಿಜರ್ವ್ ಬ್ಯಾಂಕಿನ ಲಿಖಿತ ಪೂರ್ವಾನುಮತಿಯನ್ನು ಪಡೆದುಕೊಳ್ಳದೆ ಅಂಥ ಪಾಲುದಾರಿಕೆಯಲ್ಲಿ ಸೇರತಕ್ಕದ್ದಲ್ಲ.]

(2) ಪಾಲುದಾರಿಕೆ ಅಧಿನಿಯಮ, 1932ರಲ್ಲಿ (1932ರ ಕೇಂದ್ರಾನಿಯಮ 9) ಇರುವುದಾವುದೂ ಅಂಥ ಪಾಲುದಾರಿಕೆಗೆ ಅನ್ವಯಿಸತಕ್ಕದ್ದಲ್ಲ.

1. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

**15. ಪೂರಕ ಸಂಸ್ಥೆಗಳ ಪ್ರಾರಂಭ. –**

(1) ಯಾವುದೇ ಸಹಕಾರಿಯು, ಅದರ ಸಾಮಾನ್ಯ ಸಭೆಯಲ್ಲಿ ಮತ ನೀಡಲು ಹಕ್ಕುಳ್ಳ ಸದಸ್ಯರ ಬಹುಮತದಿಂದ ಅಂಗೀಕರಿಸಿದ ನಿರ್ಣಯದ ಮೂಲಕ, ಅದರ ಉದ್ದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ಅಥವಾ ಹೆಚ್ಚು ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಬಹುದು ಮತ್ತು ಅಂಥ ಪ್ರತಿಯೊಂದು ಸಂಸ್ಥೆಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿಸಬಹುದು.

[1][ಪರಂತು, ರಿಸರ್ವ್ ಬ್ಯಾಂಕಿನ ಲಿಖಿತ ಪೂರ್ವಾನುಮತಿ ಇಲ್ಲದೆ ಒಂದು ಸಹಕಾರಿ ಬ್ಯಾಂಕು ಅಥವಾ ಒಂದು ಸಹಕಾರಿಯು ಬ್ಯಾಂಕಿಂಗ್ ವ್ಯವಹಾರ ನಡೆಸುವುದಕ್ಕೆ ಅದರ ಉಪವಿಧಿಗಳು ಅವಕಾಶ ಕಲ್ಪಿಸುವಂತಹ ಒಂದು ಪೂರಕ ಸಂಸ್ಥೆಯನ್ನು ಪ್ರವರ್ತಿಸತಕ್ಕದ್ದಲ್ಲ.]

[2][ಮತ್ತು ಪರಂತು, ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ರಿಜಿಸ್ಟ್ರಾರನ ಪೂರ್ವಾನುಮೋದನೆಯ ಹೊರತಾಗಿ, ಯಾವುದೇ ಸಹಕಾರಿಯು ಪೂರಕ ಸಂಸ್ಥೆಯಲ್ಲಿ ನಿಧಿಗಳನ್ನು ಪ್ರವರ್ತಿಸತಕ್ಕದ್ದಲ್ಲ ಅಥವಾ ಹೂಡತಕ್ಕದ್ದಲ್ಲ.]

(2) ಅಂಥ ಪ್ರತಿಯೊಂದು ಪೂರಕ ಸಂಸ್ಥೆಯ ವಾರ್ಷಿಕ ವರದಿ ಮತ್ತು ಲೆಕ್ಕಗಳನ್ನು ಪ್ರತಿವರ್ಷ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮಂಡಿಸತಕ್ಕದ್ದು.

**16. ಸಹಕಾರಿಗಳಿಂದ ಸಹೋದ್ಯಮ.** – ಯಾವುದೇ ಸಹಕಾರಿ ಅಥವಾ ಸಹಕಾರಿಗಳು, ಸರ್ಕಾರದಿಂದ ಅನುಮೋದಿತವಾದ ಇತರ ಸಂಸ್ಥೆ ಅಥವಾ ಸಂಸ್ಥೆಗಳೊಂದಿಗೆ, ಅಂಥ ಸಹಕಾರಿ ಅಥವಾ ಸಹಕಾರಿಗಳ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ವ್ಯವಹಾರಗಳನ್ನು ನಡೆಸುವುದಕ್ಕಾಗಿ ಸಹೋದ್ಯಮದಲ್ಲಿ ತೊಡಗಬಹುದು ಮತ್ತು ಸಹೋದ್ಯಮದ ನಂತರ ಅಂಥ ಸಂಸ್ಥೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಣಿಯಾಗುವುದು ಅಗತ್ಯವಾಗಿರುವಲ್ಲಿ, ಅದನ್ನು ಯಾವ ಉದ್ದೇಶಗಳಿಗಾಗಿ ಸೃಜಿಸಲಾಯಿತೋ ಆ ಉದ್ದೇಶಗಳ ಪೂರೈಕೆಗಾಗಿ ಅಂಥ ಕಾನೂನಿನ ಅಡಿಯಲ್ಲಿನ ಒಂದು ಸಂಸ್ಥೆ ಎಂಬುದಾಗಿ ನೋಂದಾಯಿಸತಕ್ಕದ್ದು ಮತ್ತು ಅಂಥ ಸಹೋದ್ಯಮವನ್ನು ಪ್ರತಿ ವರ್ಷ ಸಹಕಾರಿಯ ಸಾಮಾನ್ಯ ನಿಕಾಯವು ಪುನರವಲೋಕನ ಮಾಡತಕ್ಕದ್ದು.

[3][ಪರಂತು, ಒಂದು ಸಹಕಾರಿ ಬ್ಯಾಂಕ್‌ನ ಸಂದರ್ಭದಲ್ಲಿ, ಅದು ಅಂಥ ಸಹೋದ್ಯಮಕ್ಕೆ ರಿಜರ್ವ್ ಬ್ಯಾಂಕಿನ ಲಿಖಿತ ಪೂರ್ವಾನುಮೋದನೆ ಪಡೆದು ಸೇರಿಕೊಳ್ಳತಕ್ಕದ್ದು.]

1. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.
2. 2016ರ ಕಾಯ್ದೆ 26ರ ಅಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.
3. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ III

# ನಿಧಿಗಳು

[10][**17. ನಿಧಿಗಳ ಸಂಗ್ರಹಣೆ.–** [2][ಯಾವುದೇ ಇತರ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳಿಂದ ಠೇವಣಿಗಳನ್ನು ಹೊರತುಪಡಿಸಿ] ಸಹಕಾರಿಯು ತನ್ನ ಸದಸ್ಯರಿಂದ ತನ್ನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ವ್ಯಾಪ್ತಿ ಮತ್ತು ಅಂಥ ಷರತ್ತಿಗಳಿಗೊಳಪಟ್ಟು, ಷೇರು ಬಂಡವಾಳ, ಠೇವಣಿಗಳು, ಡಿಬೆಂಚರುಗಳು, ಸಾಲಗಳು ಮತ್ತು ಇತರ ವಂತಿಗೆಗಳು ಮತ್ತು ನಿಧಿಗಳನ್ನು ಸಂಗ್ರಹಿಸಬಹುದು:

ಪರಂತು, ಒಂದು ಸಹಕಾರಿಯು, ಸರ್ಕಾರದಿಂದ ಅಥವಾ ಸರ್ಕಾರದ ಖಾತರಿಯಿಂದ ಯಾವುದೇ ಸಾಲ, ಸಹಾಯಧನ, ಅನುದಾನ ಅಥವಾ ಯಾವುದೇ ರೂಪದಲ್ಲಿ ಆರ್ಥಿಕ ನೆರವನ್ನು ಪಡೆಯಲು ಅರ್ಹವಾಗಿರತಕ್ಕದಲ್ಲ:

ಮತ್ತು ಪರಂತು, ಮೊದಲನೇ ಪರಂತುಕದಲ್ಲಿ ಇರುವುದಾವುದೂ, ಒಂದು ಸಹಕಾರಿ ಬ್ಯಾಂಕಿಗೆ ಅನ್ವಯವಾಗತಕ್ಕದ್ದಲ್ಲ.]

[3][**17ಎ. ಷೇರುಗಳನ್ನು ಹೊಂದುವುದರ ಮೇಲಿನ ನಿರ್ಬಂಧ:–** ಯಾವುದೇ ಸಹಕಾರಿಯಲ್ಲಿ ಯಾರೇ ಸದಸ್ಯನು ಸಹಕಾರಿಯ ಒಟ್ಟು ಷೇರು ಬಂಡವಾಳದ ಶೇಕಡ 5ರಷ್ಟನ್ನು ಮೀರಿ ನಿಯಮಿಸಬಹುದಾದಂಥ ಅದರ ಭಾಗಕ್ಕಿಂತ ಹೆಚ್ಚಿಗೆ ಷೇರುಗಳನ್ನು ಹೊಂದಿರತಕ್ಕದ್ದಲ್ಲ.

**18. ನಿಧಿಗಳ ಹೂಡಿಕೆ.–** ಸಹಕಾರಿಯ ತಕ್ಷಣದ ಬಳಕೆಗೆ ಅಗತ್ಯವಾಗಿರದಂಥ ನಿಧಿಗಳನ್ನು ಅದರ ವ್ಯವಹಾರದ ಹೊರತು ಬೇರೆಡೆಯಲ್ಲಿ ಎಂದರೆ–

[4][(ಎ) ಸರ್ಕಾರದಿಂದ ಅನುಮೋದಿತವಾದ ಯಾವುದೇ ಭದ್ರತೆಗಳಲ್ಲಿ; ಅಥವಾ]

(ಬಿ) ಯಾವುದೇ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕಿನಲ್ಲಿ, ಹೂಡಬಹುದು ಅಥವಾ ಠೇವಣಿ ಇಡಬಹುದು.

[5][ಪರಂತು, ಒಂದು ಸಹಕಾರಿ ಬ್ಯಾಂಕ್‌ನ ಸಂದರ್ಭದಲ್ಲಿ, ಅಂಥ ಹೂಡಿಕೆಯನ್ನು ರಿಜರ್ವ್ ಬ್ಯಾಂಕು ಕಾಲಕಾಲಕ್ಕೆ ಹೊರಡಿಸಿದ ಸೂಚನೆಗಳು ಮತ್ತು ನಿರ್ದೇಶನಗಳಿಗನುಸಾರವಾಗಿ ಮಾಡತಕ್ಕದ್ದು.]

**19. ಸಹಕಾರಿಯಿಂದ ವಂತಿಗೆಯ ಬಗ್ಗೆ ನಿರ್ಬಂಧಗಳು.–** ಯಾವುದೇ ಸಹಕಾರಿಯು ಒಂದು ರಾಜಕೀಯ ಪಕ್ಷದ ಅಥವಾ ಮತೀಯ ನಂಬಿಕೆಯ ಹಿತಾಸಕ್ತಿಯ ಅಭಿವೃದ್ಧಿಯ ಉದ್ದೇಶವನ್ನು ಹೊಂದಿರುವ ಒಂದು ಸಂಘಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುವಿನ ಯಾವುದೇ ರೂಪದಲ್ಲಿ ವಂತಿಗೆಯನ್ನು ನೀಡತಕ್ಕದ್ದಲ್ಲ.

1. 2014ರ ಕಾಯ್ದೆ 34ರಡಿ ಬದಲಾಯಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
4. 2016ರ ಕಾಯ್ದೆ 26ರ ಅಡಿ ಬದಲಾಯಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.
5. 2004ರ ಕಾಯ್ದೆ 21ರ ಅಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

[1][**19ಎ. ಕೆಲವು ಸಂದರ್ಭಗಳಲ್ಲಿ ಸಹಕಾರಿಯ ಕ್ಲೇಮುಗಳನ್ನು ಪೂರೈಸಲು ವೇತನದಿಂದ ಕಡಿತ.–**

**(1)** ಯಾವುದೇ ಸಹಕಾರಿಯ ಸದಸ್ಯನು ಸಹಕಾರಿಗೆ ಒಂದು ಕರಾರನ್ನು ಬರೆದುಕೊಟ್ಟು ಅದರಲ್ಲಿ ತನ್ನ ಉದ್ಯೋಗದಾತನು ಆತನಿಂದ ತನಗೆ ಪಾವತಿಯಾಗಬೇಕಾಗಿರುವ ವೇತನ ಅಥವಾ ಮಜೂರಿಯಿಂದ ಸದರಿ ಕರಾರಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಮೊಬಲಗನ್ನು ಸಹಕಾರಿಗೆ ತಾನು ಕೊಡಬೇಕಾದ ಯಾವುದಾದರೂ ಸಾಲ ಅಥವಾ ಬಾಕಿ ಮೊಬಲಗಿನ ಬಗ್ಗೆ ಪಾವತಿ ಮಾಡಲು ಅಧಿಕಾರವುಳ್ಳವನಾಗಿರುತ್ತಾನೆಂದು ನಿರ್ದಿಷ್ಟಪಡಿಸಬಹುದು;ಪರಂತು, ನೌಕರನು ಅಂಥ ಕರಾರಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ತನ್ನ ವೇತನ ಅಥವಾ ಮಜೂರಿಯಿಂದ ಕಡಿತಗೊಳಿಸಲು ಒಪ್ಪಿರುವುದಾಗಿ ತನ್ನ ಉದ್ಯೋಗದಾತನಿಂದ ಲಿಖಿತದಲ್ಲಿ ಪೂರ್ವಸಹಮತಿಯನ್ನು ಪಡೆಯತಕ್ಕದ್ದು.

ಮತ್ತು ಪರಂತು, ಎಷ್ಟು ಮೊಬಲಗನ್ನು ಕಡಿತಗೊಳಿಸಿದಲ್ಲಿ ಅದೂ ಸೇರಿದಂತೆ ವೇತನದಿಂದ ಮಾಡಲಾದ ಒಟ್ಟು ಕಡಿತಗಳು ನೌಕರನ ವೇತನದ ಶೇಕಡ ಐವತ್ತನ್ನು ಮೀರುವುದಿಲ್ಲವೋ ಅಷ್ಟು ಮೊಬಲಗಿಗೆ ಮಾತ್ರ ಉದ್ಯೋಗದಾತನ ಜವಾಬ್ದಾರಿಯು ಸೀಮಿತವಾಗಿರತಕ್ಕದ್ದು.

ಅಲ್ಲದೇ ಪರಂತು, ಸಾಲದ ಕಂತು ಮತ್ತು ಅದರ ಮೇಲಿನ ಬಡ್ಡಿ ಬಾಬ್ತು ಸಂಬಂಧವಾಗಿ ಮಾಡಬೇಕಾದ ಕಡಿತವೂ ಸೇರಿದಂತೆ ಒಟ್ಟು ಕಡಿತಗಳು ನೌಕರನ ವೇತನದ ಶೇಕಡ ಐವತ್ತನ್ನು ಮೀರದಂಥ ರೀತಿಯಲ್ಲಿ, ನೌಕರನಿಗೆ ಕೊಡಲಾಗುವ ಸಾಲದ ಮೊತ್ತ ಮತ್ತು ಕಂತುಗಳ ಸಂಖ್ಯೆಯನ್ನು ಸಹಕಾರಿಯ ಆಡಳಿತ ಮಂಡಲಿಯು ನಿರ್ಧರಿಸತಕ್ಕದ್ದು.

(2) ಆ ಸದಸ್ಯನು ಆ ರೀತಿ ತನ್ನ ಒಪ್ಪಿಗೆಯನ್ನು ಬರೆದುಕೊಟ್ಟ ಮೇಲೆ, ಸಹಕಾರಿಯು ಲಿಖಿತದ ಮೂಲಕ ಕೋರಿದ್ದೇ ಆದಲ್ಲಿ ಮತ್ತು ಅಂತಹ ಸಾಲ ಅಥವಾ ಬಾಕಿ ಮೊಬಲಗು ಅಥವಾ ಅದರ ಯಾವುದಾದರೂ ಭಾಗವು ಪಾವತಿಯಾಗದೇ ಉಳಿದಿರುವವರೆಗೆ, ಉದ್ಯೋಗದಾತನು ಕರಾರಿಗನುಗುಣವಾಗಿ ವೇತನದಿಂದ ಕಡಿತಗೊಳಿಸಿ ಹಾಗೆ ಕಡಿತ ಮಾಡಿಕೊಂಡ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗಾಗಿ ಅಂತಹ ಸಹಕಾರಿಗೆ ಪಾವತಿ ಮಾಡತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಸಂವಿಧಾನದ 366 ನೇ ಅನುಚ್ಛೇದದಲ್ಲಿ ಪರಿಭಾಷಿಸಿರುವಂತೆ ರೈಲ್ವೆಯಲ್ಲಿ, ಗಣಿಗಳಲ್ಲಿ ಮತ್ತು ತೈಲ ಕ್ಷೇತ್ರಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ.]

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ IV

# ಸಹಕಾರಿಯ ಆಡಳಿತ ನಿರ್ವಹಣೆ

**20. ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದಾದ ಮತ್ತು ಮುಂದುವರೆಸಬಹುದಾದ ವ್ಯಕ್ತಿಗಳು.–**

(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಯಾರೇ ವ್ಯಕ್ತಿಯನ್ನು, ಎಂದರೆ–

(ಎ) ಅವನಿಗೆ ಸಹಕಾರಿ ಸೇವೆಯು ಅಗತ್ಯವಾಗಿರದಿದ್ದಲ್ಲಿ, ಅವನು ಸದಸ್ಯರ ಹೊಣೆಗಾರಿಕೆಯನ್ನು ಅಂಗೀಕರಿಸದಿದ್ದಲ್ಲಿ ಮತ್ತು ಕರಾರು ಅಧಿನಿಯಮ 1872ರ (1872ರ ಕೇಂದ್ರಾನಿಯಮ IX) ಅಡಿಯಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮನಾಗಿರದಿದ್ದಲ್ಲಿ;

(ಬಿ) ಅವನು ಯಾವುದೇ ವ್ಯವಹಾರವನ್ನು ನಡೆಸುತ್ತಿದ್ದು, ಅಂಥ ವ್ಯವಹಾರವು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ವ್ಯವಹಾರಗಳಿಗೆ ವಿರುದ್ಧವಾಗಿರುವಲ್ಲಿ ಅಥವಾ ಸ್ಪರ್ಧಾತ್ಮಕವಾಗಿರುವಲ್ಲಿ [1][ಅಥವಾ ಸಮಾನ ಉದ್ದೇಶದ ಇನ್ನೊಂದು ಸಹಕಾರಿಯ ಸದಸ್ಯನಾಗಿರುವಲ್ಲಿ]; ಮತ್ತು

(ಸಿ) ಅವನು ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಅಂಥ ಇತರ ಷರತ್ತುಗಳನ್ನು ಪೂರೈಸದಿದ್ದಲ್ಲಿ;

[2][(ಡಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಮೊತ್ತ ಮತ್ತು ಅವಧಿಯನ್ನು ಮೀರಿ ಸಹಕಾರಿಗೆ ಸಂದಾಯ ಮಾಡಬೇಕಾದ ಯಾವುದೇ ಪಾವತಿಗೆ ಸಂಬಂಧಿಸಿದಂತೆ ಸುಸ್ತಿದಾರನಾಗಿದ್ದಲ್ಲಿ;

(ಇ) ದಿವಾಳಿ ಎಂಬುದಾಗಿ ನ್ಯಾಯ ನಿರ್ಣಯಿಸಿದ್ದಲ್ಲಿ ಅಥವಾ ಅವಿಮುಕ್ತ ದಿವಳಿಯಾಗಿದ್ದಲ್ಲಿ; ಅಥವಾ

(ಎಫ್) ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧದಲ್ಲಿ ಶಿಕ್ಷೆಗೆ ಗುರಿಯಾಗಿದ್ದರೆ, ಅಂಥ ಶಿಕ್ಷೆಯನ್ನು ಹಿಂಪಡೆಯದಿದ್ದರೆ ಅಥವಾ ಅಪರಾಧವನ್ನು ಮನ್ನಿಸದಿದ್ದರೆ ಮತ್ತು ಶಿಕ್ಷೆಯ ದಿನಾಂಕದಿಂದ ಐದು ವರ್ಷಗಳ ಅವಧಿಯು ಪೂರ್ಣಗೊಳಿಸದಿದ್ದರೆ; ಅಥವಾ

(ಜಿ) ಸಹಕಾರಿಯ ಅಥವಾ ಅದರ ಹಣಕಾಸು ಬ್ಯಾಂಕಿನ ಅಥವಾ ಅದರ ಒಕ್ಕೂಡದ ಅಥವಾ ಅದರ ಸಂಯುಕ್ತ ಸಹಕಾರಿಯ ವೇತನ ಪಡೆಯುವ ಉದ್ಯೋಗಿಯಾಗಿದ್ದರೆ;]

–ಸಹಕಾರಿಯ ಸದಸ್ಯನನ್ನಾಗಿ ಸೇರಿಸಿಕೊಳ್ಳತಕ್ಕದ್ದಲ್ಲ [3][ಅಥವಾ ಮುಂದುವರೆಸತಕ್ಕದ್ದಲ್ಲ];

---

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

ಪರಂತು ಸಹಕಾರಿಯ ನೋಂದಣಿಯ ನಂತರ ಸದಸ್ಯರನ್ನು ಚುನಾಯಿತ ಮಂಡಳಿಯು ಮಾತ್ರ ಸೇರಿಸಿಕೊಳ್ಳತಕ್ಕದ್ದು.

**(2)** [1][ **XXXX]**

[2][(2ಎ) ಯಾವುದೇ ಸಹಕಾರಿಯು, ಈ ಅಧಿನಿಯಮದ ಅಥವಾ ಅದರಡಿ ರಚಿಸಲಾದ ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯತ್ವವನ್ನು ಪಡೆಯಲು ಯಾವೊಬ್ಬ ವ್ಯಕ್ತಿಗೆ ಲಿಖಿತದಲ್ಲಿ ದಾಖಲಿಸುವ ಸಾಕಷ್ಟು ಕಾರಣವಿಲ್ಲದೆ ಸದಸ್ಯತ್ವಕ್ಕೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ. ಅಂತಹ ವ್ಯಕ್ತಿಯ ಅರ್ಜಿಯು ಸ್ವೀಕೃತವಾದ ಅರವತ್ತು ದಿನಗಳೊಳಗೆ ಸಹಕಾರಿಯ ಆಡಳಿತ ಮಂಡಲಿಯು ತನ್ನ ತೀರ್ಮಾನವನ್ನು ಸದರಿ ವ್ಯಕ್ತಿಗೆ ತಿಳಿಸತಕ್ಕದ್ದು.]

(3) ಒಬ್ಬ ವ್ಯಕ್ತಿಯು ಸದಸ್ಯನಾಗಿ ಪ್ರವೇಶ ಪಡೆಯಲು ಅಥವಾ ಸದಸ್ಯನಾಗಿ ಮುಂದುವರೆಯಲು ಅರ್ಹನಾಗಿದ್ದಾನೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದಲ್ಲಿ ಮಂಡಲಿಯು ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ನಂತರ ತೀರ್ಮಾನಿಸತಕ್ಕದ್ದು ಮತ್ತು ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

[3][**20ಎ. ಸದಸ್ಯತ್ವವನ್ನು ಒಪ್ಪುವುದು ಅಥವಾ ನಿರಾಕರಿಸುವುದು:–** ಯಾವೊಬ್ಬ ವ್ಯಕ್ತಿಯು ಸದಸ್ಯತ್ವವನ್ನು ಬಯಸಿ ಯಾವುದೇ ಸಹಕಾರಿಗೆ ಉಪವಿಧಿಗಳಲ್ಲಿ ನಿಗದಿಪಡಿಸಿರುವ ಷೇರು ಹಣ ಮತ್ತು ಶುಲ್ಕ ಪಾವತಿಸಲು ಅರ್ಜಿ ಸಲ್ಲಿಸಿದಾಗ ಅಂತಹ ಅರ್ಜಿಯನ್ನು ಸಂಬಂಧಿಸಿದ ಮಂಡಲಿಯು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸದಸ್ಯತ್ವವನ್ನು ನೀಡತಕ್ಕದ್ದು ಅಥವಾ ಕಾರಣಗಳೊಂದಿಗೆ ನಿರಾಕರಿಸತಕ್ಕದ್ದು. ಈ ಅವಧಿಯೊಳಗೆ ಅರ್ಜಿದಾರನಿಗೆ ತನ್ನ ಸದಸ್ಯತ್ವ ಕೋರಿಕೆ ಅರ್ಜಿಯ ಬಗ್ಗೆ ಸಂಬಂಧಪಟ್ಟ ಸಹಕಾರಿಯಿಂದ ಯಾವುದೇ ರೀತಿಯ ಆದೇಶ ಬಾರದೇ ಇದ್ದಲ್ಲಿ, ಅಂತಹ ಅರ್ಜಿದಾರನ ಸದಸ್ಯತ್ವದ ಅರ್ಜಿಯನ್ನು ಅಂಥ ಸಹಕಾರಿಯು ಅಂತಹ ಅವಧಿಯ ಕೊನೆಯ ದಿನದಂದು ಅಂಗೀಕರಿಸಿದೆ ಎಂದು ಭಾವಿಸತಕ್ಕದ್ದು. ಒಂದು ವೇಳೆ ನಿರಾಕರಿಸಿದಲ್ಲಿ ಈ ನಿರಾಕರಣೆಯನ್ನು ಪ್ರಶ್ನಿಸಿ ನಿರಾಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರ್‌ನ ಮುಂದೆ ಸಂಬಂಧಿತ ವ್ಯಕ್ತಿಯು ಮೇಲ್ಮನವಿ ಸಲ್ಲಿಸಬಹುದು.

ರಿಜಿಸ್ಟ್ರಾರನು ಈ ಮೇಲ್ಮನವಿಯನ್ನು ಇತ್ಯರ್ಥಪಡಿಸಿ ಆದೇಶ ಹೊರಡಿಸತಕ್ಕದ್ದು. ಅಂತಹ ಆದೇಶವನ್ನು ಆ ಆದೇಶ ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಯು ಅನುಷ್ಠಾನಗೊಳಿಸತಕ್ಕದ್ದು.

---

1. 2021ರ ಕಾಯ್ದೆ 35ರಡಿ ಕೈಬಿಡಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

[1][**20ಬಿ. ಸದಸ್ಯನ ಮತದಾನದ ಹಕ್ಕು;**– ಯಾರೇ ಸದಸ್ಯನು,–

(ಎ) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ;

(ಬಿ) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ;

(ಸಿ) (i) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ;

(ii) ಹಿಂದಿನ ಐದು ಸಹಕಾರಿ ವರ್ಷಗಳಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ;

– ವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,

– ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿ ಚುನಾವಣೆಯಲ್ಲಿ ಮತದಾನ ಮಾಡಲು ಒಂದುವರ್ಷದ ವರೆಗೆ ಅನರ್ಹಗೊಳಿಸತಕ್ಕದ್ದು.

ಪರಂತು, ಸಹಕಾರಿಯು ಹೊಸದಾಗಿ ನೋಂದಣಿಗೊಂಡ ತರುವಾಯ ಕೂಡಲೇ ನಡೆಯುವ ಸಹಕಾರಿಯ ಆಡಳಿತ ಮಂಡಲಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಮತ್ತು ಪ್ರಥಮ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಈ ನಿರ್ಬಂಧವು ಅನ್ವಯಿಸತಕ್ಕದ್ದಲ್ಲ.]]

[2][21. ********]

[3][**21ಎ. ನಾಮ ಮಾತ್ರ ಸದಸ್ಯರು,**–(1) ಒಂದು ಸಹಕಾರಿಯು ಅದರ ಹಿತಾಸಕ್ತಿಯಲ್ಲಿ–

(ಎ) ಯಾವೊಬ್ಬ ವ್ಯಕ್ತಿಯನ್ನು,

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

[4][(ಸಿ) ಅಥವಾ ಸರ್ಕಾರದ ಅನುದಾನ ಹೊಂದಿಲ್ಲದ ಒಂದು ಮಾನ್ಯತೆ ಪಡೆದ ಸ್ವಸಹಾಯ ಗುಂಪು]

– ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯ ಎಂದು ಸೇರಿಸಿಕೊಳ್ಳಬಹುದು;

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

ಪರಂತು ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯೊಡನೆ ಯಾವುದೇ ವಿಧದ ವ್ಯವಹಾರ ಸಂಬಂಧ ಹೊಂದಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯ ಸೇವೆಗಳನ್ನು ಪಡೆಯುವ ಅಗತ್ಯವಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯು ಅಗತ್ಯಪಡಿಸುವ ಸೇವೆಗಳನ್ನು ಒದಗಿಸುವ ಸ್ಥಿತಿಯಲ್ಲಿ ಇರತಕ್ಕದ್ದು.

[1][********]

(2) ನಾಮಮಾತ್ರ ಸದಸ್ಯನು, ಸಹಕಾರಿಯ ಆಸ್ತಿಗಳಲ್ಲಿ ಅಥವಾ ಲಾಭಗಳಲ್ಲಿ ಯಾವುದೇ ರೂಪದಲ್ಲಿ ಯಾವುದೇ ಷೇರಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಮಂಡಲಿಗೆ ನಡೆಯುವ ಚುನಾವಣೆಯೂ ಸೇರಿದಂತೆ ಸಹಕಾರಿಯ ಯಾವುದೇ ಸಭೆಯಲ್ಲಿ ಮತ ಚಲಾಯಿಸಲು ಮತ್ತು ಒಬ್ಬ ನಿರ್ದೇಶಕನಾಗಿ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(3) ಒಬ್ಬ ನಾಮಮಾತ್ರ ಸದಸ್ಯನು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಹಕ್ಕುಗಳನ್ನು ಹೊಂದಿರತಕ್ಕದ್ದು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.]

[2][**21ಬಿ** ಸಹ ಸದಸ್ಯತ್ವ:– (1) ಒಂದು ಸಹಕಾರಿಯು–

(ಎ) ಯಾವೊಬ್ಬ ವ್ಯಕ್ತಿಯನ್ನು, ಅಥವಾ

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

–ಅಂಥ ಸಹಕಾರಿಯ ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಸಹ ಸದಸ್ಯ ಎಂದು ಸೇರಿಸಿಕೊಳ್ಳಬಹುದು:

[3][ಪರಂತು, ನೌಕರರ ಸಹಕಾರಿಗಳ ಹೊರತಾಗಿ, ಸಹಸದಸ್ಯರ ಸಂಖ್ಯೆಯು ಒಟ್ಟು ಸದಸ್ಯರ ಶೇಕಡ ಹದಿನೈದನ್ನು ಮೀರತಕ್ಕದ್ದಲ್ಲ.]

(2) ಸಹ ಸದಸ್ಯನು ಸಹಕಾರಿಯ ಷೇರುಗಳನ್ನು ಹೆ ೂಂದಿರಬಹುದು ಆದರೆ, ಸಹಕಾರಿಯ ಒಬ್ಬ ಪದಾಧಿಕಾರಿಯಾಗಲು ಅರ್ಹತೆ ಹೊಂದಿರತಕ್ಕದ್ದಲ್ಲ. ಸಹ ಸದಸ್ಯನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಯಾವುದೇ ಸಭೆಯಲ್ಲಿ ಮತ್ತು ಚುನಾವಣೆಯಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಅವಕಾಶವಿರತಕ್ಕದ್ದಲ್ಲ.

---

1. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
3. 2016ರ ಕಾಯ್ದೆ 26ರಡಿ ಬದಲಾಯಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

(3) ಈ ಪ್ರ ಕರಣದಲ್ಲಿ ಉಪಬಂಧಿಸಿರುವುದನ್ನುಳಿದು, ಒಬ್ಬ ಸಹ ಸದಸ್ಯನು, ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಬ್ಬ ಸದಸ್ಯನು ಹೊಂದಿರುವ ಎಲ್ಲಾ ಹಕ್ಕುಗಳಿಗೆ ಮತ್ತು ಸದಸ್ಯನ ಹೊಣೆಗಾರಿಕೆಗಳನ್ನು ಹೊಂದಿರತಕ್ಕದ್ದು.]

[1][**22. ಸದಸ್ಯೇತರರಿಂದ ಠೇವಣಿ ಸಂಗ್ರಹಣೆಗೆ ನಿರ್ಬಂಧ.**– ಭಾರತೀಯ ರಿಸರ್ವ್ ಬ್ಯಾಂಕಿನಿಂದ, ಬ್ಯಾಂಕಿಂಗ್ ವ್ಯವಹಾರ ನಡೆಸಲು ಪರವಾನಗಿ ಪಡೆದಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯರೇತರರಿಂದ ಠೇವಣಿಯನ್ನು ಸಂಗ್ರಹಿಸತಕ್ಕದ್ದಲ್ಲ.]

**23. ಸಾಮಾನ್ಯ ನಿಕಾಯ –**

(1) ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೊಳಪಟ್ಟು ಸಹಕಾರಿಯ ಅಂತಿಮ ಅಧಿಕಾರವು ಸಾಮಾನ್ಯ ನಿಕಾಯದಲ್ಲಿ ನಿಹಿತವಾಗತಕ್ಕದ್ದು.

(2) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಂಥ ರೀತಿಯಲ್ಲಿ ಮತ್ತು ಅಂಥ ಪ್ರಕ್ರಿಯೆಗಳೊಂದಿಗೆ, ಸದಸ್ಯರಿಂದ ಆರಿಸಲಾದ ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಬೇಕೆಂದು ಸಹಕಾರಿಯು ಅಪೇಕ್ಷಿಸಿದಲ್ಲಿ, ಅದರ ಉಪವಿಧಿಗಳಲ್ಲಿ ಅದಕ್ಕೆ ಉಪಬಂಧ ಕಲ್ಪಿಸಬಹುದು. ಈ ಅಧಿನಿಯಮದಲ್ಲಿ ಸಾಮಾನ್ಯ ನಿಕಾಯಕ್ಕೆ ಮಾಡಿದ ಯಾವುದೇ ಉಲ್ಲೇಖವು ಪ್ರಾತಿನಿಧಿಕ ಸಾಮಾನ್ಯ ನಿಕಾಯಕ್ಕೂ ಅನ್ವಯಿಸತಕ್ಕದ್ದು.

(3) ಈ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಇತರ ಉಪಬಂಧಗಳಿಗೊಳಪಟ್ಟು ಸಾಮಾನ್ಯ ನಿಕಾಯವು ಈ ಮುಂದಿನ ವಿಷಯಗಳ ಬಗ್ಗೆ ವ್ಯವಹರಿಸತಕ್ಕದ್ದು, ಎಂದರೆ–

[2][(ಎ) ಮಂಡಲಿಯು ಸಲ್ಲಿಸಿದ ಹಿಂದಿನ ಸಹಕಾರ ವರ್ಷದ ವಾರ್ಷಿಕ ವರದಿಯ ಪರಿಗಣನೆ;

(ಬಿ) ಚಾಲ್ತಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆಗಾಗಿ ಲೆಕ್ಕಪರಿಶೋಧಕನ ಮತ್ತು ಆಂತರಿಕ ಲೆಕ್ಕಪರಿಶೋಧಕನ ನೇಮಕ ಮತ್ತು ತೆಗೆದುಹಾಕುವಿಕೆ;

(ಸಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯ ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತ:ಖ್ತೆಗಳ ಪರಿಗಣನೆ;

(ಡಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಲಾದ ದೋಷಗಳನ್ನು ಮತ್ತು ಅಕ್ರಮಗಳನ್ನು ಸರಿಪಡಿಸುವ

1. 2014ರ ಕಾಯ್ದೆ 34ರಡಿ ಬದಲಾಯಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಸಂಬಂಧದಲ್ಲಿ ಮಂಡಲಿಯು ಸಲ್ಲಿಸಿದ ಪಾಲನಾ ವರದಿಯ ಪರಿಗಣನೆ ಹಾಗೂ ತೀರ್ಮಾನ;

(ಇ) ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ;]

(ಎಫ್) ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ;

(ಜಿ) ದೀರ್ಘಾವಧಿ ಯಥಾದೃಷ್ಟ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಯ ಅನುಮೋದನೆ;

[1][(ಹೆಚ್) ಮುಂದಿನ ಸಹಕಾರ ವರ್ಷದ ವಾರ್ಷಿಕ ಬಜೆಟ್ಟಿನ ಅನುಮೋದನೆ];

(ಐ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ;

(ಜೆ) ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ;

[2][(ಕೆ) ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ;

(ಕೆ–1) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ;

(ಕೆ–2) ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ;

(ಕೆ–3) ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ;

[3][**********]]

(ಎಲ್) ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು [4][****];

(ಎಂ) 37ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ;

(ಎನ್) ಒಂದು ಸಹಕಾರಿಯು ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ;

---

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(ಒ) 14,15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ;

(ಪಿ) ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ [1][****] ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ;

(ಕ್ಯೂ) ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ;

(ಆರ್) ಉಪವಿಧಿಗಳ ತಿದ್ದುಪಡಿ;

(ಎಸ್) ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ;

(ಟಿ) [2][ಹಿಂದಿನ ಸಹಕಾರ ವರ್ಷದಲ್ಲಿ] ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದುಹಾಕಿದ ಬಗೆಗಿನ ಸಂಕ್ಷಿಪ್ತ ವರದಿ;

(ಯು) ಸಹಕಾರಿಯ ಸಮಾಪನ; ಮತ್ತು

(ವಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.

[3][**23ಎ.– ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು ತೆರೆಯುವುದು:–** ಒಂದು ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು.

[4][ಪರಂತು, ಪಟ್ಟಣ ಸಹಕಾರ ಬ್ಯಾಂಕುಗಳು ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅನುಮತಿ ಅಗತ್ಯವಿಲ್ಲ.]

**23ಬಿ.– ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆ,–** ಯಾವುದೇ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಸದಸ್ಯತ್ವದ ಸಂಖ್ಯೆಯು ಮೂರು ಸಾವಿರಕ್ಕೆ ಮೀರಿದ್ದಲ್ಲಿ ಅಥವಾ ಅದರ ಕಾರ್ಯಕ್ಷೇತ್ರವು ಒಂದು ತಾಲ್ಲೂಕಿಗಿಂತ ಹೆಚ್ಚಾಗಿದ್ದಲ್ಲಿ ಅಂಥ ಸಹಕಾರಿಯ ಸಾಮಾನ್ಯ ಸಭೆಯು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಸಾಮಾನ್ಯ ನಿಕಾಯದ ಯಾವುದೇ ಅಥವಾ ಎಲ್ಲಾ ಅಧಿಕಾರಗಳನ್ನು ಹಾಗೂ ಈ ಅಧಿನಿಯಮದಲ್ಲಿ ಸಾಮಾನ್ಯ ನಿಕಾಯ ಅಥವಾ ಅದರ ಸಭೆಗೆ ಯಾವುದೇ ರೂಪದಲ್ಲಿ ಅಥವಾ ಪದಗಳಲ್ಲಿ

1. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ಮಾಡಲಾದ ಯಾವುದೇ ಉಲ್ಲೇಖವು, ಅಂಥ ಉಲ್ಲೇಖವು ಪ್ರಾತಿನಿಧಿಕ ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರವಾಗಿ ಅದರ ಸಭೆಗೆ ಮಾಡಿದ ಉಲ್ಲೇಖಗಳ ಬಗ್ಗೆ ಅಧಿಕಾರಗಳನ್ನು ಚಲಾಯಿಸಲು ನಿಯಮಿಸಬಹುದಾದಂತೆ ಆಯ್ಕೆ ಮಾಡಲಾದ ನಿಗದಿತ ಸಂಖ್ಯೆಯ ಸದಸ್ಯರನ್ನೊಳಗೊಂಡ (ಇಲ್ಲಿ ಇನ್ನು ಮುಂದೆ ಪ್ರಾತಿನಿಧಿಕ ಸಾಮಾನ್ಯ ನಿಕಾಯ ಎಂದು ಉಲ್ಲೇಖಿಸಲಾದ) ಒಂದು ಚಿಕ್ಕ ನಿಕಾಯವನ್ನು ರಚಿಸಲು ಉಪಬಂಧಿಸಿ ಸಹಕಾರಿ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು.]

[1][ಹೊಸದಾಗಿ ನೋಂದಣಿಯಾಗುವ ಸಹಕಾರಿಗಳ ಉಪವಿಧಿಗಳಲ್ಲಿ ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಲು ಅವಕಾಶ ಮಾಡಬಹುದು.]

[2][24. **ಮಂಡಲಿಯ ರಚನೆ.–** ಪ್ರತಿಯೊಂದು ಸಹಕಾರಿಯ ಮಂಡಲಿಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತುಪಡಿಸಿ [3][ಹದಿಮೂರಕ್ಕಿಂತ] ಕಡಿಮೆಯಿಲ್ಲದ, ಆದರೆ ಕೆಳಗೆ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ [4][ಚುನಾಯಿತ] ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

[5][(1) ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು–

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಡಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಇ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು:

ಪರಂತು, ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಪ್ರತಿಯೊಂದು ಸಹಕಾರಿಯ ಮಂಡಲಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು, ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2016ರ ಕಾಯ್ದೆ 26ರಡಿ ಬದಲಾಯಿಸ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.
4. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
5. 2016ರ ಕಾಯ್ದೆ 26ರಡಿ ಬದಲಾಯಿಸ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಅವಶ್ಯವಿದ್ದಲ್ಲಿ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು.]

[1][(2) ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸದ ಹೊರತು ಚುನಾಯಿತ ನಿರ್ದೇಶಕರುಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು:

[2][ಪರಂತು, ಸಂಯುಕ್ತ ಸಹಕಾರಿಯ ನಿರ್ದೇಶಕನ ಅಧಿಕಾರಾವಧಿಯು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ ಮುಕ್ತಾಯಗೊಳ್ಳತಕ್ಕದ್ದು.]]

(3) ಮುಖ್ಯಕಾರ್ಯನಿರ್ವಾಹಕನು ಆಡಳಿತ ಮಂಡಲಿಯ ಪದನಿಮಿತ್ತ ನಿರ್ದೇಶಕನಾಗಿರತಕ್ಕದ್ದು ಹಾಗೂ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದಲ್ಲ.]

**25. ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ–**

(1) ಒಬ್ಬ ವ್ಯಕ್ತಿಯು,–

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

[3][(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ

1 2014ರ ಕಾಯ್ದೆ 34ರಡಿ ಬದಲಾಯಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2004 ರ ಕಾಯ್ದೆ 21 ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿರುತ್ತದೆ.

ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ]

[1][(ಇ) ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರುಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

[2][(ಎಫ್)] (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ,

-ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು. [3][ಹಾಗೂ ಅನರ್ಹತೆಗೆ ಗುರಿಯಾದ ದಿನಾಂಕದಿಂದ [4][ಗರಿಷ್ಠ] ಐದು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯು ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.]

[5][(2) ಈ ಕೆಳಗಿನವುಗಳಿಗೆ ಜವಾಬ್ದಾರಿಯಾಗುವ ಯಾರೇ ಅಂಥ ನಿರ್ದೇಶಕರು ಸಹಕಾರಿಯ ಅಥವಾ ಸಹಕಾರ ಸಂಘದ ಪದಾವಧಿಯಲ್ಲಿರುವಾಗ, -

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಎ-1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ-2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

---

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2 2004ರ ಕಾಯ್ದೆ 21 ರಡಿ ಮರು ಸಂಖ್ಯೆ ನೀಡಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
5. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧ:ಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ

(ಇ) ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರುಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

–ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಚುನಾಯಿತರಾಗಲು ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರತಕ್ಕದ್ದು.

(3) ಒಬ್ಬ ನಿರ್ದೇಶಕ ಅಥವಾ ನೌಕರನು ದುರುಪಯೋಗ, ವಿಶ್ವಾಸ ದ್ರೋಹ ಅಥವಾ ಸಹಕಾರಿಗೆ ನಷ್ಟವನ್ನುಂಟು ಮಾಡುವಂಥ ಇತರ ಯಾವುದೇ ಕರ್ತವ್ಯ ಲೋಪ ಅಥವಾ ಕೃತ್ಯವನ್ನು ಮಾಡಿದ್ದು, ಹಾಗೆ ತಪ್ಪಿತಸ್ಥನಾಗಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಡಿಯಲ್ಲಿ ಯಾವ ಕ್ರಿಮಿನಲ್ ಕ್ರಮಕ್ಕೆ ಆತನು ಗುರಿಯಾಗುವನೋ ಅಂಥ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ ಆ ನಷ್ಟವನ್ನು ಭರ್ತಿ ಮಾಡುವುದಕ್ಕೆ ವೈಯಕ್ತಿವಾಗಿ ಜವಾಬ್ದಾರನಾಗತಕ್ಕದ್ದು.

[1][(4) ಮಂಡಲಿಯ ಸದಸ್ಯನು, ಈ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಯಾವುವೇ ಅನರ್ಹತೆಗಳಿಗೆ ಒಪಟ್ಟಿದ್ದನೇ ಅಥವಾ ಒಳಪಟ್ಟಿರುವನೇ ಎಂಬ ಪ್ರಶ್ನೆಯನ್ನು ಸಂಯುಕ್ತ ಸಹಕಾರಿಯು, ಸಂಬಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶನ್ನು ನೀಡಿದ ತರುವಾಯ, ತೀರ್ಮಾನಿಸತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಸದಸ್ಯನು ಅಂಥ ಆದೇಶದ ವಿರುದ್ಧ ಆ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರ್‌ನಲ್ಲಿ ಅಪೀಲು ಮಾಡಿಕೊಳ್ಳಬಹುದು.]

1. 2005ರ ಕಾಯ್ದೆ 16 ರಡಿ ಸೇರಿಸಲ್ಪಟ್ಟು 01 ಜೂನ್ 2005 ರಿಂದ ಜಾರಿಗೆ ಬಂದಿರುತ್ತದೆ.

[1][**25ಎ. ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ.–** (1) ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಆ ಪದಾಧಿಕಾರಿಡಿ ಪದವನ್ನು ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷಗಳ ತರುವಾಯ ಮಾತ್ರ ಮಂಡಿಸತಕ್ಕದ್ದು. ಒಂದು ವೇಳೆ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸತಕ್ಕದ್ದಲ್ಲ. ಸಂಬಂಧಪಟ್ಟ ಸಹಕಾರಿಯ ಮೂರನೇ ಒಂದರಷ್ಟು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಂದ ಕೋರಿಕೆ ಸಲ್ಲಿಕೆಯಾಗದಿದ್ದಲ್ಲಿ ಅಂಥ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

(2) ಸಹಕಾರಿಯ ಪದಾಧಿಕಾರಿಯ ವಿಶ್ವಾಸವನ್ನು ಕೋರಿ ವ್ಯಕ್ತಪಡಿಸಿದ ನಿರ್ಣಯವನ್ನು ಸಹಕಾರಿಯು ಆ ಉದ್ದೇಶಕ್ಕಾಗಿ ನಡೆಸಿದ ವಿಶೇಷ ಸಭೆಯಲ್ಲಿ ಚುನಾಯಿತ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಬಹುಮತದ ಮೂಲಕ ಅಂಗೀಕರಿಸಿದಲ್ಲಿ, ಆತನು ತನ್ನ ಪದವನ್ನು ತ್ಯಜಿಸಿದ್ದಾನೆಂದು ಭಾವಿಸತಕ್ಕದ್ದು.

(3) ಅವಿಶ್ವಾಸ ನಿರ್ಣಯಕ್ಕಾಗಿನ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು]

[2][**26 ಮಂಡಲಿಯ ಚುನಾವಣೆ.–** (1)– ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಚುನಾವಣೆಯನ್ನು [3][ಸಹಕಾರಿ ಚುನಾವಣಾ ಪ್ರಾಧಿಕಾರ]ವು ನಿರ್ವಹಿಸತಕ್ಕದ್ದು.

(3) ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು. [4][*****]]

[5][**26ಎ,–** [3][ಸಹಕಾರಿ ಚುನಾವಣಾ ಪ್ರಾಧಿಕಾರ],– ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ [3][ಸಹಕಾರಿ ಚುನಾವಣಾ ಪ್ರಾಧಿಕಾರ]ವು ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲೂ ಸಹ [3][ಸಹಕಾರಿ ಚುನಾವಣಾ ಪ್ರಾಧಿಕಾರ]ವಾಗಿರತಕ್ಕದ್ದು. ಮತ್ತು ಈ ಅಧಿನಿಯಮದಡಿಯಲ್ಲಿ

1. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
4. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
5. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.]

**27. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು –**

(1) ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಮಂಡಲಿಯು–

(ಎ) ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ತೆಗೆದುಹಾಕಲು;

(ಬಿ) ಪದಾಧಿಕಾರಿಗಳನ್ನು ಚುನಾಯಿಸಲು ಮತ್ತು ತೆಗೆದುಹಾಕಲು;

(ಸಿ) ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಲು ಮತ್ತು ತೆಗೆದುಹಾಕಲು;

(ಡಿ) ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸಲು;

(ಇ) ಸಂಸ್ಥೆಯ ಹಾಗೂ ಸದಸ್ಯರುಗಳ ಸೇವೆಗಳಿಗೆ ಸಂಬಂಧಪಟ್ಟಂತೆ ಕಾರ್ಯನೀತಿಗಳನ್ನು ರೂಪಿಸಲು;

(ಎಫ್) ಈ ಕೆಳಗಿನವುಗಳ ಬಗ್ಗೆ, ಎಂದರೆ,–

(i) ನಿಧಿಗಳ ಅಭಿರಕ್ಷೆ ಮತ್ತು ಹೂಡಿಕೆ;

(ii) ಲೆಕ್ಕಪತ್ರಗಳ ನಿರ್ವಹಣೆ;

(iii) ವಿವಿಧ ನಿಧಿಗಳ ಸಂಗ್ರಹಣೆ, ಬಳಕೆ ಮತ್ತು ಹೂಡಿಕೆ;

(iv) ಶಾಸನಬದ್ಧ ವಿವರಪಟ್ಟಿಕೆಯನ್ನು ಸಲ್ಲಿಸುವುದೂ ಸೇರಿದಂತೆ ಸೂಕ್ತ ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಗಳು;

(v) ಸಹಕಾರಿಯ ಪರಿಣಾಮಕಾರಿ ನಿರ್ವಹಣೆಯ ಸಲುವಾಗಿ ಅವಶ್ಯಕವಾಗಬಹುದಾದಂಥ ಇತರ ವಿಷಯಗಳು;

ಇವುಗಳ ಬಗ್ಗೆ ವಿನಿಯಮಗಳನ್ನು ರಚಿಸಲು;

(ಜಿ) ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಹಣಕಾಸು ವಿವರಪಟ್ಟಿ, ವಾರ್ಷಿಕ ಯೋಜನೆ ಮತ್ತು ಬಜೆಟ್ಟನ್ನು ಮಂಡಿಸಲು;

(ಹೆಚ್)ಲೆಕ್ಕಪರಿಶೋಧನೆ ಮತ್ತು ಪಾಲನಾ ವರದಿಗಳನ್ನು ಪರಿಶೀಲಿಸಲು ಮತ್ತು ಅವುಗಳನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

[1][(ಹೆಚ್–1) ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಪರಿಶೀಲಿಸಿ, ವಿಚಾರಣೆಯಲ್ಲಿ ತೋರಿಸಲಾದ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ವರದಿಯನ್ನು ಪರಿಶೀಲಿಸಲು ಮತ್ತು ಅದನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

(ಹೆಚ್–2) ಪ್ರತಿವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯುವಂತೆ ಮಾಡಲು;

(ಹೆಚ್–3) ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–4) ಅಗತ್ಯವಿದ್ದಾಗಲೆಲ್ಲ ಅಥವಾ ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–5) ಪ್ರತಿ ವರ್ಷ ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು;]

(ಐ) ಇತರ ಸಹಕಾರಿಗಳ ಸದಸ್ಯತ್ವವನ್ನು ಪರಿಶೀಲಿಸಲು;

(ಜೆ) ಸಾಮಾನ್ಯ ನಿಕಾಯವು ಪ್ರತ್ಯಾಯೋಜಿಸಬಹುದಾದಂಥ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು,

–ಅಧಿಕಾರ ಹೊಂದಿರತಕ್ಕದ್ದು.

**28. ಪದಾಧಿಕಾರಿಗಳನ್ನು ಚುನಾಯಿಸುವುದು –**

[1][(1) ಮಂಡಲಿಯ ಚುನಾವಣೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ [2][ಸಹಕಾರಿ ಚುನಾವಣಾ ಪ್ರಾಧಿಕಾರ]ವು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳನ್ನು ಚುನಾಯಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.]

(2) ಅಧ್ಯಕ್ಷ ಅಥವಾ ಸಭಾಪತಿ ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷ ಅಥವಾ ಉಪ–ಸಭಾಪತಿಯು–

(ಎ) ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು;

(ಬಿ) ಪದಾಧಿಕಾರಿಗಳ ಚುನಾವಣೆಯನ್ನು ಬಿಟ್ಟು ಉಳಿದೆಡೆ ಮಂಡಲಿಯು ತೀರ್ಮಾನಿಸಬೇಕಾದ ಯಾವುದೇ ವಿಷಯಗಳ ಮೇಲೆ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಮಾತ್ರ ನಿರ್ಣಾಯಕ ಮತ ಚಲಾಯಿಸತಕ್ಕದ್ದು :

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

ಪರಂತು, ಪದಾಧಿಕಾರಿಗಳ ಚುನಾವಣೆಯಲ್ಲಿ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಚೀಟಿಯನ್ನು ಎತ್ತುವ ಮೂಲಕ ಚುನಾಯಿಸತಕ್ಕದ್ದು; ಮತ್ತು

(ಸಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಅಥವಾ ಮಂಡಲಿಯು ಪ್ರತ್ಯಾಯೋಜಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

[1][(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು.]

[2][ಪರಂತು, ಸಂಯುಕ್ತ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ ಮುಕ್ತಾಯಗೊಳ್ಳತಕ್ಕದ್ದು.]

[3][**28ಎ.– ಸಹಕಾರಿಯ ಮಂಡಲಿಯ ಸದಸ್ಯ ಅಥವಾ ಪದಾಧಿಕಾರಿಯ ರಾಜೀನಾಮೆ–** ಸಹಕಾರಿಯ ಮಂಡಲಿ ಸದಸ್ಯನು ಅಥವಾ ಪದಾಧಿಕಾರಿಯು ಮಂಡಲಿಯ ತನ್ನ ಸದಸ್ಯತ್ವಕ್ಕೆ ಅಥವಾ ಸಂದರ್ಭಾನುಸಾರವಾಗಿ ಪದಾಧಿಕಾರಿ ಹುದ್ದೆಗೆ ತನ್ನ ಸ್ವಹಸ್ತ ಬರಹದ ಮೂಲಕ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ನೀಡಬಹುದು. ಮತ್ತು ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತನ್ನ ಸ್ವಹಸ್ತಬರಹದ ಮೂಲಕ ಅಂತಹ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ಹಿಂಪಡೆಯಲು ಪ ತ್ರ ವನ್ನು ನೀಡದ ಹೊರತು, ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಆತನ ಸ್ಥಾನವು ಅಥವಾ ಸಂದರ್ಭಾನುಸಾರವಾಗಿ ಹುದ್ದೆಯು ತೆರವಾಗತಕ್ಕದ್ದು. ಮುಖ್ಯ ಕಾರ್ಯನಿರ್ವಾಹ ಕನು ರಾಜೀನಾಮೆ ಪತ್ರ ನೀಡಿದ ನಂತರ ಸಮಾವೇಶಗೊಳ್ಳುವ ಮಂಡಲಿಯ ಸಭೆಯ ಮುಂದಿಡತಕ್ಕದ್ದು.]

[4][**29. ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು –** ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ, ಆಡಳಿತ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಗಳನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು.]

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

**30. ಸಭೆಗಳು –**

[1][(1) ಆಡಳಿತ ಮಂಡಲಿಯು, ಒಂದು ಸಹಕಾರಿ ವರ್ಷದಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ಅಗತ್ಯವಾದಷ್ಟು ಮಂಡಲಿಯ ಸಭೆಗಳನ್ನು ಮತ್ತು ಸಾಮಾನ್ಯ ಸಭೆಗಳನ್ನು ಕರೆಯಬಹುದು, ಆದರೆ ಕನಿಷ್ಠ ಪಕ್ಷ ಪ್ರತಿ ಎರಡು ತಿಂಗಳಲ್ಲಿ ಒಂದು ಮಂಡಲಿಯ ಸಭೆಯನ್ನು ಮತ್ತು ಪ್ರತಿ ವರ್ಷದ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗಾಗಿ, 23 ನೇ ಪ್ರಕರಣದ (3) ನೇ ಉಪ ಪ್ರಕರಣದಲ್ಲಿ ಉಕ್ತವಾಗಿರುವ ಕಾರ್ಯಕಲಾಪಗಳನ್ನು ನಿರ್ವಹಿಸಲು, ಒಂದು ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.]

(2) ಸಹಕಾರಿಯ ಸದಸ್ಯರುಗಳ ಪೈಕಿ ಹತ್ತನೇ ಒಂದರಷ್ಟು ಸದಸ್ಯರುಗಳಿಗೆ ಕಡಿಮೆ ಇಲ್ಲದ ಸದಸ್ಯರಿಂದ ಅಥವಾ ಉಪವಿಧಿಗಳಲ್ಲಿ ಉಪಬಂಧಿಸಲಾದಂತೆ ಕೋರಿಕೆಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ವಿಶೇಷ ಸಾಮಾನ್ಯ ಸಭೆಯನ್ನು ಮಂಡಲಿಯು ಕರೆಯತಕ್ಕದ್ದು. ಅಂಥ ಕೋರಿಕೆಯು ಸಭೆಯನ್ನು ಕರೆಯುವ ಬಗ್ಗೆ ಕಾರಣಗಳನ್ನು ಒಳಗೊಂಡಿರತಕ್ಕದ್ದು. ಮಂಡಲಿಯು ಇದಕ್ಕೆ ತಪ್ಪಿದಲ್ಲಿ ಸಹಕಾರಿಯ ಸದಸ್ಯರುಗಳಲ್ಲಿ ಹತ್ತನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಂಥ ಸದಸ್ಯರುಗಳು ಸಹಿಮಾಡಿದ ಕೋರಿಕೆಯನ್ನು ಸ್ವೀಕರಿಸಿದ [2][ಮೂವತ್ತು] ದಿನಗಳೊಳಗೆ ಸಂಯುಕ್ತ ಸಹಕಾರಿಯು ಅಂಥ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

(3) ಸಹಕಾರಿ ಮತ್ತು ಸಂಯುಕ್ತ ಸಹಕಾರಿಯು (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಲು ತಪ್ಪಿದರೆ, ರಿಜಿಸ್ಟ್ರಾರನು ಸಹಕಾರಿಯ ಸದಸ್ಯರುಗಳಲ್ಲಿ ಹತ್ತನೆ ಒಂದರಷ್ಟಕ್ಕೆ ಕಡಿಮೆ ಇಲ್ಲದ ಸಂಖ್ಯೆಯ ಸದಸ್ಯರುಗಳು ಸಹಿಮಾಡಿದ ಕೋರಿಕೆಯನ್ನು ಸ್ವೀಕರಿಸಿದ ತರುವಾಯ [3][ನಲವತ್ತೈದು] ದಿನಗಳೊಳಗೆ ವಿಶೇಷ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

[4][(4) ಯಾವುದೇ ಸಾಮಾನ್ಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿಗದಿಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನ ಹಕ್ಕುಳ್ಳ ಸದಸ್ಯರ [5][ಶೇಕಡ ಹತ್ತು ಅಥವಾ ಒಂದು ಸಾವಿರ, ಇವೆರಡರಲ್ಲಿ ಯಾವುದು ಕಡಿಮೆಯೋ ಆ ಸಂಖ್ಯೆಯು ಕೋರಂ ಆಗಿರತಕ್ಕದ್ದು] ಹಾಗೂ ಪ್ರಾತಿನಿಧಿಕ ಸಾಮಾನ್ಯ ಸಭೆಯ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನದ ಹಕ್ಕುಳ್ಳ ಪ್ರತಿನಿಧಿಗಳ ಶೇಕಡ

---

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
5. 2014ರ ಕಾಯ್ದೆ 34ರಡಿ ಬದಲಾಯಿಸ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ಅರವತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.

(5) ಮಂಡಲಿಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂಥಹ ಕೋರಂ ಮಂಡಲಿಯ ಒಟ್ಟು ಸದಸ್ಯರ ಶೇಕಡಾ ಐವತ್ತರ ನಂತರದ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಮಂಡಲಿಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.]

**31. ನೌಕರರು –**

(1) ಸಾಮಾನ್ಯ ನಿಕಾಯದ ಅನುಮೋದನೆಗೆ ಒಳಪಟ್ಟು, ಸಹಕಾರಿಯ ಸಿಬ್ಬಂದಿಯ ವೃಂದಸಂಖ್ಯೆಯನ್ನು ಮತ್ತು ನೌಕರರ ವೇತನ ಶ್ರೇಣಿಗಳನ್ನು ಮಂಡಲಿಯು ನಿರ್ಧರಿಸತಕ್ಕದ್ದು :

ಪರಂತು ಸಹಕಾರಿಯು, ಸಾಮಾನ್ಯ ನಿಕಾಯವು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಇತರ ಸಹಕಾರಿಗಳ, ಸಹಕಾರಿ ಸಂಘಗಳ, ಸಂಯುಕ್ತ ಸಹಕಾರಿಯ ಮತ್ತು ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಥವಾ ಅವುಗಳ ಸಂಸ್ಥೆಗಳ, ಸಾರ್ವಜನಿಕ ಉದ್ದಿಮೆಗಳ ನೌಕರರ ಮತ್ತು ಅಂಥ ಇತರ ವೃತ್ತಿನಿರತ ತಜ್ಞರ ಸೇವೆಗಳನ್ನು ಎರವಲು ಪಡೆದುಕೊಳ್ಳಬಹುದು.

[1][(1ಎ) ಸಹಕಾರಿಯ ಯಾರೇ ನೌಕರರು, 53ನೇ ಪ್ರಕರಣದ (7)ನೆ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಕೋರ್ಸುಗಳಲ್ಲಿ ಆತನ ವೃಂದದಿಂದ ಮುಂಬಡ್ತಿಗಾಗಿ ನಿಯಮಿಸಿದ ಅಂಥ ಕೋರ್ಸುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹೊರತು ಮುಂದಿನ ಉನ್ನತ ಹುದ್ದೆಗೆ ಮುಂಬಡ್ತಿಗೊಳಿಸತಕ್ಕದ್ದಲ್ಲ.]

(2) ಮುಖ್ಯ ಕಾರ್ಯನಿರ್ವಾಹಕನು ಸಹಕಾರಿಯ ಮುಖ್ಯ ಆಡಳಿತಾಕಾರಿ–ಯಾಗಿರತಕ್ಕದ್ದು ಮತ್ತು ಮಂಡಲಿಯ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು,–

(ಎ) ಸಹಕಾರಿಯ ದಿನನಿತ್ಯದ ವ್ಯವಹಾರಗಳ ಪೂರ್ಣ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು;

(ಬಿ) ಸಹಕಾರಿಯ ಪರವಾಗಿ ದಸ್ತಾವೇಜುಗಳಿಗೆ ಸಹಿ ಮಾಡತಕ್ಕದ್ದು, ಒಪ್ಪಂದ ಮತ್ತು ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು ಮತ್ತು ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದು ಮತ್ತು ಪ್ರತಿವಾದಿಸತಕ್ಕದ್ದು;

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

(ಸಿ) ಚೆಕ್ಕುಗಳಿಗೆ ಮತ್ತು ಇತರ ವರ್ಗಾವಣೀಯ ಲಿಖಿತ ಪತ್ರಗಳಿಗೆ ಹಿಂಬರಹ ಮಾಡಲು, ಸಹಿ ಹಾಕಲು, ವರ್ಗಾವಣೆ ಮಾಡಲು ಮತ್ತು ಬ್ಯಾಂಕಿನ ಲೆಕ್ಕದ ಖಾತೆಗಳನ್ನು ಪ್ರವರ್ತಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಡಿ) ನೌಕರರ ನೇಮಕಾತಿ, ಕಾರ್ಯನಿರ್ವಹಣೆ ಮತ್ತು ಶಿಸ್ತುಪಾಲನೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಮಂಡಲಿಗೆ ನೆರವು ನೀಡಲು ಜವಾಬ್ದಾರನಾಗಿರತಕ್ಕದ್ದು;

(ಇ) ಸಹಕಾರಿಯ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಸೂಕ್ತವಾಗಿ ನಿರ್ವಹಿಸಲು ವ್ಯವಸ್ಥೆ ಮಾಡತಕ್ಕದ್ದು;

(ಎಫ್) [1][ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ] ಕರಡು ವಾರ್ಷಿಕ ವರದಿ ಮತ್ತು ಹಣಕಾಸು ವಿವರ ಪತ್ರಗಳನ್ನು ಮಂಡಲಿಯ ಅನುಮೋದನೆಗಾಗಿ ಹಾಜರುಪಡಿಸತಕ್ಕದ್ದು;

(ಜಿ) ಉಪವಿಧಿಗಳಿಗನುಸಾರವಾಗಿ ಮಂಡಲಿಯ ಸಭೆಗಳನ್ನು, ಸಾಮಾನ್ಯ ಸಭೆಗಳನ್ನು ಮತ್ತು ವಿಶೇಷ ಸಾಮಾನ್ಯ ಸಭೆಗಳನ್ನು ಕರೆಯುವುದಕ್ಕೆ ನೆರವು ನೀಡತಕ್ಕದ್ದು;

(ಹೆಚ್) ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮಂಡಲಿಗೆ ನೆರವು ನೀಡತಕ್ಕದ್ದು;

(ಐ) ಸಹಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೆ ಅವಶ್ಯಕವಾದ ಮಾಹಿತಿಯನ್ನು ಮಂಡಲಿಗೆ ಒದಗಿಸಕ್ಕದ್ದು;

[2][(ಐ–1) ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತ:ಖ್ತೆಗಳನ್ನು, ಅನುಸೂಚಿಗಳನ್ನು ಮತ್ತು ಇತರೆ ತ:ಖ್ತೆಗಳನ್ನು ತಯಾರಿಸಿ ಮಂಡಲಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು;

(ಐ–2) ಲೆಕ್ಕಪರಿಶೋಧನಾ ವರದಿಯುಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರುವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(ಐ–3) ವಿಚಾರಣಾ ವರದಿ ಏನಾದರೂ ಇದ್ದರೆ ಅದರಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಐ–4) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು [1][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ನೀಡತಕ್ಕದ್ದು;

(ಐ–5) 34ನೇ ಪ್ರಕರಣಕ್ಕೆ ಅನುಸಾರವಾಗಿ ರಿಜಿಸ್ಟ್ರಾರನಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಪ್ರತಿವರ್ಷ ಸೆಪ್ಟಂಬರ್ ಮೂವತ್ತರೊಳಗೆ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು;

(ಐ–6) ಮಂಡಲಿಯಲ್ಲಿ ರಿಕ್ತತೆಗಳು ಉಂಟಾದಾಗ, ಆ ಬಗ್ಗೆ [1][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ಮಾಹಿತಿಯನ್ನು ಸಲ್ಲಿಸತಕ್ಕದ್ದು;] ಮತ್ತು

(ಜೆ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಅಥವಾ ಮಂಡಲಿಯ ಸಭೆಗಳಲ್ಲಿ ಅಥವಾ ಸಾಮಾನ್ಯ ಸಭೆಗಳಲ್ಲಿ ನಿರ್ಣಯದ ಮೂಲಕ ನಿರ್ಧರಿಸಲಾದಂತೆ ಇತರ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ V

# ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವಿಚಾರಣೆ

**32. ದಾಖಲೆಗಳು, ಲೆಕ್ಕಪತ್ರ ಇತ್ಯಾದಿಗಳನ್ನು ಇಡುವುದು. -**

(1) ಪ್ರತಿಯೊಂದು ಸಹಕಾರಿಯು ಅದರ ನೋಂದಾಯಿತ ಕಛೇರಿಯಲ್ಲಿ ಈ ಕೆಳಗಿನವುಗಳನ್ನು ಇಟ್ಟುಕೊಂಡುಬರತಕ್ಕದ್ದು, ಎಂದರೆ,–

(ಎ) ಇಂದಿನವರೆಗಿನ ತಿದ್ದುಪಡಿಗಳ ಸಹಿತವಾಗಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರತಿ;

(ಬಿ) ನೋಂದಣಿ ಪ್ರಮಾಣಪತ್ರ ಮತ್ತು ನೋಂದಾಯಿತ ಉಪವಿಧಿಗಳು ಮತ್ತು ಕಾಲ ಕಾಲಕ್ಕೆ ನೋಂದಣಿಯಾದ ತಿದ್ದುಪಡಿಗಳ ಮೂಲಪ್ರತಿಗಳು;

(ಸಿ) ಸಂಯುಕ್ತ ಸಹಕಾರಿ ಮತ್ತು ಅದರ ಪೂರಕ ಸಂಘಗಳು ಯಾವುದಾದರೂ ಇದ್ದರೆ ಅಂಥ ಪ್ರತಿಯೊಂದು ಸಂಘದ ಉಪವಿಧಿಗಳ ಪ್ರತಿ;

(ಡಿ) [1][ಸಹಕಾರ ವರ್ಷ ಮುಕ್ತಾಯದ] ಮೂವತ್ತು ದಿನಗಳೊಳಗೆ ಪ್ರಸಕ್ತ ವರ್ಷದಲ್ಲಿ ಮತ ನೀಡುವ ಹಕ್ಕುಗಳ ಮತ್ತು ವಿವಿಧ ಸೇವೆಗಳ ಸದಸ್ಯವಾರು ಬಳಕೆಯ ಬಗ್ಗೆ ಇಂದಿನವರೆಗಿನ ವಿವರಗಳನ್ನುಳ್ಳ ಸದಸ್ಯರುಗಳ ರಿಜಿಸ್ಟರು;

(ಇ) ಸಹಕಾರಿ ಮತ್ತು ಅದರ ಶಾಖೆಯೇನಾದರೂ ಇದ್ದಲ್ಲಿ ಅದು ಸ್ವೀಕರಿಸಲಾದ ಮತ್ತು ಖರ್ಚುಮಾಡಲಾದ ಹಣದ ಎಲ್ಲ ಮೊತ್ತಗಳ ಬಗೆಗಿನ ಲೆಕ್ಕಗಳು ಮತ್ತು ಅದರ ಉದ್ದೇಶಗಳು;

(ಎಫ್) ಸಹಕಾರಿಯು ಮಾಡಿದ ಎಲ್ಲ ಸರಕುಗಳ ಖರೀದಿ ಮತ್ತು ಮಾರಾಟಗಳ ಲೆಕ್ಕಗಳು;

(ಜಿ) ಸಹಕಾರಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಲೆಕ್ಕಗಳು;

(ಹೆಚ್) ನಡವಳಿಕೆಗಳ ಪುಸ್ತಕ;

(ಐ) ಮಂಡಲಿಯ ನಿರ್ಣಯದ ಪ್ರತಿಗಳು; ಮತ್ತು

(ಜೆ) ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು ಸಹಕಾರಿಯು ಶಾಖಾ ಕಛೇರಿಯನ್ನು ಹೊಂದಿರುವಲ್ಲಿ ಅಂಥ ಶಾಖೆಗೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ದಾಖಲೆಗಳು.

[2][(1ಎ) ಪ್ರತಿಯೊಂದು ಸಹಕಾರಿಯ ಪ್ರತಿ ಸದಸ್ಯನಿಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಪುಸ್ತಕಗಳನ್ನು,

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಲೆಕ್ಕಪತ್ರಗಳನ್ನು, ತತ್ಸಂಬಂಧದ ಮಾಹಿತಿಗಳನ್ನು ನೋಡಲು ಅವಕಾಶ ಕಲ್ಪಿಸತಕ್ಕದ್ದು.]

(2) ಮಂಡಲಿಯ ಮತ್ತು ಸಾಮಾನ್ಯ ಸಭೆಗಳಲ್ಲಿನ ನಿರ್ಣಯಗಳು, ಮತದಾರರ ಪಟ್ಟಿ, ಉಪವಿಧಿಗಳು, ವಾರ್ಷಿಕ ಲೆಕ್ಕಪತ್ರಗಳ ವಿವರಪತ್ರ ಮತ್ತು ಸದಸ್ಯರಿಗೆ ಸಂಬಂಧಪಟ್ಟಂಥ ಲೆಕ್ಕಗಳ ಪ್ರತಿಗಳು, ಸಹಕಾರಿಯು ನಿರ್ಣಯಿಸಬಹುದಾದ ಅವಶ್ಯಕ ಶುಲ್ಕವನ್ನು ಸಂದಾಯ ಮಾಡಿದ ತರುವಾಯ ವ್ಯವಹಾರದ ವೇಳೆಯಲ್ಲಿ ಯಾವನೇ ಸದಸ್ಯನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(3) ಪ್ರತಿಯೊಂದು ಸಹಕಾರಿಯ ಲೆಕ್ಕಗಳ ಪುಸ್ತಕಗಳನ್ನು ಸಮರ್ಥಿಸುವ ದಾಖಲೆಗಳ ಮತ್ತು ವೋಚರುಗಳ ಜೊತೆಗೆ ಮಂಡಲಿಯು ನಿರ್ಧರಿಸಬಹುದಾದಂಥ ಅವಧಿಯವರೆಗೆ ಸಂರಕ್ಷಿಸತಕ್ಕದ್ದು.

[1][**32**ಎ. ***********]

[2][**33.** [3][**ಸಹಕಾರಿಯ ಲೆಕ್ಕಪರಿಶೋಧನೆ**].–

(1) ಪ್ರತಿಯೊಂದು ಸಹಕಾರಿಯು ಕನಿಷ್ಟ ವರ್ಷಕ್ಕೊಮ್ಮೆಯಾದರು ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆ ಮಾಡಿಸತಕ್ಕದ್ದು.

ಪರಂತು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ರಾಜ್ಯದಲ್ಲಿರುವ ಸಹಕಾರಿಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವಗಳನ್ನು ಹೊಂದಿರುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಸಕ್ಷಮನಾದ ಪ್ರಾಧಿಕಾರವಾಗಿರತಕ್ಕದ್ದು.

[4][******]

(2) ಪ್ರತಿಯೊಂದು ಸಹಕಾರಿಯ ಸಾಮಾನ್ಯ ನಿಕಾಯವು ತನ್ನ ಸಾಮಾನ್ಯ ಸಭೆಯಲ್ಲಿ ಸದರಿ ಸಹಕಾರಿಯ ಆ ಸಹಕಾರ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಒಬ್ಬ ಲೆಕ್ಕಪರಿಶೋಧಕನನ್ನು ಅಥವಾ ಒಂದು ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸತಕ್ಕದ್ದು.

---

1. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2014ರ ಕಾಯ್ದೆ 34ರಡಿ ಬದಲಾಯಿಸ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
4. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

[1][ಪರಂತು, ಯಾವ ಸಹಕಾರಿಯು ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ಮಾಡಿಸಲು ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಲು ಮತ್ತು ನಿಯಮಾನುಸಾರ ತಿಳಿಸಲು ವಿಫಲವಾಗಿದೆಯೆಂದು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮನದಟ್ಟಾದಲ್ಲಿ, ಸಂಬಂಧಿತ ಸಹಕಾರಿಗೆ ಲಿಖಿತ ಹೇಳಿಕೆ ನೀಡಲು ಅವಕಾಶ ನೀಡಿದ ತರುವಾಯ ಹಾಗೂ ನೇಮಕ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಅನುಮೋದಿತ ಪಟ್ಟಿಯೊಳಗಿನಿಂದ ಲೆಕ್ಕಪರಿಶೋಧನೆ ಮಾಡಲು ವಿಫಲವಾದ ಅಂಥ ಸಹಕಾರಿಯ ಸಂಬಂಧಿತ ವರ್ಷದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಬಹುದು ಹಾಗೂ ಸದರಿ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ನಿರ್ದಿಷ್ಟ ವರ್ಷಕ್ಕೆ ಆ ಸಹಕಾರಿಯ ಲೆಕ್ಕಪರಿಶೋಧಕರೆಂದು ಪರಿಗಣಿಸತಕ್ಕದ್ದು:

ಮತ್ತು ಪರಂತು, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ವಹಿಸುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ನಮೂದಿಸಿರುವ ಸರ್ಕಾರಿ ಲೆಕ್ಕಪರಿಶೋಧಕರ ಸಂದರ್ಭದಲ್ಲಿ ಅವರನ್ನು ಪದನಾಮ ಮಾತ್ರ ದಿಂದಲೇ ನಮೂದಿಸತಕ್ಕದ್ದು.ಮತ್ತು ಸಹಕಾರಿಯು ಇಂತಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಸರ್ಕಾರಿ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಲ್ಲಿ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ತಿಳಿಸತಕ್ಕದ್ದು.]

(3) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸುವ ರೀತಿಯು ಹಾಗೂ ಪ್ರತಿ ಸಹಕಾರಿಗೆ ತಂಡದ ಪಟ್ಟಿಯನ್ನು ಕಳುಹಿಸುವ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಈ ಪ್ರಕರಣದ (1)ನೇ ಉಪಪ್ರಕರಣದಡಿ ಲೆಕ್ಕಪರಿಶೋಧನೆಯು, ಸುಸ್ತಿಯಾದ ಋಣಗಳು ಯಾವುದಾದರೂ ಇದ್ದರೆ ಅವುಗಳ ಪರಿವೀಕ್ಷಣೆ, ಆಸ್ತಿಗಳ ಮತ್ತು ಹೊಣೆಗಳ ಭೌತಿಕ ಪರಿಶೀಲನೆ ಮತ್ತು ಮೌಲ್ಯನಿರ್ಧರಣೆ, ನಗದು ಶಿಲ್ಕಿನ ಮತ್ತು ಭದ್ರತಾ ಪತ್ರಗಳ ಪರಿಶೀಲನೆ, ಲಾಭ ಅಥವಾ ನಷ್ಟದ ದೃಢೀಕರಣ, ಭಾರತೀಯ ರಿಸರ್ವ್ ಬ್ಯಾಂಕಿನ ಅಥವಾ ನಬಾರ್ಡಿನ ಸೂಚನೆಗಳು ಮತ್ತು ನಿರ್ದೇಶಗಳನ್ನೊಳಗೊಂಡಂತೆ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವ ಇತರ ಕಾನೂನುಗಳ ಮತ್ತು ಪಾರದರ್ಶಕತೆ ಕಾನೂನಿನ ಪಾಲನೆ ಹಾಗೂ ಸಹಕಾರಿಯ ಕಾರ್ಯನಿರ್ವಹಣೆ ಮತ್ತು ನಿಯಮಿಸಲಾದ ಇತರ ವಿವರಗಳ ಪರಿವೀಕ್ಷಣೆ ಇವುಗಳನ್ನು ಒಳಗೊಂಡಿರತಕ್ಕದ್ದು.

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 06 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

(5) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಸಹಕಾರಿಗೆ ಸೇರಿದ ಮತ್ತು ಅದರ ಅಭಿರಕ್ಷೆಯಲ್ಲಿರುವ ಅಥವಾ ಸಹಕಾರಿಯ ಆಡಳಿತ ಮಂಡಲಿಯ ಯಾವುದೇ ಸದಸ್ಯರ ಅಥವಾ ಪದಾಧಿಕಾರಿಯ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಇತರ ಯಾವುದೇ ನೌಕರನ ಅಭಿರಕ್ಷೆಯಲ್ಲಿರುವ ಎಲ್ಲಾ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾಪತ್ರಗಳನ್ನು, ನಗದು ಹಣವನ್ನು ಮತ್ತು ಇತರ ಸ್ವತ್ತುಗಳನ್ನು ಎಲ್ಲಾ ಕಾಲಗಳಲ್ಲಿ ಪರಿಶೀಲಿಸುವ ಅವಕಾಶವಿರತಕ್ಕದ್ದು ಹಾಗೂ ಅಂಥಹ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಅಥವಾ ಇತರ ಸ್ವತ್ತುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಅಥವಾ ಅವುಗಳ ಅಭಿರಕ್ಷೆಗೆ ಹೊಣೆಗಾರನಾಗಿರುವ ಯಾರೇ ವ್ಯಕ್ತಿಯನ್ನು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಹಾಜರುಪಡಿಸುವಂತೆ ಸಮನು ಮಾಡಬಹುದು.

(6) ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಯಾವುದೇ ಕಾಲದಲ್ಲಿ ಆಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಹಕಾರಿಯ ಪ್ರತಿಯೊಬ್ಬ ಸದಸ್ಯನು ಅಥವಾ ಮಾಜಿ ಸದಸ್ಯನು, ಸಹಕಾರಿಯ ವ್ಯವಹಾರ ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಗತ್ಯಪಡಿಸುವಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(7) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ, ಪ್ರತಿ ಸಹಕಾರಿಯ ಆಡಳಿತ ಮಂಡಲಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತ:ಖ್ತೆಗಳನ್ನು ಮತ್ತು ಆಸ್ತಿ ಹೊಣೆಪಟ್ಟಿಯನ್ನು (ಅಡಾವೆ ಪತ್ರಿಕೆ) ನಿಯಮಿಸಬಹುದಾದಂಥ ಅನುಸೂಚಿಗಳು ಮತ್ತು ಇತರ ತ:ಖ್ತೆಗಳ ಸಹಿತ ತಯಾರಿಸಿ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಲೆಕ್ಕಪರಿಶೋಧನೆಗಾಗಿ ಒಪ್ಪಿಸುವುದನ್ನು ಖಚಿತಪಡಿಸತಕ್ಕದ್ದು.

(8) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟಂಬರ್ ಒಂದರೊಳಗಾಗಿ ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು ಸದರಿ ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ತಿಳಿಸತಕ್ಕದ್ದು.

(9) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು, ಸಹಕಾರಿಯ ಸಾಮಾನ್ಯ ಸಭೆಗೆ ಸಂಬಂಧಿಸಿದ ಎಲ್ಲಾ ನೋಟೀಸುಗಳನ್ನು ಮತ್ತು ಪ್ರತಿಯೊಂದು ಸಮಾಚಾರವನ್ನು ಸ್ವೀಕರಿಸಲು ಹಾಗೂ ಆ ಸಹಕಾರಿಯ ಖರ್ಚಿನಲ್ಲಿ, ಅಂತಹ ಸಭೆಗೆ ಹಾಜರಾಗಲು ಮತ್ತು ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ತನಗೆ ಸಂಬಂಧಿಸಿದ ವ್ಯವಹಾರದ ಯಾವುದೇ ಅಂಶಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಸಭೆಯಲ್ಲಿ ಆಲಿಸಲ್ಪಡಲು ಹಕ್ಕುಳ್ಳವನಾಗಿರತಕ್ಕದ್ದು.

(10) (1)ನೇ ಉಪಕರಣದ ಮೇರೆಗೆ ನಡೆಸಿದ ಲೆಕ್ಕಪರಿಶೋಧನೆಯ ಫಲಿತವು ಸಹಕಾರಿಯ ಕಾರ್ಯ ನಿರ್ವಹಣೆಯಲ್ಲಿನ ಯಾವುದೇ ದೋಷಗಳನ್ನು ತಿಳಿಯಪಡಿಸಿದರೆ, ಆಡಳಿತ ಮಂಡಲಿಯು ಲೆಕ್ಕ ಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿದ ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳತಕ್ಕದ್ದು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಕ್ರಮ ತೆಗೆದುಕೊಂಡ ವರದಿ ಸಹಿತ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸದರಿ ದೋಷಗಳನ್ನು ಮತ್ತು ಅಕ್ರಮಗಳನ್ನು ವಿವರಿಸತಕ್ಕದ್ದು. ಆಡಳಿತ ಮಂಡಲಿಯು ಲೆಕ್ಕಪರಿಶೋಧನಾ ವರದಿಯಲ್ಲಿನ ಎಲ್ಲಾ ದೋಷಗಳನ್ನು ಸರಿಪಡಿಸಲು ಮತ್ತು ಎಲ್ಲಾ ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳುವುದನ್ನು ಮುಂದುವರಿಸತಕ್ಕದ್ದು ಮತ್ತು ವಾರ್ಷಿಕ ಸಾಮಾನ್ಯ ಸಭೆಗೆ ಶೃತಪಡಿಸತಕ್ಕದ್ದು. ಆಡಳಿತ ಮಂಡಲಿಯು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಕ್ರಮ ತೆಗೆದುಕೊಂಡ ವರದಿಯನ್ನು ಸಲ್ಲಿಸತಕ್ಕದ್ದು.

(11) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅಪೆಕ್ಸ್ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ನಿಯಮಿಸಲಾದ ರೀತಿಯಲ್ಲಿ ವಿಧಾನಮಂಡಲದಲ್ಲಿ ಮಂಡಿಸಲು ಅನುವಾಗುವಂತೆ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷವೂ ಸಲ್ಲಿಸತಕ್ಕದ್ದು.

(12) ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ನಿಧಿಗಳ ವಂಚನೆ ಅಥವಾ ದುರ್ವಿನಿಯೋಗ ಅಥವಾ ದುರುಪಯೋಗ ಆಗಿದೆಯೆಂಬುದು ಸಹಕಾರಿಯ ಸಾಮಾನ್ಯ ನಿಕಾಯಕ್ಕೆ ಕಂಡು ಬಂದರೆ ಅಥವಾ ಲೆಕ್ಕಗಳ ತಪ್ಪು ವರ್ಗೀಕರಣ ಮಾಡಿರುವುದು ಕಂಡುಬಂದರೆ, ಅಂಥ ಸಹಕಾರಿಯ ಸಾಮಾನ್ಯ ಸದಸ್ಯರ ಸಭೆಯು ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಲೆಕ್ಕಪತ್ರವನ್ನು ಮರುಲೆಕ್ಕಪರಿಶೋಧಿಸಲು ತೀರ್ಮಾನಿಸಬಹುದು.

(13) ಸಹಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸಹಕಾರಿಯ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆ ಮಾಡುವುದು ಅವಶ್ಯಕ ಅಥವಾ ಯುಕ್ತವೆಂದು ಕಂಡುಬಂದರೆ, ರಾಜ್ಯ ಸರ್ಕಾರವು, ಆದೇಶದ ಮೂಲಕ ಅಂಥ ಮರು ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡಬಹುದು ಮತ್ತು ಲೆಕ್ಕಪರಿಶೋಧನೆಗೆ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳು, ಉಪಬಂಧಗಳು ಅಂಥ ಮರುಲೆಕ್ಕಪರಿಶೋಧನೆಗೆ ಅನ್ವಯವಾಗತಕ್ಕದ್ದು;

ಪರಂತು, ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ಹಣದ ಬಗ್ಗೆ ವಂಚನೆ ಆಗಿದೆಯೆಂದು ಅಥವಾ ದುರ್ವಿನಿಯೋಗವಾಗಿದೆಯೆಂಬುದು ಅಥವಾ ದುರುಪಯೋಗವಾಗಿದೆ ಯೆಂಬುದು ಮೇಲ್ನೋಟಕ್ಕೆ ಕಂಡುಬಂದರೆ ಅಂಥ ಲೆಕ್ಕಪತ್ರಗಳ ತಪ್ಪು ವರ್ಗೀಕರಣ ಮಾಡಿದ್ದರೆ ಅಥವಾ ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಇತರ ಸಮಂಜಸ ಕಾರಣಗಳಿಗಾಗಿ ಅಂಥ ಮರುಲೆಕ್ಕಪರಿಶೋಧನೆಗೆ ಆದೇಶ ಮಾಡತಕ್ಕದ್ದು.

(14) (4) ರಿಂದ (6)ನೇ ಉಪಪ್ರಕರಣಗಳ ಉಪಬಂಧಗಳಿಗೆ ಭಾಧಕವಾಗದಂತೆ, ಲೆಕ್ಕಪರಿಶೋಧಕನು,–

(ಎ) ಸಹಕಾರಿಯ ಭದ್ರತೆಯ ಆಧಾರದ ಮೇಲೆ ನೀಡಿರುವ ಸಾಲಗಳನ್ನು ಅಥವಾ ಮುಂಗಡಗಳನ್ನು ಸೂಕ್ತವಾಗಿ ಭದ್ರತೆ ಪಡೆದು ನೀಡಲಾಗಿದೆಯೇ ಮತ್ತು ಯಾವ ನಿಬಂಧನೆಗಳ ಮೇಲೆ ಅವುಗಳನ್ನು ನೀಡಲಾಗಿದೆಯೋ ಆ ನಿಬಂಧನೆಗಳು ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಬಿ) ಕೇವಲ ಪುಸ್ತಕ ನಮೂದುಗಳಿಂದ ಪ್ರತಿನಿಧಿಸಲ್ಪಡುವ ಸಹಕಾರಿಯ ವ್ಯವಹಾರಗಳು ಅದರಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕಕ್ಕೆ ಖರ್ಚು ಹಾಕಲಾಗಿದೆಯೇ ಎಂಬ ಬಗ್ಗೆ;

(ಡಿ) ಯಾವುದೇ ಷೇರುಗಳನ್ನು ನಗದಿಗಾಗಿ ಹಂಚಿಕೆ ಮಾಡಲಾಗಿದೆ ಎಂದು ಪುಸ್ತಕಗಳಲ್ಲಿ ಮತ್ತು ಕಾಗದ ಪತ್ರಗಳಲ್ಲಿ ನಿರೂಪಿಸುವಲ್ಲಿ, ಅಂಥ ಹಂಚಿಕೆಗೆ ಸಂಬಂಧಪಟ್ಟಂತೆ ನಗದನ್ನು ವಾಸ್ತವಿಕವಾಗಿ ಸ್ವೀಕರಿಸಲಾಗಿದೆಯೇ ಮತ್ತು ಯಾವುದೇ ನಗದನ್ನು ವಾಸ್ತವಿಕವಾಗಿ ಹಾಗೆ ಸ್ವೀಕರಿಸಿಲ್ಲದಿದ್ದರೆ, ಲೆಕ್ಕ ಪುಸ್ತಕಗಳಲ್ಲಿ ಮತ್ತು ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯಲ್ಲಿ ನಿರೂಪಿಸಲಾದ ಸ್ಥಿತಿಯು ಸರಿಯಾದುದೇ, ಕ್ರಮಬದ್ಧವಾದುದೇ ಮತ್ತು ದಾರಿ ತಪ್ಪಿಸುವಂಥದ್ದಲ್ಲವೇ ಎಂಬ ಬಗ್ಗೆ;

(ಇ) ವಿಚಾರಣೆ ಮಾಡುವ ಸಲುವಾಗಿ ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಉಲ್ಲೇಖಿಸಿದ ಯಾವುದೇ ವಿಶೇಷ ವಿವಾದಾಂಶ ಅಥವಾ ವಿಷಯದ ಬಗೆಗಿನ ವರದಿಯನ್ನು ರಿಸರ್ವ್ ಬ್ಯಾಂಕಿಗೆ ಅಥವಾ ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿಗೆ ಸಲ್ಲಿಸಲಾಗಿದೆಯೇ ಎಂಬ ಬಗ್ಗೆ;

– ವಿಚಾರಣೆ ಮಾಡತಕ್ಕದ್ದು.

(15) ಲೆಕ್ಕಪರಿಶೋಧಕನು, ತಾನು ಪರಿಶೀಲಿಸಿದ ಲೆಕ್ಕಪತ್ರಗಳ ಬಗ್ಗೆ ಮತ್ತು ತನ್ನ ಪದಾವಧಿಯಲ್ಲಿ, ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಮುಂದೆ ಮಂಡಿಸಿದ ಪ್ರತಿಯೊಂದು ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯ ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಬಗ್ಗೆ ಹಾಗೂ ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ) ಅಥವಾ ಲಾಭ ಮತ್ತು ನಷ್ಟ ಲೆಕ್ಕದ ಒಂದು ಭಾಗವಾಗಿರಬೇಕೆಂದು ಅಗತ್ಯಪಡಿಸಲಾದ ಅಥವಾ ಅದಕ್ಕೆ ಲಗತ್ತಿಸಲಾದ ಪ್ರತಿಯೊಂದು ಇತರ ದಸ್ತಾವೇಜುಗಳ ಬಗ್ಗೆ ಸಹಕಾರಿಗೆ ವರದಿ ಮಾಡತಕ್ಕದ್ದು ಮತ್ತು ಆ ವರದಿಯು ಅವನ ಅಭಿಪ್ರಾಯದಲ್ಲಿ ಮತ್ತು ಅವನಿಗೆ ಮಾಹಿತಿ ಇರುವಷ್ಟರಮಟ್ಟಿಗೆ ಮತ್ತು ಅವನಿಗೆ ವಿವರಣೆ ನೀಡಿರುವುದಕ್ಕೆ ಅನುಸಾರವಾಗಿ, ಸದರಿ ಲೆಕ್ಕಗಳು ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಿದ ರೀತಿಯಲ್ಲಿ ನೀಡುವುದೇ ಮತ್ತು,–

(ಎ) ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯ ಸಂದರ್ಭದಲ್ಲಿ, ಸಹಕಾರ ವರ್ಷದ ಅಂತ್ಯದಲ್ಲಿ ಇದ್ದಂತೆ ಸಹಕಾರಿ ವ್ಯವಹಾರಗಳ ಸ್ಥಿತಿಯ ಬಗ್ಗೆ, ಮತ್ತು;

(ಬಿ) ಲಾಭ ಮತ್ತು ನಷ್ಟದ ಲೆಕ್ಕದ ಸಂದರ್ಭದಲ್ಲಿ, ಸಹಕಾರ ವರ್ಷದ ಲಾಭ ಅಥವಾ ನಷ್ಟದ ಬಗ್ಗೆ,

–ನಿಜವಾದ ಮತ್ತು ನ್ಯಾಯ ಸಮ್ಮತವಾದ ಚಿತ್ರಣವನ್ನು ನೀಡುವುದೇ,

–ಎಂಬುದನ್ನು ತಿಳಿಸತಕ್ಕದ್ದು.

(16) ಲೆಕ್ಕಪರಿಶೋಧಕನ ವರದಿಯು,–

(ಎ) ಅವನು, ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ತಿಳಿದಿರುವ ಮತ್ತು ನಂಬಿರುವಷ್ಟರಮಟ್ಟಿಗಿನ ಎಲ್ಲಾ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಪಡೆದಿರುವನೇ ಎಂಬುದನ್ನು;

(ಬಿ) ತನ್ನ ಅಭಿಪ್ರಾಯದಲ್ಲಿ, ಆ ಲೆಕ್ಕಪುಸ್ತಕಗಳ ಪರಿಶೀಲನೆಯಿಂದ ಕಂಡುಬರಬಹುದಾದಷ್ಟರ ಮಟ್ಟಿಗೆ ಸಹಕಾರಿಯು, ಸೂಕ್ತ ಲೆಕ್ಕಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುತ್ತಿದೆಯೇ ಮತ್ತು ಆತನು ಭೇಟಿ ನೀಡದ ಸಹಕಾರಿಯ ಶಾಖೆಗಳಿಂದ ಅಥವಾ ಕಛೇರಿಗಳಿಂದ

ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಾಕಷ್ಟಾದ ವಿದ್ಯುಕ್ತ ವರದಿಗಳನ್ನು ಸ್ವೀಕರಿಸಲಾಗಿದೆಯೇ ಎಂಬುದನ್ನು;

(ಸಿ) ಸಹಕಾರಿಯ ಲೆಕ್ಕಪರಿಶೋಧಕನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಿರುವ ಯಾವುದೇ ಶಾಖಾ ಕಛೇರಿಯ ಲೆಕ್ಕಪತ್ರಗಳ ಮೇಲಿನ ವರದಿಯನ್ನು ಅವನಿಗೆ ಕಳುಹಿಸಿ ಕೊಡಲಾಗಿದೆಯೇ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸುವಲ್ಲಿ, ಅವನು ಆ ವರದಿಯನ್ನು ಹೇಗೆ ಪರಿಗಣಿಸಿದ್ದಾನೆ ಎಂಬುದನ್ನು;

(ಡಿ) ವರದಿಯಲ್ಲಿ ಉಲ್ಲೇಖಿಸಲಾಗಿರುವ ಸಹಕಾರಿಯ ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯು ಮತ್ತು ಲಾಭ ಮತ್ತು ನಷ್ಟದ ಲೆಕ್ಕವು, ಲೆಕ್ಕಪುಸ್ತಕಗಳೊಡನೆ ಮತ್ತು ವಿಧ್ಯುಕ್ತ ವರದಿಗಳೊಡನೆ ತಾಳೆಯಾಗುವುದೇ ಎಂಬುದನ್ನು;

–ಸಹ ತಿಳಿಸತಕ್ಕದ್ದು,

(17) (14)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (15)ನೇ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (16)ನೇ ಉಪ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯದ ಬಗ್ಗೆ ನಕರಾತ್ಮಕವಾಗಿ ಅಥವಾ ಷರತ್ತುಬದ್ದ ಅವಲೋಕನದೊಂದಿಗೆ ಉತ್ತರಿಸಿದಾಗ, ಲೆಕ್ಕಪರಿಶೋಧಕನ ವರದಿಯಲ್ಲಿ, ಆ ಉತ್ತರಕ್ಕಾಗಿ ಕಾರಣವನ್ನು ತಿಳಿಸತಕ್ಕದ್ದು.

(18) ಲೆಕ್ಕಪರಿಶೋಧನಾ ವರದಿಯು,–

(ಎ) ಲೆಕ್ಕಪರಿಶೋಧನೆಯಲ್ಲಿ ಅವಲೋಕಿಸಿದ ದೋಷಗಳ ಅಥವಾ ಅಕ್ರಮಗಳ ಎಲ್ಲಾ ವಿವರಗಳು ಮತ್ತು ಆರ್ಥಿಕ ಅಕ್ರಮಗಳು ಮತ್ತು ಹಣ ದುರುಪಯೋಗ ಇದ್ದಲ್ಲಿ, ನಿಧಿಗಳ ದುರಪಯೋಗ ಅಥವಾ ಮೋಸ ಆಗಿರುವಲ್ಲಿ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ಅವ್ಯವಹಾರದಲ್ಲಿನ ಕಾರ್ಯರೀತಿ, ವಹಿಸಿಕೊಡುವಿಕೆ ಮತ್ತು ಒಳಗೊಂಡಿರುವ ಮೊತ್ತದ ಬಗ್ಗೆ ಪರೀಕ್ಷಿಸಿ ಹಣದ ಅಂತಹ ದುರುಪಯೋಗ ಅಥವಾ ದುರ್ವಿನಿಯೋಗಕ್ಕೆ ಪ್ರಸಂಗಾನುಸಾರ ಆಡಳಿತ ಮಂಡಲಿಯ ಸದಸ್ಯರ ಅಥವಾ ಸಹಕಾರಿ ನೌಕರರ ಅಥವಾ ಇತರ ಯಾವುದೇ ವ್ಯಕ್ತಿಯ ಮೇಲೆ ಜವಾಬ್ದಾರಿ ನಿಗದಿಪಡಿಸಿ ತತ್ಸಂಬಂಧದ ಎಲ್ಲಾ ಅಗತ್ಯ ಸಾಕ್ಷ್ಯವನ್ನು ನೀಡತಕ್ಕದ್ದು;

(ಬಿ) ಲೆಕ್ಕನಿರ್ವಹಣಾ ಅಕ್ರಮಗಳ ಮತ್ತು ಅವುಗಳಿಂದ ಲಾಭ ನಷ್ಟದ ಮೇಲೆ ಸಂವಾದಿಯಾಗಿ ಆಗುವ ಪರಿಣಾಮವನ್ನು ಒಳಗೊಂಡಂತೆ ಆರ್ಥಿಕ ತ:ಖ್ತೆಗಳ ಮೇಲಾಗುವ ಪರಿಣಾಮಗಳ ಎಲ್ಲಾ ವಿವರಗಳು;

(ಸಿ) ಹಕಾರಿಯ ಸಮಾನ್ಯ ನಿಕಾಯದ, ಆಡಳಿತ ಮಂಡಲಿಯ ಮತ್ತು ಉಪಸಮಿತಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ಅಕ್ರಮಗಳನ್ನು ಅಥವಾ ಉಲ್ಲಂಘನೆಗಳನ್ನು ಅವಲೋಕಿಸಿದಲ್ಲಿ, ಅಂತಹ ಅಕ್ರಮ ಮತ್ತು ಉಲ್ಲಂಘನೆಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸುವುದು;

(ಡಿ) ನಿಯಮಿಸಬಹುದಾದಂಥ ಎಲ್ಲಾ ಅನುಸೂಚಿಗಳು ಮತ್ತು ಇತರ ತ:ಖ್ತೆಗಳು.

– ಇವುಗಳನ್ನು ಹೊಂದಿರತಕ್ಕದ್ದು.

[1][(19) ಯಾವುದೇ ಸಹಕಾರಿಯ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಸಂಭಾವನೆಯನ್ನು, ಸಹಕಾರಿಯ ದುಡಿಯುವ ಬಂಡವಾಳ ಮತ್ತು ವಹಿವಾಟಿನ ಆಧಾರದ ಮೇಲೆ, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳ ರೀತ್ಯಾ ಅದರ ಸಾಮಾನ್ಯ ನಿಕಾಯವು ನಿಗದಿಪಡಿಸುವ ದರದಲ್ಲಿ ಸಹಕಾರಿಯು ಭರಿಸತಕ್ಕದ್ದು.

(20) ಮೇಲಿನ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಹಿಂದಿನ ಮೂರು ವರ್ಷಗಳ ಲೆಕ್ಕಪರಿಶೋಧನಾ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಲೆಕ್ಕಪರಿಶೋಧಿತ ಖಾತೆ ಅಥವಾ ಲೆಕ್ಕಪರಿಶೋಧಿತ ಲೆಕ್ಕಗಳನ್ನು ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಮಾಡುವ ಅಧಿಕಾರವು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಇರತಕ್ಕದ್ದು. ಹಾಗೂ ಸಂಬಂಧಿತ ಲೆಕ್ಕಪರಿಶೋಧಕರಿಗೆ ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಮುಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರ್ಪಡೆಗೊಳಿಸಲು ಸೂಚಿಸಬಹುದು.

**ವಿವರಣೆ :** ಈ ಪ್ರಕರಣದ ಉದ್ದೇಶಕ್ಕಾಗಿ,–

(i) **'ಲೆಕ್ಕಪರಿಶೋಧಕ'** ಎಂದರೆ, ತನ್ನ ಪದವಿ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಸಹಕಾರಿ ವ್ಯವಸ್ಥಾಪನೆಯಲ್ಲಿ ಉನ್ನತ ಡಿಪ್ಲೋಮಾ ಅಥವಾ ಸಹಕಾರಿ ಲೆಕ್ಕಪರಿಶೋಧನೆಯಲ್ಲಿ ಡಿಪ್ಲೋಮಾ ಅಥವಾ ಸಹಕಾರಿ ವ್ಯವಸ್ಥಾಪನೆಯಲ್ಲಿ ಸಾಮಾನ್ಯ ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರುವ ಮತ್ತು ಪ್ರೊಬೇಷನರಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಕನ್ನಡ ಭಾಷೆಯ ವ್ಯವಹಾರ ಜ್ಞಾನವುಳ್ಳ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಒಬ್ಬ ಲೆಕ್ಕಪರಿಶೋಧಕ ಅಥವಾ ಒಬ್ಬ ಅಧಿಕಾರಿ;

ಅಥವಾ ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ, 1949ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬ ಸನ್ನದು ಲೆಕ್ಕಿಗ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959 ರಲ್ಲಿ ಅರ್ಥೈಸಿರುವಂತೆ, ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ವಿಸ್ತೃತ ಜ್ಞಾನವುಳ್ಳ ಸಹಕಾರಿಯ ಲೆಕ್ಕಪರಿಶೋಧನೆಯಲ್ಲಿ ಪರಿಣಿತನಾಗಿರುವ, ಕನಿಷ್ಠ ಮೂರು ವರ್ಷಗಳ ಲೆಕ್ಕಪರಿಶೋಧನೆ ಅನುಭವವುಳ್ಳ ಮತ್ತು ಕನ್ನಡ ಭಾಷಾಜ್ಞಾನವುಳ್ಳ ವೆಚ್ಚಲೆಕ್ಕಿಗ (Cost Accountant) ಹಾಗೂ ಅಂತಹ ಸನ್ನದು ಲೆಕ್ಕಿಗನು ಅಥವಾ ವೆಚ್ಚ ಲೆಕ್ಕಿಗನು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.

(ii) **ಲೆಕ್ಕಪರಿಶೋಧಿಸುವ ಸಂಸ್ಥೆ** ಎಂದರೆ, ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949 ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬರಿಗಿಂತ ಹೆಚ್ಚಿನ ಚಾರ್ಟರ್ಡ್ ಲೆಕ್ಕಿಗರ ಒಂದು ಸಂಸ್ಥೆ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959 ರಲ್ಲಿ ಅರ್ಥೈಸಿರುವಂತೆ, ಒಂದಕ್ಕಿಂತ ಹೆಚ್ಚಿನ ವೆಚ್ಚ ಲೆಕ್ಕಿಗರ ನ್ನೊಳಗೊಂಡ ಸಂಸ್ಥೆ ಹಾಗೂ ಅಂತಹ ಚಾರ್ಟರ್ಡ್ ಲೆಕ್ಕಿಗರು ಅಥವಾ ವೆಚ್ಚಲೆಕ್ಕಿಗರು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.]]

**34. ಮಾಹಿತಿಯನ್ನು ಒದಗಿಸುವುದು.–** [1][ಪ್ರತಿಯೊಂದು ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ ಈ ಮುಂದಿನ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು] [2][ಮತ್ತು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿಗೆ ಸಹ] ಒದಗಿಸತಕ್ಕದ್ದು ಎಂದರೆ –

[3][(ಎ) ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ;]

(ಬಿ) ಲೆಕ್ಕಪತ್ರಗಳ ಲೆಕ್ಕಪರಿಶೋಧಿತ [4][ಆರ್ಥಿಕ ತ:ಖ್ತೆಗಳು];

(ಸಿ) ಸಾಮಾನ್ಯ ನಿಕಾಯವು ಅನುಮೋದಿಸಿದಂತೆ ಹೆಚ್ಚುವರಿಯನ್ನು ವಿಲೆಮಾಡುವ ಬಗ್ಗೆ ಯೋಜನೆ;

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2004ರ ಕಾಯ್ದೆ 21ರಡಿ ಸೇರಿಸ್ಪಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(ಡಿ) ನಿರ್ದೇಶಕರುಗಳ ಪಟ್ಟಿ ಹಾಗೂ ಅವರ ಪದಾವಧಿ.

(ಇ) ಸಹಕಾರಿಯ ಉಪವಿಧಿಗಳ ತಿದ್ದುಪಡಿಗಳ ಪಟ್ಟಿ; ಮತ್ತು

(ಎಫ್) ಸಾಮಾನ್ಯ ನಿಕಾಯದ ಸಭೆಯನ್ನು ಮತ್ತು ಚುನಾವಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ನಡೆಸಿದ ದಿನಾಂಕದ ಬಗ್ಗೆ ಘೋಷಣೆ;

[1][(ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿ.]

[2][**35. ವಿಚಾರಣೆ:–**

(1) ರಿಜಿಸ್ಟ್ರಾರನು, ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿಗಳಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ವಿಷಯವನ್ನು ಕುರಿತು ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ವಿಚಾರಣೆ ನಡೆಸುವಂತೆ ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವರೂಪದ ವಿಚಾರಣೆಯನ್ನು [3][XXXX]–

(ಎ) ಸಹಕಾರಿಯು ಸಂಯೋಜಿತವಾಗಿರುವ ಸಂಯುಕ್ತ ಸಹಕಾರಿಯು; ಅಥವಾ

(ಬಿ) ಸಹಕಾರಿಯ ಮಂಡಳಿಯ ಸದಸ್ಯರ ಪೈಕಿ ಮೂರನೇ ಒಂದರಷ್ಟಕ್ಕೆ ಕಡಿಮೆಯಲ್ಲದ ಸದಸ್ಯರು; ಅಥವಾ

[4][(ಸಿ) ಸಹಕಾರಿಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದರಷ್ಟಕ್ಕೆ ಕಡಿಮೆಯಿಲ್ಲದ ಅಥವಾ ಸಹಕಾರಿಯ ಕನಿಷ್ಠ ಹತ್ತು ಸದಸ್ಯರು]

– ಸಲ್ಲಿಸಿದ ಅರ್ಜಿಯ ಮೇಲೆ ನಡೆಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಯಮಿಸ–ಬಹುದಾದಂಥ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು.

(4) ರಿಜಿಸ್ಟ್ರಾರನು, ತಾನೇ ಸ್ವತ: ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣೆಯನ್ನು ನಡೆಸಲು ಒಬ್ಬ ವಿಚಾರಣಾಧಿಕಾರಿಯನ್ನು ನೇಮಿಸಬಹುದು. ವಿಚಾರಣೆಯ ವೆಚ್ಚವನ್ನು, ರಿಜಿಸ್ಟ್ರಾರನು ತೀರ್ಮಾನಿಸಬಹುದಾದಂತೆ, ಸಂದರ್ಭಾನುಸಾರ ಸಾಲಿಗ ಅಥವಾ ಸಂಯುಕ್ತ ಸಹಕಾರಿ ಅಥವಾ ಸಹಕಾರಿಯು ಭರಿಸತಕ್ಕದ್ದು.

(5) (2)ನೇ ಉಪ–ಪ್ರಕರಣದ ಅಡಿಯಲ್ಲಿನ ಒಂದು ವಿಚಾರಣೆಯು, ಹನ್ನೆರಡು

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
4. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

ತಿಂಗಳುಗಳ ಅವಧಿಯೊಳಗೆ ಪೂರ್ಣಗೊಳ್ಳತಕ್ಕದ್ದು, ಆದಾಗ್ಯೂ, ರಿಜಿಸ್ಟ್ರಾರನು, ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡಿ ಅದನ್ನು ಆರು ತಿಂಗಳುಗಳ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

(6) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸಿದಾಗ, ರಿಜಿಸ್ಟ್ರಾರನು, ವಿಚಾರಣಾ ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ, ವಿಚಾರಣಾ ವರದಿಯ ಒಂದು ಪ್ರತಿಯನ್ನು, –

(ಎ) ಅರ್ಜಿದಾರರಿಗೆ;

(ಬಿ) ಸಂಬಂಧಪಟ್ಟ ಸಹಕಾರಿಗೆ;

(ಸಿ) ಸಂಬಂಧಪಟ್ಟ ಎಲ್ಲಾ ಸಾಲಿಗರಿಗೆ;

(ಡಿ) ಸಂಯುಕ್ತ ಸಹಕಾರಿಗೆ, ಮತ್ತು

(ಇ) ಈ ಪ್ರಕರಣದ ಅಡಿಯಲ್ಲಿನ ವಿಚಾರಣೆಯು ಒಂದು ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ ರಿಜರ್ವ್ ಬ್ಯಾಂಕಿಗೆ, ಕಳುಹಿಸತಕ್ಕದ್ದು.]

**36. ವ್ಯಕ್ತಿಗಳನ್ನು ಮತ್ತು ದಸ್ತಾವೇಜುಗಳನ್ನು ಸಮನುಮಾಡಲು ಮತ್ತು ಪರಿಶೀಲಿಸಲು ಅಧಿಕಾರ.–**

(1) [1][ರಿಜಿಸ್ಟ್ರಾರನು ಅಥವಾ ಸಂದರ್ಭಾನುಸಾರ ವಿಚಾರಣಾಕಾರಿಯು] ವಿಚಾರಣೆ ಪ್ರಾರಂಭವಾಗುವ ದಿನಾಂಕದ ಬಗ್ಗೆ ಹದಿನೈದು ದಿನಗಳಿಗೆ ಕಡಿಮೆ ಇಲ್ಲದಂತೆ ಬರಹದಲ್ಲಿರುವ ನೋಟೀಸನ್ನು ಸಂಬಂಧಪಟ್ಟ ಸಹಕಾರಿಗೆ ನೀಡತಕ್ಕದ್ದು: ಪರಂತು ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಿ ಅಲ್ಪಾವಧಿಯ ನೋಟೀಸನ್ನು ನೀಡಬಹುದು.

(2) ವಿಚಾರಣೆಯನ್ನು ನಡೆಸುವ [2][ರಿಜಿಸ್ಟ್ರಾರನು ಅಥವಾ ವಿಚಾರಣಾಕಾರಿಯು] (3)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ಏಳು ದಿನಗಳಿಗೆ ಕಡಿಮೆ ಇಲ್ಲದ ಸೂಕ್ತ ಅವಧಿಯನ್ನು ನೀಡಬಹುದು.

[3][(3) ಈ ಅಧಿನಿಯಮದಡಿ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಅಂಥ ವಿಚಾರಣೆಯನ್ನು ನಡೆಸುವ ರಿಜಿಸ್ಟ್ರಾರನು ಅಥವಾ ವಿಚಾರಣಾಧಿಕಾರಿಯು,–

(ಎ) ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಅವಶ್ಯಕವೆಂದು ತಾನು ಭಾವಿಸಬಹುದಾದಂಥ ರಸೀದಿಗಳು, ವೋಚರುಗಳು, ತ:ಖ್ತೆಗಳು, ವಿವರಣಾ ಪತ್ರಗಳು, ಪತ್ರವ್ಯವಹಾರ, ನೋಟೀಸು ಅಥವಾ ಇತರ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಅಧ್ಯಕ್ಷ ಅಥವಾ ಸಭಾಪತಿಯನ್ನು ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಥವಾ ಸಂಬಂಧಪಟ್ಟ

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

ಇತರ ಪ್ರಾಧಿಕಾರವನ್ನು ಲಿಖಿತದಲ್ಲಿ ಅಗತ್ಯಪಡಿಸಬಹುದು;

(ಬಿ) ಸಹಕಾರಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಮತ್ತು ಇತರ ಸ್ವತ್ತುಗಳನ್ನು ಪರಿಶೀಲಿಸಲು ಮುಕ್ತ ಅವಕಾಶ ಹೊಂದಿರತಕ್ಕದ್ದು ಮತ್ತು ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಛೇರಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಯಾವುದೇ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಅಥವಾ ಇತರ ಸ್ವತ್ತುಗಳನ್ನು ಹಾಜರುಪಡಿಸುವುದಕ್ಕಾಗಿ, ಇವುಗಳ ಸ್ವಾಧೀನತೆ ಹೊಂದಿರುವ ಅಥವಾ ಅಭಿರಕ್ಷೆಗೆ ಜವಾಬ್ದಾರನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡಬಹುದು;

[1][(ಸಿ) ವಿಚಾರಣೆಯ ಉದ್ದೇಶಕ್ಕಾಗಿ ಸಂದರ್ಭಾನುಸಾರವಾಗಿ ಒಂದು ಹಣಕಾಸು ಬ್ಯಾಂಕಿನ ಅಥವಾ ಕ್ರೆಡಿಟ್ ಏಜೆನ್ಸಿಯ ಯಾರೇ ಅಧಿಕಾರಿಯನ್ನು ಅಥವಾ ಸಹಕಾರಿಯೊಡನೆ ಯಾವುದೇ ರೀತಿಯ ವ್ಯವಹಾರ ಸಂಬಂಧವುಳ್ಳ ಯಾವೊಬ್ಬ ವ್ಯಕ್ತಿಯನ್ನು ಅಥವಾ ಸಹಕಾರಿಯ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಿರುವ ಯಾವೊಬ್ಬ ವ್ಯಕ್ತಿಯನ್ನು, ಅಥವಾ ಸಹಕಾರಿಯ ವ್ಯವಹಾರಗಳ ಬಗ್ಗೆ ತಿಳುವಳಿಕೆ ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಸಹಕಾರಿಯ ವ್ಯವಹಾರಗಳಿಗೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ದಾಖಲೆಗಳು ಅಥವಾ ದಸ್ತಾವೇಜುಗಳು ಯಾವುದಾದರೂ ಇದ್ದರೆ ಅವುಗಳನ್ನು ಹಾಜರುಪಡಿಸಲು ಮತ್ತು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಶಾಖಾ ಕಛೇರಿಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ವಿಚಾರಣೆಯ ಸಲುವಾಗಿ ವಿಚಾರಣಾಧಿಕಾರಿಯು ಅಗತ್ಯಪಡಿಸುವಂಥ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಒದಗಿಸಲು ಸಮನು ಮಾಡಬಹುದು.] ಮತ್ತು

(ಡಿ) ಸಹಕಾರಿಯ ಸಾಮಾನ್ಯ ಸಭೆಗಾಗಿ ನೋಟೀಸಿನ ಅವಧಿಯನ್ನು ನಿರ್ದಿಷ್ಟಪಡಿಸುವ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿ ಏನೇ ಇದ್ದರೂ, ಸಹಕಾರಿಯ ಕೇಂದ್ರ ಕಛೇರಿಯ ಅಥವಾ ಅದರ ಯಾವುದೇ ಶಾಖೆಯ ಅಂಥ ಸ್ಥಳ ಅಥವಾ ಅಂಥ ಸಮಯದಲ್ಲಿ ಮತ್ತು ತಾನು ನಿರ್ದೇಶಿಸಬಹುದಾದಂಥ ವಿಷಯಗಳ ಬಗ್ಗೆ ನಿರ್ಣಯಿಸಲು ಸಾಮಾನ್ಯ ಸಭೆಯನ್ನು ಕರೆಯುವುದಕ್ಕೆ ಸಹಕಾರಿಯ ಪದಾಧಿಕಾರಿಗಳನ್ನು ಅಗತ್ಯಪಡಿಸಬಹುದು ಮತ್ತು ಅಂಥ ಸಭೆಯನ್ನು ಕರೆಯಲು ಸಹಕಾರಿಯ ಪದಾಕಾರಿಗಳು ನಿರಾಕರಿಸಿದಲ್ಲಿ ಅಥವಾ ವಿಫಲರಾದಲ್ಲಿ, ಅವನು ತಾನೇ ಸಭೆಯನ್ನು ಕರೆಯುವ ಅಧಿಕಾರ ಹೊಂದಿರತಕ್ಕದ್ದು.

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ವಿವರಣೆ: (ಡಿ) ಖಂಡದ ಅಡಿಯಲ್ಲಿ ಕರೆದ ಯಾವುದೇ ಸಭೆಯು, ಸಹಕಾರಿಯ ಉಪವಿಧಿಯ ಅಡಿಯಲ್ಲಿ ಕರೆದ ಸಾಮಾನ್ಯ ಸಭೆಯ ಅಧಿಕಾರಗಳನ್ನೇ ಹೊಂದಿರತಕ್ಕದ್ದು ಮತ್ತು ಅಂಥ ಸಭೆಗಳಿಗೆ ಕೋರಂನ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ಬಿಟ್ಟರೆ ಸಭಾ ಕಲಾಪಗಳು ಅಂಥ ಉಪವಿಧಿಗಳಿಂದ ನಿಯಂತ್ರಿತವಾಗತಕ್ಕದ್ದು.]

**37. ವಿಚಾರಣಾ ವರದಿಯ ಬಗ್ಗೆ ಕ್ರಮ.** – [1][ರಿಜಿಸ್ಟ್ರಾರನಿಗೆ] ಅಂಥ ವಿಚಾರಣೆಯ ನಂತರ, ಯಾವೊಬ್ಬ ಅಥವಾ ಎಲ್ಲ ಪದಾಧಿಕಾರಿಗಳು ಅಥವಾ ನಿರ್ದೇಶಕರು ಅಥವಾ ಮುಖ್ಯ ಕಾರ್ಯನಿರ್ವಾಹಕರು ವೈಯಕ್ತಿಕವಾಗಿ ಅಥವಾ ಜಂಟಿಯಾಗಿ, ಅಧಿನಿಯಮಕ್ಕೆ, ನಿಯಮಗಳಿಗೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಸಂದಾಯಗಳನ್ನು ಮಾಡಿದ್ದಾರೆಂದು ಮತ್ತು ವಿಶ್ವಾಸದ್ರೋಹ ಅಥವಾ ನಿರ್ಲಕ್ಷ್ಯದಿಂದ ಸಹಕಾರಿಯ ಸ್ವತ್ತುಗಳಿಗೆ ನಷ್ಟ ಅಥವಾ ಕೊರತೆಯನ್ನುಂಟುಮಾಡಿದ್ದಾರೆಂದು ಅಥವಾ ಅಂಥ ಸಹಕಾರಿಗೆ ಸೇರಿದ ಯಾವುದೇ ಹಣ ಅಥವಾ ಆಸ್ತಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಅಥವಾ ಮೋಸದಿಂದ ಉಳಿಸಿಕೊಂಡಿದ್ದಾರೆಂದು ಮನದಟ್ಟಾದರೆ, ಅವರು ಬದ್ಧರಾಗಬಹುದಾದ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಪ್ರತಿಕೂಲವಾಗದಂತೆ, ವಿಚಾರಣಾ ವರದಿಯ ನಿರ್ಣಯಗಳನ್ನು ಚರ್ಚಿಸುವುದಕ್ಕಾಗಿ ಮತ್ತು ಸಂಬಂಧಪಟ್ಟವರ ವಿರುದ್ಧ ಅವಶ್ಯ ಕ್ರಮ ಕೈಗೊಳ್ಳಲು, [2][ರಿಜಿಸ್ಟ್ರಾರನು] ನಿರ್ದಿಷ್ಟಪಡಿಸುವ ಅಂಥ ಸೂಕ್ತ ಸಮಯದೊಳಗೆ ಸಾಮಾನ್ಯ ಸಭೆಯನ್ನು ಕರೆಯುವಂತೆ ಮಂಡಲಿಗೆ ನಿರ್ದೇಶಿಸತಕ್ಕದ್ದು.

[3][ಸಾಮಾನ್ಯ ನಿಕಾಯ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ವಿಫಲವಾದಲ್ಲಿ ರಿಜಿಸ್ಟ್ರಾರನು ತಪ್ಪಿತಸ್ಥರ ವಿರುದ್ಧ ಜರುಗಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡತಕ್ಕದ್ದು ಹಾಗೂ ಲೋಪದೋಷಗಳು ಸರಿಪಡಿಸುವವರೆಗೂ ಅನುಪಾಲನಾ ಕ್ರಮ ಜಾರಿಗೊಳಿಸತಕ್ಕದ್ದು.]

[4][**37ಎ ಅಧಿಭಾರ (ಸರ್ಚಾರ್ಜ್)**,– (1) 33ನೇ ಪ್ರಕರಣ ಅಡಿಯಲ್ಲಿ ಲೆಕ್ಕಪರಿಶೋಧನೆ, 35ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ, 53ನೇ ಪ್ರಕರಣದ ಅಡಿಯಲ್ಲಿ ಪರಿವೀಕ್ಷಣೆಯ ಅಥವಾ 48ನೇ ಪ್ರಕರಣದ ಅಡಿಯಲ್ಲಿ ಸಮಾಪನಾ ಅವಧಿಯಲ್ಲಿ ಅಂಥ ಸಹಕಾರಿಯ ವ್ಯವಸ್ಥಾಪನೆ ನಡೆಸುವ ಮಂಡಲಿ ಅಥವಾ ಮಂಡಲಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸಭಾಪತಿ, ಉಪಸಭಾಪತಿ ಅಥವಾ ಯಾವೊಬ್ಬ ಇತರ ಸದಸ್ಯನು ಅಥವಾ ಅಂಥ ಸಹಕಾರಿ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾವೊಬ್ಬ ವ್ಯಕ್ತಿಯು ಯಾವುದೇ ಕಾಲಕ್ಕೆ ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯಾವೊಬ್ಬ ವ್ಯಕ್ತಿಯು, ಈ

1. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಅಧಿನಿಯಮ, ನಿಯಮಗಳಿಗೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದರೆ ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರಿಯ ಆಸ್ತಿಗಳಲ್ಲಿ ಯಾವುದೇ ಕೊರತೆ ಉಂಟುಮಾಡಿದ್ದರೆ ಅಥವಾ ಅಂತಹ ಸಹಕಾರಿಗೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರನು ಸಹಕಾರಿಯ ಮಂಡಲಿಯ, ಸಮಾಪಕನ ಅಥವಾ ಯಾರೇ ಲೇಣಿದಾರನ ಅಥವಾ ಸಂಯುಕ್ತ ಸಹಕಾರಿಯ ಅರ್ಜಿಯ ಮೇಲೆ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ ಅಥವಾ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂತಹ ದರದ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನ:ಸ್ಥಾಪಿಸುವಂತೆ ಅಥವಾ ತಾನು ನ್ಯಾಯಸಮ್ಮತವಾದುದೆಂದು ಮತ್ತು ನ್ಯಾಯಯುತವಾದುದೆಂದು ಪರಿಗಣಿಸುವಂತಹ ಮೊತ್ತವನ್ನು ಅಷ್ಟು ಮಟ್ಟಿಗೆ ಪರಿಹಾರ ರೂಪದಲ್ಲಿ ಕೊರತೆಯಾದ ಸಹಕಾರಿಯ ಆಸ್ತಿಗಳಿಗೆ ಸಂದಾಯ ಮಾಡುವಂತೆ ಅಗತ್ಯಪಡಿಸುವ ಆದೇಶವನ್ನು ಹೊರಡಿಸಬಹುದು.

(2) ಆ ಕೃತ್ಯವು, ಸಂಬಂಧಪಟ್ಟ ವ್ಯಕ್ತಿಯು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕ ಕೃತ್ಯವಾಗಿದ್ದಾಗ್ಯೂ, ಈ ಪ್ರಕರಣವು ಅನ್ವಯವಾಗತಕ್ಕದ್ದು.

(3) (1) ನೇ ಉಪಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ಮಾಡಿದ ಆದೇಶವು, ಯಾರ ವಿರುದ್ಧ ಆದೇಶ ಮಾಡಲಾಯಿತೋ ಆ ವ್ಯಕ್ತಿಯಿಂದ ವ್ಯವಹರಣೆಯ ವೆಚ್ಚವನ್ನು ನಿಯಮಿಸಬಹುದಾದಂತಹ ದರದಲ್ಲಿ ಮತ್ತು ಅಂತಹ ರೀತಿಯಲ್ಲಿ ವಸೂಲಿ ಮಾಡುವುದಕ್ಕೆ ಉಪಬಂಧಿಸಬಹುದು.

(4) (1)ನೇ ಉಪ ಪ್ರಕರಣದ ಅಡಿಯಲ್ಲಿಯ ಅರ್ಜಿಯನ್ನು, ನ್ಯಾಯಾಲಯವು ಯಾವುದೇ ತಡೆಯನ್ನು ನೀಡಿದ್ದರೆ, ಅದನ್ನು ಹೊರತುಪಡಿಸಿ, ಹನ್ನೆರಡು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು ಹದಿನೆಂಟು ತಿಂಗಳುಗಳವರೆಗೆ ವಿಸ್ತರಿಸಬಹುದು:

ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನ ವರದಿಯನ್ನು ಆಧರಿಸಿ, ವಿಚಾರಣೆ ನಡೆಸುವ ಅವಧಿಯನ್ನು ಹದಿನೆಂಟು ತಿಂಗಳನ್ನು ಮೀರಿ ವಿಸ್ತರಿಸಲು ನೈಜವಾದ ಸಕಾರಣಗಳಿವೆ ಎಂದು ಕಂಡುಬಂದಲ್ಲಿ, ವಿಚಾರಣಾ ಅವಧಿಯನ್ನು ವಿಸ್ತರಿಸಬಹುದು.]

# ಅಧ್ಯಾಯ VI
# ರದ್ದಿಯಾತಿ

**38. ರದ್ದಿಯಾತಿ.–**

(1) ಒಂದು ಸಹಕಾರಿಯ ಮಂಡಲಿಯು,–

(i) ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಅಡಿಯಲ್ಲಿ ವಿಧಿಸಲಾಗಿರುವ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರವಾಗಿ ತಪ್ಪು ಮಾಡುತ್ತಿದೆ ಅಥವಾ ನಿರ್ಲಕ್ಷ್ಯ ತೋರುತ್ತಿದೆ; ಅಥವಾ

(ii) ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾದ ಯಾವುದೇ ಕಾರ್ಯವನ್ನು ಮಾಡಿದೆ; ಅಥವಾ

(iii) ನಿರ್ದೇಶಕರ ಅನರ್ಹತೆ, ರಾಜೀನಾಮೆ, ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಲಿಯ ಸದಸ್ಯರ ಸಂಖ್ಯೆ ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆಯಿದೆಯೆಂಬ ಕಾರಣದಿಂದ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

(iv) ಈ ಅಧಿನಿಯಮದ ಉಪಬಂಧಗಳು ಅಥವಾ ನಿಯಮಗಳು ಅಥವಾ [1][ಉಪವಿಧಿಗಳಿಗೆ] ಅನುಸಾರವಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

[2][(v) ಸಹಕಾರ ವರ್ಷವು ಮುಕ್ತಾಯವಾದ ಆರು ತಿಂಗಳೊಳಗೆ ಆದರೆ ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದೆ; ಅಥವಾ]

[3][(v-ಎ) ಅದು ಗುರುತರವಾದ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದಿದೆ; ಅಥವಾ

(v-ಬಿ) ಅದರ ರಚನೆ ಅಥವಾ ಕೆಲಸ ಕಾರ್ಯಗಳಿಗೆ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ; ಅಥವಾ

(v-ಸಿ) ಅದು ಚುನಾವಣೆಯನ್ನು ನಡೆಸಲು [4][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತು ಯಾವುದೇ ಕಾರಣದಿಂದ [4][ಸಹಕಾರಿ ಚುನಾವಣಾ ಪ್ರಾಧಿಕಾರ]ವು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ; ಅಥವಾ

(v-ಡಿ) ಅದು ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪತ್ರಗಳ

---

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
4. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

ಪರಿಶೋಧನೆಯನ್ನು ಪೂರ್ಣ ಮಾಡಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾಗಿದೆ; ಅಥವಾ]

(vi) ಅನ್ಯಥಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ;

– ಎಂದು ಸಂಯುಕ್ತ ಸಹಕಾರಿಯು ಅಭಿಪ್ರಾಯಪಟ್ಟಲ್ಲಿ, ಅದು [1][ಮಂಡಲಿಯುನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು] ಮತ್ತು ಸಂಯುಕ್ತ ಸಹಕಾರಿಯು ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಗೆ ಸಹಕಾರಿಯ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಗಾರರನ್ನು ನೇಮಕ ಮಾಡಬಹುದು:

ಪರಂತು, ಅಹವಾಲು ಹೇಳಿಕೊಳ್ಳಲು ಮಂಡಲಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಸಂಯುಕ್ತ ಸಹಕಾರಿಯು ಅಂಥ ಮಂಡಲಿಯನ್ನು [2][ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ.]

[3][ಮತ್ತು ಪರಂತು ಸರ್ಕಾರದ ಷೇರು ಅಥವಾ ಸಾಲ ಅಥವಾ ಧನಸಹಾಯ ಅಥವಾ ಗ್ಯಾರಂಟಿ ಇಲ್ಲದ ಯಾವುದೇ ಸಹಕಾರಿಯ ಆಡಳಿತ ಮಂಡಲಿಯನ್ನು ರದ್ದುಪಡಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ. ಮತ್ತೂ ಪರಂತು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ಒಂದು ಸಹಕಾರಿಗೆ 1949ರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದ ಉಪಬಂಧಗಳೂ ಸಹ ಅನ್ವಯವಾಗತಕ್ಕದ್ದು ಮತ್ತು ಈ ಖಂಡವು 'ಆರು ತಿಂಗಳು' ಎಂಬ ಪದಗಳಿಗೆ ಬದಲಾಗಿ 'ಒಂದು ವರ್ಷ' ಎಂಬ ಪದಗಳು ಪ್ರತಿಯೋಜಿಸಲ್ಪಟ್ಟಂತೆ ಅನ್ವಯವಾಗತಕ್ಕದ್ದು.]

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ನಂತರ,–

(ಎ) ಮಂಡಲಿಯ ನಿರ್ದೇಶಕರು ತಮ್ಮ ಹುದ್ದೆಯನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು; ಮತ್ತು

(ಬಿ) ಆಡಳಿತಗಾರನು ಸಹಕಾರಿಯ ವ್ಯವಹಾರಗಳ ಪ್ರಭಾರವನ್ನು ವಹಿಸಿ-ಕೊಂಡಿದ್ದಾನೆಂದು ಭಾವಿಸತಕ್ಕದ್ದು.

(3) ಆಡಳಿತಗಾರನು, ಸಂಯುಕ್ತ ಸಹಕಾರಿಯ ನಿಯಂತ್ರಣಕ್ಕೊಳಪಟ್ಟು ಸಹಕಾರಿಯ ಮಂಡಲಿಯ ಅಥವಾ ಯಾವೊಬ್ಬ ಪದಾಧಿಕಾರಿಯ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಅಡಿಯಲ್ಲಿ ಸಹಕಾರಿಯ ಹಿತಾಸಕ್ತಿಯಲ್ಲಿ ಅಗತ್ಯವಾಗಬಹುದಾದ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

(4) ಸಂಯುಕ್ತ ಸಹಕಾರಿಯು, (1)ನೇ ಉಪ–ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವ ಮೊದಲು ಸಹಕಾರಿಯು ಯಾವ ಹಣಕಾಸು ನೆರವು ನೀಡುವ ಏಜೆನ್ಸಿಗೆ ಋಣಿಯಾಗಿರುವುದೋ ಆ ಏಜೆನ್ಸಿಯೊಂದಿಗೆ ಸಮಾಲೋಚಿಸತಕ್ಕದ್ದು. ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, [1][ಅದು ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ನೊಂದಿಗೆ] ಸಹ ಸಮಾಲೋಚಿಸತಕ್ಕದ್ದು.

(5) ಆಡಳಿತಗಾರನು, ತನ್ನ ಪದಾವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಸಹಕಾರಿಗೆ ಅದರ ಉಪವಿಧಿಗಳಿಗನುಸಾರವಾಗಿ ಹೊಸ ಮಂಡಲಿಯನ್ನು ರಚಿಸಲು ವ್ಯವಸ್ಥೆ ಮಾಡತಕ್ಕದ್ದು.

(6) ಈ ಅಧಿನಿಯಮದಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ಏನೇ ಇದ್ದರೂ, ಒಂದು ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, ಸಾರ್ವಜನಿಕ ಹಿತಾಸಕ್ತಿಗಾಗಿ ಅಥವಾ ಸಹಕಾರಿ ಬ್ಯಾಂಕಿನ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ನಡೆಸುತ್ತಿರುವುದನ್ನು ತಡೆಯುವುದಕ್ಕಾಗಿ ಅಥವಾ ಸಹಕಾರಿ ಬ್ಯಾಂಕಿನ ಸರಿಯಾದ ನಿರ್ವಹಣೆಗಾಗಿ [2][ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್], ಆ ಸಹಕಾರಿ ಬ್ಯಾಂಕಿನ ಮಂಡಲಿಯನ್ನು ರದ್ದುಗೊಳಿಸಬೇಕೆಂದು ಬರಹದಲ್ಲಿ ಅಗತ್ಯಪಡಿಸಿದರೆ, ಸಂಯುಕ್ತ ಸಹಕಾರಿಯು ಲಿಖಿತ ಆದೇಶದ ಮೂಲಕ ಹಾಗೆ ಮಾಡತಕ್ಕದ್ದು ಮತ್ತು [3][ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್] ಸಹಮತಿಯೊಂದಿಗೆ, ಸಂಯುಕ್ತ ಸಹಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸಹಕಾರಿ ಬ್ಯಾಂಕಿನ ವ್ಯವಹಾರಗಳ ನಿರ್ವಹಣೆಗಾಗಿ ಒಬ್ಬ ಆಡಳಿತಗಾರನನ್ನು ನೇಮಕ ಮಾಡತಕ್ಕದ್ದು.

[4][(7) ಆಡಳಿತಗಾರನಿಗೆ ಕೊಡಬಹುದಾದ ಸಂಭಾವನೆಯನ್ನು ಸಂಯುಕ್ತ ಸಹಕಾರಿಯು ನಿರ್ಧರಿಸತಕ್ಕದ್ದು. ಅಂಥ ಸಂಭಾವನೆಯ ಮೊತ್ತವನ್ನು ಮತ್ತು ಆಡಳಿತಗಾರನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಮಾಡಿದ ಖರ್ಚುಗಳನ್ನು ಸಹಕಾರಿಯ ನಿಧಿಗಳಿಂದ ಪಾವತಿಸತಕ್ಕದ್ದು. ಸಹಕಾರಿಯ ಆಡಳಿತಗಾರನಾಗಿ ನೇಮಕವಾದ ಅಧಿಕಾರಿ ಅಥವಾ ನೌಕರನಿಗೆ ಅನ್ವಯವಾಗುವ ಸೇವಾ ನಿಯಮಗಳು, ಆತನು ಸಹಕಾರಿಯ ಆಡಳಿತಗಾರನಾಗಿ ಸೇವೆ ಸಲ್ಲಿಸುವಾಗಲೂ ಅನ್ವಯವಾಗತಕ್ಕದ್ದು.]

[5][**38ಎ ವಿಶೇಷಾಧಿಕಾರಿಯ ನೇಮಕ.– (1)** ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಲಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂಬ ಕಾರಣದಿಂದ ಸಹಕಾರಿಯ ಚಟುವಟಿಕೆಗಳು ಈ ಅಧಿನಿಯಮದ,

1. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಬದಲಾಯಿಸ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
5. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ನಿಯಮಗಳ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ನಡೆಸಲಾಗದಿದ್ದಲ್ಲಿ ಅಥವಾ 25ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿಯ ಯಾವುದೇ ಅನರ್ಹತೆ ಉಂಟಾದಲ್ಲಿ ಅಥವಾ ಎಲ್ಲಾ ನಿರ್ದೇಶಕರು ರಾಜೀನಾಮೆ ಕೊಟ್ಟಲ್ಲಿ [1][ಅಥವಾ ಮಂಡಲಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಲಿಯು ರಚನೆಯಾಗಿಲ್ಲದಿದ್ದಲ್ಲಿ], ಅಂಥ ಸಹಕಾರಿಗೆ ಸಂಯುಕ್ತ ಸಹಕಾರಿಯು ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು.

(2) (1) ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಆದೇಶದ ಮೂಲಕ ಬಾಧಿತವಾಗುವ ಸಹಕಾರಿಗೆ ಅಥವಾ ವ್ಯಕ್ತಿಗೆ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ತಿಳಿಸುವ ಅವಕಾಶವನ್ನು ನೀಡುವ ಅವಶ್ಯಕತೆ ಇರುವುದಿಲ್ಲ.

(3) ಮಂಡಲಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಕುರಿತು [2][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ವಿಶೇಷಾಧಿಕಾರಿಯು ಮಾಹಿತಿ ಒದಗಿಸತಕ್ಕದ್ದು. ಮತ್ತು [2][ಸಹಕಾರಿ ಚುನಾವಣಾ ಪ್ರಾಧಿಕಾರ]ವು ಖಾಲಿ ಇರುವ ಸ್ಥಾನಗಳ ಉಳಿದ ಅವಧಿಗೆ ಚುನಾವಣೆಯನ್ನು ನಡೆಸತಕ್ಕದ್ದು.

(4) ಚುನಾವಣೆ ನಡೆದು ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಲಿಗೆ ಅಧಿಕಾರ ಹಸ್ತಾಂತರಿಸತಕ್ಕದ್ದು ಮತ್ತು ವಿಶೇಷಾಧಿಕಾರಿಯು ಸ್ಥಾನ ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು.]

[3][**38ಬಿ. ಪುಸ್ತಕಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ.**– 33ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆಯನ್ನು, 35ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಯನ್ನು ಅಥವಾ ಪರಿವೀಕ್ಷಣೆಯನ್ನು ನಡೆಸುವ ಯಾವೊಬ್ಬ ಅಧಿಕಾರಿಗೆ ಅಥವಾ ವ್ಯಕ್ತಿಗೆ ಲೆಕ್ಕಪರಿಶೋಧನೆಯ, ವಿಚಾರಣೆಯ ಅಥವಾ ಪರಿವೀಕ್ಷಣೆಯ ಅವಧಿಯಲ್ಲಿ ತನ್ನ ಗಮನಕ್ಕೆ ಬಂದ ಯಾವುದೇ ನ್ಯೂನತೆ ಅಥವಾ ಅಕ್ರಮಗಳನ್ನು ರುಜುವಾತುಪಡಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯವೆಂದು ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ಭಾವಿಸಬಹುದಾದಂಥ ಯಾವುದೇ ಸಾಕ್ಷ್ಯವನ್ನು ನಾಶಪಡಿಸುವ ಅಥವಾ ಅಳಿಸುವ ಅಥವಾ ಬದಲಾಯಿಸುವ ಅಥವಾ ಕೈ ಚಳಕ ಮಾಡುವ ದೃಷ್ಟಿಯಿಂದ ಸಹಕಾರಿಯ ಯಾವುವೇ ಪುಸ್ತಕಗಳನ್ನು ಅಥವಾ ಇತರ ಸ್ವತ್ತುಗಳನ್ನು ಕೆಡಿಸಲಾಗಿದೆ ಎಂದು ಅಥವಾ ಅವುಗಳನ್ನು ಸಂಘದಲ್ಲಿ ಉಳಿಯಗೊಟ್ಟರೆ ಹಾಗೆ ಕೆಡಿಸುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ, ರಿಜಿಸ್ಟ್ರಾರನು ವಿಶೇಷ ಆದೇಶ ಹೊರಡಿಸುವ ಮೂಲಕ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ಅಂಥ ಪುಸ್ತಕಗಳನ್ನು ಅಥವಾ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಂಥ ಅಧಿಕಾರಿಗೆ ಅಧಿಕಾರವನ್ನು ನೀಡತಕ್ಕದ್ದು.]

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ VII

## ವಿವಾದಗಳ ಇತ್ಯರ್ಥ

**39. ತೀರ್ಮಾನಕ್ಕಾಗಿ ಕಳುಹಿಸಬಹುದಾದ ವಿವಾದಗಳು –**

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ,–

(ಎ) ಸದಸ್ಯರ, ಹಿಂದಿನ ಸದಸ್ಯರ ಮತ್ತು ಸದಸ್ಯರ, ಹಿಂದಿನ ಸದಸ್ಯರ ಮತ್ತು ಮೃತ ಸದಸ್ಯರ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳ ನಡುವೆ; ಅಥವಾ

(ಬಿ) ಸದಸ್ಯನ, ಹಿಂದಿನ ಸದಸ್ಯನ ಅಥವಾ ಸದಸ್ಯನ, ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿ, ಅದರ ಮಂಡಲಿ ಅಥವಾ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವೊಬ್ಬ ಪದಾಕಾರಿ, ಏಜೆಂಟ್ ಅಥವಾ ನೌಕರನ ನಡುವೆ; ಅಥವಾ

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಅಥವಾ ಅದರ ಮಂಡಲಿ ಮತ್ತು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವುದೇ ಹಿಂದಿನ ಮಂಡಲಿ, ಯಾವೊಬ್ಬ ಪದಾಧಿಕಾರಿ, ಏಜೆಂಟ್ ಅಥವಾ ನೌಕರ ಅಥವಾ ಯಾವೊಬ್ಬ ಹಿಂದಿನ ಪದಾಧಿಕಾರಿ, ಹಿಂದಿನ ಏಜೆಂಟ್ ಅಥವಾ ಹಿಂದಿನ ನೌಕರ ಅಥವಾ ಯಾವೊಬ್ಬ ಮೃತ ಪದಾಧಿಕಾರಿಯ, ಮೃತ ಏಜೆಂಟಿನ ಅಥವಾ ಮೃತ ನೌಕರನ ನಾಮನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯ ನಡುವೆ; ಅಥವಾ

(ಡಿ) ಒಂದು ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮತ್ತು ಯಾವುದೇ ಇತರ ಸಹಕಾರಿ ಅಥವಾ ಸಾಲ ನೀಡಿಕೆ ಏಜೆನ್ಸಿಯ ನಡುವೆ,

– [1][ಸಹಕಾರಿಯ ಆಡಳಿತ ಮಂಡಲಿಯ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ [2][****], ಯಾವುದೇ ವಿವಾದ ಉಂಟಾದರೆ,] ಅಂಥ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು. [3][****]

(2) (1)ನೇ ಉಪಪ್ರಕರಣಗಳಿಗಾಗಿ, ಈ ಮುಂದಿನ ವಿವಾದಗಳನ್ನು ಎಂದರೆ.–

---

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
3. 2004ರ ಕಾಯ್ದೆ 21ರಡಿ ಕೈಬಿಡಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

(ಎ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು, ಒಬ್ಬ ಸದಸ್ಯ ಅಥವಾ ಮೃತ ಸದಸ್ಯನ ನಾಮನಿರ್ದೇಶಿತರಿಂದ, ವಾರಸುದಾರರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ ತನಗೆ ಬಾಕಿ ಇರುವ ಯಾವುದೇ ಸಾಲ ಅಥವಾ ಬೇಡಿಕೆಗಾಗಿ, ಅಂಥ ಸಾಲ ಅಥವಾ ಬೇಡಿಕೆ ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅದು ಮಾಡುವ ಕ್ಲೇಮು;

(ಬಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಪ್ರಧಾನ ಸಾಲಗಾರನಿಂದ ತನಗೆ ಬಾಕಿಯಿರುವ ಯಾವುದೇ ಸಾಲ ಅಥವಾ ಬೇಡಿಕೆಯ ಸಂಬಂಧದಲ್ಲಿ, ಅಂಥ ಸಾಲ ಅಥವಾ ಸಂದಾಯ ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಸಾಲವನ್ನು ಪ್ರಧಾನ ಸಾಲಗಾರನು ತೀರಿಸಲು ತಪ್ಪಿದ ಕಾರಣದಿಂದಾಗಿ ಅದನ್ನು ಜಾಮೀನುದಾರನಿಂದ ವಸೂಲು ಮಾಡಿರುವ ಸಂದರ್ಭದಲ್ಲಿ, ಪ್ರಧಾನ ಸಾಲಗಾರನ ವಿರುದ್ಧ ಜಾಮೀನುದಾರನಿಗಿರುವ ಕ್ಲೇಮು;

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ನಿರ್ದೇಶಕನ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದ;

(ಡಿ) ಔದ್ಯಮಿಕ ವಿವಾದಗಳ ಅಧಿನಿಯಮ, 1947ರಲ್ಲಿ (1947ರ ಕೇಂದ್ರ ಅಧಿನಿಯಮ 14) ಏನೇ ಒಳಗೊಂಡಿದ್ದರೂ, ಉದ್ಯೋಗದ ನಿಬಂಧನೆಗಳು, ಕಾರ್ಯ ನಿರ್ವಹಣಾ ಪರಿಸ್ಥಿತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಕೈಗೊಂಡ ಶಿಸ್ತು ಕ್ರಮಗಳಿಗೆ ಸಂಬಂಧಪಟ್ಟ ವಿವಾದವೂ ಸೇರಿದಂತೆ ಒಂದು ಸಹಕಾರಿ ಅಥವಾ ಸಂಯುಕ್ತಸಹಕಾರಿ ಮತ್ತು ಅದರ ನೌಕರರು ಅಥವಾ ಹಿಂದಿನ ನೌಕರರು ಅಥವಾ ಮೃತ ನೌಕರನ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ನಡುವೆ ಉಂಟಾಗುವ ಯಾವುದೇ ವಿವಾದ;

(ಇ) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಸದಸ್ಯ, ಹಿಂದಿನ ಸದಸ್ಯ, ಮೃತ ಸದಸ್ಯ ಅಥವಾ ಮೃತ ಪದಾಧಿಕಾರಿಯಿಂದ, ಹಿಂದಿನ ಏಜೆಂಟ್ ಅಥವಾ ಮೃತ ಏಜೆಂಟ್ ಅಥವಾ ಯಾವೊಬ್ಬ ನೌಕರ, ಹಿಂದಿನ ನೌಕರ, ಅಥವಾ ಮೃತ ನೌಕರನಿಂದ ಅಥವಾ ಅದರ ಈಗಿನ ಅಥವಾ ಹಿಂದಿನ ಮಂಡಲಿಯಿಂದ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಸ್ವತ್ತುಗಳಿಗೆ ಉಂಟಾದ ನಷ್ಟಕ್ಕಾಗಿ, ಅಂಥ ನಷ್ಟವು ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಮಾಡುವ ಕ್ಲೇಮು,

– ಇವುಗಳನ್ನು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ,

ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದ ವಿವಾದಗಳೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಿದ ವಿವಾದವು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದುದೇ ಅಥವಾ ಅಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉಂಟಾದರೆ, ಅದರ ಮೇಲಿನ ರಿಜಿಸ್ಟ್ರಾರನ ನಿರ್ಧಾರ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

[1][******]

**40. ಕಾಲ ಪರಿಮಿತಿಯ ಅವಧಿ.–**

(1) ವ್ಯಾಜ್ಯ ಕಾರಣ ಉಂಟಾದ ದಿನಾಂಕದಿಂದ ಆರು ವರ್ಷದೊಳಗೆ ವಿವಾದವನ್ನು ರಿಜಿಸ್ಟ್ರಾರನಿಗೆ ಕಳುಹಿಸಿದ ಹೊರತು 39ನೇ ಪ್ರಕರಣದ ಅಡಿಯಲ್ಲಿ ಯಾವುದೇ ವಿವಾದವನ್ನು ಸ್ವೀಕರಿಸತಕ್ಕದ್ದಲ್ಲ;

ಪರಂತು, ಮಂಡಲಿಯ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ಇತರ ಪದಾಧಿಕಾರಿಯ ಅಥವಾ ನಿರ್ದೇಶಕನ ಚುನಾವಣೆಗೆ ಸಂಬಂಧಿಸಿದ ವಿವಾದವನ್ನು, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

[2][ಮತ್ತು ಪರಂತು, ನೌಕರನ ವಿರುದ್ಧದ ಶಿಸ್ತು ಕ್ರಮಕ್ಕೆ ಅಥವಾ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ವಿವಾದವನ್ನು ಅಂಥ ವಿವಾದದಲ್ಲಿ ಪ್ರಶ್ನಿತವಾಗುವ ಆದೇಶದ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿಯೊಳಗೆ ದಾಖಲು ಮಾಡತಕ್ಕದ್ದು.]

(2) (1)ನೇ ಉಪ–ಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ನಂತರ ಕಳುಹಿಸಿದ ವಿವಾದವನ್ನು, ಆ ಅವಧಿಯೊಳಗಾಗಿ ಹಾಗೆ ಕಳುಹಿಸದಿರಲು ಆ ವ್ಯಕ್ತಿಗೆ ಸಾಕಷ್ಟು ಕಾರಣವಿತ್ತೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ ಅದನ್ನು ಸ್ವೀಕರಿಸಬಹುದು.

**41. ವಿವಾದಗಳ ವಿಲೆ.–**

(1) ರಿಜಿಸ್ಟ್ರಾರನು, 39ನೇ ಪ್ರಕರಣದ ಅಡಿಯಲ್ಲಿ ಕಳುಹಿಸಲಾದ ಒಂದು ವಿವಾದವನ್ನು ಸ್ವೀಕರಿಸಿದ ನಂತರ,–

(ಎ) ತಾನೇ ವಿವಾದವನ್ನು ತೀರ್ಮಾನಿಸಬಹುದು; ಅಥವಾ

(ಬಿ) ಸರ್ಕಾರವು ಈ ಸಂಬಂಧದಲ್ಲಿ ಅಧಿಕಾರಗಳನ್ನು

1. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ನಿಹಿತಗೊಳಿಸಲಾಗಿರುವ ಯಾವೊಬ್ಬ ವ್ಯಕ್ತಿಗೆ ವಿಲೆಗಾಗಿ ವರ್ಗಾಯಿಸಬಹುದು; ಅಥವಾ

(ಸಿ) ರಿಜಿಸ್ಟ್ರಾರನು ನೇಮಕ ಮಾಡಿದ ಮಧ್ಯಸ್ಥಗಾರನಿಗೆ ವಿಲೆಗಾಗಿ ಕಳುಹಿಸಬಹುದು.

(2) ರಿಜಿಸ್ಟ್ರಾರನು, (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ವರ್ಗಾಯಿಸಿದ ಯಾವುದೇ ವಿವಾದವನ್ನು ಅಥವಾ ಆ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಕಳುಹಿಸಲಾದ ಯಾವುದೇ ವಿವಾದವನ್ನು ಹಿಂತೆಗೆದುಕೊಳ್ಳಬಹುದು ಮತ್ತು ತಾನೇ ತೀರ್ಮಾನಿಸಬಹುದು.

(3) ರಿಜಿಸ್ಟ್ರಾರನು ಅಥವಾ ಈ ಪ್ರಕರಣದ ಅಡಿಯಲ್ಲಿ ಒಂದು ವಿವಾದವನ್ನು ಯಾವೊಬ್ಬ ಇತರ ವ್ಯಕ್ತಿಗೆ ತೀರ್ಮಾನಕ್ಕಾಗಿ ಕಳುಹಿಸಲಾಗಿದೆಯೊ ಅಂಥ ಇತರ ವ್ಯಕ್ತಿಯು, ವಿವಾದದ ಬಗ್ಗೆ ತೀರ್ಮಾನ ಕೈಗೊಳ್ಳುವವರೆಗೆ, ನ್ಯಾಯದ ಹಿತದೃಷ್ಟಿಯಿಂದ ತಾನು ಅಗತ್ಯವೆಂದು ಭಾವಿಸಬಹುದಾದಂಥ ಮಧ್ಯಕಾಲೀನ ಆದೇಶಗಳನ್ನು ಹೊರಡಿಸಬಹುದು.

(4) (1)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಒಂದು ವಿವಾದವನ್ನು ಒಬ್ಬ ಮಧ್ಯಸ್ಥಗಾರನಿಗೆ ಕಳುಹಿಸಿದ್ದರೆ, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಮಧ್ಯಸ್ಥಗಾರನಿಗೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ರಿಜಿಸ್ಟ್ರಾರನಿಗೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ಖರ್ಚುಗಳನ್ನು ಅವಾರ್ಡ್ ಒಳಗೊಳ್ಳತಕ್ಕದ್ದು. ಅಂಥ ಅವಾರ್ಡ್ ರಿಜಿಸ್ಟ್ರಾರನು ವಿವಾದವನ್ನು ತೀರ್ಮಾನ ಮಾಡಲು ನಿಗದಿಪಡಿಸಿದ ಅವಧಿಯ ಮುಕ್ತಾಯದ ನಂತರ ಮಾಡಲಾಗಿದೆಯೆಂಬ ಕಾರಣ ಮಾತ್ರಕ್ಕೆ ಅನೂರ್ಜಿತವಾಗತಕ್ಕದ್ದಲ್ಲ ಮತ್ತು ಅಪೀಲಿಗೆ ಒಳಪಟ್ಟು ವಿವಾದದ ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕದ್ದು.

(5) 39ನೇ ಪ್ರಕರಣದಲ್ಲಿ ಏನೇ ಇದ್ದರೂ, ಸದರಿ ಪ್ರಕರಣದ (1)ನೇ ಉಪಪ್ರಕರಣದ (ಎ) ಅಥವಾ (ಬಿ) ಖಂಡದ ಅಡಿಯಲ್ಲಿ ಯಾವುದೇ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಕಳುಹಿಸಲಾರದೆ ಮತ್ತು ಸಂಬಂಧಪಟ್ಟ ಸಹಕಾರಿಯು ಅಥವಾ ಸಂಯುಕ್ತ ಸಹಕಾರಿಯು ಸಲ್ಲಿಸಿದ ಅರ್ಜಿಯ ಮೇರೆಗೆ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಹಿತಾಸಕ್ತಿಯಲ್ಲಿ, ತನ್ನ ಮುಂದಿರುವ ವ್ಯವಹರಣೆಗಳಲ್ಲಿ ಪಕ್ಷಕಾರನನ್ನಾಗಿ ಸೇರಿಸುವುದು ಸಾಧ್ಯವಿಲ್ಲದ ವ್ಯಕ್ತಿಗಳನ್ನು ವಿವಾದದ ಪಕ್ಷಕಾರರನ್ನಾಗಿ ಸೇರಿಸುವುದು ವಿವಾದದ ಪರಿಣಾಮಕಾರಿ ತೀರ್ಮಾನಕ್ಕೆ ಅಗತ್ಯವೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು, ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಸಹಕಾರಿಗೆ ಅಥವಾ ಸಂಯುಕ್ತ ಸಹಕಾರಿಗೆ ಅನುಮತಿ ನೀಡಬಹುದು ಮತ್ತು ಸಿವಿಲ್ ನ್ಯಾಯಾಲಯವು ಅಂಥ ದಾವೆಯನ್ನು ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

**42. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–**

(1) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು–

(ಎ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ನೋಂದಣಿ ಅಥವಾ ಉಪ–ವಿಧಿಗಳ ಅಥವಾ ಉಪ–ವಿಧಿಗಳ ತಿದ್ದುಪಡಿಯ ನೋಂದಣಿ;

[1][(ಬಿ) ಸದಸ್ಯನ ತೆಗೆದುಹಾಕುವಿಕೆ ಅಥವಾ ನಿರ್ದೇಶಕನ ಅನರ್ಹತೆ ಮತ್ತು ತೆಗೆದುಹಾಕುವಿಕೆ ಅಥವಾ ಮಂಡಲಿಯ ರದ್ದತಿ;]

(ಸಿ) [2][37ಎ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸುವ ಯಾವುದೇ ಅಧಿಭಾರ ಅರ್ಜಿ ಅಥವಾ] 39ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳಿಸಬೇಕಾದ ಅಗತ್ಯತೆ ಇರುವ ಯಾವುದೇ ವಿವಾದ;

(ಡಿ) ಒಂದು ಸಹಕಾರಿಯ ಸಮಾಪನ ಅಥವಾ ವಿಘಟನೆಗೆ ಸಂಬಂಧಪಟ್ಟ ಯಾವುದೇ ವಿಷಯ,

– ಇವುಗಳ ಸಂಬಂಧದಲ್ಲಿ ಯಾವುದೇ ಸಿವಿಲ್ ಅಥವಾ ಕಾರ್ಮಿಕ ಅಥವಾ ರೆವಿನ್ಯೂ ನ್ಯಾಯಾಲಯ ಅಥವಾ ಕೈಗಾರಿಕಾ ನ್ಯಾಯಾಧಿಕರಣವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಒಂದು ಸಹಕಾರಿಯನ್ನು ಸಮಾಪನಗೊಳಿಸುವಾಗ, ಅದರ ಸಮಾಪಕನ ಅಥವಾ ಅಂಥ ಸಹಕಾರಿಯ ಅಥವಾ ಅದರ ಸದಸ್ಯನ ವಿರುದ್ಧ ರಿಜಿಸ್ಟ್ರಾರನ ಅಥವಾ ಸಂಯುಕ್ತ ಸಹಕಾರಿಯ ಅನುಮತಿಯ ಹೊರತು ಮತ್ತು ಅವನು ಅಥವಾ ಅದು ವಿಧಿಸಬಹುದಾದ ಅಂಥ ನಿಬಂಧನೆಗಳಿಗೆ ಒಳಪಟ್ಟು ಅಂಥ ಸಹಕಾರಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಮುಂದುವರೆಸತಕ್ಕದ್ದಲ್ಲ ಅಥವಾ ಹೂಡತಕ್ಕದಲ್ಲ.

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶ ಅಥವಾ ತೀರ್ಮಾನ ಅಥವಾ ಅವಾರ್ಡನ್ನು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಕಾರಣಕ್ಕಾಗಿಯೂ ಪ್ರಶ್ನಿಸತಕ್ಕದ್ದಲ್ಲ.

**43. ಆದೇಶಗಳು ಮುಂತಾದವುಗಳ ಅಮಲ್ಜಾರಿ.–**

(1) 41ನೇ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ತೀರ್ಮಾನ ಅಥವಾ ಅವಾರ್ಡ್, 50ನೇ ಪ್ರಕರಣದ ಅಡಿಯಲ್ಲಿ ಸಮಾಪಕನು ಮಾಡಿದ ಪ್ರತಿಯೊಂದು ಆದೇಶ ಹಾಗೂ 46ನೇ ಪ್ರಕರಣದ ಅಡಿಯಲ್ಲಿ ಕರ್ನಾಟಕ ಸಹಕಾರಿ ಅಪೀಲು ವಿಚಾರಣಾ ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶ ಹಾಗೂ 11ನೇ ಪ್ರಕರಣದ (8)ನೇ ಉಪಪ್ರಕರಣದ ಅಡಿಯಲ್ಲಿ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಮಾಡಿದ ಪ್ರತಿಯೊಂದು ಆದೇಶಕ್ಕೆ, ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಿಗೆ ಒಳಪಟ್ಟು, ಯಾವ ವ್ಯಕ್ತಿ ಅಥವಾ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ವಿರುದ್ಧ ಆದೇಶ, ತೀರ್ಮಾನ ಅಥವಾ ಅವಾರ್ಡನ್ನು ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯೂ ಬದ್ಧನಾಗಿರತಕ್ಕದ್ದು ಅಥವಾ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಬದ್ಧವಾಗಿರತಕ್ಕದ್ದು ಹಾಗೂ ಅದನ್ನು ಜಾರಿಗೊಳಿಸದಿದ್ದರೆ;

(ಎ) ರಿಜಿಸ್ಟ್ರಾರನು ಅಥವಾ ಅವನಿಂದ ಈ ಬಗ್ಗೆ ಪ್ರಾಧಿಕೃತನಾದ ಯಾವೊಬ್ಬ ವ್ಯಕ್ತಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರದ ಆಧಾರದ ಮೇಲೆ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂದು ಭಾವಿಸತಕ್ಕದ್ದು ಹಾಗೂ ಅಂಥ ನ್ಯಾಯಾಲಯದ ಡಿಕ್ರಿ ಎಂಬ ರೀತಿಯಲ್ಲಿಯೇ ಜಾರಿಗೊಳಿಸತಕ್ಕದ್ದು; ಅಥವಾ

(ಬಿ) ಭೂ ಕಂದಾಯದ ಬಾಕಿಯಂತೆ ವಸೂಲಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಅಥವಾ ನಿಯಮಗಳ ಅಡಿಯಲ್ಲಿ ಜಾರಿಗೊಳಿಸತಕ್ಕದ್ದು:

ಪರಂತು, ಈ ಖಂಡದ ಅಡಿಯಲ್ಲಿ ಯಾವುದೇ ಮೊಬಲಗನ್ನು ವಸೂಲಿ ಮಾಡುವ ಸಲುವಾದ ಒಂದು ಅರ್ಜಿಯನ್ನು, ರಿಜಿಸ್ಟ್ರಾರನ ಅಥವಾ ಅವನಿಂದ ಪ್ರಾಧಿಕೃತನಾದ ಯಾವೊಬ್ಬ ವ್ಯಕ್ತಿಯ ಸಹಿ ಇರುವ ಪ್ರಮಾಣ ಪತ್ರದೊಂದಿಗೆ ಆದೇಶ, ತೀರ್ಮಾನ ಅಥವಾ ಅವಾರ್ಡಿನಲ್ಲಿ ನಿಗದಿಪಡಿಸಲಾದ ದಿನಾಂಕದಿಂದ ಹನ್ನೆರಡು ವರ್ಷಗಳೊಳಗಾಗಿ ಅಥವಾ ಅಂಥ ದಿನಾಂಕವನ್ನು ನಿಗದಿಪಡಿಸಿರದಿದ್ದಲ್ಲಿ, ಆದೇಶ, ತೀರ್ಮಾನ ಅಥವಾ ಸಂದರ್ಭಾನುಸಾರ ಅವಾರ್ಡಿನ ದಿನಾಂಕದಿಂದ ಹನ್ನೆರಡು ವರ್ಷಗಳೊಳಗಾಗಿ ಡೆಪ್ಯುಟಿ ಕಮೀಷನರಿಗೆ ಸಲ್ಲಿಸತಕ್ಕದ್ದು.

(ಸಿ) ಯಾವ ವ್ಯಕ್ತಿ ಅಥವಾ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ವಿರುದ್ಧ ಅಂಥ ಆದೇಶ, ತೀರ್ಮಾನ ಅಥವಾ ಅವಾರ್ಡನ್ನು ಪಡೆಯಲಾಗಿದೆಯೋ ಅಥವಾ ಹೊರಡಿಸಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಯ, ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ, ಯಾವುದೇ ಸ್ವತ್ತಿನ ಜಪ್ತಿ ಮತ್ತು ಮಾರಾಟ ಅಥವಾ ಜಪ್ತಿ ಇಲ್ಲದೇ ಮಾರಾಟ ಮಾಡುವ ಮೂಲಕ ರಿಜಿಸ್ಟ್ರಾರ್ ಅಥವಾ ರಿಜಿಸ್ಟ್ರಾರನಿಂದ ಇದಕ್ಕಾಗಿ ಪ್ರಾಧಿಕೃತನಾದ ಅವನಿಗೆ ಅಧೀನನಾದ ಇತರ ಯಾವೊಬ್ಬ ವ್ಯಕ್ತಿಯು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಪ್ರಾಧಿಕೃತ ವ್ಯಕ್ತಿಯೆಂದು ಉಲ್ಲೇಖಿಸಲಾಗುವುದು) ಜಾರಿಗೊಳಿಸತಕ್ಕದ್ದು.

(2) (ಎ) ಈ ಅಧಿನಿಯಮದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶ, ತೀರ್ಮಾನ ಅಥವಾ ಅವಾರ್ಡಿನ

ಅಮಲ್ಜಾರಿ, ಬಿಡುಗಡೆ ಅಥವಾ ನೆರವೇರಿಸುವಿಕೆಗೆ ಸಂಬಂಧಿಸಿದ ಅಥವಾ (1)ನೇ ಉಪಪ್ರಕರಣದ (ಸಿ) ಖಂಡದ ಅನುಸರಣೆಯಲ್ಲಿ ಅಂಥ ಆದೇಶ, ತೀರ್ಮಾನ ಅಥವಾ ಅವಾರ್ಡನ್ನು ಜಾರಿಗೊಳಿಸಿದಾಗ ನಡೆದ ಮಾರಾಟವನ್ನು ಸ್ಥಿರೀಕರಿಸುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಅಥವಾ 44ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಸ್ವತ್ತಿನ ಜಪ್ತಿಯನ್ನು ಕುರಿತ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಗೆ ಸಂಬಂಧಿಸಿದ ಅಥವಾ ಸದರಿ (ಸಿ) ಖಂಡದನ್ವಯ ಅಮಲ್ಜಾರಿಯ ಪ್ರತಿಯೊಂದು ಪ್ರಶ್ನೆಯನ್ನು ಯಾರ ಮುಂದೆ ಅಂಥ ಪ್ರಶ್ನೆ ಬರುವುದೋ ಆ ರಿಜಿಸ್ಟ್ರಾರ್ ಅಥವಾ ಪ್ರಾಧಿಕೃತ ವ್ಯಕ್ತಿಯು ಆದೇಶದ ಮೂಲಕ ನಿರ್ಧರಿಸತಕ್ಕದ್ದು.

(ಬಿ) (i) 44ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಸ್ವತ್ತಿನ ಜಪ್ತಿ ಅಥವಾ ಈ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದನ್ವಯ ಮಾಡಿದ ಅಮಲ್ಜಾರಿ ಕುರಿತಂತೆ, ಸದರಿ ಸ್ವತ್ತು ಅಂಥ ಜಪ್ತಿಗೆ ಗುರಿಯಾಗುವುದಿಲ್ಲವೆಂಬ ಕಾರಣದ ಮೇಲೆ ಯಾವುದೇ ಕ್ಲೇಮು ಸಲ್ಲಿಸಲಾಗಿದ್ದರೆ ಅಥವಾ ಆಕ್ಷೇಪಣೆ ಮಾಡಲಾಗಿದ್ದರೆ, ರಿಜಿಸ್ಟ್ರಾರ್ ಅಥವಾ ಪ್ರಾಧಿಕೃತ ವ್ಯಕ್ತಿಯು ಕ್ಲೇಮು ಅಥವಾ ಆಕ್ಷೇಪಣೆಯ ತನಿಖೆಯನ್ನು ಕೈಗೊಳ್ಳತಕ್ಕದ್ದು:

ಪರಂತು, ರಿಜಿಸ್ಟ್ರಾರ್ ಅಥವಾ ಪ್ರಾಧಿಕೃತ ವ್ಯಕ್ತಿಯು, ಕ್ಲೇಮು ಅಥವಾ ಆಕ್ಷೇಪಣೆಯನ್ನು ಉದ್ದೇಶಪೂರ್ವಕವಾಗಿ ಅಥವಾ ಅನಗತ್ಯವಾಗಿ ವಿಳಂಬಗೊಳಿಸಲಾಗಿದೆಯೆಂದು ಅಭಿಪ್ರಾಯ-ಪಟ್ಟರೆ, ಆತನು ಅಂಥ ತನಿಖೆಯನ್ನು ನಿರಾಕರಿಸಿ ಆದೇಶ ಮಾಡತಕ್ಕದ್ದು.

(ii) ಸದರಿ ತನಿಖೆಯ ತರುವಾಯ, ರಿಜಿಸ್ಟ್ರಾರನಿಗೆ ಅಥವಾ ಪ್ರಾಧಿಕೃತ ವ್ಯಕ್ತಿಗೆ ಕ್ಲೇಮು ಅಥವಾ ಆಕ್ಷೇಪಣೆಯಲ್ಲಿ ತಿಳಿಸಲಾದ ಕಾರಣಕ್ಕಾಗಿ ಅಂಥ ಸ್ವತ್ತು ಜಪ್ತಿಯ ದಿನಾಂಕದಂದು, ಯಾವ ವ್ಯಕ್ತಿ ಅಥವಾ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ವಿರುದ್ಧವಾಗಿ ಒಂದು ಆದೇಶ, ತೀರ್ಮಾನ ಅಥವಾ ಅವಾರ್ಡನ್ನು ಪಡೆದುಕೊಳ್ಳಲಾಗಿದೆಯೋ ಅಥವಾ ಹೊರಡಿಸಲಾಗಿದೆಯೋ ಅವರ ಅಥವಾ ತೀರ್ಪುಋಣಿಯ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ತೀರ್ಪುಋಣಿಯೆಂದು ಉಲ್ಲೇಖಿಸಲಾಗುವುದು) ನಂಬಿಗಸ್ಥ ವ್ಯಕ್ತಿಯು ಸ್ವಾಧೀನತೆಯಲ್ಲಿರಲಿಲ್ಲವೆಂದು ಅಥವಾ ತೀರ್ಪುಋಣಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಬಾಡಿಗೆದಾರ ಅಥವಾ

ಇತರ ವ್ಯಕ್ತಿಯು ಅನುಭೋಗದಲ್ಲಿಲ್ಲವೆಂದು ಮನವರಿಕೆಯಾದರೆ ಅಥವಾ ಸದರಿ ದಿನಾಂಕದಂದು ತೀರ್ಪುಋಣಿಯ ಸ್ವಾನತೆಯಲ್ಲಿದ್ದು, ಹಾಗೆ ಸ್ವಾಧಿನತೆ–ಯಲ್ಲಿರುವುದು ಆತನಿಗಾಗಿ ಆಗಿರದೆ ಅಥವಾ ಆತನ ಸ್ವಂತ ಸ್ವತ್ತಾಗಿರದೆ, ಇತರ ಯಾರೇ ವ್ಯಕ್ತಿಗಳಿಗಾಗಿ ಅಥವಾ ಆತನ ನಂಬಿಗಸ್ಥನಿಗಾಗಿ ಅಥವಾ ಭಾಗಶಃ ಆತನಿಗಾಗಿ ಮತ್ತು ಭಾಗಶಃ ಇತರ ಯಾವನೇ ವ್ಯಕ್ತಿಗಾಗಿ ಎಂದು ಮನವರಿಕೆಯಾದರೆ, ರಿಜಿಸ್ಟ್ರಾರನು ಅಥವಾ ಪ್ರಾಧಿಕೃತ ವ್ಯಕ್ತಿಯು ಸ್ವತ್ತನ್ನು ಪೂರ್ಣವಾಗಿ ಅಥವಾ ತಾನು ಯುಕ್ತವೆಂದು ಭಾವಿಸುವಷ್ಟಕ್ಕೆ ಜಪ್ತಿಯಿಂದ ಬಿಡುಗಡೆ ಮಾಡುವ ಆದೇಶವನ್ನು ಮಾಡತಕ್ಕದ್ದು;

(iii) ರಿಜಿಸ್ಟ್ರಾರನು ಅಥವಾ ಪ್ರಾಧಿಕೃತ ವ್ಯಕ್ತಿಯು, ಆ ಸ್ವತ್ತು ಸದರಿ ದಿನಾಂಕದಂದು ತೀರ್ಪುಋಣಿಯ ಸ್ವಂತ ಸ್ವತ್ತಾಗಿ ಆತನ ಸ್ವಾಧಿನದಲ್ಲಿತ್ತೆಂದು ಹಾಗೂ ಬೇರೊಬ್ಬ ವ್ಯಕ್ತಿಗಾಗಿರಲಿಲ್ಲವೆಂದು ಅಥವಾ ಬಾಡಿಗೆದಾರನ ಅಥವಾ ಆತನಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಇತರ ವ್ಯಕ್ತಿಯ ಅಧಿಭೋಗದಲ್ಲಿತ್ತೆಂದು ಮನಗಂಡರೆ, ರಿಜಿಸ್ಟ್ರಾರನು ಅಥವಾ ಪ್ರಾಧಿಕೃತ ವ್ಯಕ್ತಿಯು ಕ್ಲೇಮನ್ನು ಅನುಮತಿಸತಕ್ಕದ್ದಲ್ಲ.

(iv) ಕ್ಲೇಮು ಅಥವಾ ಆಕ್ಷೇಪಣೆಯನ್ನು ಸಲ್ಲಿಸಲಾದ ಸಂದರ್ಭದಲ್ಲಿ ಯಾವ ಪಕ್ಷಕಾರನ ವಿರುದ್ಧ ಆದೇಶ ಮಾಡಲಾಗಿದೆಯೋ ಆತನು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ ಆತನು ಕ್ಲೇಮು ಮಾಡುವ, ವಿವಾದ–ಕ್ಕೊಳಗಾಗಿರುವ ಸ್ವತ್ತಿನ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಬಹುದು. ಆದರೆ ಅಂಥ ದಾವೆಯ ಫಲಿತಾಂಶಕ್ಕೆ ಒಳಪಟ್ಟು, ರಿಜಿಸ್ಟ್ರಾರ್ ಅಥವಾ ಪ್ರಾಧಿಕೃತ ವ್ಯಕ್ತಿಯ ಆದೇಶವು ನಿರ್ಣಯಕವಾಗಿರತಕ್ಕದ್ದು.

[1][**43ಎ ಶುಲ್ಕಗಳು:–** ಸಹಕಾರಿಯು ಇತ್ಯರ್ಥಕ್ಕೆ ಸಲ್ಲಿಸುವ ವ್ಯಾಜ್ಯ ಪ್ರ ಕರಣಗಳು ಹಾಗೂ ಈ ಅಧಿನಿಯಮದಡಿಯಲ್ಲಿ ಹೊರಡಿಸಲಾದ ಆದೇಶಗಳನ್ನು ಜಾರಿಗೊಳಿಸುವ ಮತ್ತು ವ್ಯಾಜ್ಯಗಳ ಸಂಬಂಧದಲ್ಲಿ ಅರ್ಜಿಗಳೊಂದಿಗೆ ಪಾವತಿಸಬೇಕಾದ ಶುಲ್ಕದ ಮೊತ್ತವನ್ನು ಸಹಕಾರಿಗಳ ರಿಜಿಸ್ಟ್ರಾರನು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು.]

**44. ಅವಾರ್ಡ್ ಅಥವಾ ಆದೇಶಕ್ಕೆ ಮುಂಚೆ ಸ್ವತ್ತಿನ ಜಪ್ತಿ.–**

(1) ಅರ್ಜಿ, ವರದಿ, ವಿಚಾರಣೆಯಿಂದ ಅಥವಾ ಅನ್ಯಥಾ ರಿಜಿಸ್ಟ್ರಾರನು, ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ತನ್ನ ವಿರುದ್ಧ ಮಾಡಬಹುದಾದ ಯಾವುದೇ ಆದೇಶ, ತೀರ್ಮಾನ ಅಥವಾ ಅವಾರ್ಡಿನ ಜಾರಿಯನ್ನು ವಿಳಂಬಗೊಳಿಸುವ ಅಥವಾ ತಡೆಯುವ ಉದ್ದೇಶದಿಂದ,–

(ಎ) ತನ್ನ ಸ್ವತ್ತನ್ನು ಪೂರ್ತಿಯಾಗಿ ಅಥವಾ ಭಾಗಶಃ ವಿಲೆ ಮಾಡಲು ಮುಂದಾಗಿರುವನೆಂದು; ಅಥವಾ

(ಬಿ) ರಿಜಿಸ್ಟ್ರಾರ್, ಮಧ್ಯಸ್ಥಗಾರ ಅಥವಾ ಸಂದರ್ಭಾನುಸಾರ ಸಮಾಪಕನ ಅಧಿಕಾರ ವ್ಯಾಪ್ತಿಯಿಂದ ತನ್ನ ಸ್ವತ್ತನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಸಾಗಿಸಲು ಮುಂದಾಗಿರುವನೆಂದು,

– ಮನಗಂಡರೆ ಸೂಕ್ತಭದ್ರತೆ ನೀಡಿದ್ದ ಹೊರತು, ಅವನು ಸದರಿ ಸ್ವತ್ತಿನ ಜಪ್ತಿಗಾಗಿ ನಿರ್ದೇಶನ ನೀಡಬಹುದು ಹಾಗೂ ಅಂಥ ಜಪ್ತಿಯು ಸಕ್ಷಮ ಸಿವಿಲ್ ನ್ಯಾಯಾಲಯದಿಂದ ಮಾಡಲಾದ ಜಪ್ತಿಯಂತೆಯೇ ಪರಿಣಾಮ ಹೊಂದಿರತಕ್ಕದ್ದು.

(2) ರಿಜಿಸ್ಟ್ರಾರನು (1)ನೇ ಉಪಪ್ರಕರಣದ ಅಡಿಯಲ್ಲಿ ಸ್ವತ್ತಿನ ಜಪ್ತಿಗೆ ನಿರ್ದೇಶನ ನೀಡಿದ ಸಂದರ್ಭದಲ್ಲಿ, ಯಾವ ವ್ಯಕ್ತಿಯ ಸ್ವತ್ತನ್ನು ಹಾಗೆ ಜಪ್ತಿ ಮಾಡಲಾಗಿದೆಯೋ ಆತನಿಗೆ, ನಿರ್ದಿಷ್ಟ ಅವಧಿಯೊಳಗಾಗಿ ತಾನು ಸೂಕ್ತವೆಂದು ಭಾವಿಸುವ ಭದ್ರತೆಯನ್ನು ಒದಗಿಸಬೇಕೆಂದು ತಿಳಿಸಿ ನೋಟೀಸು ನೀಡತಕ್ಕದ್ದು ಹಾಗೂ ಆ ವ್ಯಕ್ತಿಯು ಹಾಗೆ ಕೇಳಲಾದ ಭದ್ರತೆಯನ್ನು ಒದಗಿಸಲು ತಪ್ಪಿದರೆ, ರಿಜಿಸ್ಟ್ರಾರನು ಆದೇಶವನ್ನು ಸ್ಥಿರೀಕರಿಸಬಹುದು ಹಾಗೂ ಪೂರ್ವೋಕ್ತ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿವಾದದ ತೀರ್ಮಾನದ ತರುವಾಯ ಅಥವಾ ವ್ಯವಹರಣೆಗಳು ಪೂರ್ಣಗೊಂಡ ತರುವಾಯ ಕ್ಲೇಮಿಗೆ ಅವಾರ್ಡ ನೀಡಲಾಗಿದ್ದರೆ ಹಾಗೆ ಜಪ್ತಿಯಾದ ಸ್ವತ್ತಿನ ವಿಲೆಗೆ ನಿರ್ದೇಶನ ನೀಡಬಹುದು.

(3) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಜಪ್ತಿಯು, ಹಾಗೆ ಜಪ್ತಿ ಮಾಡಲಾದುದರ ಸಂಬಂಧದ ವ್ಯವಹರಣೆಗಳಿಗೆ ಪಕ್ಷಕಾರರಲ್ಲದ ವ್ಯಕ್ತಿಗಳಿಗೆ ಸ್ವತ್ತಿನ ಜಪ್ತಿಗೆ ಮುಂಚೆ ಇದ್ದ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ ಅಥವಾ ಯಾವ ವ್ಯಕ್ತಿಯ ಸ್ವತ್ತನ್ನು ಜಪ್ತಿ ಮಾಡಲಾಗಿದೆಯೋ ಆತನ ವಿರುದ್ಧ ಡಿಕ್ರಿ ಹೊಂದಿರುವ ವ್ಯಕ್ತಿಯು, ಜಪ್ತಿಗೆ ಗುರಿಯಾದ ಸ್ವತ್ತಿನ ಮಾರಾಟಕ್ಕಾಗಿ ಅಂಥ ಡಿಕ್ರಿಯನ್ನು ಜಾರಿಗೊಳಿಸಲು ಅರ್ಜಿ ಸಲ್ಲಿಸುವುದಕ್ಕೆ ಬಾಧಕವಾಗತಕ್ಕದಲ್ಲ.

**45. ವಿವಾದಗಳ ಇತ್ಯರ್ಥದ ಕಾರ್ಯವಿಧಾನ ಹಾಗೂ ರಿಜಿಸ್ಟ್ರಾರನ ಅಥವಾ ವಿವಾದವನ್ನು ತೀರ್ಮಾನಕ್ಕಾಗಿ ಕಳಿಸಿರುವ ಬೇರೊಬ್ಬ ವ್ಯಕ್ತಿಯ ಅಧಿಕಾರ.–**

(1) ರಿಜಿಸ್ಟ್ರಾರನು ಅಥವಾ 41ನೇ ಪ್ರಕರಣದ ಅಡಿಯಲ್ಲಿನ ವಿವಾದದ ವಿಚಾರಣೆಗಾಗಿ, 39ನೇ ಪ್ರಕರಣದ ಅಡಿಯಲ್ಲಿ ವಿವಾದದ ತೀರ್ಮಾನವನ್ನು ವಹಿಸಿಕೊಡಲಾದ ವ್ಯಕ್ತಿಯು, ನಿಯಮಿಸಲಾದ ರೀತಿಯಲ್ಲಿ ವಿವಾದದ ವಿಚಾರಣೆ ನಡೆಸತಕ್ಕದ್ದು ಹಾಗೂ ಹಿತಾಸಕ್ತ ಪಕ್ಷಕಾರರು ಅಥವಾ ಆ ಪೈಕಿ

ಯಾರಾದರೂ ಸೇರಿದಂತೆ ಸಾಕ್ಷಿಗಳನ್ನು ಕರೆಸುವ ಮತ್ತು ಅವರು ಹಾಜರಾಗುವಂತೆ ಮಾಡುವ ಹಾಗೂ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಸಿವಿಲ್ ನ್ಯಾಯಾಲಯದ ಸಂಬಂಧದಲ್ಲಿ ಉಪಬಂಧಿಸಲಾದಂತೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅದೇ ಮಾದರಿಯಲ್ಲಿ ಹಾಗೂ ಅದೇ ರೀತಿಯಲ್ಲಿ ಪ್ರಮಾಣ ಮಾಡುವ, ಸ್ಥಿರೀಕರಿಸುವ ಅಥವಾ ಅಫಿದಾವಿತ್ತನ್ನು ನೀಡುವ ಮೂಲಕ ಸಾಕ್ಷ್ಯವನ್ನು ಕೊಡಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

[1][(2) ******]

(3) (ಎ) ಒಬ್ಬ ವ್ಯಕ್ತಿ ಆತನು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಸದಸ್ಯನಾಗಿರಲಿ ಅಥವಾ ಇಲ್ಲದಿರಲಿ ವಿವಾದದ ಪಕ್ಷಕಾರನಾಗಿರುವ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವನೆಂದು ರಿಜಿಸ್ಟ್ರಾರನು ಅಥವಾ ವಿವಾದವನ್ನು ತೀರ್ಮಾನಕ್ಕಾಗಿ ವಹಿಸಿ-ಕೊಡಲಾಗಿರುವ ಇತರ ಯಾರೇ ವ್ಯಕ್ತಿಗೆ ಮನದಟ್ಟಾದರೆ, ಆತನು, ಹಾಗೆ ಹಿತಾಸಕ್ತಿಹೊಂದಿರುವ ವ್ಯಕ್ತಿಯು ವಿವಾದಕ್ಕೆ ಪಕ್ಷಕಾರನಾಗಿ ಸೇರಬಹುದೆಂದು ಆದೇಶಿಸಬಹುದು, ಹಾಗೂ ಹಾಗೆ ಸೇರಿದ ಪಕ್ಷಕಾರನು, ಉಲ್ಲೇಖಿತ ವಿವಾದದ ಬಗ್ಗೆ ರಿಜಿಸ್ಟ್ರಾರನು ಅಥವಾ ಆತನ ನಾಮ ನಿರ್ದೇಶಿತ ಅಥವಾ ಇತರ ಯಾವೊಬ್ಬ ವ್ಯಕ್ತಿಯು ನೀಡಬಹುದಾದ ಯಾವುದೇ ನಿರ್ಣಯಕ್ಕೆ ಆತನು ವಿವಾದದ ಮೂಲ ಪಕ್ಷಕಾರನೆಂಬ ರೀತಿಯಲ್ಲಿಯೇ ಬದ್ಧನಾಗಿರತಕ್ಕದ್ದು.

(ಬಿ) ತಪ್ಪು ವ್ಯಕ್ತಿಯ ಹೆಸರಿನಲ್ಲಿ ಒಂದು ವಿವಾದವನ್ನು ಹೂಡಲಾಗಿದ್ದರೆ ಅಥವಾ ಎಲ್ಲ ಪ್ರತಿವಾದಿಗಳನ್ನು ಸೇರಿಸಿಕೊಂಡಿಲ್ಲದಿರುವ ಸಂದರ್ಭದಲ್ಲಿ, ರಿಜಿಸ್ಟ್ರಾರನು ಅಥವಾ 41ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ತೀರ್ಮಾನಕ್ಕಾಗಿ ಯಾವ ವ್ಯಕ್ತಿಗೆ ವಹಿಸಿಕೊಡಲಾಗಿದೆಯೋ ಆತನು ವಿವಾದದ ವಿಚಾರಣೆಯ ಯಾವುದೇ ಹಂತದಲ್ಲಿ, ಅಂತಹ ತಪ್ಪು ಪ್ರಾಮಾಣಿಕ-ವಾಗಿರುವುದೆಂಬುದನ್ನು ಮನಗಂಡರೆ ತಾನು ನ್ಯಾಯೋಚಿತವೆಂದು ಭಾವಿಸುವ ಅಂಥ ನಿಬಂಧನೆಗಳ ಮೇಲೆ ಇತರ ಯಾವೊಬ್ಬ ವ್ಯಕ್ತಿಯನ್ನು ವಾದಿ ಅಥವಾ ಪ್ರತಿವಾದಿಯಾಗಿ ಪ್ರತಿಸ್ಥಾಪಿಸಬೇಕೆಂದು ಅಥವಾ ಸೇರಿಸಬೇಕೆಂದು ಆದೇಶಿಸಬಹುದು.

(ಸಿ) ರಿಜಿಸ್ಟ್ರಾರನು ಅಥವಾ 41ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ತೀರ್ಮಾನಕ್ಕಾಗಿ ವಹಿಸಿಕೊಡಲಾಗಿರುವ ಯಾರೇ ಇತರ ವ್ಯಕ್ತಿಯು, ಪ್ರಕ್ರಿಯೆಯ ಯಾವುದೇ ಹಂತದಲ್ಲಿ, ಯಾವೊಬ್ಬ ಪಕ್ಷಕಾರನ ಅರ್ಜಿಯ ಮೇರೆಗೆ ಅಥವಾ ಅದಿಲ್ಲದೆಯೂ, ರಿಜಿಸ್ಟ್ರಾರನು ಅಥವಾ

1. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಸಂದರ್ಭಾನುಸಾರ ವಿವಾದವನ್ನು ತೀರ್ಮಾನಿಸಬೇಕಾಗಿರುವ ಯಾವೊಬ್ಬ ಇತರ ವ್ಯಕ್ತಿಗೆ ನ್ಯಾಯೋಚಿತವೆಂದು ತೋರುವ ಅಂಥ ನಿಬಂಧನೆಗಳ ಮೇಲೆ, ವಾದಿ ಅಥವಾ ಪ್ರತಿವಾದಿಯೆಂದು ಸೂಕ್ತವಲ್ಲದ ರೀತಿಯಲ್ಲಿ ಸೇರಿಸಲಾಗಿರುವ ಯಾವೊಬ್ಬ ಪಕ್ಷಕಾರನ ಹೆಸರನ್ನು ಹೊಡೆದು ಹಾಕಬೇಕೆಂದು ಹಾಗೂ ವಾದಿ ಅಥವಾ ಪ್ರತಿವಾದಿಯಾಗಿ ಸೇರಿಸಬೇಕೆಂದು ಅಥವಾ ವಿವಾದದಲ್ಲಿ ಸೇರಿರುವ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಪೂರ್ಣವಾಗಿ ನ್ಯಾಯನಿರ್ಣಯ ಮಾಡಿ ಇತ್ಯರ್ಥಗೊಳಿಸಲು ರಿಜಿಸ್ಟ್ರಾರನಿಗೆ ಅಥವಾ ಸಂದರ್ಭಾನುಸಾರ 41ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ತೀರ್ಮಾನಿಸಬೇಕಾಗಿರುವ ಯಾವೊಬ್ಬ ವ್ಯಕ್ತಿಗೆ ಆಸ್ಪದವಾಗುವುದಕ್ಕಾಗಿ, ರಿಜಿಸ್ಟ್ರಾರನ ಅಥವಾ 41ನೇ ಪ್ರಕರಣದಡಿಯಲ್ಲಿ ವಿವಾದವನ್ನು ತೀರ್ಮಾನಿಸುವ ಇತರ ವ್ಯಕ್ತಿಯ ಮುಂದೆ ಯಾವ ವ್ಯಕ್ತಿಯ ಉಪಸ್ಥಿತಿಯು ಅಗತ್ಯವೆಂದು ತೋರುತ್ತದೆಯೋ ಮತ್ತು ಯಾವ ವ್ಯಕ್ತಿಯನ್ನು ವಾದಿ ಅಥವಾ ಪ್ರತಿವಾದಿಯಾಗಿ ಸೇರಿಸಬೇಕಾಗಿತ್ತೋ ಅಂಥ ವ್ಯಕ್ತಿಯ ಹೆಸರನ್ನು ವಾದಿ ಅಥವಾ ಪ್ರತಿವಾದಿಯಾಗಿ ಸೇರಿಸಬೇಕೆಂದು ಆದೇಶಿಸಬಹುದು.

(ಡಿ) ವಿವಾದಕ್ಕೆ ಪಕ್ಷಕಾರನಾಗಿರುವ ಹಾಗೂ ಒಂದೇ ವ್ಯಾಜ್ಯ ಕಾರಣಕ್ಕಾಗಿ ಒಂದಕ್ಕಿಂತ ಹೆಚ್ಚು ಪರಿಹಾರ ಪಡೆಯಲು ಹಕ್ಕುಳ್ಳವನಾಗಿರುವ ಯಾವೊಬ್ಬ ವ್ಯಕ್ತಿಯು ಎಲ್ಲ ಅಥವಾ ಅಂಥ ಯಾವುವೇ ಪರಿಹಾರಗಳನ್ನು ಕ್ಲೇಮು ಮಾಡಬಹುದು, ಆದರೆ ಅಂಥ ಎಲ್ಲ ಪರಿಹಾರಗಳನ್ನು ಕ್ಲೇಮು ಮಾಡದೇ ಬಿಟ್ಟರೆ ಆತನು ರಿಜಿಸ್ಟ್ರಾರನ ಅಥವಾ 41ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ತೀರ್ಮಾನಕ್ಕಾಗಿ ಕಳಿಸಲಾಗಿರುವ ಯಾವೊಬ್ಬ ಇತರ ವ್ಯಕ್ತಿಯ ಅನುಮತಿ ಇದ್ದ ಹೊರತು ಹಾಗೆ ಬಿಡಲಾದ ಯಾವುದೇ ಪರಿಹಾರದ ಕ್ಲೇಮನ್ನು ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರ್ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಇತರ ವ್ಯಕ್ತಿ ಅಥವಾ ಸಮಾಪಕನು ಮಾಡಿದ ಅಥವಾ ನೀಡಿದ ಪ್ರತಿಯೊಂದು ಆದೇಶ, ತೀರ್ಮಾನ ಅಥವಾ ಅವಾರ್ಡನ್ನು ಪ್ರಕರಣದ ಅಂತಿಮ ವಿಚಾರಣೆಯ ದಿನದಂದು ಅಥವಾ ಪಕ್ಷಕಾರರಿಗೆ ಸೂಕ್ತ ನೋಟೀಸು ಕೊಟ್ಟ ತರುವಾಯದ ಅಂಥ ಒಂದು ದಿನದಂದು ಉದ್ಘೋಷಿಸತಕ್ಕದ್ದು.

[1][**46. ಅಪೀಲು** – 41ನೇ ಪ್ರಕರಣದಡಿಯಲ್ಲಿನ ತೀರ್ಮಾನದ ಅಥವಾ ಐತೀರ್ಪಿನ ವಿರುದ್ಧದ ಅಥವಾ 37ಎ ಪ್ರಕರಣದ ಅಡಿಯಲ್ಲಿನ ಅಧಿಭಾರ ಆದೇಶದ ವಿರುದ್ಧದ ಅಪೀಲನ್ನು, ಆ ತೀರ್ಮಾನದ ಅಥವಾ ಐತೀರ್ಪಿನ ಅಥವಾ ಆದೇಶದ ದಿನಾಂಕದಿಂದ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿರುತ್ತದೆ.

ಅರವತ್ತು ದಿನಗಳೊಳಗಾಗಿ, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ ಅಡಿಯಲ್ಲಿ ರಚಿಸಲಾದ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕದ್ದು.]

[1][ಪರಂತು, ಹಣಪಾವತಿಗೆ ಸಂಬಂಧಿಸಿದ ಯಾವುದೇ ಆದೇಶ ಅಥವಾ ತೀರ್ಪು ಅಥವಾ ಐತೀರ್ಪಿನ ವಿರುದ್ಧ ಸಲ್ಲಿಸುವ ಮೇಲ್ಮನವಿ ಜೊತೆಯಲ್ಲಿ ಅಂತಹ ಆದೇಶದ, ತೀರ್ಪಿನ ಅಥವಾ ಐತೀರ್ಪಿನ ಪ್ರ ಕಾರ ಬಾಕಿಯಿರುವ ಅಥವಾ ಪಾವತಿಸಬೇಕಿರುವ ಮೊತ್ತದ ಶೇಕಡ ಇಪ್ಪತ್ತೈದನ್ನು ಸಂಬಂಧಿತ ಸಹಕಾರಿಯಲ್ಲಿ ಠೇವಣಿ ಮಾಡಿರುವ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಸಲ್ಲಿಸದ ಹೊರತು ಮೇಲ್ಮನವಿ ಪ್ರಾ ಧಿಕಾರವು ಅಂತಹ ಯಾವುದೇ ಮೇಲ್ಮನವಿಯನ್ನು ಪರಿಗಣಿಸತಕ್ಕದ್ದಲ್ಲ. ಮೇಲ್ಮನವಿಯನ್ನು ಇತ್ಯರ್ಥಗೊಳಿಸಿದ ನಂತರ ಆ ರೀತಿ ಠೇವಣಿ ಮಾಡಿರುವ ಮೊತ್ತವನ್ನು ಮೇಲ್ಮನವಿದಾರನು ಪಾವತಿಸಬೇಕಾದ ಮೊಬಲಗಿನೊಂದಿಗೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಮೇಲ್ಮನವಿದಾರನು ಯಾವುದೇ ಮೊಬಲಗನ್ನು ಪಾವತಿಸ ಬೇಕಾಗಿಲ್ಲದ ಸಂದರ್ಭದಲ್ಲಿ ಠೇವಣಿ ಮಾಡಿರುವ ಮೊತ್ತವನ್ನು ಸಹಕಾರಿಯು ಅವನಿಗೆ ಹಿಂತಿರುಗಿಸತಕ್ಕದ್ದು.]

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ VIII
# ಸಹಕಾರಿಗಳ ಸಮಾಪನ

**47. ಸಹಕಾರಿಯ ಸಮಾಪನ –**

(1) ಒಂದು ಸಹಕಾರಿಯ ಐದನೇ ಒಂದಕ್ಕಿಂತ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಆ ಸಹಕಾರಿಯ ವ್ಯವಹಾರಗಳನ್ನು ಸಮಾಪನಗೊಳಿಸಬೇಕೆಂದು ಕೊಟ್ಟ ಅರ್ಜಿಯ ಮೇಲೆ ಮಂಡಲಿಯು, ಪ್ರತಿಯೊಬ್ಬ ಸದಸ್ಯನಿಗೂ ನೋಟೀಸು ನೀಡುವ ಮೂಲಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಅಂಥ ನೋಟೀಸಿನ ಜೊತೆಗೆ ಅಂಥ ಸಾಮಾನ್ಯ ಸಭೆಗೆ ಹಾಜರಾಗಬೇಕೆಂಬ ನೋಟೀಸನ್ನು ಸಂಯುಕ್ತ ಸಹಕಾರಿ, ಒಕ್ಕೂಟ ಸಹಕಾರಿ, ಸಾಲಿಗರು, ಲೆಕ್ಕಪರಿಶೋಧಕರು ಮತ್ತು ಸಹಕಾರಿಯ ಯಾವುದೇ ಅಧೀನ ಸಂಸ್ಥೆಗೂ ಸಹ ಕಳಿಸತಕ್ಕದ್ದು ಹಾಗೂ ಅವರಿಗೆ ಸಾಮಾನ್ಯ ಸಭೆಯಲ್ಲಿ ಅಹವಾಲು ಮಾಡಿಕೊಳ್ಳಲು ಹಕ್ಕು ಇರತಕ್ಕದ್ದು.

(2) ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಸಹಕಾರಿಯನ್ನು ಸಮಾಪನ ಮಾಡುವ ಮತ್ತು ಸಮಾಪಕನನ್ನು ನೇಮಕ ಮಾಡುವ ನಿರ್ಣಯವನ್ನು ಅಂಗೀಕರಿಸಿದ ನಂತರ ಸಾಮಾನ್ಯ ನಿಕಾಯವು ಆ ನಿರ್ಣಯವನ್ನು ಅನುಮೋದಿಸತಕ್ಕದ್ದು. ಅಂಥ ನಿರ್ಣಯವು ಸಹಕಾರಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಯಾರೇ ಸಾಲಿಗರ ಕ್ಲೇಮುಗಳು, ಸದಸ್ಯರ ಸಂಖ್ಯೆ ಮತ್ತು ಸಹಕಾರಿಯಲ್ಲಿ ಪ್ರತಿಯೊಬ್ಬ ಸದಸ್ಯನ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಇವುಗಳ ಬಗೆಗಿನ ವಿವರಗಳನ್ನು ಒಳಗೊಂಡಿರತಕ್ಕದ್ದು. ಸಾಮಾನ್ಯ ನಿಕಾಯವು ಅನುಮೋದಿಸಿದ ನಿರ್ಣಯದ ಒಂದು ಪ್ರತಿಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅಂಥ ಅನುಮೋದನೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಂಯುಕ್ತ ಸಹಕಾರಿಗೆ ಮತ್ತು ಒಕ್ಕೂಟ ಸಹಕಾರಿಗೆ ಕಳುಹಿಸತಕ್ಕದ್ದು.

ವಿವರಣೆ – ಈ ಪ್ರಕರಣದಲ್ಲಿ "ಹಿತಾಸಕ್ತಿ" ಎಂದರೆ ಒಂದು ಸಹಕಾರಿಯಲ್ಲಿ ಸದಸ್ಯನಿಗಿರುವ ಹಿತಾಸಕ್ತಿ ಮತ್ತು ಇದು ಷೇರುಗಳು, ಸದಸ್ಯರ ಸಾಲಗಳು, ಠೇವಣಿಗಳು ಮತ್ತು–

(i) ಸಹಕಾರಿಯ ಉಪವಿಧಿಗಳ ಬಲದಿಂದ ಉಂಟಾಗುವ; ಮತ್ತು–

(ii) ಸಹಕಾರಿಯು ಸದಸ್ಯನಿಗೆ ಕೊಡಬೇಕಾಗಿರುವ

–ಯಾವುದೇ ರೀತಿಯ ಬಾಧ್ಯತೆಗಳನ್ನು ಒಳಗೊಳ್ಳುತ್ತದೆ.

[1][ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಪ್ರತಿಯನ್ನು ಸಂದರ್ಭಾನುಸಾರ

1. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

ರಿಜರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕಿಗೆ ಕಳುಹಿಸಿದ್ದ ಮತ್ತು ಅದರ ಒಪ್ಪಿಗೆಯನ್ನು ಪಡೆದಿದ್ದ ಹೊರತು (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ ಹೇಳಿರುವಂತೆ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.]

(3) [1][ರಿಜಿಸ್ಟ್ರಾರನು,] ಸಹಕಾರಿಯಿಂದ, ಸಮಾಪಕನಿಂದ ಅಥವಾ ಮಾಹಿತಿಯನ್ನೊದಗಿಸಲು ಅಗತ್ಯಪಡಿಸಲಾದ ಯಾವನೇ ಇತರ ವ್ಯಕ್ತಿಯಿಂದ–

(ಎ) ಸಮಾಪನದ ಪ್ರಗತಿ;

(ಬಿ) ಹಂಚಿಕೆ ಮಾಡಿಲ್ಲದ ಹೆಚ್ಚುವರಿ ಅಥವಾ ಮೀಸಲುಗಳ ಹಂಚಿಕೆ; ಮತ್ತು

(ಸಿ) [2][ಅವನು ಅಗತ್ಯಪಡಿಸಬಹುದಾದ] ಇತರ ಯಾವುದೇ ಮಾಹಿತಿ,

–ಇವುಗಳನ್ನು ತೋರಿಸುವ ವಾರ್ಷಿಕ ಅಥವಾ ಇತರ ವರದಿಗಳನ್ನು ಒದಗಿಸುವಂತೆ ಅಗತ್ಯಪಡಿಸಬಹುದು.

[3][(4) (3)ನೇ ಉಪ-ಪ್ರಕರಣದ ಅಡಿಯಲ್ಲಿ ಒದಗಿಸಿದ ಮಾಹಿತಿಯನ್ನು ಪರಿಗಣಿಸಿದ ತರುವಾಯ ರಿಜಿಸ್ಟ್ರಾರನು, ಸಹಕಾರಿಯನ್ನು ಸಮಾಪನಗೊಳಿಸುವ ನಿರ್ಣಯವನ್ನು ಅನುಮೋದಿಸಬಹುದು ಮತ್ತು ಅದನ್ನು ಸದರಿ ಸಹಕಾರಿಗೆ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸಬಹುದು. ಅಂಥ ನಿರ್ಣಯವು ರಿಜಿಸ್ಟ್ರಾರನು ಅನುಮೋದನೆ ಮಾಡಿದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು.]

[4][**48. ರಿಜಿಸ್ಟ್ರಾರನಿಂದ ಸಮಾಪನ :-**

(1) ರಿಜಿಸ್ಟ್ರಾರನು, 33ನೇ ಪ್ರಕರಣದ ಅಡಿಯಲ್ಲಿ ಮಾಡಿದ ಲೆಕ್ಕಪರಿಶೋಧನೆಯ ತರುವಾಯ ಅಥವಾ 35ನೇ ಪ್ರಕರಣದ ಅಡಿಯಲ್ಲಿ ನಡೆಸಿದ ವಿಚಾರಣೆಯ ತರುವಾಯ ಅಥವಾ ಒಂದು ಸಹಕಾರಿಯ ಸದಸ್ಯರುಗಳ ಪೈಕಿ ನಾಲ್ಕನೇ ಮೂರರಷ್ಟಕ್ಕೆ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಆ ಸಹಕಾರಿಯ ವ್ಯವಹಾರಗಳನ್ನು ಸಮಾಪನಗೊಳಿಸಬೇಕೆಂದು ನೀಡಿದ ಅರ್ಜಿಯ ಮೇಲೆ ಅದನ್ನು ಸಮಾಪನಗೊಳಿಸಬೇಕೆಂದು ನಿರ್ದೇಶಿಸುವ ಆದೇಶವನ್ನು ಹೊರಡಿಸಬಹುದು.

(2) ಒಂದು ಸಹಕಾರಿಯು, –

(ಎ) ನೋಂದಣಿಯ ತರುವಾಯ ಎರಡು ವರ್ಷಗಳೊಳಗೆ ವ್ಯವಹಾರವನ್ನು ಪ್ರಾರಂಭಿಸಿಲ್ಲವೆಂದು; ಅಥವಾ

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
4. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

(ಬಿ) ಸತತವಾಗಿ ಎರಡು ವರ್ಷಗಳವರೆಗೆ ವ್ಯವಹಾರವನ್ನು ನಡೆಸಿಲ್ಲವೆಂದು; ಅಥವಾ

(ಸಿ) ಸಹಕಾರ ತತ್ವಗಳಿಗೆ ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಸಹಕಾರಿಯ ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಕಾರ್ಯಾಚರಣೆ ಮಾಡುತ್ತಿಲ್ಲವೆಂದು,

– ರಿಜಿಸ್ಟ್ರಾರನಿಗೆ ನಂಬಲು ಸೂಕ್ತ ಕಾರಣವಿದ್ದಲ್ಲಿ, ತಾನಾಗಿಯೇ, [1][ಅಥವಾ ಸಂಯುಕ್ತ ಸಹಕಾರಿಯ ಶಿಫಾರಸ್ಸಿನ ಮೇರೆಗೆ] ಅಂಥ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನನ್ನು ಆ ಸಹಕಾರಿಯು ವ್ಯವಹಾರವನ್ನು ನಡೆಸುತ್ತಿದೆಯೇ ಅಥವಾ ವಾರ್ಷಿಕ ವರದಿಯನ್ನು ಸಲ್ಲಿಸುತ್ತಿದೆಯೇ ಎಂಬ ಬಗ್ಗೆ ತಿಳಿಸಬೇಕೆಂದು ಅಗತ್ಯಪಡಿಸಬಹುದು.

(3) ಮುಖ್ಯ ಕಾರ್ಯನಿರ್ವಾಹಕನಿಂದ ಒಂದು ತಿಂಗಳೊಳಗಾಗಿ ಯಾವುದೇ ಉತ್ತರವು ಬಾರದಿದ್ದಲ್ಲಿ, ರಿಜಿಸ್ಟ್ರಾರನು, ಸದರಿ ಅವಧಿಯು ಮುಕ್ತಾಯವಾದ ತರುವಾಯ ಹದಿನಾಲ್ಕು ದಿನಗಳೊಳಗೆ ಯಾವುದೇ ಉತ್ತರವು ತನಗೆ ಬಂದಿಲ್ಲವೆಂದು ದಾಖಲ್ಮಾಡತಕ್ಕದ್ದು ಮತ್ತು ಸಹಕಾರಿಯನ್ನು ಸಮಾಪನಗೊಳಿಸುವ ಒಂದು ನೋಟೀಸನ್ನು ಸ್ಥಳೀಯ ಪ್ರದೇಶದಲ್ಲಿ ಹೆಚ್ಚಾಗಿ ಪ್ರಸಾರದಲ್ಲಿರುವ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

(4) ಸಹಕಾರಿಯು ವ್ಯವಹಾರವನ್ನು ನಡೆಸುತ್ತಿಲ್ಲವೆಂದು ಅಥವಾ ಕಾರ್ಯಾಚರಣೆ ಮಾಡುತ್ತಿಲ್ಲವೆಂದು ಅಥವಾ ಸಹಕಾರಿಯಾಗಿ ಮುಂದುವರಿಯಲು ಇಚ್ಛಿಸುತ್ತಿಲ್ಲವೆಂದು ಅಥವಾ ವಾರ್ಷಿಕ ವರದಿಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ತಿಳಿಸಿದ ಉತ್ತರವನ್ನು ಅದರಿಂದ ರಿಜಿಸ್ಟ್ರಾರನು ಸ್ವೀಕರಿಸಿದಲ್ಲಿ, ಸಹಕಾರಿಯು ಇದಕ್ಕೆ ವ್ಯತಿರಿಕ್ತವಾದ ಕಾರಣವನ್ನು ತೋರಿಸಿದ ಹೊರತು, ಅವನು ಅಂಥ ಸಹಕಾರಿಯನ್ನು ಸಮಾಪನಗೊಳಿಸುವ ದಿನಾಂಕವನ್ನು ನಿರ್ದಿಷ್ಟಪಡಿಸಿ ವೃತ್ತಪತ್ರಿಕೆಯಲ್ಲಿ ಒಂದು ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಸಹಕಾರಿಗೆ ಅಂಥ ನೊಟೀಸನ್ನು ಕಳುಹಿಸತಕ್ಕದ್ದು.

(5) ರಿಜಿಸ್ಟ್ರಾರನು, ಸಹಕಾರಿಯು ಯಾವುದೇ ಉತ್ತರ ನೀಡಿದ್ದಲ್ಲಿ, ಅದನ್ನು ಪರಿಗಣಿಸಿದ ತರುವಾಯ,–

(i) ಸಹಕಾರಿಗೆ ಯಾವುದೇ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇಲ್ಲವೆಂದು ಮನವರಿಕೆಯಾದರೆ, ಸಹಕಾರಿಯನ್ನು ಸಮಾಪನಗೊಳಿಸಲಾಗಿದೆ ಎಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಕೂಡಲೇ ಅಂಥ ಸಹಕಾರಿಯ ನೋಂದಣಿಯನ್ನು ರದ್ದುಪಡಿಸತಕ್ಕದ್ದು; ಅಥವಾ

(ii) ಸಹಕಾರಿಗೆ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇವೆಯೆಂದು

1. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

ಮನವರಿಕೆಯಾದರೆ, ಅಂಥ ಸಹಕಾರಿಯ ಮುಖ್ಯ ಕಾರ್ಯ-ನಿರ್ವಾಹಕನಿಂದ ಸಾಮಾನ್ಯ ಸಭೆಯು ಸಹಕಾರಿಯನ್ನು ಸಮಾಪನಗೊಳಿಸುವ ನಿರ್ಣಯವನ್ನು ಅಂಗೀಕರಿಸಿದ ತರುವಾಯ ಒಬ್ಬ ಸಮಾಪಕನನ್ನು ನೇಮಕ ಮಾಡಿಲ್ಲವೆಂಬ ವರದಿಯನ್ನು ಸ್ವೀಕರಿಸಿದ ಮೇಲೆ ಸಮಾಪಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಸಹಕಾರಿ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸತಕ್ಕದ್ದು.

(6) ರಿಜಿಸ್ಟ್ರಾರನು ಸಹಕಾರಿಯು ಅಸ್ತಿತ್ವದಲ್ಲಿ ಮುಂದುವರಿಯುವುದು ಅಗತ್ಯವೆಂದು ಅಭಿಪ್ರಾಯಪಟ್ಟ ಯಾವುದೇ ಪ್ರಕರಣದಲ್ಲಿ, ಯಾವುದೇ ಸಮಯದಲ್ಲಿ, ಸಹಕಾರಿಯು ಸಮಾಪನಕ್ಕಾಗಿ ಇರುವ ಆದೇಶವನ್ನು ಅವನು ರದ್ದುಪಡಿಸಬಹುದು.

(7) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕಿನಿಂದ ಲಿಖಿತದಲ್ಲಿ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಯಾವುದೇ ಸಹಕಾರಿ ಬ್ಯಾಂಕನ್ನು ಸಮಾಪನಗೊಳಿಸತಕ್ಕದ್ದಲ್ಲ ಅಥವಾ ಸಮಾಪನಗೊಳಿಸಿದ ಆದೇಶವನ್ನು ರದ್ದುಪಡಿಸತಕ್ಕದ್ದಲ್ಲ.]

**49. ಸಮಾಪಕನ ಕರ್ತವ್ಯಗಳು –**

(1) ಸಮಾಪಕನು, ಸಮಾಪಕನ ಪದದ ಪ್ರಭಾರವನ್ನು ವಹಿಸಿಕೊಂಡ ನಂತರ ತಕ್ಷಣ ಆ ಬಗ್ಗೆ ರಿಜಿಸ್ಟ್ರಾರನಿಗೆ ಮತ್ತು ಸಂಯುಕ್ತ ಸಹಕಾರಿಗೆ, ಸಹಕಾರಿಯ ಪ್ರತಿಯೊಬ್ಬ ಕ್ಲೇಮುದಾರನಿಗೆ, ಷೇರುದಾರನಿಗೆ ಮತ್ತು ಪ್ರತಿಯೊಬ್ಬ ಸಾಲಿಗನಿಗೆ ತಿಳಿಸತಕ್ಕದ್ದು. [1][ಈ ರೀತಿ ನೇಮಕಗೊಂಡ ಸಮಾಪಕರು ಸಹಕಾರಿಯ ಪ್ರಭಾರ ವಹಿಸಿಕೊಂಡು ಆಸ್ತಿ ಜವಾಬ್ದಾರಿಗಳನ್ನು ಪಟ್ಟಿಮಾಡಿ ರಿಜಿಸ್ಟ್ರಾರನಿಂದ ಆದ್ಯತಾ ಪಟ್ಟಿಗೆ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಅಂಥ ಅನುಮೋದನೆಯ ನಂತರವೇ ಸಮಾಪನಾ ಪ್ರಕ್ರಿಯೆಯನ್ನು ಆರಂಭಿಸತಕ್ಕದ್ದು.] ಅವನ ನೇಮಕದ ನೋಟೀಸನ್ನು ಎರಡು ನಿರಂತರ ವಾರಗಳವರೆಗೆ ವಾರಕ್ಕೆ ಒಂದು ಬಾರಿ ರಾಜ್ಯಪತ್ರದಲ್ಲಿ ಮತ್ತು ಸಹಕಾರಿಯ ನೋಂದಾಯಿತ ಕಚೇರಿಯು ಇರುವ ಸ್ಥಳದಲ್ಲಿ ಪ್ರಕಟವಾಗುವ ಅಥವಾ ಹಂಚಿಕೆಯಾಗುವ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಅವನು ಸಹಕಾರಿಯು ತನ್ನ ವ್ಯವಹಾರಗಳನ್ನು ನಡೆಸುತ್ತಿದ್ದ ಪ್ರದೇಶದಲ್ಲಿ ಅಂಥ ಸಹಕಾರಿಯ ಸಮಾಪನದ ಬಗೆಗಿನ ನೋಟೀಸನ್ನು ನೀಡಲು ಸೂಕ್ತ ಕ್ರಮಗಳನ್ನು ಸಹ ತೆಗೆದುಕೊಳ್ಳತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ನೋಟೀಸು-

(i) ಸಹಕಾರಿಗೆ ಸಾಲಗಾರನಿಂದ ಬಾಕಿಯಿರುವ ಸಾಲದ ಮೊತ್ತ ಮತ್ತು ಆ ಮೊತ್ತವನ್ನು ಸಮಾಪಕನಿಗೆ ಸಂದಾಯ ಮಾಡುವ ಸಮಯ ಮತ್ತು ಸ್ಥಳ;

---

1. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

(ii) ಸಹಕಾರಿಯ ಸ್ವತ್ತನ್ನು ಸಮಾಪಕನಿಗೆ ನೀಡಬೇಕಾದ ಸಮಯ ಮತ್ತು ಸ್ಥಳ; ಮತ್ತು

(iii) ಸಮಾಪನಗೊಂಡಿರಲಿ ಅಥವಾ ಇಲ್ಲದಿರಲಿ ಸಹಕಾರಿಯ ವಿರುದ್ಧದ ಕ್ಲೇಮುಗಳ ಸದ್ಯದ ಅಥವಾ ಭವಿಷ್ಯದ ಸ್ಥಿತಿ,

– ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ನೋಟೀಸನ್ನು ಮೊದಲು ಪ್ರಕಟಿಸಿದ ದಿನಾಂಕದ ನಂತರ ಎರಡು ತಿಂಗಳೊಳಗೆ ಅಂಥ ನೋಟೀಸನ್ನು ಪಾಲಿಸಲು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳನ್ನು ಅಗತ್ಯಪಡಿಸತಕ್ಕದ್ದು.

(3) ಸಮಾಪಕನು,–

(ಎ) ಸಹಕಾರಿಯ ಸ್ವತ್ತನ್ನು ತನ್ನ ವಶಕ್ಕೆ ಮತ್ತು ನಿಯಂತ್ರಣಕ್ಕೆ ತೆಗೆದುಕೊಳ್ಳತಕ್ಕದ್ದು:

(ಬಿ) ಸಮಾಪನಗೊಳ್ಳುತ್ತಿರುವ ಸಹಕಾರಿಯ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಕೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ವಿವರಪಟ್ಟಿಕೆಯ ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಮತ್ತು ರಿಜಿಸ್ಟ್ರಾರನಿಗೆ [1][ಮತ್ತು ಒಂದು ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ ಬ್ಯಾಂಕಿಗೆ ಸಹ] ಕಳುಹಿಸತಕ್ಕದ್ದು;

(ಸಿ) ಸಹಕಾರಿಯ ಹಣದ ಸಲುವಾಗಿ ಒಂದು ಟ್ರಸ್ಟ್ ಖಾತೆಯನ್ನು ತೆರೆಯತಕ್ಕದ್ದು ಮತ್ತು ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು;

(ಡಿ) ಅವನು ಸ್ವೀಕರಿಸಿದ ಮತ್ತು ಅವನು ಸಂದಾಯ ಮಾಡಿದ ಸಹಕಾರಿಯ ಹಣದ ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು;

(ಇ) ಸಹಕಾರಿಯ ವಿರುದ್ಧ ಕ್ಲೇಮುಗಳನ್ನು ಹೊಂದಿರುವ ಸದಸ್ಯರ, ಸಾಲಿಗರ ಮತ್ತು ಇತರ ವ್ಯಕ್ತಿಗಳ ಪ್ರತ್ಯೇಕ ಪಟ್ಟಿಗಳನ್ನು ಇಟ್ಟುಕೊಂಡು ಬರತಕ್ಕದ್ದು;

[2][(ಎಫ್) ಯಾವುದೇ ಸಮಯದಲ್ಲಿ ಸಹಕಾರಿಯು ಅಥವಾ ಸಹಕಾರಿ ಬ್ಯಾಂಕು, ತನ್ನ ಹೊಣೆಗಳನ್ನು ವಿಮೋಚನಗೊಳಿಸುವುದಕ್ಕಾಗಿ ಹಣ ಸಂದಾಯ ಮಾಡಲು ಅಥವಾ ಸಾಕಷ್ಟು ಹಣ ಒದಗಿಸಲು ಅಸಮರ್ಥವಾಗಿದೆಯೆಂದು ಆತನು ತೀರ್ಮಾನಿಸಿದರೆ, ನಿರ್ದೇಶನಕ್ಕಾಗಿ, ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿಗೆ ಮತ್ತು ಇತರೆ ಸಂದರ್ಭಗಳಿಗೆ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸತಕ್ಕದ್ದು; ಮತ್ತು ]

1. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

(ಜಿ) ಸಮಾಪಕನು ಯುಕ್ತವೆಂದು ಭಾವಿಸುವಂಥ ಅಥವಾ [1][ರಿಜಿಸ್ಟ್ರಾರನು] ಅಗತ್ಯಪಡಿಸಬಹುದಾದಂಥ ನಮೂನೆಯಲ್ಲಿ ಕಡೇ ಪಕ್ಷ ಆರು ತಿಂಗಳಿಗೊಮ್ಮೆ ಅಥವಾ [2][ರಿಜಿಸ್ಟ್ರಾರನು] ಅಗತ್ಯಪಡಿಸಬಹುದಾದಂತೆ ಇನ್ನೂ ಹೆಚ್ಚು ಬಾರಿ ಸಹಕಾರಿಯ ಆರ್ಥಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು [3][ಮತ್ತು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಅಂಥ ಆರ್ಥಿಕ ವಿವರ ಪಟ್ಟಿಯನ್ನು ರಿಜರ್ವ್ ಬ್ಯಾಂಕಿಗೆ ಸಹ ಸಲ್ಲಿಸತಕ್ಕದ್ದು.]

[4][(ಹೆಚ್) 47ನೇ ಪ್ರಕರಣದ (4)ನೇ ಉಪಪ್ರಕರಣದ ಮತ್ತು 48ನೇ ಪ್ರಕರಣದ (5) ಮತ್ತು (7)ನೇ ಉಪಪ್ರಕರಣಗಳ ಅಡಿಯಲ್ಲಿ ಸೌಹಾರ್ದ ಸಹಕಾರಿ ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳನ್ನು ಸಮಾಪನೆಗೊಳಿಸುವ ಪ್ರಕ್ರಿಯೆಯನ್ನು ಎರಡು ವರ್ಷಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು. ಆದಾಗ್ಯೂ ರಿಜಿಸ್ಟ್ರಾರನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಒಂದು ವರ್ಷದ ಮತ್ತೊಂದು ಅವಧಿಗೆ ವಿಸ್ತರಿಸಬಹುದು;

ಪರಂತು ರಾಜ್ಯ ಸರ್ಕಾರವು ರಿಜಿಸ್ಟ್ರಾರನು ಸಲ್ಲಿಸಿದ ವರದಿಯ ಮೇಲೆ, ವಿಸ್ತರಣೆಗೆ ನೈಜ ಕಾರಣಗಳಿವೆ ಎಂದು ಮನಗಂಡರೆ ದಾಖಲಿಸಬೇಕಾದ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(ಐ) ಸಮಾಪಕನು ಅಳವಡಿಸಿಕೊಳ್ಳುವ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.]

**50. ಸಮಾಪಕನ ಅಧಿಕಾರಗಳು –**

(1) ಸಮಾಪಕನು,–

(ಎ) ವಕೀಲರು, ಲೆಕ್ಕಿಗರು, ಇಂಜಿನಿಯರರು, ಮೌಲ್ಯ ನಿರ್ಣಯಕಾರರು ಹಾಗೂ ಇತರ ವೃತ್ತಿ ಸಲಹೆಗಾರರನ್ನು ನೇಮಿಸಿಕೊಳ್ಳಬಹುದು;

(ಬಿ) ಸಹಕಾರಿಯ ಹೆಸರಿನಲ್ಲಿ ಅಥವಾ ಅದರ ಪರವಾಗಿ ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ಆಡಳಿತಾತ್ಮಕ ಕ್ರಮ ಅಥವಾ ನಡವಳಿಯಲ್ಲಿ ಪ್ರತಿವಾದಿಸಬಹುದು ಅಥವಾ ಭಾಗವಹಿಸಬಹುದು;

(ಸಿ) ಕ್ರಮಬದ್ಧ ಸಮಾಪನಕ್ಕಾಗಿ ಅಗತ್ಯವಿರುವ ಸಹಕಾರಿಯ ವ್ಯವಹಾರವನ್ನು ನಡೆಸಬಹುದು;

(ಡಿ) ಸಹಕಾರಿಯ ಯಾವುದೇ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
4. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

ಮಾರಾಟಮಾಡಬಹುದು;

(ಇ) ಸಹಕಾರಿಯ ಹೆಸರಿನಲ್ಲಿ ಅಥವಾ ಅದರ ಪರವಾಗಿ ಎಲ್ಲ ಕಾರ್ಯಗಳನ್ನು ಮಾಡಬಹುದು ಹಾಗೂ ಯಾವುದೇ ದಸ್ತಾವೇಜುಗಳನ್ನು ಬರೆದುಕೊಡಬಹುದು;

(ಎಫ್) ಸಹಕಾರಿಯ ಸ್ವತ್ತಿನ ಭದ್ರತೆಯ ಮೇಲೆ ಸಾಲವನ್ನು ಪಡೆಯಬಹುದು;

(ಜಿ) ಸಹಕಾರಿಯ ಪರವಾದ ಅಥವಾ ವಿರುದ್ಧವಾದ ಯಾವುದೇ ಕ್ಲೇಮುಗಳನ್ನು ಇತ್ಯರ್ಥಗೊಳಿಸಬಹುದು ಅಥವಾ ರಾಜಿ ಮಾಡಿಕೊಳ್ಳಬಹುದು;

(ಹೆಚ್) ಸಹಕಾರಿಯ ಸಮಾಪನಕ್ಕೆ ಅಗತ್ಯವಿರುವ ಅಂಥ ಎಲ್ಲ ಕ್ರಮಗಳನ್ನು ಕೈಗೊಳ್ಳಬಹುದು.

(2) ಯಾವೊಬ್ಬ ವ್ಯಕ್ತಿಯು ಸಹಕಾರಿಯ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿರಿಸಿಕೊಂಡಿರುವನೆಂದು ಅಥವಾ ಮರೆಮಾಚಿರುವನೆಂದು, ತಡೆ ಹಿಡಿದಿರುವನೆಂದು ಅಥವಾ ದುರ್ವಿನಿಯೋಗ ಮಾಡಿರುವನೆಂದು ನಂಬಲು ಕಾರಣವಿದ್ದರೆ, ಸಮಾಪಕನು ಅಂಥ ವ್ಯಕ್ತಿಯ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲು [ರಿಜಿಸ್ಟ್ರಾರನಿಗೆ] ತಿಳಿಸತಕ್ಕದ್ದು.

(3) ಯಾವೊಬ್ಬ ಸಮಾಪಕ ಅಥವಾ ಆತನ ಸಂಬಂಧಿಯು ಸಮಾಪನಗೊಳ್ಳುತ್ತಿರುವ ಸಹಕಾರಿಯ ಮಾರಾಟದ ಸರಕು, ಋಣ ಅಥವಾ ಆಸ್ತಿಗಳ ಯಾವುದೇ ಭಾಗವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಖರೀದಿಸತಕ್ಕದ್ದಲ್ಲ.

**51. ಅಂತಿಮ ಲೆಕ್ಕಪತ್ರಗಳು –**

(1) ಸಮಾಪಕನು ಸಹಕಾರಿಯ ಸ್ವತ್ತಿನ ಪೈಕಿಯಿಂದ ಸಮಾಪನದ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು ಹಾಗೂ ಸಹಕಾರಿಯ ವಿರುದ್ಧದ ಎಲ್ಲ ಕ್ಲೇಮುಗಳನ್ನು ಸಂದಾಯ ಮಾಡತಕ್ಕದ್ದು ಅಥವಾ ಅದಕ್ಕಾಗಿ ಸೂಕ್ತ ಏರ್ಪಾಟು ಮಾಡತಕ್ಕದ್ದು.

(2) ಸಮಾಪಕನು, ಸಹಕಾರಿಯ ವಿರುದ್ಧದ ಎಲ್ಲ ಕ್ಲೇಮುಗಳನ್ನು ಸಂದಾಯ ಮಾಡಿದ ತರುವಾಯ ಅಥವಾ ಅದಕ್ಕಾಗಿ ಸೂಕ್ತ ಏರ್ಪಾಟು ಮಾಡಿದ ತರುವಾಯ, ತನ್ನ ಅಂತಿಮ ಲೆಕ್ಕಪತ್ರಗಳ ಅನುಮೋದನೆಗಾಗಿ ಹಾಗೂ ಉಪವಿಧಿಗಳಿಗನುಸಾರವಾಗಿ, ಸದಸ್ಯರಿಗೆ ಕೊಡಬೇಕಾಗಿರುವ ಮೊಬಲಗನ್ನು ನಗದಾಗಿ ಅಥವಾ ವಸ್ತು ರೂಪದಲ್ಲಿ ಸಹಕಾರಿಯ ಉಳಿದ ಸ್ವತ್ತಿನಿಂದ ಹಂಚುವುದಕ್ಕೆ ಅನುಮತಿಗಾಗಿ [2][ರಿಜಿಸ್ಟ್ರಾರನಿಗೆ] ಅರ್ಜಿ ಸಲ್ಲಿಸತಕ್ಕದ್ದು.

(3) [3][ರಿಜಿಸ್ಟ್ರಾರನು] (2)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ಸಮಾಪಕನು

---

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

ಸಲ್ಲಿಸಿದ ಅಂತಿಮ ಲೆಕ್ಕಪತ್ರಗಳನ್ನು ಅನುಮೋದಿಸುವ ಸಂದರ್ಭದಲ್ಲಿ [1][ಅವನು],–

(ಎ) ಸಹಕಾರಿಯ ದಸ್ತಾವೇಜುಗಳ ಹಾಗೂ ದಾಖಲೆಗಳ ಅಭಿರಕ್ಷೆ ಅಥವಾ ವಿಲೆಗಾಗಿ ನಿರ್ದೇಶನಗಳನ್ನು ಹೊರಡಿಸತಕ್ಕದ್ದು; ಮತ್ತು

(ಬಿ) ಸಮಾಪಕನನ್ನು ಅವನ ಹುದ್ದೆಯಿಂದ ಬಿಡುಗಡೆಗೊಳಿಸತಕ್ಕದ್ದು.

(4) [2][ರಿಜಿಸ್ಟ್ರಾರನು] (3)ನೇ ಉಪ-ಪ್ರಕರಣದ ಅಡಿಯಲ್ಲಿ ಸಮಾಪಕನನ್ನು ಬಿಡುಗಡೆಗೊಳಿಸಿದ ಸಂದರ್ಭದಲ್ಲಿ, ಅವನು, ಸಹಕಾರಿಯ ಸಮಾಪನದ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಅಂಥ ಸಹಕಾರಿಯ ನೋಂದಣಿಯನ್ನು ರದ್ದುಪಡಿಸತಕ್ಕದ್ದು.

(5) ಸಹಕಾರಿಯು, ನೋಂದಣಿ ಪ್ರಮಾಣಪತ್ರವು ರದ್ದುಗೊಂಡ ದಿನಾಂಕದಿಂದ ನಿಗಮಿತ ನಿಕಾಯವಾಗಿರುವುದು ನಿಂತುಹೋಗುತ್ತದೆ.

**52. ಸಮಾಪನದ ಹಂತದಲ್ಲಿರುವ ಸಹಕಾರಿಯ ಆಸ್ತಿಗಳ ವಿಲೆ.–** ಸಮಾಪಕನು ಸಮಾಪನ–ಗೊಳ್ಳುತ್ತಿರುವ ಸಹಕಾರಿಯ ಆಸ್ತಿಗಳಿಗೆ ಗರಿಷ್ಠ ಮೌಲ್ಯವನ್ನು ಪಡೆಯುವ ದೃಷ್ಟಿಯಿಂದ 49ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಆಸ್ತಿ ಹಾಗೂ ಹೊಣೆಗಾರಿಕೆಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿದ ತರುವಾಯ, ಅಂಥ ಸಹಕಾರಿಯ ಆಸ್ತಿಗಳನ್ನು ಖರೀದಿಸಲು ಸಂಯುಕ್ತ ಸಹಕಾರಿ ಅಥವಾ ಇತರ ಸಹಕಾರಿ ಅಥವಾ ಸಹಕಾರಿ ಸಂಘಗಳನ್ನು ಆಹ್ವಾನಿಸಬಹುದು.

[3][**52ಎ. ಹೆಚ್ಚುವರಿ ನಿಧಿ, ಠೇವಣಿಗಳು ಮತ್ತು ಆಸ್ತಿಗಳ ವರ್ಗಾವಣೆ.–** ಸಮಾಪನಾ ಪ್ರಕ್ರಿಯೆ ಪೂರ್ಣಗೊಂಡ ತರುವಾಯ, ಸಹಕಾರಿಯಲ್ಲಿ ಹೆಚ್ಚುವರಿ ನಿಧಿಗಳು, ಠೇವಣಿಗಳು, ಚರ ಅಥವಾ ಸ್ಥಿರಾಸ್ತಿಗಳು ಉಳಿದಲ್ಲಿ, ಅಂಥ ನಿಧಿಗಳನ್ನು ಅಥವಾ ಆಸ್ತಿಗಳನ್ನು ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ನಿಧಿಗೆ ರಿಜಿಸ್ಟ್ರಾರನ ಅನುಮೋದನೆಯೊಂದಿಗೆ ವರ್ಗಾಯಿಸತಕ್ಕದ್ದು. ಅಂಥ ನಿಧಿಯ ಸ್ಥಾಪನೆ, ಅಭಿರಕ್ಷೆ, ವ್ಯವಸ್ಥಾಪನೆ ಮತ್ತು ಬಳಕೆಯ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.]

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ IX

# ಸಂಯುಕ್ತ ಸಹಕಾರಿ

**53. ಸಂಯುಕ್ತ ಸಹಕಾರಿಯ ರಚನೆ, ಪ್ರಕಾರ್ಯಗಳು ಹಾಗೂ ನಿರ್ವಹಣೆ. –**

(1) ರಾಜ್ಯದಲ್ಲಿ ಒಂದು ಸಂಯುಕ್ತ ಸಹಕಾರಿ ಇರತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಎಲ್ಲ ಸಹಕಾರಿಗಳು ಅಂಥ ಸಂಯುಕ್ತ ಸಹಕಾರಿಯ ಸದಸ್ಯರಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಐವತ್ತು ಸಹಕಾರಿಗಳ ನೋಂದಣಿಯ ತರುವಾಯ ರಿಜಿಸ್ಟ್ರಾರನು ಪ್ರಸ್ತಾವಿತ ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು ರೂಪಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿ ಹಾಗೂ ಅದರ ಉಪವಿಧಿಗಳ ನೋಂದಣಿಗೆ ಕ್ರಮ ಕೈಗೊಳ್ಳತಕ್ಕದ್ದು:

ಪರಂತು, ಮೊದಲನೆಯ ಮಂಡಲಿಯು ಅಧಿಕಾರವನ್ನು ಸ್ವೀಕರಿಸುವವರೆಗೆ ರಿಜಿಸ್ಟ್ರಾರನು ಈ ಅಧಿನಿಯಮದ ಅಡಿಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರವನ್ನು ಚಲಾಯಿಸತಕ್ಕದ್ದು ಹಾಗೂ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸಂಯುಕ್ತ ಸಹಕಾರಿಯು ನೋಂದಾಯಿತವಾದಲ್ಲಿ ರಿಜಿಸ್ಟ್ರಾರನು ತಾನು ಸಹಿ ಮಾಡಿದ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಹಾಗೂ ಅದು ಸಂಯುಕ್ತ ಸಹಕಾರಿಯು ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ನೋಂದಾಯಿತವಾಗಿರುವ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಸಂಯುಕ್ತ ಸಹಕಾರಿಯು, ಸ್ವತ್ತನ್ನು ಧಾರಣ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ, ದಾವೆಗಳನ್ನು ಹಾಗೂ ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಹಾಗೂ ಪ್ರತಿವಾದಿಸುವ ಹಾಗೂ ಅದು ರಚಿತವಾದ ಉದ್ದೇಶಗಳಿಗೆ ಅಗತ್ಯವಿರುವ ಎಲ್ಲ ಕಾರ್ಯಗಳನ್ನು ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

(5) ಸಂಯುಕ್ತ ಸಹಕಾರಿಯು, ಅದು ನೋಂದಾಯಿತವಾದೊಡನೆಯೇ, ರಿಜಿಸ್ಟ್ರಾರನು ರಚಿಸಿದ ಉಪವಿಧಿಗಳನ್ನು ಅಳವಡಿಸಿಕೊಳ್ಳತಕ್ಕದ್ದು. ಉಪವಿಧಿಗಳ ಯಾವುವೇ ತಿದ್ದುಪಡಿಗಳು, 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಇರತಕ್ಕದ್ದು ಹಾಗೂ ಉಪವಿಧಿಗಳ ಅಂಥ ತಿದ್ದುಪಡಿಯು, ಅದನ್ನು [1][ರಿಜಿಸ್ಟ್ರಾರನು ಅನುಮೋದಿಸಿದ] ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು.

---

1. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.

[1][(6) *****]

(7) ಸಂಯುಕ್ತ ಸಹಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ–

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳಿವಳಿಕೆ ನೀಡುವುದು ಮತ್ತು ಸಹಕಾರ ತತ್ತ್ವಗಳನ್ನು ಪ್ರಚಾರ ಮಾಡುವುದು;

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;

[2][(ಇ) *****]

(ಎಫ್) ಅಗತ್ಯವಿರುವಾಗ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;

(ಎಂ) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

1. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2005ರ ಕಾಯ್ದೆ 16ರಡಿ ಕೈಬಿಡಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿದೆ.

(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು;

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು;

(ಕ್ಯೂ) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

(ಎಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

[1][(ಟಿ) *****]

[2][(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು:

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.]

[3][(8) ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ 23ನೇ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.]

[4][(9)] ಸಂಯುಕ್ತ ಸಹಕಾರಿಯಲ್ಲಿ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸಲು ನಿರ್ಣಯದ ಮೂಲಕ ಸಹಕಾರಿ ಮಂಡಲಿಯು ಚುನಾಯಿತ ನಿರ್ದೇಶಕನನ್ನು ನಾಮನಿರ್ದೇಶನ ಮಾಡಬಹುದು. ಅಂಥ ನಾಮನಿರ್ದೇಶಿತ ನಿರ್ದೇಶಕನು ಸಂಯುಕ್ತ ಸಹಕಾರಿಯಲ್ಲಿ ಅಂಥ ನಿರ್ಣಯದೊಂದಿಗೆ ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು.

[5][**53ಎ ಸಂಯುಕ್ತ ಸಹಕಾರಿಯ ಉಪವಿಧಿಗಳು,–** (1) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಸಂಯುಕ್ತ ಸಹಕಾರಿಯು ಅದರ

1. 2013ರ ಕಾಯ್ದೆ 4ರಡಿ ಕೈಬಿಡಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
3. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
4. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ..
5. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಉಪವಿಧಿಗಳಿಗೆ ಅನುಸಾರವಾಗಿ ಪ್ರಕಾರ್ಯ ನಿರ್ವಹಿಸತಕ್ಕದ್ದು. ಈ ಉಪವಿಧಿಗಳು ಸಾಧ್ಯವಿರುವಷ್ಟರಮಟ್ಟಿಗೆ ಸಹಕಾರಿ ತತ್ವಗಳಿಗೆ ಅನುಗುಣವಾಗಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಉಪವಿಧಿಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

(i) ಸಂಯುಕ್ತ ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

(ii) ಸಂಯುಕ್ತ ಸಹಕಾರಿಯ ಉದ್ದೇಶಗಳು ಮತ್ತು ಪ್ರಕಾರ್ಯಗಳು;

(iii) ಸದಸ್ಯತ್ವದ ಸೇರ್ಪಡೆಯ ಮತ್ತು ಮುಕ್ತಾಯಗೊಳಿಸುವ ವಿಧಾನಗಳು;

(iv) ನಾಮಮಾತ್ರ ಸದಸ್ಯರೂ ಸೇರಿದಂತೆ ಸದಸ್ಯರ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು;

(v) ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು;

(vi) ಮುಖ್ಯಕಾರ್ಯನಿರ್ವಾಹಕನ ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(vii) ಮಂಡಲಿಯ ಸಭೆಗಳನ್ನು ನಡೆಸುವ ವಿಧಾನ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

(viii) ಮಂಡಲಿಯ ರಚನೆ, ಹಾಗೂ ಮಂಡಲಿಯ ಮತ್ತು ಪದಾಧಿಕಾರಿಗಳ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ix) ಮತ ನೀಡುವ ಮತ್ತು ಚುನಾವಣೆಗಳಿಗೆ ಸ್ಪರ್ಧಿಸುವ ಹಕ್ಕೂ ಸೇರಿದಂತೆ ಮಂಡಲಿಯ ನಿರ್ದೇಶಕರ ಹಕ್ಕುಗಳು;

(x) ಮಂಡಲಿಯ ಸದಸ್ಯರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅರ್ಹತೆಗಳು ಮತ್ತು ಅನರ್ಹತೆಗಳು;

(xi) ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xii) ಸಾಮಾನ್ಯ ಸಭೆಗಳನ್ನು ನಡೆಸುವ ವಿಧಾನ ಮತ್ತು ಅಂತರ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

(xiii) ಸದಸ್ಯನಿಂದ ಸಂಯುಕ್ತ ಸಹಕಾರಿಗೆ ಬಾಕಿ ಇರುವ ಯಾವುದೇ ಮೊತ್ತ ಸಂದಾಯ ಮಾಡುವುದಕ್ಕೆ ತಪ್ಪಿದರೆ ಆಗುವ ಪರಿಣಾಮಗಳು;

(xiv) ನಿಧಿಗಳನ್ನು ಸಂಗ್ರಹಿಸುವ ವ್ಯಾಪ್ತಿ ಮತ್ತು ನಿಬಂಧನೆ ;

(xv) ಸದಸ್ಯರಿಂದ ವಂತಿಗೆ ಸಂಗ್ರಹಿಸುವ ವಿಧಾನ ಮತ್ತು ಪ್ರಮಾಣ;

(xvi) ನಿಧಿಗಳನ್ನು ಬಳಸಬಹುದಾದ ಉದ್ದೇಶಗಳು;

(xvii) ವಿವಿಧ ನಿಧಿಗಳ ರಚನೆ ಮತ್ತು ಅವುಗಳ ಉದ್ದೇಶಗಳು;

(xviii) ಲೆಕ್ಕಪರಿಶೋಧಕರ ನೇಮಕಾತಿ ವಿಧಾನ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xix) ಅಧ್ಯಕ್ಷ ಅಥವಾ ಸಭಾಪತಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xx) ನಿರ್ದೇಶಕರ ಮತ್ತು ಪದಾಧಿಕಾರಿಗಳ ಪ್ರಯಾಣ ಭತ್ಯೆ, ದಿನಭತ್ಯೆ, ಸಭಾಭತ್ಯೆ ಮತ್ತಿತರ ಭತ್ಯೆಗಳು;

(xxi) ಸಹಕಾರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ವಿಧಾನಗಳು;

(xxii) ಉಪಸಮಿತಿಗಳ ರಚನೆ, ಅವುಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳು;

(xxiii) ಉಪವಿಧಿಗಳ ತಿದ್ದುಪಡಿ ವಿಧಾನ;

(xxiv) ಮಂಡಲಿಯ ಮತ್ತು ಪದಾಧಿಕಾರಿಗಳ ಪದಾವಧಿ; ಮತ್ತು

(xxv) ಉಪವಿಧಿಯಲ್ಲಿ ಉಪಬಂಧ ಕಲ್ಪಿಸುವ ಅಗತ್ಯವಿರುವ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯಗಳು.]

[1][**53ಬಿ. ನಿರ್ದೇಶಕರುಗಳ ಅನರ್ಹತೆ** .– ಸಂಯುಕ್ತ ಸಹಕಾರಿಯು ಅಧಿನಿಯಮ, ನಿಯಮ ಅನುಸಾರವಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಸೂಕ್ತ ವಿಚಾರಣೆಯ ನಂತರ ಅಂಥ ವಿಫಲತೆಗೆ ಕಾರಣರಾದವರಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡಿದ ತರುವಾಯ ರಿಜಿಸ್ಟ್ರಾರನು ಅವರನ್ನು ಅನರ್ಹಗೊಳಿಸತಕ್ಕದ್ದು:

ಪರಂತು, ಶೂನ್ಯಾವಸ್ಥೆವುಂಟಾದಲ್ಲಿ ಅಧಿನಿಯಮದ 38ಎ ಪ್ರ ಕರಣವನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.]

**54. ಸಂಯುಕ್ತ ಸಹಕಾರಿಯ ಮಂಡಲಿ.–**

[2][(1) ಮಂಡಲಿಯು ಸಂಯುಕ್ತ ಸಹಕಾರಿಯ ವ್ಯವಹಾರ ನಿರ್ವಹಣೆಯ ನಿರ್ದೇಶನ ಮತ್ತು ನಿಯಂತ್ರಣದ ಹೊಣೆ ಹೊಂದಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಮಂಡಲಿಯಲ್ಲಿ ನಿರ್ದೇಶಕರ ಸಂಖ್ಯೆಯು ಮುಖ್ಯ ಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಇಪ್ಪತ್ತೊಂದಕ್ಕೆ ಮೀರತಕ್ಕದ್ದಲ್ಲ:

ಪರಂತು, ಸಹಕಾರಿಯು ಬ್ಯಾಂಕಿಂಗ್ ವ್ಯವಸ್ಥಾಪನೆ, ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಂಯುಕ್ತ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ;

---

1. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
2. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಮೇಲೆ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತೂ ಪರಂತು, ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರೂ (Functional Directors) ಸಹ ಆಡಳಿತ ಮಂಡಲಿಯ ಸದಸ್ಯರಾಗಿರತಕ್ಕದ್ದು ಹಾಗೂ ಮೇಲೆ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಸದಸ್ಯರನ್ನು ಹೊರತುಪಡಿಸತಕ್ಕದ್ದು.]

(3) ಸಂಯುಕ್ತ ಸಹಕಾರಿಯ ಮಂಡಲಿಯ ಪದಾವಧಿಯು [1][ಚುನಾವಣೆ ನಡೆದ] ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯ ಪದನಿಮಿತ್ತ ನಿರ್ದೇಶಕ–ನಾಗಿರತಕ್ಕದ್ದು ಹಾಗೂ ಪದಾಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**55. ಚುನಾಯಿತನಾಗಲು ಅಥವಾ ನಿರ್ದೇಶಕನಾಗಿ ಮುಂದುವರಿಯಲು ಅನರ್ಹತೆ.–**

(1) ಒಬ್ಬ ವ್ಯಕ್ತಿಯು,–

(i) ಯಾವುದೇ ಸಮಯದಲ್ಲಿ ಸದಸ್ಯನಾಗಿ ಮತದಾನ ಮಾಡುವ ಅಥವಾ ಸದಸ್ಯನಾಗಿ ಮುಂದುವರಿಯುವ ಹಕ್ಕು ಕಳೆದುಕೊಂಡಿದ್ದರೆ; ಅಥವಾ

(ii) ಚುನಾವಣೆಯ ನಿಕಟಪೂರ್ವದ ಕನಿಷ್ಠ ಎರಡು ವರ್ಷಗಳ ಅವಧಿಯವರೆಗೆ ಸಂಯುಕ್ತ ಸಹಕಾರಿಯ ಮತದಾರ ಸದಸ್ಯನಾಗಿರದಿದ್ದರೆ; ಅಥವಾ

(iii) ಸಂಯುಕ್ತ ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅನರ್ಹತೆಯನ್ನು ಹೊಂದಿದ್ದರೆ; ಅಥವಾ

(iv) ಮಂಡಲಿಯ ಅಥವಾ ಸಾಮಾನ್ಯ ಸಭೆಯ ಮೂರು ನಿರಂತರ ಸಭೆಗಳಿಗೆ ಅನಧಿಕೃತವಾಗಿ ಗೈರುಹಾಜರಾದರೆ; ಅಥವಾ

[2][(v) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧ:ಪತನವನ್ನೊಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದರೆ.]

–ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರಿಯಲು ಅನರ್ಹನಾಗಿರತಕ್ಕದ್ದು.

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2004ರ ಕಾಯ್ದೆ 21ರಡಿ ಬದಲಾಯಿಸಲ್ಪಟ್ಟು 31 ಮಾರ್ಚ್ 2004 ರಿಂದ ಜಾರಿಗೆ ಬಂದಿದೆ.

[1][(2) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅನರ್ಹತೆಗಳ ಜೊತೆಗೆ ನಿರ್ದೇಶಕರು, ಸಂಯುಕ್ತ ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ನಿರ್ದೇಶಕರಾಗಿ ತಮ್ಮ ಪದಾವಧಿಯಲ್ಲಿ–

(ಎ) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾಗುವುದರೊಳಗಾಗಿ ಚುನಾವಣೆ ನಡೆಸಲು [2][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ಅಗತ್ಯ ನೆರವು ನೀಡದಿದ್ದರೆ;

(ಬಿ) ಪ್ರತಿವರ್ಷ ಸೆಪ್ಟೆಂಬರ್ ತಿಂಗಳಿನ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಅಥವಾ ನಿರ್ದಿಷ್ಟ ಸಮಯದೊಳಗಾಗಿ ಕೋರಲಾದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ;

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯೊಂದಿಗೆ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ;

(ಡಿ) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 64ಎ ಪ್ರಕರಣದಡಿ ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಯನ್ನು ಸಲ್ಲಿಸದಿದ್ದರೆ;

(ಇ) ಗುರುತರ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದರೆ;

–ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.]

[3][(3) ಮಂಡಳಿಯ ಸದಸ್ಯನು, ಈ ಅಧಿನಿಯಮದಲ್ಲಿ ನಮೂದಿಸಿದ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದನೇ ಅಥವಾ ಪಟ್ಟಿರುವನೇ ಎಂಬ ಪ್ರಶ್ನೆ ಉದ್ಭವಿಸಿದಲ್ಲಿ ರಿಜಿಸ್ಟ್ರಾರನು, ಸ್ವಪ್ರೇರಣೆಯಿಂದ ಅಥವಾ ತನಗೆ ಸಲ್ಲಿಸಿದ ವರದಿಯ ಮೇಲೆ, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು.]

[4][(4) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು (2) ನೇ ಉಪಪ್ರಕರಣದ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ) ರಲ್ಲಿನ ಯಾವುದೇ ಅನರ್ಹತೆಗೆ ಒಳಗಾದಾಗ, [5][****], ಯಥೋಚಿತ ವ್ಯತ್ಯಾಸಗಳೊಂದಿಗೆ, ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು.]

**56. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಸಂಯುಕ್ತ ಸಹಕಾರಿಯ ಮಂಡಲಿಯು ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಅಡಿ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ್ 2004 ರಿಂದ ಜಾರಿಗೆ ಬಂದಿದೆ.
4. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
5. 2014ರ ಕಾಯ್ದೆ 34ರಡಿ ಕೈಬಿಡಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ಸಂಯುಕ್ತ ಸಹಕಾರಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಎಲ್ಲ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಮತ್ತು,–

(ಎ) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಮತ್ತು ಇತರ ಪದಾಧಿಕಾರಿಗಳನ್ನು [1][ಚುನಾವಣೆ ನಡೆಸಲು [2][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ತಿಳಿಸುವುದಕ್ಕೆ];

(ಬಿ) ಅಧ್ಯಕ್ಷ ಅಥವಾ ಸಭಾಪತಿ, ಅಥವಾ ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಮತ್ತು ಇತರ ಪದಾಧಿಕಾರಿಗಳನ್ನು ತೆಗೆದುಹಾಕುವುದಕ್ಕೆ;

(ಸಿ) ಮುಖ್ಯ ಕಾರ್ಯನಿರ್ವಾಹಕವನ್ನು ನೇಮಕಮಾಡುವುದಕ್ಕೆ ಮತ್ತು ತೆಗೆದು ಹಾಕುವುದಕ್ಕೆ;

(ಡಿ) ಸಿಬ್ಬಂದಿ ಸಂಖ್ಯೆಯನ್ನು ನಿರ್ಧರಿಸುವುದಕ್ಕೆ;

(ಇ) ಸಂಸ್ಥೆಗೆ ಮತ್ತು ಸದಸ್ಯ ಸಹಕಾರಿಗಳಿಗೆ ನೀಡಲಾಗುವ ಸೇವೆಗಳಿಗೆ ಸಂಬಂಧಿಸಿದ ಕಾರ್ಯನೀತಿಗಳನ್ನು ರೂಪಿಸುವುದಕ್ಕೆ;

(ಎಫ್) (i) ನಿಧಿಗಳ ಅಭಿರಕ್ಷೆ ಮತ್ತು ಹೂಡಿಕೆ;

(ii) ಲೆಕ್ಕಪತ್ರ ನಿರ್ವಹಣೆ;

(iii) ವಿವಿಧ ನಿಧಿಗಳ ಸಂಗ್ರಹಣೆ, ಬಳಕೆ ಮತ್ತು ಹೂಡಿಕೆ;

(iv) ಸಲ್ಲಿಸಬೇಕಾದ ಶಾಸನಬದ್ಧ ವಿವರಪಟ್ಟಿಕೆಗಳೂ ಸೇರಿದಂತೆ ಮಾಹಿತಿ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ನಿರ್ವಹಣೆ; ಮತ್ತು

(v) ಸಂಯುಕ್ತ ಸಹಕಾರಿಯ ಪರಿಣಾಮಕಾರಿ ನಿರ್ವಹಣೆಗೆ ಅಗತ್ಯವಾದಂಥ ವಿಷಯಗಳು,

–ಇವುಗಳಿಗೆ ಸಂಬಂಸಿದಂತೆ ವಿನಿಮಯಗಳನ್ನು ರಚಿಸುವುದಕ್ಕೆ;

(ಜಿ) ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಆರ್ಥಿಕ ವಿವರಪಟ್ಟಿಕೆಗಳು ಮತ್ತು ವಾರ್ಷಿಕಯೋಜನೆ ಮತ್ತು ಬಜೆಟ್ಟನ್ನು ಮಂಡಿಸುವುದಕ್ಕೆ;

[3][(**ಜಿ**–1) ವಿಚಾರಣೆ ಏನಾದರೂ ನಡೆದಿದ್ದರೆ ವಿಚಾರಣಾ ವರದಿಯನ್ನು ಪರಿಶೀಲಿಸಿ ಅದರಲ್ಲಿ ಕಂಡುಬರಬಹುದಾದ ಲೋಪದೋಷಗಳನ್ನು ಸರಿಪಡಿಸಿಕೊಂಡು ಪಾಲನಾ ವರದಿಯ ಸಹಿತ ವಿಚಾರಣಾ ವರದಿಯನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸುವುದಕ್ಕೆ;

(**ಜಿ**–2) ವಾರ್ಷಿಕ ಆರ್ಥಿಕ ತ:ಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತಿತರ ತ:ಖ್ತೆಗಳನ್ನು ತಯಾರಿಸಿ ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ದಸ್ತಾವೇಜುಗಳನ್ನು ಸಹಕಾರಿ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಸಲ್ಲಿಸುವುದಕ್ಕೆ;

(ಜಿ–3) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು [1][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ನೀಡುವುದಕ್ಕೆ;

(ಜಿ–4) ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಪ್ರತಿವರ್ಷ ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸುವುದಕ್ಕೆ;]

(ಹೆಚ್) ಲೆಕ್ಕ ಪರಿಶೋಧನಾ ಮತ್ತು ಪಾಲನಾ ವರದಿಯನ್ನು ಪರಿಶೀಲಿಸಿ ಸಾಮಾನ್ಯ ನಿಕಾಯದ ಮುಂದೆ ಮಂಡಿಸುವುದಕ್ಕೆ; ಮತ್ತು

(ಐ) ಸಾಮಾನ್ಯ ನಿಕಾಯುವು ಪ್ರತ್ಯಾಯೋಜಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕೆ,

–ಅಧಿಕಾರ ಹೊಂದಿರತಕ್ಕದ್ದು,

**57. ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಅಧಿಕಾರಗಳ ಮತ್ತು ಪ್ರಕಾರ್ಯಗಳು. –**

(1) ಸಂಯುಕ್ತ ಸಹಕಾರಿಗೆ, ಮಂಡಲಿಯ ಚುನಾಯಿತ ಸದಸ್ಯರ ಪೈಕಿ ಚುನಾಯಿಸಲಾದ ಒಬ್ಬ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಇರತಕ್ಕದ್ದು.

(2) ಅಧ್ಯಕ್ಷ ಅಥವಾ ಸಭಾಪತಿಯು ಸಂಯುಕ್ತ ಸಹಕಾರಿಯ ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು. ಅಧ್ಯಕ್ಷ ಅಥವಾ ಸಭಾಪತಿಯ ಗೈರು ಹಾಜರಿಯಲ್ಲಿ, ಉಪಾಧ್ಯಕ್ಷ ಅಥವಾ ಉಪಸಭಾಪತಿಯು ಸಂಯುಕ್ತ ಸಹಕಾರಿಯ ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು. ಪದಾಧಿಕಾರಿಗಳ ಹುದ್ದೆಗೆ ನಡೆಸುವ ಚುನಾವಣೆಗಳ ಹೊರತಾಗಿ ಮಂಡಲಿಯು ನಿರ್ಣಯ ಕೈಗೊಳ್ಳುವ ಯಾವುದೇ ವಿಷಯದ ಬಗ್ಗೆ ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷ ಅಥವಾ ಸಭಾಪತಿಗೆ ನಿರ್ಣಾಯಕ ಮತ ಇರತಕ್ಕದ್ದು. ಅಧ್ಯಕ್ಷ ಅಥವಾ ಸಭಾಪತಿಯು ಮಂಡಲಿಯು ಪ್ರತ್ಯಾಯೋಜಿಸಬಹುದಾದಂಥ ಮತ್ತು ಮಂಡಲಿಯು ರಚಿಸಿದ ಕಾರ್ಯನೀತಿಗಳಲ್ಲಿ ಅಥವಾ ಅದು ಅಳವಡಿಸಿಕೊಂಡ ನಿರ್ಣಯಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

---

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

[1][(3) ಅಧ್ಯಕ್ಷ ಅಥವಾ ಸಭಾಪತಿ ಮತ್ತು ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣಾ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಅಂತಹ ಪದಾಧಿಕಾರಿಗಳ ಅವಧಿಯು ಆಡಳಿತ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು.]

[2][**57ಎ ಆಡಳಿತ ಮಂಡಲಿಯ ರದ್ಧತಿ ಅಥವಾ ಅಮಾನತ್ತು.**– ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ರದ್ಧತಿ ಅಥವಾ ಅಮಾನತ್ತಿಗೆ ಸಂಬಂಧಪಟ್ಟಂತೆ ಪ್ರಕರಣ 38ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು. ಸಹಕಾರಿಗಳ ರಿಜಿಸ್ಟ್ರಾರನು ಸಂಯುಕ್ತ ಸಹಕಾರಿಯ ವಿರುದ್ಧ ಕ್ರಮಕೈಗೊಳ್ಳಲು ಸಕ್ಷಮನಾಗಿರತಕ್ಕದ್ದು.]

[3][**58. ಚುನಾವಣೆಗಳು –**

(1) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಮತ್ತು ಪದಾಧಿಕಾರಿಗಳ ಪದಕ್ಕೆ ಚುನಾವಣೆ ನಡೆಸುವುದು [4][ಸಹಕಾರಿ ಚುನಾವಣಾ ಪ್ರಾಧಿಕಾರ]ದ ಜವಾಬ್ದಾರಿಯಾಗಿರತಕ್ಕದ್ದು.

(2) ನಿರ್ಗಮಿಸುತ್ತಿರುವ ಮಂಡಲಿಯ ಸದಸ್ಯರ ಪದಾವಧಿಯು ಮುಕ್ತಾಯದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ಪದಗ್ರಹಣ ಮಾಡಲು ಅನುವಾಗುವಂತೆ ನಿರ್ಗಮಿಸುತ್ತಿರುವ ಮಂಡಲಿಯ ಅವಧಿಯು ಕೊನೆಗೊಳ್ಳುವ ನಿಕಟಪೂರ್ವದಲ್ಲಿ ಹೊಸ ಮಂಡಲಿಯ ಸದಸ್ಯರ ಚುನಾವಣೆ ನಡೆಸತಕ್ಕದ್ದು.

(3) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ನಿರ್ದೇಶಕರು ಪದಗ್ರಹಣ ಮಾಡತಕ್ಕದು.

(4) [4][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ಸಂಬಂಧಿಸಿದಂತೆ 26ಎ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.]

[5][**59. ಅಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು.**– ಮರಣ, ರಾಜೀನಾಮೆ, ಅನರ್ಹತೆಯ ಕಾರಣದಿಂದ ಅಥವಾ ಇತರ ಯಾವುದೇ ಕಾರಣದಿಂದಾಗಿ ಆಡಳಿತ ಮಂಡಲಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆಡಳಿತ ಮಂಡಲಿಯ ಸಭೆಯನ್ನು ನಡೆಸಲು ಕೋರಂ ಇದ್ದಲ್ಲಿ, ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
3. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
4. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
5. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮಕರಣ ಮಾಡುವ ಮೂಲಕ ಭರ್ತಿಮಾಡಿಕೊಳ್ಳಬಹುದು:

ಪರಂತು ಮಂಡಲಿಯ ಅವಧಿಯು ಮೂಲ ಪಧಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ ಆಕಸ್ಮಿಕ ರಿಕ್ತತೆಯನ್ನು ಸಹಮತದಿಂದ ಭರ್ತಿ ಮಾಡಬಹುದು.]

**60. ಸಭೆಗಳು.–**

(1) ಮಂಡಲಿಯ ಸಭೆಗಳ ಮತ್ತು ಸಾಮಾನ್ಯ ಸಭೆಗಳ ಸಂಖ್ಯೆಯನ್ನು ಸಂಯುಕ್ತ–ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸತಕ್ಕದ್ದು:

[1][ಪರಂತು ಒಂದು ಸಹಕಾರ ವರ್ಷದಲ್ಲಿ ಮಂಡಲಿಯ ಆರು ಸಭೆಗಳಿಗಿಂತ ಮತ್ತು ಒಂದು ಸಾಮಾನ್ಯ ಸಭೆಗಿಂತ ಕಡಿಮೆ ಸಭೆಗಳನ್ನು ನಡೆಸತಕ್ಕದ್ದಲ್ಲ. ಮತ್ತು ಪರಂತು, ವಾರ್ಷಿಕ ಸಾಮಾನ್ಯ ಸಭೆಯನ್ನು ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೈದರೊಳಗಾಗಿ ನಡೆಸತಕ್ಕದ್ದು.]

(2) ಮಂಡಲಿಯು, [2][ತನ್ನ ಅಗತ್ಯಕ್ಕೆ ತಕ್ಕಂತೆ ಯಾವಾಗ ಬೇಕಾದರೂ ಸಂಯುಕ್ತ ಸಹಕಾರಿಯು ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು, ಆದರೆ] ಸಂಯುಕ್ತ ಸಹಕಾರಿಯ ಸದಸ್ಯರ ಪೈಕಿ ಹತ್ತನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಸದಸ್ಯರು ವಿಶೇಷ ಸಾಮಾನ್ಯ ಸಭೆ ನಡೆಸುವಂತೆ ಸಲ್ಲಿಸಿದ ಕೋರಿಕೆ ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಅಥವಾ ಉಪವಿಧಿಗಳಲ್ಲಿ ಉಪಬಂಧಿಸಲಾದಂತೆ ಒಂದು ವಿಶೇಷ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು ಮತ್ತು ಅಂಥ ಯಾವುದೇ ಕೋರಿಕೆಯಲ್ಲಿ ಹಾಗೆ ಸಭೆ ನಡೆಸುವುದಕ್ಕೆ ಕಾರಣಗಳನ್ನು ತಿಳಿಸಿರತಕ್ಕದ್ದು.

(3) ಹಾಗೆ ಸಭೆಯನ್ನು ಕರೆಯಲು ಸಂಯುಕ್ತ ಸಹಕಾರಿಯು ತಪ್ಪಿದ ಸಂದರ್ಭದಲ್ಲಿ ರಿಜಿಸ್ಟ್ರಾರನು ಸಂಯುಕ್ತ ಸಹಕಾರಿಯ ಸದಸ್ಯರ ಪೈಕಿ ಹತ್ತನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದ ಸದಸ್ಯರು ತನಗೆ ಸಲ್ಲಿಸಿದ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂಥ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು.

[3][(3ಎ) ಯಾವುದೇ ಸಾಮಾನ್ಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿಗದಿಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತ ನೀಡುವ ಹಕ್ಕುಳ್ಳ ಸದಸ್ಯರ ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
3. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.

(3ಬಿ) ಯಾವುದೇ ಆಡಳಿತ ಮಂಡಲಿಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಮಂಡಲಿಯ ಒಟ್ಟು ಸದಸ್ಯರ ಶೇಕಡಾ ಐವತ್ತರ ನಂತರದ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಮಂಡಲಿಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪ ನಡೆಸತಕ್ಕದ್ದಲ್ಲ.]

(4) ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಂಯುಕ್ತ ಸಹಕಾರಿಯ ಪ್ರತಿಯೊಂದು ಸಾಮಾನ್ಯ ಸಭೆ ಮತ್ತು ಪ್ರತಿಯೊಂದು ಮಂಡಳಿಯ ಸಭೆಯ ಎಲ್ಲ ವ್ಯವಹರಣೆಗಳ ನಡವಳಿಗಳನ್ನು ನಡವಳಿಗಳ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು.

(5) ಅಂಥ ನಡವಳಿಗಳನ್ನು ಸಭೆಯು ಮುಕ್ತಾಯಗೊಂಡ ಮೂವತ್ತು ದಿನಗಳೊಳಗಾಗಿ ಸಭೆಗೆ ಆಹ್ವಾನಿಸಲಾದ ಎಲ್ಲ ವ್ಯಕ್ತಿಗಳಿಗೂ ತಲುಪಿಸಕ್ಕದ್ದು.

(6) ಹಾಗೆ ದಾಖಲು ಮಾಡಲಾದ ನಡವಳಿಗಳಿಗೆ ಸದರಿ ಸಭೆಯ ಅಧ್ಯಕ್ಷತೆ ವಹಿಸಿದ್ದ ವ್ಯಕ್ತಿಯು ಸಹಿ ಮಾಡತಕ್ಕದ್ದು.

**61. ಸಂಯುಕ್ತ ಸಹಕಾರಿಯ ನೌಕರರು.–**

(1) ಸಂಯುಕ್ತ ಸಹಕಾರಿಯ ಮಂಡಲಿಯು ಸಿಬ್ಬಂದಿಯ ಸಂಖ್ಯಾಬಲವನ್ನು ಮತ್ತು ಅದರ ನೌಕರರ ವೇತನ ಶ್ರೇಣಿಯನ್ನು ನಿರ್ಧರಿಸತಕ್ಕದ್ದು:

ಪರಂತು ಸಂಯುಕ್ತ ಸಹಕಾರಿಯು ಸಾಮಾನ್ಯ ಸಭೆಯು ಅನುಮೋದಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಇತರ ಸಹಕಾರಿಗಳ, ಸಹಕಾರ ಸಂಘಗಳ, ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಥವಾ ಅವುಗಳ ಸಂಸ್ಥೆಗಳ, ಸಾರ್ವಜನಿಕ ವಲಯ ಉದ್ದಿಮೆಗಳ ನೌಕರರ ಮತ್ತು ಅಂಥ ಇತರ ವೃತ್ತಿನಿರತ ತಜ್ಞರ ಸೇವೆಗಳನ್ನು ಎರವಲು ಪಡೆದುಕೊಳ್ಳಬಹುದು:

ಮತ್ತೂ ಪರಂತು ಮೊದಲ ಮುಖ್ಯ ಕಾರ್ಯನಿರ್ವಾಹಕನನ್ನು ರಿಜಿಸ್ಟ್ರಾರನು ನೇಮಕ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕನು ಉಪವಿಧಿಗಳ ಅನುಸಾರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು–

(ಎ) ಸಂಯುಕ್ತ ಸಹಕಾರಿಯ ದೈನಂದಿನ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

(ಬಿ) ಸಹಕಾರಿಯ ಪರವಾಗಿ ದಾವೆ ಹೂಡುವ ಮತ್ತು ಸಹಕಾರಿಯ ಪರವಾಗಿ ದಾವೆಗೆ ಗುರಿಯಾಗುವ ವ್ಯಕ್ತಿಯಾಗಿರತಕ್ಕದ್ದು;

(ಸಿ) ಚೆಕ್ಕುಗಳಿಗೆ ಮತ್ತು ಇತರ ವರ್ಗಾವಣೀಯ ಪತ್ರಗಳಿಗೆ ಹಿಂಬರಹ

ಮಾಡಲು ಸಹಿ ಮಾಡಲು ಅವುಗಳನ್ನು ವರ್ಗಾಯಿಸಲು ಮತ್ತು ಸಂಯುಕ್ತ ಸಹಕಾರಿಯ ಬ್ಯಾಂಕ್ ಲೆಕ್ಕಗಳನ್ನು ಪ್ರವರ್ತಿಸಲು ಸಂಯುಕ್ತ ಸಹಕಾರಿಯ ಪರವಾಗಿ ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಡಿ) ನೌಕರರ ನೇಮಕಾತಿಗೆ ಹಾಗೂ ನೌಕರರ ಶಿಸ್ತು, ಕಾರ್ಯನಿರ್ವಹಣೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಜವಾಬ್ದಾರನಾಗಿರತಕ್ಕದ್ದು;

(ಇ) ಸಂಯುಕ್ತ ಸಹಕಾರಿಯ ಪರವಾಗಿ ಒಪ್ಪಂದ ಅಥವಾ ಕರಾರು ಮಾಡಿಕೊಳ್ಳುವ ವ್ಯಕ್ತಿಯಾಗಿರತಕ್ಕದ್ದು;

(ಎಫ್) ಸಂಯುಕ್ತ ಸಹಕಾರಿಯ ದಾಖಲೆ ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವ ವ್ಯವಸ್ಥೆ ಮಾಡತಕ್ಕದ್ದು;

(ಜಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಮಂಡಲಿಯ ಅನುಮೋದನೆಗಾಗಿ ಕರಡುವಾರ್ಷಿಕ ವರದಿ ಮತ್ತು ಆರ್ಥಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು;

(ಹೆಚ್)ಅಧ್ಯಕ್ಷ ಅಥವಾ ಸಭಾಪತಿಯೊಂದಿಗೆ ಸಮಾಲೋಚನೆ ನಡೆಸಿ, ಉಪವಿಧಿಗಳ ಅನುಸಾರ ಮಂಡಲಿಗಳ ಸಭೆಗಳನ್ನು ಮತ್ತು ಸಾಮಾನ್ಯ ನಿಕಾಯದ ಸಭೆಗಳನ್ನು ನಡೆಸತಕ್ಕದ್ದು ಮತ್ತೆ ಅದರ ವ್ಯವಹರಣೆಗಳನ್ನು ದಾಖಲು ಮಾಡತಕ್ಕದ್ದು;

(ಐ) ಕಾರ್ಯನೀತಿಗಳು ಮತ್ತು ಯೋಜನೆಗಳನ್ನು ರೂಪಿಸುವುದಕ್ಕೆ ಮಂಡಲಿಗೆ ಸಹಾಯ ಮಾಡತಕ್ಕದ್ದು;

(ಜೆ) ಮಂಡಲಿಗೆ ಜವಾಬ್ದಾರನಾಗಿರತಕ್ಕದ್ದು;

(ಕೆ) ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೆ ಅಗತ್ಯವಾದ ಮಾಹಿತಿಯನ್ನು ಮಂಡಲಿಗೆ ಒದಗಿಸತಕ್ಕದ್ದು;

[1][(ಎಲ್) ಸಂಯುಕ್ತ ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತ:ಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತು ಇತರೆ ತ:ಖ್ತೆಗಳನ್ನು ತಯಾರಿಸಿ ಮಂಡಲಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು;

(ಎಲ್-1) ಲೆಕ್ಕಪರಿಶೋಧನಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

(ಎಲ್–2) ವಿಚಾರಣಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳು ಏನಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಎಲ್–3) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು [1][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ನೀಡತಕ್ಕದ್ದು;

(ಎಲ್–4) ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು;]

[2][(ಎಲ್–5) ಸದಸ್ಯ ಸಹಕಾರಿಯ ರಚನೆ ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಆರ್ಥಿಕ ಸ್ಥಿತಿಗತಿಯ ಕುರಿತಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಸ್ವಂಪ್ರೇರಿತವಾಗಿ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣೆಯನ್ನು ನಡೆಸುವಂತೆ ಮಾಡಬಹುದು;]] ಮತ್ತು

(ಎಂ) ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರ ಯಾವುದೇ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು.

**62. ಸಂಯುಕ್ತ ಸಹಕಾರಿಯ ನಿಧಿಗಳು –**

(1) ಸಂಯುಕ್ತ ಸಹಕಾರಿಯು **"**ಸಂಯುಕ್ತ ಸಹಕಾರಿ ನಿಧಿ**"** ಎಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು.

(2) ಸಂಯುಕ್ತ ಸಹಕಾರಿ ನಿಧಿಯು,–

(i) ಸಂಯುಕ್ತ ಸಹಕಾರಿಯು ಸರ್ಕಾರಕ್ಕೆ ಹತ್ತು ವರ್ಷಗಳ ಅವಧಿಯೊಳಗೆ ಮರು ಸಂದಾಯ ಮಾಡತಕ್ಕ, ಸರ್ಕಾರವು ನೀಡಿದ ಹತ್ತು ಲಕ್ಷ ರೂಪಾಯಿಗಳ ಬಡ್ಡಿ ರಹಿತ ಪ್ರಾರಂಭಿಕ ಸಾಲವನ್ನು; ಮತ್ತು

(ii) [3][ಪ್ರತಿ ಸಹಕಾರ ವರ್ಷವೂ] ಸಂಯುಕ್ತ ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದಂಥ ದರಗಳಲ್ಲಿ ಪ್ರತಿಯೊಂದು ಸದಸ್ಯ ಸಹಕಾರಿಯು ನೀಡಿದ ವಂತಿಗೆಯನ್ನು,

–ಹೊಂದಿರತಕ್ಕದ್ದು.

(3) ಸಂಯುಕ್ತ ಸಹಕಾರಿಯು ಸಹಕಾರಿ ಶಿಕ್ಷಣ ನಿಧಿಯೊಂದನ್ನು ಸಹ ನಿರ್ವಹಿಸತಕ್ಕದ್ದು.

---

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
2. 2021ರ ಕಾಯ್ದೆ 35ರಡಿ ಸೇರಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.
3. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

(4) ಯಾವುದೇ ಸದಸ್ಯ ಸಹಕಾರಿಯು ಸಂಯುಕ್ತ ಸಹಕಾರಿಗೆ ವಂತಿಗೆ ನೀಡಲು ತಪ್ಪಿದರೆ, 68ನೇ ಪ್ರಕರಣದ ಅಡಿ ಅಂಥ ಸದಸ್ಯ ಸಹಕಾರಿಯು ಬದ್ಧವಾಗಿರುವಂಥ ಯಾವುದೇ ಕ್ರಮಕ್ಕೆ ಪ್ರತಿಕೂಲವಾಗದಂತೆ, ಅಂಥ ಸಹಕಾರಿಯು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದ ಸಭೆಯಲ್ಲಿನ ಯಾವುದೇ ಹುದ್ದೆಗೆ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

[1][**62ಎ ಸಹಕಾರ ಶಿಕ್ಷಣ ಮತ್ತು ತರಬೇತಿ.–** (1) ಪ್ರಕರಣದ 10 ರ (2) ನೇ ಉಪಪ್ರಕರಣದ ಖಂಡ (xxi) ರಡಿ ರಚಿತವಾದ ಸಹಕಾರ ಶಿಕ್ಷಣ ನಿಧಿಯನ್ನು ರಾಜ್ಯದಲ್ಲಿರುವ ಸಹಕಾರ ಚಳುವಳಿಯ ಪ್ರೋತ್ಸಾಹನಕ್ಕಾಗಿ ಹಾಗೂ ಸಹಕಾರಿಗಳ ಸದಸ್ಯರಿಗೆ, ನಿರ್ದೇಶಕರಿಗೆ ಮತ್ತು ಸಾರ್ವಜನಿಕರಿಗೆ ಸಹಕಾರ ಶಿಕ್ಷಣ ನೀಡಲು ಮತ್ತು ಸಹಕಾರಿಗಳ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲು ಉಪಯೋಗಿಸತಕ್ಕದ್ದು.

(**2**) ಪ್ರತಿ ಸಹಕಾರಿಯು ತನ್ನ ಶಿಕ್ಷಣನಿಧಿ ವಂತಿಗೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು.

(3) ಸಂಯುಕ್ತ ಸಹಕಾರಿಯು ಸಹಕಾರಿಗಳು ಸಂದಾಯ ಮಾಡಿದ ವಂತಿಗೆಗಳನ್ನು ಹಾಗೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಸ್ವೀಕೃತವಾದ ದಾನಗಳನ್ನು ಸಹಕಾರ ಶಿಕ್ಷಣ ನಿಧಿಗೆ ಜಮಾ ಮಾಡತಕ್ಕದ್ದು.

(4) ಪ್ರತಿ ಸಹಕಾರಿಯು ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕದಿಂದ ಮೂವತ್ತು ದಿನದೊಳಗೆ ಶಿಕ್ಷಣನಿಧಿ ವಂತಿಗೆಯನ್ನು ಸಂಯುಕ್ತ ಸಹಕಾರಿಗೆ ಜಮಾ ಮಾಡತಕ್ಕದ್ದು.

(5) ಸಹಕಾರ ಶಿಕ್ಷಣ ನಿಧಿಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಆಡಳಿತದಲ್ಲಿದ್ದು ಅದರಿಂದ ನಿರ್ವಹಿಸಲ್ಪಡತಕ್ಕದ್ದು ಹಾಗೂ ಸದರಿ ನಿಧಿಯ ನಿರ್ವಹಣೆಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಆ ಉದ್ದೇಶಕ್ಕಾಗಿ ನಿಯಮಿಸಲಾದಂತೆ ರಚಿಸಲಾದ ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಸಹಕಾರ ಶಿಕ್ಷಣ ನಿಧಿಯಿಂದ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ.]

**63. ಲೆಕ್ಕಪತ್ರಗಳು.–** ಸಂಯುಕ್ತ ಸಹಕಾರಿಯು ಈ ಮುಂದಿನ ದಾಖಲೆಗಳನ್ನು ಮತ್ತು ಲೆಕ್ಕಪುಸ್ತಕಗಳನ್ನು ನಿರ್ವಹಿಸತಕ್ಕದ್ದು, ಎಂದರೆ–

(ಎ) ನಡವಳಿ ಪುಸ್ತಕಗಳು;

(ಬಿ) ನೋಂದಣಿ ಪ್ರಮಾಣ ಪತ್ರ ಮತ್ತು ನೋಂದಾಯಿತ ಉಪವಿಧಿಗಳು ಮತ್ತು ಕಾಲಕಾಲಕ್ಕೆ ನೋಂದಣಿ ಮಾಡಿದ ತಿದ್ದುಪಡಿಗಳ ಒಂದು ಪ್ರತಿ;

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

(ಸಿ) ಇಂದಿನವರೆಗಿನ ತಿದ್ದುಪಡಿಗಳೊಂದಿಗೆ ಸಂಯುಕ್ತ ಸಹಕಾರಿಯ ಮತ್ತು ಅದರ ಪ್ರತಿಯೊಂದು ಸದಸ್ಯ ಸಹಕಾರಿಯ ಉಪವಿಧಿಗಳು;

(ಡಿ) ಸಂಯುಕ್ತ ಸಹಕಾರಿಯು ಸ್ವೀಕರಿಸಿದ ಮತ್ತು ಖರ್ಚು ಮಾಡಿದ ಎಲ್ಲ ಹಣದ ಲೆಕ್ಕ ಮತ್ತು ಆಯಾ ಉದ್ದೇಶಗಳು;

(ಇ) ಸಂಯುಕ್ತ ಸಹಕಾರಿಯು ಮಾಡಿದ ಸರಕುಗಳ ಎಲ್ಲ ಖರೀದಿ ಮತ್ತು ಮಾರಾಟಗಳ ಲೆಕ್ಕಗಳು;

(ಎಫ್) ಸದಸ್ಯ ಸಹಕಾರಿಗಳ ಮತ್ತು ಸಂಯುಕ್ತ ಸಹಕಾರಿಯ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ಲೆಕ್ಕ;

(ಜಿ) ಒಟ್ಟು ಸದಸ್ಯತ್ವವನ್ನು ಮತ್ತು ವಿವಿಧ ಸೇವೆಗಳ ಸದಸ್ಯವಾರು ಬಳಕೆಯನ್ನು ತೋರಿಸುವ ರಿಜಿಸ್ಟರು;

(ಹೆಚ್) [1][ಸಹಕಾರ ವರ್ಷ ಮುಕ್ತಾಯವಾದ] ಮೂವತ್ತು ದಿನಗಳೊಳಗಾಗಿ ಪ್ರಸಕ್ತ ವರ್ಷದ ಮತದಾನದ ಹಕ್ಕುಳ್ಳ ಸದಸ್ಯರ ಇಂದಿನವರೆಗಿನ ಪಟ್ಟಿ;

(ಐ) ಮಂಡಲಿಯ ಇಂದಿನವರೆಗಿನ ನಿರ್ಣಯದ ಪ್ರತಿಗಳು; ಮತ್ತು

(ಜೆ) ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

[2][**63ಎ. ಸದಸ್ಯರಿಗೆ ಮಾಹಿತಿ ಒದಗಿಸುವುದು.**– ಸಂಯುಕ್ತ ಸಹಕಾರಿಯು ಪ್ರತಿ ಸದಸ್ಯನು ತನಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಲೆಕ್ಕಪುಸ್ತಕಗಳನ್ನು ನೋಡಲು ಹಾಗೂ ತತ್ಸಂಬಂಧದ ಮಾಹಿತಿ ಮತ್ತು ಲೆಕ್ಕಗಳನ್ನು ಪಡೆಯಲು ಅವನಿಗೆ ಅವಕಾಶ ನೀಡತಕ್ಕದ್ದು.]

[3][**64.** [4][**ಸಂಯುಕ್ತ ಸಹಕಾರಿಯ ಲೆಕ್ಕ ಪರಿಶೋಧನೆ**]. (1) ಸಂಯುಕ್ತ ಸಹಕಾರಿಯು ತನ್ನ ಲೆಕ್ಕಪತ್ರಗಳನ್ನು ಪ್ರತಿ ವರ್ಷದಲ್ಲಿ ಕೊನೇ ಪಕ್ಷ ಒಮ್ಮೆಯಾದರೂ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಅದರ ಸಾಮಾನ್ಯ ಸದಸ್ಯರ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪ್ರತಿ ವರ್ಷ ಸೆಪ್ಟಂಬರ್ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(2) ಒಂದು ಸಹಕಾರಿಯ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಪ್ರಕರಣ 33ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು.]

[5][**64ಎ ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಗಳನ್ನು ನೀಡುವುದು**: ಸಂಯುಕ್ತ ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ, ಈ ಮುಂದಿನ ವಿದ್ಯುಕ್ತ ವರದಿಗಳನ್ನು

1. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
2. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
3. 2013ರ ಕಾಯ್ದೆ 4ರಡಿ ಬದಲಾಯಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.
4. 2014ರ ಕಾಯ್ದೆ 34ರಡಿ ಬದಲಾಯಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.
5. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಮತ್ತು ಮಾಹಿತಿಗಳನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು, ಎಂದರೆ:–

(ಎ) ಹಿಂದಿನ ವರ್ಷದ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ ಹಾಗೂ ಮುಂದಿನ ವರ್ಷದ ಕಾರ್ಯಕ್ರಮ;

(ಬಿ) ಅದರ ಪರಿಶೋಧಿತ ಆರ್ಥಿಕ ತ:ಖ್ತೆಗಳು;

(ಸಿ) ಅದರ ಸಾಮಾನ್ಯ ಸದಸ್ಯರ ಸಭೆಯು ಅನುಮೋದಿಸಿದ ಹೆಚ್ಚುವರಿ ಅಥವಾ ಉಳಿತಾಯ ವಿಲೇವಾರಿಯ ಯೋಜನೆ ;

(ಡಿ) ಸಂಯುಕ್ತ ಸಹಕಾರಿಯ ಉಪವಿಧಿಗಳಿಗೆ ಮಾಡಲಾದ ತಿದ್ದುಪಡಿಗಳು ಇದ್ದಲ್ಲಿ ಅವುಗಳ ಪಟ್ಟಿ;

(ಇ) ಅದರ ಸಾಮಾನ್ಯ ಸದಸ್ಯರ ಸಭೆಯನ್ನು ನಡೆಸುವ ದಿನಾಂಕ ಮತ್ತು ಅಗತ್ಯವಿದ್ದಾಗ ಚುನಾವಣೆ ನಡೆಸುವ ದಿನಾಂಕದ ಬಗ್ಗೆ ಘೋಷಣೆ;

(ಎಫ್) ನಿರ್ದೇಶಕರುಗಳ ಪಟ್ಟಿ ಮತ್ತು ಅವರ ಪದಾವಧಿ;

(ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಅಗತ್ಯಪಡಿಸುವ ಇತರೆ ಯಾವುದೇ ಮಾಹಿತಿ.]

**65. ವಿಚಾರಣೆ.–**

(1) ಸಂಯುಕ್ತ ಸಹಕಾರಿಯು ಋಣಿಯಾಗಿರುವ ಸಾಲಿಗನ ಅಥವಾ ಸಂಯುಕ್ತ ಸಹಕಾರಿಯ ಮಂಡಲಿಯ ಮೂರನೇ ಒಂದರಷ್ಟಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಅಥವಾ ಸದಸ್ಯ ಸಹಕಾರಿಗಳ ಒಟ್ಟು ಸದಸ್ಯರ ಹತ್ತನೇ ಒಂದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಅರ್ಜಿಯ ಮೇರೆಗೆ, ರಿಜಿಸ್ಟ್ರಾರನು, ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಮತ್ತು ಕಾರ್ಯನಿರ್ವಹಣೆ ಮತ್ತು ಹಣಕಾಸು ಪರಿಸ್ಥಿತಿಗೆ ಸಂಬಂಧಿಸಿದಂತೆ ಅಂಥ ಅರ್ಜಿಯಲ್ಲಿ ಪ್ರಸ್ತಾಪಿಸಲಾದ ಯಾವುದೇ ವಿಷಯದ ಬಗ್ಗೆ ಕೂಡಲೇ ವಿಚಾರಣೆ ನಡೆಸತಕ್ಕದ್ದು. ವಿಚಾರಣೆಯ ವೆಚ್ಚವನ್ನು ಸಾಲಿಗ ಅಥವಾ ಸಂಯುಕ್ತ ಸಹಕಾರಿ ಅಥವಾ ಸಂದರ್ಭಾನುಸಾರ ಸದಸ್ಯ ಸಹಕಾರಿಗಳು ಭರಿಸತಕ್ಕದ್ದು.

(2) ರಿಜಿಸ್ಟ್ರಾರನು, ತಾನು ವಿಚಾರಣೆಯನ್ನು ಪ್ರಾರಂಭಿಸಲು ಉದ್ದೇಶಿಸಿದ ದಿನಾಂಕದ ಬಗ್ಗೆ ಸಂಯುಕ್ತ ಸಹಕಾರಿಗೆ ಹದಿನೈದು ದಿನಗಳಿಗೆ ಕಡಿಮೆಯಿಲ್ಲದಂತೆ ಲಿಖಿತದಲ್ಲಿ ಒಂದು ನೋಟೀಸನ್ನು ನೀಡತಕ್ಕದ್ದು :

ಪರಂತು, ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ, ಅಲ್ಪಾವಧಿ ನೋಟೀಸನ್ನು ಹೊರಡಿಸಬಹುದು.

(3) ವಿಚಾರಣೆಯನ್ನು, ವಿಚಾರಣೆಯ ಆದೇಶದ ದಿನಾಂಕದಿಂದ ಸಾಧ್ಯವಾದ ಮಟ್ಟಿಗೆ ಆರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು. ಆದರೆ ಅಂಥ ಅವಧಿಯನ್ನು ವಿಶೇಷ ಸಂದರ್ಭಗಳಲ್ಲಿ ಆರು ತಿಂಗಳವರೆಗೆ ವಿಸ್ತರಿಸಿಕೊಳ್ಳಬಹುದು.

(4) ರಿಜಿಸ್ಟ್ರಾರನು, ವಿಚಾರಣೆ ಪೂರ್ಣಗೊಂಡ ದಿನಾಂಕದಿಂದ ಒಂದು ತಿಂಗಳ

ಅವಧಿಯೊಳಗೆ, ಸಂಯುಕ್ತ ಸಹಕಾರಿಗೆ ಮತ್ತು ಅರ್ಜಿದಾರನಿಗೆ ವಿಚಾರಣೆಯ ವರದಿಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆಯ ಉದ್ದೇಶಕ್ಕಾಗಿ, ರಿಜಿಸ್ಟ್ರಾರನು:

(ಎ) ವಿಚಾರಣೆಯ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ಪರಿಗಣಿಸುವಂಥ ರಸೀತಿಗಳು, ಓಚರುಗಳು, ಹೇಳಿಕೆಗಳು, ವಿವರಪಟ್ಟಿಕೆಗಳು, ಪತ್ರ–ವ್ಯವಹಾರಗಳು, ನೋಟೀಸು ಅಥವಾ ಇತರ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಅಧ್ಯಕ್ಷರು ಅಥವಾ ಸಭಾಪತಿ, ಉಪಾಧ್ಯಕ್ಷರು ಅಥವಾ ಉಪಸಭಾಪತಿ ಅಥವಾ ಯಾವೊಬ್ಬ ನಿರ್ದೇಶಕ, ಪದಾಧಿಕಾರಿ ಅಥವಾ ಅಧಿಕಾರಿ ಅಥವಾ ಸಂಬಂಧಪಟ್ಟ ಇತರ ಯಾವೊಬ್ಬ ಪ್ರಾಧಿಕಾರಿಯನ್ನು ಅಗತ್ಯಪಡಿಸಬಹುದು; ಮತ್ತು

(ಬಿ) ಸಂಯುಕ್ತ ಸಹಕಾರಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಮತ್ತು ಇತರ ಸ್ವತ್ತುಗಳನ್ನು ಯಾವುದೇ ಸಮಯದಲ್ಲಿ ನೋಡುವ ಮುಕ್ತ ಅವಕಾಶವಿರತಕ್ಕದ್ದು ಮತ್ತು ಯಾವುದೇ ಇತರ ಸ್ವತ್ತುಗಳ ಸ್ವಾಧೀನತೆಯನ್ನು ಹೊಂದಿರುವ ಅಥವಾ ಅದರ ಅಭಿರಕ್ಷೆಗೆ ಜವಾಬ್ದಾರನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಅವನು ಯಾವುದೇ ಸರ್ಕಾರಿ ಕಛೇರಿಯಲ್ಲಿ ಅಥವಾ ಸಂಯುಕ್ತ ಸಹಕಾರಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಹಾಜರುಪಡಿಸುವಂತೆ ಸಮನು ಮಾಡಬಹುದು;

–ಸಂಯುಕ್ತ ಸಹಕಾರಿಯ ಯಾವುದೇ ವ್ಯವಹಾರಗಳ ಅರಿವಿದೆಯೆಂದು ತಾನು ನಂಬಲು ಕಾರಣವಿರುವ ಯಾವೊಬ್ಬ ವ್ಯಕ್ತಿಯನ್ನು ಸರ್ಕಾರಿ ಕಛೇರಿಯಲ್ಲಿ ಅಥವಾ ಸಂಯುಕ್ತ ಸಹಕಾರಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ತನ್ನ ಮುಂದೆ ಹಾಜರಾಗುವಂತೆ ಸಮನು ಮಾಡಬಹುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸಬಹುದು.

**66. ವಿಚಾರಣಾ ವರದಿಯ ಮೇಲೆ ಕ್ರಮ –** ವಿಚಾರಣಾ ವರದಿಯು, ಸಂಯುಕ್ತ ಸಹಕಾರಿಯ ಯಾವೊಬ್ಬ ಅಥವಾ ಎಲ್ಲಾ ಪದಾಧಿಕಾರಿಗಳು ಅಥವಾ ನಿರ್ದೇಶಕರು ಅಥವಾ ಅಧಿಕಾರಿಗಳು ಮತ್ತು ನೌಕರರು ದುರ್ವ್ಯವಹಾರ ನಡೆಸಿದ್ದಾರೆಂಬುದನ್ನು ಹೊರಗೆಡವಿದರೆ, ಅವರು ಬದ್ಧರಾಗುವ ಯಾವುದೇ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಿಗೆ ಪ್ರತಿಕೂಲವಾಗದಂತೆ, ವಿಚಾರಣಾ ವರದಿಯ ಅಭಿಪ್ರಾಯಗಳನ್ನು ಚರ್ಚಿಸಲು ಮತ್ತು ಸಂಬಂಧಪಟ್ಟವರ ವಿರುದ್ಧ ಅವಶ್ಯಕ್ರಮ ಕೈಗೊಳ್ಳಲು ರಿಜಿಸ್ಟ್ರಾರನು ತಾನು ನಿರ್ದಿಷ್ಟಪಡಿಸುವ ಸೂಕ್ತ ಸಮಯದೊಳಗೆ ಸಾಮಾನ್ಯ ಸಭೆಯನ್ನು ಕರೆಯುವಂತೆ ಮಂಡಲಿಗೆ ನಿರ್ದೇಶಿಸಬಹುದು.

## ಅಧ್ಯಾಯ X

# ಸಹಕಾರಿ ತತ್ವಗಳು

67. **ಸಹಕಾರಿ ತತ್ವಗಳು.–** ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ಸಹಕಾರಿಗಳು, ಸಾಧ್ಯವಾದಷ್ಟು ಮಟ್ಟಿಗೆ, ಈ ಕೆಳಗಿನ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ,

(1) ಸಹಕಾರಿಗಳು, ತಮ್ಮ ಸೇವೆಯನ್ನು ಬಳಸಿಕೊಳ್ಳಬಲ್ಲ ಹಾಗೂ ಸದಸ್ಯತ್ವದ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಇಚ್ಛೆಯಿರುವ ಎಲ್ಲಾ ವ್ಯಕ್ತಿಗಳಿಗೆ, ಲಿಂಗಬೇಧವಿಲ್ಲದೆ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ಮುಕ್ತವಾಗಿರುವ ಸ್ವಯಂಸೇವಾ ಸಂಸ್ಥೆಗಳಾಗಿರುತ್ತವೆ.

(2) ಸಹಕಾರಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಅವುಗಳ ಕಾರ್ಯನೀತಿಯನ್ನು ರೂಪಿಸುವ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಸದಸ್ಯರಿಂದ ನಿಯಂತ್ರಿತವಾದ ಸಂಸ್ಥೆಗಳಾಗಿರುತ್ತವೆ. ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುವ ಪುರುಷರು ಮತ್ತು ಮಹಿಳೆಯರು ಸದಸ್ಯತ್ವಕ್ಕೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿಗಳ ಸದಸ್ಯರು ಸಮನಾದ ಮತಚಲಾವಣೆ ಹಕ್ಕನ್ನು ಹೊಂದಿರುತ್ತಾರೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿ ಸಹಕಾರಿಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸಲಾಗಿದೆ.

(3) ಸದಸ್ಯರು ತಮ್ಮ ಸಹಕಾರಿಗೆ ನ್ಯಾಯಸಮ್ಮತವಾಗಿ ವಂತಿಗೆ ನೀಡುತ್ತಾರೆ ಮತ್ತು ಅದರ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕಡೇ ಪಕ್ಷ ಒಂದು ಭಾಗ ಸಾಮಾನ್ಯವಾಗಿ ಸಹಕಾರಿಯ ಸಾಮಾನ್ಯ ಸ್ವತ್ತಾಗಿರುತ್ತದೆ. ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ. ಸದಸ್ಯರು, ಹೆಚ್ಚುವರಿ ಹಣವನ್ನು ಈ ಮುಂದಿನ ಯಾವುದೇ ಅಥವಾ ಎಲ್ಲ ಉದ್ದೇಶಗಳಿಗೆ ಹಂಚಿಕೆ ಮಾಡುತ್ತಾರೆ; ಕಡೆಯ ಪಕ್ಷ ಮೀಸಲು ನಿಧಿಯ ಒಂದು ಭಾಗ ಅವಿಭಾಜ್ಯವಾಗಿರುವಂತೆ ಅದನ್ನು ಸ್ಥಾಪಿಸುವ ಮೂಲಕ ಸಹಕಾರಿಯ ಅಭಿವೃದ್ಧಿ, ಸಹಕಾರಿಯೊಡನೆ ಸದಸ್ಯರಿಗಿರುವ ವ್ಯವಹಾರಗಳ ಪ್ರಮಾಣಕ್ಕನುಗುಣವಾಗಿ ಸದಸ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಸದಸ್ಯರಿಂದ ಅನುಮೋದನೆಯಾದ ಇತರ ಚಟುವಟಿಕೆಗಳನ್ನು ಬೆಂಬಲಿಸುವುದು.

(4) ಎಲ್ಲ ಸಹಕಾರಿಗಳು ಅವುಗಳ ಸದಸ್ಯರಿಂದ ನಿಯಂತ್ರಿತವಾದ ಸ್ವಾಯತ್ತ ಸ್ವ–ಸಹಾಯ ಸಂಸ್ಥೆಗಳಾಗಿವೆ. ಸರ್ಕಾರವೂ ಸೇರಿದಂತೆ ಇತರ ಸಂಘ–ಸಂಸ್ಥೆಗಳೊಡನೆ ಸಹಕಾರಿಗಳು ಒಪ್ಪಂದ ಮಾಡಿಕೊಂಡರೆ ಅಥವಾ ಹೊರಗಿನ

ಮೂಲಗಳಿಂದ ಬಂಡವಾಳ ಸಂಗ್ರಹಿಸಿದರೆ ಅವು ಅವುಗಳ ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೊಳಪಡುತ್ತದೆಂಬ ಹಾಗೂ ಅವು ತಮ್ಮ ಸಹಕಾರಿ ಸ್ವಾಯತ್ತತೆಯನ್ನು ಉಳಿಸಿಕೊಂಡು ಬರುತ್ತದೆಂಬ ನಿಬಂಧನೆಗಳ ಮೇಲೆ ಹಾಗೆ ಮಾಡುತ್ತವೆ.

(5) ಸಹಕಾರಿಗಳ ಅಭಿವೃದ್ಧಿಗೆ ತಮ್ಮ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲನುವಾಗುವಂತೆ ಸಹಕಾರಿಗಳು, ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ. ಇದರಿಂದ ಅವರು ಸಹಕಾರಿಯ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ಅವು ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಮತ್ತು ಮುಖಂಡರುಗಳಿಗೆ ತಿಳಿಸುತ್ತವೆ.

(6) ಸಹಕಾರಿಗಳು ತಮ್ಮ ಸದಸ್ಯರಿಗೆ ಹೆಚ್ಚು ಪರಿಣಾಮಕಾರಿ ಸೇವೆಯನ್ನು ಸಲ್ಲಿಸುತ್ತವೆ ಮತ್ತು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟಕಗಳ ಮೂಲಕ ಜೊತೆಗೂಡಿ ಕೆಲಸ ಮಾಡುವುದರಿಂದ ಸಹಕಾರಿ ಆಂದೋಲನವನ್ನು ಬಲಪಡಿಸುತ್ತವೆ.

(7) ಸದಸ್ಯರ ಅವಶ್ಯಕತೆಗಳಿಗೆ ಗಮನ ನೀಡುವುದರ ಜೊತೆ ಸಹಕಾರಿಗಳು ಅವುಗಳ ಸದಸ್ಯರು ಒಪ್ಪಿದ ಕಾರ್ಯನೀತಿಗಳ ಮೂಲಕ ಅವರವರ ಕೋಮುಗಳ ಸತತ ಅಭಿವೃದ್ಧಿಗೆ ಶ್ರಮಿಸುತ್ತವೆ.

## [1][ಅಧ್ಯಾಯ Xಎ

## ವಿಮೆ ಮಾಡಿಸಲಾದ ಬ್ಯಾಂಕುಗಳಿಗಾಗಿ ವಿಶೇಷ ಉಪಬಂಧಗಳು

**67ಎ. ರಿಜರ್ವ್ ಬ್ಯಾಂಕು ಆದೇಶ ಹೊರಡಿಸಲು ಅಗತ್ಯಪಡಿಸಿದ್ದರೆ ರಿಜಿಸ್ಟ್ರಾರನು ಹೊರಡಿಸಬೇಕಾದ ಕೆಲವು ಆದೇಶಗಳು.–**

(1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ವಿರುದ್ಧವಾದುದೇನೇ ಇದ್ದಾಗ್ಯೂ, ವಿಮೆ ಮಾಡಿಸಲಾದ ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜಿಸ್ಟ್ರಾರನು, –

(i) ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961ರ 13ಡಿ ಪ್ರಕರಣದಲ್ಲಿ ಹೇಳಿದ ಸನ್ನಿವೇಶಗಳಲ್ಲಿ, ರಿಜರ್ವ್ ಬ್ಯಾಂಕು ಹಾಗೆ ಅಗತ್ಯಪಡಿಸಿದರೆ, ಸಹಕಾರಿ ಬ್ಯಾಂಕನ್ನು ಸಮಾಪನಗೊಳಿಸುವುದಕ್ಕಾಗಿ [2][ಆದೇಶವನ್ನು ಮಾಡತಕ್ಕದ್ದು];

(ii) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ 1949ರ 45ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ಸ್ಥಗಿತಗೊಳಿಸುವ ಆದೇಶವನ್ನು ಮಾಡಿದ್ದಲ್ಲಿ, ಸಹಕಾರಿ ಬ್ಯಾಂಕಿನ ವಿಭಜನೆ ಅಥವಾ ಪುನ: ಸಂಘಟಣೆಯು ಒಳಗೊಂಡಂತೆ ರಾಜಿ ಅಥವಾ ಹೊಂದಾಣಿಕೆ ಅಥವಾ ವಿಲೀನ ಅಥವಾ ಪುನರ್ ರಚನೆಯ ಕಾರ್ಯಯೋಜನೆಯ ಮಂಜೂರಾತಿ [3][ಆದೇಶ ಮಾಡತಕ್ಕದ್ದು];

(iii) ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಥವಾ ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಸಹಕಾರಿ ಬ್ಯಾಂಕು ವ್ಯವಹಾರಗಳನ್ನು ನಡೆಸುವುದನ್ನು ಪ್ರತಿಬಂಧಿಸುವುದಕ್ಕಾಗಿ ಅಥವಾ ಬ್ಯಾಂಕು ಸೂಕ್ತ ಆಡಳಿತ ನಿರ್ವಹಣೆಯನ್ನು ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ರಿಜರ್ವ್ ಬ್ಯಾಂಕು ಹಾಗೆ ಅಗತ್ಯಪಡಿಸಿದರೆ ಸಹಕಾರಿ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯನ್ನು ಅಥವಾ ಇತರ ವ್ಯವಸ್ಥಾಪನಾ ನಿಕಾಯವನ್ನು, ಅದನ್ನು ಯಾವುದೇ ಹೆಸರಿನಿಂದ ಕರೆಯಲಿ, ರದ್ದುಪಡಿಸುವುದಕ್ಕೆ ಮತ್ತು [4][ತೆಗೆದುಹಾಕುವುದಕ್ಕೆ ಆದೇಶ ಮಾಡತಕ್ಕದ್ದು.] ಮತ್ತು ರಿಜರ್ವ್ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟ ಪಡಿಸಬಹುದಾದಂತೆ, ಒಟ್ಟಾರೆ ಐದು ವರ್ಷಗಳಿಗೆ ಮೀರದಂಥ ಅವಧಿಗಾಗಿ ಅಥವಾ ಅವಧಿಗಳಿಗಾಗಿ ಅದಕ್ಕೆ [5][ಆಡಳಿತಗಾರನನ್ನು

1. 2004ರ ಕಾಯ್ದೆ 21ರಡಿ ಸೇರಿಸಲ್ಪಟ್ಟು 31 ಮಾರ್ಚ 2004 ರಿಂದ ಜಾರಿಗೆ ಬಂದಿದೆ.
2. 2005ರ ಕಾಯ್ದೆ 16ರಡಿ ಬದಲಾಯಿಸಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿದೆ.
3. 2005ರ ಕಾಯ್ದೆ 16ರಡಿ ಬದಲಾಯಿಸಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿದೆ.
4. 2005ರ ಕಾಯ್ದೆ 16ರಡಿ ಬದಲಾಯಿಸಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿದೆ.
5. 2005ರ ಕಾಯ್ದೆ 16ರಡಿ ಬದಲಾಯಿಸಲ್ಪಟ್ಟು 1 ಜೂನ್ 2005 ರಿಂದ ಜಾರಿಗೆ ಬಂದಿದೆ.

ನೇಮಕ ಮಾಡತಕ್ಕದ್ದು.] ಮತ್ತು ಹಾಗೆ ನೇಮಕ ಮಾಡಲಾದ ಆಡಳಿತಗಾರನು, ತನ್ನ ಪದಾವಧಿ ಮುಕ್ತಾಯವಾದ ತರುವಾಯ, ಅಂಥ ಬ್ಯಾಂಕಿನ ಹೊಸ ಮಂಡಳಿಯು ಅಧಿಕಾರ ವಹಿಸಿಕೊಳ್ಳುವ ಮೊದಲನೆಯ ದಿನದ ಹಿಂದಿನ ದಿನದವರೆಗೆ ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(2) ವಿಮೆ ಮಾಡಲಾಗಿರುವ ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜಿಸ್ಟ್ರಾರನು ಅಥವಾ ಸಹಕಾರಿ ಬ್ಯಾಂಕಿನ ಸಾಮಾನ್ಯ ಸಭೆಯು, ರಿಜರ್ವ್ ಬ್ಯಾಂಕಿನಿಂದ ಲಿಖಿತ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಬ್ಯಾಂಕನ್ನು ಸಮಾಪನಗೊಳಿಸುವುದನ್ನು ಅಥವಾ ರಾಜಿ ಅಥವಾ ಹೊಂದಾಣಿಕೆ ಅಥವಾ ವಿಲೀನೀಕರಣ ಅಥವಾ ಪುನರ್ ರಚನೆಯ ಕಾರ್ಯಯೋಜನೆ ಮಂಜೂರಾತಿಯನ್ನು ನಿರ್ಧರಿಸತಕ್ಕದ್ದಲ್ಲ ಅಥವಾ ಬ್ಯಾಂಕಿನ ಮಂಡಳಿಯ ಅಥವಾ ಇತರ ಯಾವುದೇ ವ್ಯವಸ್ಥಾಪನಾ ನಿಕಾಯದ (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ರದ್ದಿಯಾತಿಗಾಗಿ ಆದೇಶವನ್ನು ಮತ್ತು ಅದರ ಆಡಳಿತಗಾರನ ನೇಮಕವನ್ನು ಮಾಡತಕ್ಕದ್ದಲ್ಲ.

(3) ರಿಜರ್ವ್ ಬ್ಯಾಂಕಿನ ಅಕೋರಿಕೆಯ ಮೇಲೆ ಅಥವಾ ಅದು ನೀಡಿದ ಪೂರ್ವ ಮಂಜೂರಾತಿಯ ಮೇಲೆ, (1) ಮತ್ತು (2)ನೇ ಉಪ ಪ್ರಕರಣಗಳ ಅಡಿಯಲ್ಲಿ ಮಾಡಿದ ಆದೇಶದ ವಿರುದ್ಧ ಯಾವುದೇ ಅಪೀಲು, ಪುನರ್ ಪರಿಶೀಲನೆ ಅಥವಾ ಪರಿಷ್ಕರಣೆಗೆ ಅವಕಾಶ ಇರತಕ್ಕದ್ದಲ್ಲ ಮತ್ತು ಅಂಥ ಆದೇಶ ಅಥವಾ ಮಂಜೂರಾತಿಯು ಯಾವುದೇ ರೀತಿ ಪ್ರಶ್ನಿಸಲ್ಪಡಲು ಗುರಿಯಾಗತಕ್ಕದ್ದಲ್ಲ.

**67ಬಿ. ಸಮಾಪಕರು ಠೇವಣಿ ವಿಮಾ ನಿಗಮಕ್ಕೆ ಹಣ ತುಂಬಿಕೊಡುವುದು:–** ವಿಮೆ ಮಾಡಿಸಿದ ಬ್ಯಾಂಕಾಗಿರುವ ಒಂದು ಸಹಕಾರಿ ಬ್ಯಾಂಕು, ಸಮಾಪನವಾದಲ್ಲಿ ಅಥವಾ ಅದನ್ನು ಸಮಾಪನಕ್ಕೆ ತೆಗೆದುಕೊಂಡಲ್ಲಿ ಠೇವಣಿ ವಿಮಾ ನಿಗಮ ಅಧಿನಿಯಮ, 1961ರ 16ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ, ವಿಮೆ ಮಾಡಿಸಿದ ಬ್ಯಾಂಕಿನ ಠೇವಣಿದಾರರಿಗೆ ಠೇವಣಿ ವಿಮಾ ನಿಗಮವು ಹೊಣೆಯಾದಲ್ಲಿ, ಠೇವಣಿ ವಿಮಾ ನಿಗಮಕ್ಕೆ, ಆ ಅಧಿನಿಯಮದ 21ನೇ ಪ್ರಕರಣದಲ್ಲಿ ಉಪಬಂಧಿಸಿರುವಷ್ಟರ ಮಟ್ಟಿಗೆ ಮತ್ತು ರೀತಿಯಲ್ಲಿ, ಸಮಾಪಕನು ಅಥವಾ ಆ ಸನ್ನಿವೇಶಗಳಲ್ಲಿ ಅಂಥ ಇತರ ವ್ಯಕ್ತಿಯು, ಹಣವನ್ನು ತುಂಬಿಕೊಡತಕ್ಕದ್ದು.]

## ಅಧ್ಯಾಯ XI

# ಅಪರಾಧಗಳು ಮತ್ತು ದಂಡಗಳು

**68. ಅಪರಾಧಗಳು ಮತ್ತು ದಂಡಗಳು.–**

(1) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ ಅಥವಾ ನಿರ್ದೇಶಕ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಥವಾ ಯಾವೊಬ್ಬ ನೌಕರನು ಈ ಅಧಿನಿಯಮದ ಅಥವಾ ಸಹಕಾರಿಯ ಉಪವಿಧಿಗಳ ಅಡಿಯಲ್ಲಿ ಅಗತ್ಯಪಡಿಸಲಾದ ನೋಟೀಸನ್ನು ಹೊರಡಿಸಲು, ವಿವರಪಟ್ಟಿಕೆ ಅಥವಾ ದಸ್ತಾವೇಜನ್ನು ಕಳುಹಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ ಅಥವಾ ಯಾವುದೇ ಮಾಹಿತಿಯನ್ನು ಒದಗಿಸಲು ನಿರಾಕರಿಸಿದರೆ ಅಥವಾ ಸುಳ್ಳು ಅಥವಾ ಸಾಕಷ್ಟಿಲ್ಲದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಒದಗಿಸಿದರೆ, ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ, ಒಬ್ಬ ಮುಖ್ಯ ಕಾರ್ಯನಿರ್ವಾಹಕ, ಒಬ್ಬ ನಿರ್ದೇಶಕ ಅಥವಾ ಯಾವೊಬ್ಬ ನೌಕರನು ಈ ಅಧಿನಿಯಮದಡಿಯಲ್ಲಿ ಅಗತ್ಯಪಡಿಸಿದ ಯಾವುದೇ ಕೃತ್ಯವನ್ನು ಮಾಡಲು ವಿಫಲನಾದರೆ ಅಥವಾ ಈ ಅಧಿನಿಯಮ ಅಥವಾ ಉಪವಿಧಿಗಳ ಮೂಲಕ ನಿಷೇಧಿಸಲಾದ ಯಾವುದೇ ಕೃತ್ಯವನ್ನು ಮಾಡಲು ಅನುಮತಿ ನೀಡಿದರೆ ಅಥವಾ ರಚನೆ, ವ್ಯವಸ್ಥಾಪನೆ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನೆರವೇರಿಸಲು ವಿಫಲನಾದರೆ ಅಥವಾ ಮೋಸದ ಚಟುವಟಿಕೆಗಳಲ್ಲಿ ತೊಡಗಿದರೆ ಅಥವಾ ನಿಧಿ ಮತ್ತು ಸ್ವತ್ತುಗಳನ್ನು ದುರುಪಯೋಗಪಡಿಸಿಕೊಂಡರೆ ಅಥವಾ ನಿರ್ದೇಶಕ ಮಂಡಲಿಯ ಚುನಾವಣೆಯನ್ನು ನಡೆಸುವಲ್ಲಿ ಜನತಾ ಪ್ರಾತಿನಿಧ್ಯ ಅಧಿನಿಯಮದ (1951ರ ಕೇಂದ್ರ ಅಧಿನಿಯಮ 43) 123ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ ಭ್ರಷ್ಟಾಚಾರ ಚಟುವಟಿಕೆಗಳಲ್ಲಿ ತೊಡಗಿದರೆ ಅಥವಾ 35ನೇ ಮತ್ತು 65ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಯನ್ನು ನಡೆಸುತ್ತಿರುವ ವ್ಯಕ್ತಿಯ ಮುಂದೆ ಮತ್ತು 33ನೇ ಮತ್ತು 64ನೇ ಪ್ರಕರಣದ ಅಡಿಯಲ್ಲಿನ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಅಥವಾ ಪುಸ್ತಕಗಳು ಅಥವಾ ದಾಖಲೆಗಳನ್ನು ಹಾಜರುಪಡಿಸಲು ಅಥವಾ ನೆರವು ನೀಡಲು ತಪ್ಪಿದರೆ ಅಥವಾ ವೈಯಕ್ತಿಕವಾಗಿ ಹಾಜರಾಗಲು ವಿಫಲನಾದರೆ ಅಥವಾ ಸಂಯುಕ್ತ ಸಹಕಾರಿಯ "ಸಂಯುಕ್ತ ಸಹಕಾರಿ ನಿಧಿಗೆ" ವಂತಿಗೆ ನೀಡಲು ತಪ್ಪಿದರೆ, ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

[1][(3) ತನ್ನ ನೌಕರನಿಂದ ಹಣ ಮುರಿದುಕೊಳ್ಳಲು ವಿಫಲನಾದರೆ ಅಥವಾ ಮುರಿದುಕೊಂಡ ಮೊತ್ತವನ್ನು ಅಂತಹ ವ್ಯವಕಲನವನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಸಂಬಂಧಪಟ್ಟ ಸಹಕಾರಿಗೆ ಸಕಾರಣಗಳಿಲ್ಲದೆ ಸಂದಾಯ ಮಾಡಲು ಉದ್ಯೋಗದಾತನು ತಪ್ಪಿದರೆ ಅವನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳುಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಪಧಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ, ಒಬ್ಬ ನಿರ್ದೇಶಕ ಅಥವಾ ಯಾವೊಬ್ಬ ನೌಕರನು ಸಹಕಾರಿಗೆ ಸೇರಿದ ಪುಸ್ತಕಗಳ, ಲೆಕ್ಕಗಳ, ದಸ್ತಾವೇಜುಗಳ, ದಾಖಲೆಗಳ, ನಗದಿನ, ಭದ್ರತೆಗಳ ಮತ್ತು ಇತರ ಸ್ವತ್ತುಗಳ ಸುಪರ್ದನ್ನು ಹೊಂದಿರುವವನು ಅಧಿಕೃತ ವ್ಯಕ್ತಿಗೆ ಅಂತಹ ಸುಪರ್ದನ್ನು ಬುದ್ಧಿಪೂರ್ವಕವಾಗಿ ಒಪ್ಪಿಸದಿದ್ದಲ್ಲಿ ಅಥವಾ ಅಧಿನಿಯಮದ ಉಪಬಂಧಗಳಡಿ ನೀಡಲಾದ ಸಮನು ಅನ್ನು, ಕೋರಿಕೆಯನ್ನು ಅಥವಾ ಕಾನೂನು ಸಮ್ಮತ ಲಿಖಿತ ಆದೇಶವನ್ನು ಯುಕ್ತ ಕಾರಣವಿಲ್ಲದೆ ಪಾಲಿಸದಿದ್ದಲ್ಲಿ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(5) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯ ಕಾರ್ಯನಿರ್ವಾಹಕನು 33ನೇ ಪ್ರಕರಣ ಅಥವಾ 64ನೇ ಪ್ರಕರಣದಡಿ, ಪ್ರಸಂಗಾನುಸಾರ, ಹಿಂದಿನ ವರ್ಷದ ತನ್ನ ಲೆಕ್ಕಪತ್ರಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪರಿಶೋಧನೆ ಮಾಡಿಸಲು ಮತ್ತು ಪರಿಶೋಧಿತ ಆರ್ಥಿಕ ತ:ಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(6) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯಕಾರ್ಯನಿರ್ವಾಹಕನು ಸಂದರ್ಭಾನುಸಾರ 34ನೇ ಪ್ರಕರಣ ಅಥವಾ 64ಎ ದ ಪ್ರಕರಣದಡಿ ನಿಗದಿಪಡಿಸಿದ ಅವಧಿಯೊಳಗೆ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ

1. 2013ರ ಕಾಯ್ದೆ 4ರಡಿ ಸೇರಿಸಲ್ಪಟ್ಟು 11 ಫೆಬ್ರವರಿ 2013 ರಿಂದ ಜಾರಿಗೆ ಬಂದಿದೆ.

ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(7) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯಕಾರ್ಯನಿರ್ವಾಹಕನು ಪ್ರಕರಣ 26 ಮತ್ತು ಪ್ರಕರಣ 58 ರಡಿ ಅಗತ್ಯಪಡಿಸಿದಂತೆ ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸಲು ಬೇಕಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು [1][ಸಹಕಾರಿ ಚುನಾವಣಾ ಪ್ರಾಧಿಕಾರ]ಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು ವಿಫಲವಾದರೆ, ಅಂತಹ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳ ಕಾರಾಗೃಹವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(8) ಯಾವೊಬ್ಬ ವ್ಯಕ್ತಿಯು ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆಗೆ ಪೂರ್ವದಲ್ಲಿ, ಚುನಾವಣೆ ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಸಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕೆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಚುನಾವಣಾ ಅಪರಾಧವನ್ನು ಎಸಗಿದರೆ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು.]

1. 2021ರ ಕಾಯ್ದೆ 35ರಡಿ ಬದಲಾಯಿಸಲ್ಪಟ್ಟು 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ XII

# ಸಂಕೀರ್ಣಗಳು

**69. ಅಪರಾಧದ ಸಂಜ್ಞೇಯತೆ –** ಈ ಅಧಿನಿಯಮದ ಅಡಿಯ ಯಾವುದೇ ಅಪರಾಧದ ವಿಚಾರಣೆಯನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕಿಂತ ಕೆಳಗಿನ ದರ್ಜೆಯ ನ್ಯಾಯಾಲಯ ನಡೆಸತಕ್ಕದ್ದಲ್ಲ.

[1][**69ಎ. ಅಪರಾಧಗಳ ಕುರಿತು ದೂರು.–** ರಿಜಿಸ್ಟ್ರಾರನ ಅನುಮೋದನೆಯ ಹೊರತಾಗಿ 68ನೇ ಪ್ರಕರಣದ ಅಡಿಯಲ್ಲಿ ಯಾವುದೇ ದೂರನ್ನು ಹೂಡತಕ್ಕದ್ದಲ್ಲ:

ಪರಂತು, ಸಹಕಾರಿಯ ಲೆಕ್ಕಪರಿಶೋಧನೆಯ, ವಿಚಾರಣೆಯ ಅಥವಾ ಪರಿವೀಕ್ಷಣೆಯ ಅಥವಾ ಸಹಕಾರಿಯ ಸಾಮಾನ್ಯ ವ್ಯವಹಾರದಲ್ಲಿ ಪತ್ತೆಯಾದ ಸಹಕಾರಿಯ ನಿಧಿಗಳ ದುರುಪಯೋಗದ ಅಥವಾ ದುರ್ವಿನಿಯೋಗಗಳ ಆರೋಪಗಳ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ದೂರುಗಳನ್ನು ದಾಖಲು ಮಾಡುವ ಮೊದಲು ರಿಜಿಸ್ಟ್ರಾರನಿಂದ ಅನುಮೋದನೆ ಪಡೆಯುವುದು ಅಗತ್ಯವಿರತಕ್ಕದ್ದಲ್ಲ.

**69ಬಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ರಿಜಿಸ್ಟ್ರಾರನ ಅಥವಾ ಆತನ ಅಧೀನದಲ್ಲಿರುವ ಅಥವಾ ಆತನ ಪ್ರಾಧಿಕಾರದ ಮೇಲೆ ಕೆಲಸ ಮಾಡುವ ಯಾವೊಬ್ಬ ವ್ಯಕ್ತಿಯ ವಿರುದ್ಧ ಅಥವಾ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನ ಅಥವಾ ಆತನಿಂದ ಅಧಿಕೃತನಾಗಿ ಕಾರ್ಯನಿರ್ವಹಿಸುತ್ತಿರುವ ಇತರ ಯಾವೊಬ್ಬ ಅಧೀನ ಅಧಿಕಾರಿಯ ವಿರುದ್ಧ ಅಥವಾ ಸಹಕಾರಿಯ ಹೊಸ ಮಂಡಲಿಯ ವಿರುದ್ಧ ಅಥವಾ 38ನೇ ಪ್ರಕರಣದ ಅಡಿಯಲ್ಲಿ ನೇಮಿಸಲಾದ ಆಡಳಿತಗಾರನ ಅಥವಾ 38ಎ ಪ್ರಕರಣದ ಅಡಿಯಲ್ಲಿ ನೇಮಿಸಲಾದ ವಿಶೇಷಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.]

**70. ತೊಂದರೆಗಳನ್ನು ನಿವಾರಿಸಲು ಅಧಿಕಾರ –** ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉಂಟಾದರೆ [2][ಅಥವಾ ಸ್ಪಷ್ಟೀಕರಣದ ಅವಶ್ಯವಿದ್ದರೆ] ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ಮಾಡಬಹುದು.

**71. ನಿಯಮ ರಚನಾಧಿಕಾರ –**

(1) ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ

---

1. 2016ರ ಕಾಯ್ದೆ 26ರಡಿ ಸೇರಿಸಲ್ಪಟ್ಟು 24 ಡಿಸೆಂಬರ್ 2016 ರಿಂದ ಜಾರಿಗೆ ಬಂದಿರುತ್ತದೆ.
2. 2014ರ ಕಾಯ್ದೆ 34ರಡಿ ಸೇರಿಸಲ್ಪಟ್ಟು 6 ಸೆಪ್ಟೆಂಬರ್ 2014 ರಿಂದ ಜಾರಿಗೆ ಬಂದಿರುತ್ತದೆ.

ಉಪಬಂಧಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಬಹುದಾದ ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟ ತರುವಾಯದ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಈ ಅಧಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿ–ಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**72. ಉಳಿಸುವಿಕೆ –** ಈ ಅಧಿನಿಯಮದ 6ನೇ ಪ್ರಕರಣದಲ್ಲಿ ಏನೇ ಇದ್ದರೂ, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ 1959ರ ಅಡಿಯಲ್ಲಿ ನೋಂದಣಿಯಾದ ಒಂದು ಸಹಕಾರಿ ಸಂಘವನ್ನು ಈ ಅಧಿನಿಯಮದ ಅಡಿಯಲ್ಲಿ ಸಹಕಾರಿಯನ್ನಾಗಿ ಪರಿವರ್ತಿಸಿದರೆ ಮತ್ತು ಹಾಗೆ ಪರಿವರ್ತಿಸುವ ಸಮಯದಲ್ಲಿ ಅದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 63, 64, 65, 69, 70, 99, 100, 101, 103, 104, 106, 108 ಅಥವಾ 109ನೇ ಪ್ರಕರಣಗಳ ಅಡಿಯಲ್ಲಿನ ಯಾವುವೇ ವ್ಯವಹರಣೆಗಳಲ್ಲಿ ಪಕ್ಷಕಾರನಾಗಿದ್ದರೆ, ಅಂಥ ವ್ಯವಹರಣೆಗಳನ್ನು ಸಹಕಾರ ಸಂಘವು ಈ ಅಧಿನಿಯಮದಲ್ಲಿ ಸಹಕಾರಿಯಾಗಿ ಪರಿವರ್ತಿತವಾಗಿಲ್ಲ ಎಂಬಂತೆ ಮುಂದುವರಿಸತಕ್ಕದ್ದು ಮತ್ತು ಅಂತಿಮ ತೀರ್ಮಾನ ಕೈಗೊಳ್ಳತಕ್ಕದ್ದು ಮತ್ತು ಅಂಥ ವ್ಯವಹರಣೆಗಳಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ಸಹಕಾರಿಯ ವಿರುದ್ಧ ಹೊರಡಿಸಲಾದ ಯಾವುದೇ ಡಿಕ್ರಿ ಅಥವಾ ಆದೇಶ ಅಥವಾ ಅವಾರ್ಡನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 101ನೇ ಪ್ರಕರಣಕ್ಕನುಸಾರವಾಗಿ ಅಂಥ ವ್ಯಕ್ತಿಗಳ ಅಥವಾ ಅಂಥ ಸಹಕಾರಿಯ ವಿರುದ್ಧ ಜಾರಿಗೊಳಿಸಕ್ಕದ್ದು.

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004

**ಅಧಿಸೂಚನೆ**

ನಂ. ಸಿಎಂಡಬ್ಲ್ಯೂ:57:ಸಿಎಲ್ಎಂ:2004, ಬೆಂಗಳೂರು, ದಿನಾಂಕ 7 ನೇ ಡಿಸೆಂಬರ್, 2004

ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆ ಸಂಖ್ಯೆ 1388, ದಿನಾಂಕ 7.12.2004

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) 71 ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ಕರಡನ್ನು, ಅದರಿಂದ ಬಾಧಿತರಾಗುವ ಸಂಭವಿರುವ ಎಲ್ಲಾ ವ್ಯಕ್ತಿಗಳಿಂದ ರಾಜ್ಯ ಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ 20 ನೇ ಆಗಸ್ಟ್ 2004 ರ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ:57: ಸಿಎಲ್ಎಂ:2004 ಇದರಲ್ಲಿ ದಿನಾಂಕ 29 ನೇ ಅಗಸ್ಟ್ 2004 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ IVಎ ರಲ್ಲಿ ಪ್ರಕಟಿಸಿದುದರಿಂದ;

ಮತ್ತು, ಸದರಿ ರಾಜ್ಯ ಪತ್ರವನ್ನು ದಿನಾಂಕ 29.08.2004 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಲಾಗಿರುವುದರಿಂದ;

ಈಗ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) 71 ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ. ಎಂದರೆ–

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004

## ಅಧ್ಯಾಯ – I

## ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :–**

(1) ಈ ನಿಯಮಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು :–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

ಎ) **'ಅಧಿನಿಯಮ'** ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು **'ಪ್ರಕರಣ'** ಎಂದರೆ ಆ ಅಧಿನಿಯಮದ ಒಂದು ಪ್ರಕರಣ;

[1][(ಎಎ) **'ಆಡಳಿತಗಾರ'** ಎಂದರೆ ಅಧಿನಿಯಮದ ಪ್ರಕರಣ 38 ಅಥವಾ 57ಎ ಅಡಿ ನೇಮಕವಾದ ಆಡಳಿತಗಾರ.]

ಬಿ) **'ಡಿಕ್ರಿ'** ಎಂದರೆ 43ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆದೇಶ, ತೀರ್ಮಾನ ಅಥವಾ ಅವಾರ್ಡು;

ಸಿ) **'ಡಿಕ್ರಿದಾರ'** ಎಂದರೆ (ಬಿ) ಖಂಡದಲ್ಲಿ ಪರಿಭಾಷಿಸಲಾದ ಡಿಕ್ರಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿ;

ಡಿ) **'ನಮೂನೆ'** ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ನಮೂನೆ;

ಇ) **'ತೀರ್ಪುಋಣಿ'** ಎಂದರೆ (ಬಿ) ಖಂಡದಲ್ಲಿ ಪರಿಭಾಷಿಸಲಾದ ಡಿಕ್ರಿಯನ್ನು ಯಾವ ಸಹಕಾರಿ ಅಥವಾ ವ್ಯಕ್ತಿಯ ವಿರುದ್ಧವಾಗಿ ಪಡೆಯಲಾಗಿದೆಯೋ ಆ ಸಹಕಾರಿ ಅಥವಾ ವ್ಯಕ್ತಿ;

ಎಫ್) **'ವಸೂಲಿ ಅಧಿಕಾರಿ'** ಎಂದರೆ ರಿಜಿಸ್ಟ್ರಾರನಿಗೆ ಅಧೀನನಾಗಿರುವ ಮತ್ತು 43ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನ ಅಧಿಕಾರವನ್ನು ಚಲಾಯಿಸಲು ಅಧಿಕಾರ ಹೊಂದಿರುವ ಒಬ್ಬ ವ್ಯಕ್ತಿ;

ಜಿ) **'ಮಾರಾಟ ಅಧಿಕಾರಿ'** ಎಂದರೆ, ತೀರ್ಪುಋಣಿಯ ಸ್ವತ್ತನ್ನು ಜಪ್ತಿ ಮಾಡುವುದಕ್ಕೆ ಮತ್ತು ಸ್ವತ್ತಿನ ಮಾರಾಟದ ಮೂಲಕ ಯಾವುದೇ ಡಿಕ್ರಿಯನ್ನು ಜಾರಿಗೊಳಿಸುವುದಕ್ಕೆ ರಿಜಿಸ್ಟ್ರಾರನಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕೃತನಾದ ಒಬ್ಬ ಅಧಿಕಾರಿ;

---

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

[1][(ಜಿ–1) 'ವಿಶೇಷಾಧಿಕಾರಿ' ಎಂದರೆ ಅಧಿನಿಯಮದ ಪ್ರಕರಣ 38ಎ ಅಡಿ ನೇಮಕವಾದ ವಿಶೇಷಾಧಿಕಾರಿ;

[2][(ಜಿ–2) 'ಚುನಾವಣಾಧಿಕಾರಿ' ಎಂದರೆ *[ಸಹಕಾರ ಚುನಾವಣಾ ಪ್ರಾಧಿಕಾರ]ದಿಂದ ಆ ಜಿಲ್ಲೆಗಾಗಿ, ಪ್ರಾಂತಕ್ಕಾಗಿ, ರಾಜ್ಯಕ್ಕಾಗಿ ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ.]

[3][(ಜಿ–3) 'ರಿಟರ್ನಿಂಗ್ ಅಧಿಕಾರಿ' ಎಂದರೆ ಚುನಾವಣಾ ಪ್ರಾಧಿಕಾರ ಅಥವಾ ಚುನಾವಣಾಧಿಕಾರಿಯಿಂದ ಆಯಾ ಸಹಕಾರ ಸಂಘಗಳಿಗೆ ರಿಟರ್ನಿಂಗ್ ಅಧಿಕಾರಿ ಎಂಬುದಾಗಿ ನೇಮಸಲ್ಪಟ್ಟ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಸಂಸ್ಥೆಯ ಒಬ್ಬ ಅಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸುವ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಒಳಗೊಂಡಿರುತ್ತದೆ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ;]]

ಎಚ್) ಅಧಿನಿಯಮದಲ್ಲಿ ಪರಿಭಾಷಿಸಿರುವ ಇತರ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್‌ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.
2. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
3. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

* ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ. (ಎಲ್ಲಾ ಸ್ಥಳಗಳಲ್ಲಿ ಪ್ರತ್ಯೇಕ ಅಡಿ ಟಿಪ್ಪಣಿ ನೀಡಿರುವುದಿಲ್ಲ.)

## ಅಧ್ಯಾಯ II

### 3. ಸಹಕಾರಿಗಳ ನೋಂದಣಿ ಮತ್ತು ಅವುಗಳ ಉಪವಿಧಿಗಳು

[1][(1) **ನೋಂದಣಿ ಕಾರ್ಯವಿಧಾನ ಈ ಕೆಳಗಿನಂತಿರತಕ್ಕದ್ದು:–**

(i) ಒಂದು ಸಹಕಾರಿಯನ್ನು ಸಂಘಟಿಸಲು ಬಯಸುವ ಆದರೆ ಹತ್ತಕ್ಕೆ ಕಡಿಮೆ ಇಲ್ಲದ ವ್ಯಕ್ತಿಗಳ ಗುಂಪೊಂದು ಒಟ್ಟಿಗೆ ಸೇರಿ ಅವರಲ್ಲಿ ಒಬ್ಬ ಮುಖ್ಯ ಪ್ರವರ್ತಕನನ್ನು ಆಯ್ಕೆ ಮಾಡಿ ಅವನಿಗೆ ಸಹಾಯ ಮಾಡಲು ಕೆಲವು ಪ್ರವರ್ತಕರನ್ನು ನೇಮಿಸಿ ಮುಖ್ಯ ಪ್ರವರ್ತಕನು ಅಂತಹ ಪ್ರಸ್ತಾಪಿತ ಸಹಕಾರಿಯನ್ನು ನೋಂದಾಯಿಸಲು ಕ್ರಮ ತೆಗೆದುಕೊಳ್ಳುವಂತೆ ಅಧಿಕಾರ ನೀಡಬಹುದು. ಅಂತಹ ವ್ಯಕ್ತಿಗಳ ಗುಂಪು ಪ್ರಸ್ತಾಪಿತ ಸಹಕಾರಿಯ ಹೆಸರು ಮತ್ತು ಕಾರ್ಯಕ್ಷೇತ್ರವನ್ನು ನಿರ್ಧರಿಸಿ ಪ್ರಸ್ತಾಪಿತ ಸಹಕಾರಿಯ ಉಪವಿಧಿಗಳನ್ನು ಅಳವಡಿಸಿಕೊಂಡು ಮುಖ್ಯ ಪ್ರವರ್ತಕನಿಗೆ ಪ್ರಸ್ತಾಪಿತ ಸಹಕಾರಿಯ ಸದಸ್ಯರಾಗಲು ಬಯಸುವ ವ್ಯಕ್ತಿಗಳಿಂದ ಅಗತ್ಯ ಷೇರು ಬಂಡವಾಳವನ್ನು ಸಂಗ್ರಹಿಸಲು ಅಧಿಕಾರ ನೀಡಲು ನಿರ್ಣಯಿಸತಕ್ಕದ್ದು.

(ii) ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರಿಯನ್ನು ಸ್ಥಾಪಿಸಲು ಒಟ್ಟುಗೂಡಿರುವ ವ್ಯಕ್ತಿಗಳ ಪಟ್ಟಿ, ಅಂತಹ ಗುಂಪಿನ ವ್ಯಕ್ತಿಗಳ ಹೆಸರು, ವಿಳಾಸ ಮತ್ತು ಸಹಿಗಳನ್ನು ಸಭಾ ನಡೆವಳಿಗಳ ಪ್ರತಿ, ಪ್ರಸ್ತಾಪಿತ ಸಹಕಾರಿಯ ಉಪವಿಧಿಗಳ ದ್ವಿಪ್ರತಿಗಳು ಮತ್ತು ಪ್ರಸ್ತಾಪಿತ ಸಹಕಾರಿಯು ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಯುಕ್ತ ಅವಕಾಶಗಳಿರುವ ಮತ್ತು ಅದು ಸದೃಢವಾಗಿ ಬೆಳವಣಿಗೆ ಹೊಂದುವ ಸಾಧ್ಯತೆ ಇದೆ ಎಂಬುದನ್ನು ತೋರಿಸುವ ಪ್ರಾಜೆಕ್ಟ್ ವರದಿಯ ಸಹಿತ ವ್ಯಾಪ್ತಿಯುಳ್ಳ ರಿಜಿಸ್ಟ್ರಾರನನ್ನು ಸಂಪರ್ಕಿಸತಕ್ಕದ್ದು.

(iii) ರಿಜಿಸ್ಟ್ರಾರನು ಪ್ರಸ್ತಾಪಿತ ಸಹಕಾರಿಯು ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಯುಕ್ತ ಅವಕಾಶಗಳಿವೆ ಹಾಗೂ ಅದು ಆರ್ಥಿಕ ಸದೃಢತೆಯಿಂದ ಬೆಳವಣಿಗೆ ಹೊಂದುವ ಅವಕಾಶಗಳಿವ ಎಂದು ಮನಗಂಡ 'ಲ್ಲಿ, ಪ್ರಸ್ತಾಪಿತ ಸಹಕಾರಿಯ ಸದಸ್ಯರಾಗಲು ಬಯಸುವ ತಾನು ನಿಗದಿಪಡಿಸುವ ಅಂಥ ಸಂಖ್ಯೆಯ ವ್ಯಕ್ತಿಗಳಿಂದ ಅಂಥ ಷೇರು ಬಂಡವಾಳವನ್ನು ಅಂಥ ಅವಧಿಯೊಳಗೆ ಸಂಗ್ರಹಿಸಲು ಮುಖ್ಯ ಪ್ರವರ್ತಕನಿಗೆ ಅನುಮತಿ ನೀಡಬಹುದು.

(iv) ರಿಜಿಸ್ಟ್ರಾರನಿಂದ ಅನುಮತಿ ಪಡೆದ ನಂತರ, ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರಿಯ ಹೆಸರಿನಲ್ಲಿ ರಶೀದಿ ಪುಸ್ತಕಗಳನ್ನು ಮುದ್ರಣ ಮಾಡಿಸತಕ್ಕದ್ದು ಮತ್ತು ಪ್ರಸ್ತಾಪಿತ ಸಹಕಾರಿಯ ಸದಸ್ಯರಾಗ ಬಯಸುವ ವ್ಯಕ್ತಿಗಳಿಂದ ಷೇರು ಬಂಡವಾಳವನ್ನು ಸಂಗ್ರಹಿಸತಕ್ಕದ್ದು. ಪ್ರಸ್ತಾಪಿತ ಸದಸ್ಯರಿಂದ ಸಂಗ್ರಹಿಸುವ ಮೊಬಲಗಿಗೆ ತನ್ನ ಹೆಸರು, ಪದನಾಮ ಮತ್ತು ಸಹಿಯೊಂದಿಗೆ

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

ರಶೀದಿಗಳನ್ನು ನೀಡತಕ್ಕದ್ದು. ಆತನು ಸಂಗ್ರಹಿಸಿದ ಹಣವನ್ನು ರಿಜಿಸ್ಟ್ರಾರನು ನಿಗದಿಪಡಿಸುವ **ಯಾವುದೇ** ಸಹಕಾರ ಬ್ಯಾಂಕಿನಲ್ಲಿ ಏಳು ದಿನಗಳೊಳಗೆ ಠೇವಣಿ ಇಡತಕ್ಕದ್ದು. ಆತನು ಒಂದು ನಗದು ಪುಸ್ತಕ, ರಶೀದಿ ಪುಸ್ತಕ, ಓಚರ್ ಪುಸ್ತಕ ಮತ್ತು ತಾನು ಸಂಗ್ರಹಿಸಿ ಬ್ಯಾಂಕಿಗೆ ಪಾವತಿಸಿದ ಹಣಕ್ಕೆ ಇತರ ಲೆಕ್ಕಗಳನ್ನು ನಿರ್ವಹಿಸತಕ್ಕದ್ದು. ಆದಾಗ್ಯೂ ಆತನು ಮುದ್ರಣ, ಲೇಖನ ಸಾಮಗ್ರಿ, ಬೆರಳಚ್ಚು, ಅಂಚೆ ವೆಚ್ಚ, ಇತ್ಯಾದಿ ಪ್ರಾಸಂಗಿಕ ವೆಚ್ಚಗಳನ್ನು ಭರಿಸಲು ಅಗತ್ಯವಿರುವ ಮತ್ತು ತಕ್ಕಷ್ಟಾದ ಹಣವನ್ನು ಉಳಿಸಿಕೊಳ್ಳಲು ಸಕ್ಷಮನಿರುತ್ತಾನೆ.

(v) ನಿರ್ದಿಷ್ಟಪಡಿಸಿದ ಸಂಖ್ಯೆಯ ವ್ಯಕ್ತಿಗಳಿಂದ ರಿಜಿಸ್ಟ್ರಾರನು ಅನುಮತಿಸಿದ ಪ್ರಮಾಣದ ಷೇರು ಬಂಡವಾಳವನ್ನು ಸಂಗ್ರಹಿಸಿದ ನಂತರ, ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರಿಯ ಪ್ರವರ್ತಕರ ಸಭೆಯನ್ನು ಕರೆದು ಅದರಲ್ಲಿ ಷೇರು ಬಂಡವಾಳವನ್ನು ಸಂಗ್ರಹಿಸಿರುವ ಪ್ರಸ್ತಾಪಿತ ಸದಸ್ಯರುಗಳ ಹೆಸರುಗಳನ್ನು ಮತ್ತು ಜಮಾ ಖರ್ಚುಗಳ ವಿವರಗಳನ್ನು ಮಂಡಿಸತಕ್ಕದ್ದು. ಸದರಿ ಪ್ರವರ್ತಕರ ಸಭೆಯಲ್ಲಿ ನಿರ್ಣಯವಾದ ನಂತರ ಪ್ರಸ್ತಾಪಿತ ಸದಸ್ಯರ ಹೆಸರು ವಿಳಾಸಗಳುಳ್ಳ ಪಟ್ಟಿ ಮತ್ತು ಉಪವಿಧಿಗಳ–5 ಪ್ರತಿಗಳ ಸಹಿತ ಪ್ರಸ್ತಾಪಿತ ಸಹಕಾರಿಯ ನೋಂದಣಿಗಾಗಿ ನಿಗದಿತ ಅರ್ಜಿಯಲ್ಲಿ ಪ್ರಸ್ತಾವವನ್ನು ವ್ಯಾಪ್ತಿಯುಳ್ಳ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು. ಬಿಡಿ ವ್ಯಕ್ತಿಯಾಗಿರುವ ಪ್ರತಿಯೊಬ್ಬ ಅರ್ಜಿದಾರನು ಮತ್ತು ಯಾವುದೇ ಸಹಕಾರಿಯು ಅರ್ಜಿದಾರನಾಗಿದ್ದಲ್ಲಿ ಅದರ ಪರವಾಗಿ ಪ್ರಾಧಿಕೃತನಾದ ವ್ಯಕ್ತಿಯು ಸದರಿ ಅರ್ಜಿಗೆ ಸಹಿ ಮಾಡಿರತಕ್ಕದ್ದು ಮತ್ತು ಸದರಿ ಅರ್ಜಿಯು ನಿಗದಿತ ನೋಂದಣಿ ಶುಲ್ಕವನ್ನು ಪಾವತಿಸಿದ ಚಲನ್ ಅನ್ನು ಒಳಗೊಂಡಿರತಕ್ಕದ್ದು.]

[1][(2) ನೋಂದಣಿಗಾಗಿ ಅರ್ಜಿ ಮತ್ತು ಕಾರ್ಯ ವಿಧಾನ :

ಎ) ಒಂದು ಸಹಕಾರಿಯ ನೋಂದಣಿಗಾಗಿ ಅಥವಾ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಒಂದು ಸಂಘವು, ಸೌಹಾರ್ದ ಸಹಕಾರಿಯಾಗಿ ಪರಿವರ್ತನೆಗೊಳ್ಳಲು 5ನೇ ಪ್ರಕರಣಕ್ಕೆ ಅನುಸಾರ ಸಲ್ಲಿಸುವ ಪ್ರತಿಯೊಂದು ಅರ್ಜಿಯು, ಈ ನಿಯಮದಲ್ಲಿ ನಿಯಮಿಸಲಾದ ನಮೂನೆ 1ರಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಆ ನಮೂನೆಯಲ್ಲೇ ಇರತಕ್ಕದ್ದು.

ಬಿ) 5ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಲಾದ ಅರ್ಜಿಗೆ ಅರ್ಜಿದಾರರ ಪೈಕಿ ಒಬ್ಬರಾದ ಯಾವುದೇ ಸಹಕಾರಿಯ ಪರವಾಗಿ ಅಧಿಕೃತವಾದ ವ್ಯಕ್ತಿಯು ಸಹಿ ಮಾಡಿರುವ ಸಂದರ್ಭಗಳಲ್ಲಿ ಅಂಥ ಪ್ರಾಧಿಕಾರವನ್ನು ನೀಡುವ ಅಂಥ ಸಹಕಾರಿಯ ನಿರ್ದೇಶಕ ಮಂಡಳಿಯ ನಿರ್ಣಯದ ಪ್ರತಿಯನ್ನು ಅರ್ಜಿಯೊಡನೆ ಲಗತ್ತಿಸತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಮರುಸಂಖ್ಯೆ ನೀಡಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

ಸಿ) 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಬಗ್ಗೆ ರಿಜಿಸ್ಟ್ರಾರನು, ಸ್ವಯಂ ಖಚಿತಪಡಿಸಿಕೊಳ್ಳಲು ಅಗತ್ಯವಾದಂಥ ವಿವರಗಳನ್ನು ತರಿಸಿಕೊಳ್ಳಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡಬಹುದು.

ಡಿ) ಅರ್ಜಿದಾರರು, ನೋಂದಣಿಗಾಗಿ ಅರ್ಜಿಯೊಡನೆ ಸಲ್ಲಿಸಿರುವ ಉಪವಿಧಿಗಳು ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಇರುವಂತೆ ಮಾಡುವುದಕ್ಕಾಗಿ, ಅವುಗಳಿಗೆ ಸೂಕ್ತವಾದಂಥ ಬದಲಾವಣೆಗಳನ್ನು ಮಾಡಲು ಅಥವಾ ಸೇರ್ಪಡೆ ಮಾಡಿಕೊಡಬೇಕೆಂದು ಅಪೇಕ್ಷಿಸಿದಲ್ಲಿ ಅವರಿಗೆ ಲಿಖಿತದಲ್ಲಿ ರಿಜಿಸ್ಟ್ರಾರನು ಅನುಮತಿ ನೀಡಬಹುದು.

ಈ) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಣಿ ಆದ ಸಂಘವು, ಸಹಕಾರಿಯಾಗಲು ಇಚ್ಚಿಸಿದಲ್ಲಿ ಅಂಥ ಪ್ರಸ್ತಾವವನ್ನು ಸರ್ವ ಸದಸ್ಯರ ಸಭೆಯು ಅಂಗೀಕರಿಸಿದ ದಿನಾಂಕದಿಂದ 60 ದಿನಗಳೊಳಗಾಗಿ ಕಳುಹಿಸತಕ್ಕದ್ದು.

(3) ಆರ್ಥಿಕ ಸದೃಢತೆಯ ಮಾನದಂಡಗಳು :

ಒಂದು ಸಹಕಾರಿಯು, ನೋಂದಾಯಿತವಾದ ನಂತರ, ಆರ್ಥಿಕ ಸದೃಢತೆಯಿಂದ ಮುನ್ನಡೆಯುವ ಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾವಿತ ಸಹಕಾರಿಯ ಮುಖ್ಯ ಪ್ರವರ್ತಕನು ನೋಂದಾಯಿಸಬೇಕಾದ ಸದಸ್ಯರ ಸಂಖ್ಯೆ, ಸಂಗ್ರಹಿಸಬೇಕಾದ ಷೇರು ಬಂಡವಾಳ ಮತ್ತು ನಿರ್ವಹಿಸಬೇಕಾದ ಇತರೆ ಮಾನದಂಡಗಳನ್ನು ರಿಜಿಸ್ಟ್ರಾರನು ಕಾಲಕಾಲಕ್ಕೆ ನಿಗದಿಪಡಿಸತಕ್ಕದ್ದು.]

[1][(4) ಉಪವಿಧಿಗಳು:

(ಎ) ಸಂಯುಕ್ತ ಸಹಕಾರಿಯನ್ನು ಒಳಗೊಂಡಂತೆ ಪ್ರತಿ ಸಹಕಾರಿಯು ಈ ಅಧಿನಿಯಮ ಮತ್ತು ಅದರಡಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ತನ್ನ ಉಪವಿಧಿಗಳನ್ನು ರೂಪಿಸತಕ್ಕದ್ದು.

(ಬಿ) ಸಂಯುಕ್ತ ಸಹಕಾರಿಯನ್ನು ಒಳಗೊಂಡಂತೆ ಯಾವುದೇ ಸಹಕಾರಿಯು, ಕಾಲಕಾಲಕ್ಕೆ ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡತಕ್ಕದ್ದು.

ಪರಂತು ಸಂಯುಕ್ತ ಸಹಕಾರಿಯನ್ನೊಳಗೊಂಡಂತೆ ಪ್ರತಿ ಸಹಕಾರಿಯು ಅಧಿನಿಯಮ ಮತ್ತು ನಿಯಮಗಳಿಗೆ ಕಾಲಕಾಲಕ್ಕೆ ಮಾಡಲ್ಪಟ್ಟ ತಿದ್ದುಪಡಿಗಳಿಗೆ ಅನುಗುಣವಾಗಿ ತಿದ್ದುಪಡಿಗಳು ಜಾರಿಗೆ ಬರುವ ದಿನಾಂಕದಿಂದ ಮುಂಬರುವ ಮೊದಲನೇ ಸರ್ವ ಸದಸ್ಯರ ಸಭೆಯಲ್ಲಿ ತನ್ನ ಉಪವಿಧಿಗಳಿಗೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ.

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

(ಸಿ) ಸಹಕಾರಿ ಪಡೆಯಬಹುದಾದ ಸಾಲ ಮತ್ತು ಠೇವಣಿಗಳ ಪ್ರಮಾಣವು ಸಹಕಾರಿಯ ಸಂದಾಯಿತ ಷೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳನ್ನು ಕೂಡಿಸಿದಾಗ ಬರುವ ಮೊತ್ತದ 50ಪಟ್ಟು ಮೊಬಲಗಿನಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಪ್ರಾಪ್ತವಾಗುವ ಮೊತ್ತವನ್ನು ಮೀರತಕ್ಕದ್ದಲ್ಲ. ಪ್ರತಿ ಸದಸ್ಯನಿಗೆ ಸಹಕಾರಿಯು ಕೊಡಬಹುದಾದ ಸಾಲದ ಪ್ರಮಾಣವು ಸಾಲದ ಉದ್ದೇಶ ಮತ್ತು ಸಹಕಾರಿಯಲ್ಲಿನ ನಿಧಿಗಳ ಲಭ್ಯತೆಯ ಆಧಾರದ ಮೇಲೆ ಉಪವಿಧಿಗಳಲ್ಲಿ ನಿಗದಿಪಡಿಸತಕ್ಕದ್ದು

(ಡಿ) ಸಹಕಾರಿ ಮತ್ತು ಸಂಯುಕ್ತ ಸಹಕಾರಿಗಳಲ್ಲಿ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವೆಗೆ ಸಂಬಂಧಿಸಿದ ನಿಯಮಗಳಿಗೆ ಉಪವಿಧಿಗಳಲ್ಲಿ ಸೂಕ್ತವಾಗಿ ಅವಕಾಶ ಮಾಡಿಕೊಳ್ಳುವುದು.]

[1][**3ಎ. ಉಪವಿಧಿ ತಿದ್ದುಪಡಿಗೆ ಶುಲ್ಕ –** ಪ್ರಕರಣ 11ರ ಪ್ರಕಾರ ಉಪವಿಧಿ ತಿದ್ದುಪಡಿಗೆ ಪ್ರಸ್ತಾವೆ ಸಲ್ಲಿಸುವ ಸಂದರ್ಭದಲ್ಲಿ ಕೆಳಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿಗೆ ಪಾವತಿ ಮಾಡಿದ ಬಗ್ಗೆ ಖಜಾನೆಯ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸತಕ್ಕದ್ದು, ಎಂದರೆ –

| ಸಹಕಾರಿಯ ವ್ಯಾಪ್ತಿ ಸಹಕಾರಿಯ ಕಾರ್ಯಾಚರಣೆಯ ಕ್ಷೇತ್ರವು | ಪಾವತಿಸಬೇಕಾದ ಮೊತ್ತ |
|---|---|
| 1) ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ | ರೂ.400–00 |
| 2) ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ | ರೂ.1000–00 |
| 3) ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದ ವ್ಯಾಪ್ತಿ | ರೂ.2000–00] |

**4. ಸದಸ್ಯರಿಗೆ ಗುರುತಿನ ಕಾರ್ಡನ್ನು ನೀಡುವುದು :–**

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಹಕಾರಿಯ ಎಲ್ಲಾ ಸದಸ್ಯರಿಗೆ ಗುರುತಿನ ಕಾರ್ಡುಗಳನ್ನು ವಿತರಿಸತಕ್ಕದ್ದು. ಗುರುತಿನ ಕಾರ್ಡಿನಲ್ಲಿ ಸಹಕಾರಿಯ ಹೆಸರು, ಸದಸ್ಯರ ಪೂರ್ತಿ ಹೆಸರು, ಸದಸ್ಯತ್ವದ ಸಂಖ್ಯೆ, ವಯಸ್ಸು ಮತ್ತು ಅವರ ನಿವಾಸದ ವಿಳಾಸವನ್ನು ಸೂಚಿಸತಕ್ಕದ್ದು. ಗುರುತಿನ ಕಾರ್ಡಿನಲ್ಲಿ ಸದಸ್ಯರ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಅವರು ಸಹಿ ಮಾಡಿರತಕ್ಕದ್ದು ಮತ್ತು ಇದನ್ನು ಮುಖ್ಯ ಕಾರ್ಯನಿರ್ವಾಹಕನು ದೃಢೀಕರಿಸಿ ಸಹಕಾರಿಯ ಮೊಹರು ಹಾಕತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ III
## ಸಹಕಾರಿಯ ಮಂಡಳಿಯ ಚುನಾವಣೆ

**[5. ಸಹಕಾರಿಯ ಚುನಾವಣೆ ಆಯೋಗ (ಸಿಇಸಿ):**

(1) [ಸಹಕಾರ ಚುನಾವಣಾ ಪ್ರಾಧಿಕಾರ]*ವು (ಸಿಇಸಿ) ರಾಜ್ಯದಲ್ಲಿನ ಸಂಯುಕ್ತ ಸಹಕಾರಿಯೂ ಸೇರಿದಂತೆ ಎಲ್ಲಾ ಸಹಕಾರಿಗಳ ಎಲ್ಲಾ ಚುನಾವಣೆಗಳನ್ನು ನಡೆಸಲು ಮತ್ತು ತತ್ಸಂಬಂಧದ ಮತದಾರರ ಪಟ್ಟಿಗಳನ್ನು ತಯಾರಿಸಲು ಅಗತ್ಯವಾದ ಸಾಮಾನ್ಯ ಅಥವಾ ವಿಶಿಷ್ಟ ಮಾರ್ಗಸೂಚಿಗಳನ್ನು ರೂಪಿಸತಕ್ಕದ್ದು.

(2) ಆಯೋಗವು ಕಾಲಕಾಲಕ್ಕೆ ಅಗತ್ಯಪಡಿಸುವ ಮಾಹಿತಿ ಮತ್ತು ಕಾಗದ ಪತ್ರಗಳನ್ನು ಪ್ರತಿ ಸಹಕಾರಿಯ ಆಡಳಿತ ಮಂಡಳಿಯು ಆಯೋಗಕ್ಕೆ ಒದಗಿಸತಕ್ಕದ್ದು.

**5ಎ. ಆಡಳಿತ ಮಂಡಳಿಗಳಿಗೆ ಸಾಮಾನ್ಯ ಚುನಾವಣೆ ನಡೆಸುವುದು:**

(1) [ಸಹಕಾರ ಚುನಾವಣಾ ಪ್ರಾಧಿಕಾರ]*ದ ಮೇಲುಸ್ತುವಾರಿ, [2][****] ಆಯಾ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯು ಆಯಾ ಜಿಲ್ಲೆಯೊಳಗೆ ನೋಂದಾಯಿತ ಕಚೇರಿಗಳನ್ನು ಮತ್ತು ವ್ಯವಹಾರದ ಪ್ರಧಾನ ಸ್ಥಳಗಳನ್ನುಳ್ಳ ಎಲ್ಲಾ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ಒಳಗೊಂಡಂತೆ ಎಲ್ಲಾ ಚುನಾವಣೆಗಳನ್ನು ನಡೆಸುವುದಕ್ಕೆ ಮತ್ತು ತತ್ಸಂಬಂಧ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಕೆಲಸಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಮೇಲ್ವಿಚಾರಣೆ ನಡೆಸತಕ್ಕದ್ದು. ಅಂತಹ ಜಿಲ್ಲಾ ಚುನಾವಣಾಧಿಕಾರಿಯು, ಸದರಿ ಸಾಮಾನ್ಯ ಚುನಾವಣೆಗಳನ್ನು ನಡೆಸುವುದಕ್ಕೆ ಮತ್ತು ಮತದಾರರ ಪಟ್ಟಿಗಳ ತಯಾರಿಸುವುದಕ್ಕೆ ಸಂಬಂಧಿಸಿದಂತೆ, [ಸಹಕಾರ ಚುನಾವಣಾ ಪ್ರಾಧಿಕಾರ]* ತನಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) [ಸಹಕಾರ ಚುನಾವಣಾ ಪ್ರಾಧಿಕಾರ]*ವು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆಯು ಪೂರ್ಣಗೊಂಡು ತತ್ಸಂಬಂಧದ ಫಲಿತಾಂಶ ಘೋಷಣೆಯಾಗುವವರೆಗೆ ಜಿಲ್ಲಾ ಚುನಾವಣಾಧಿಕಾರಿಯು ಒಳಗೊಂಡಂತೆ ಜಿಲ್ಲೆಯಲ್ಲಿ ಚುನಾವಣಾ ಕೆಲಸಕ್ಕೆ ನಿಯೋಜಿಸಲ್ಪಟ್ಟ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಸಹಕಾರ ಚುನಾವಣೆ ಆಯೋಗಕ್ಕೆ ನಿಯೋಜಿಸಲ್ಪಟ್ಟಿದ್ದಾರೆಂದು ಭಾವಿಸತಕ್ಕದ್ದು.

**5ಬಿ. ಮತದಾರರ ಪಟ್ಟಿ ತಯಾರಿಕೆ ಮತ್ತು ಚುನಾವಣಾ ಪ್ರಕ್ರಿಯೆ:**

(1) ಪ್ರತಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಇಂದೀಕರಿಸಲ್ಪಟ್ಟ ಸದಸ್ಯತ್ವ ರಿಜಿಸ್ಟರಿನಲ್ಲಿ ದಾಖಲಿಸಲಾದ ನಮೂದುಗಳ ಆಧಾರದ ಮೇಲೆ ಚುನಾವಣೆಯಲ್ಲಿ ಮತನೀಡುವ ಹಕ್ಕುಳ್ಳ ಸದಸ್ಯರ ಹಾಗೂ ಸದಸ್ಯ ಸಹಕಾರಿಗಳ ಮತ ನೀಡುವ ಹಕ್ಕುಳ್ಳ ಡೆಲಿಗೇಟುಗಳ ಕರಡು ಅರ್ಹತಾಪಟ್ಟಿಯನ್ನು, ಸಹಕಾರಿಯ ಸುಸ್ತಿದಾರರ

---

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಬದಲಾಯಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

ಕರಡು ಪಟ್ಟಿ ಹಾಗೂ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ / ಪ್ರತಿನಿಧಿ / ಡೆಲಿಗೇಟುಗಳ ಕರಡು ಪಟ್ಟಿಗಳನ್ನು ತಯಾರಿಸತಕ್ಕದ್ದು ಮತ್ತು ಆ ಪಟ್ಟಿಯಲ್ಲಿ,–

(ಎ) ಬಿಡಿ ವ್ಯಕ್ತಿಯ ಸದಸ್ಯನ ಸಂಬಂಧದಲ್ಲಿ, ಸದಸ್ಯನ ಅಥವಾ ಪ್ರತಿನಿಧಿಯ ಹೆಸರು, ಪ್ರವೇಶತ್ವದ ಸಂಖ್ಯೆ, ಹೆತ್ತವರ ಅಥವಾ ಪತಿಯ ಹೆಸರು ಹಾಗೂ ಅಂಥ ಸದಸ್ಯನ ಅಥವಾ ಪ್ರತಿನಿಧಿಯ ವಿಳಾಸ;

(ಬಿ) ಸದಸ್ಯ ಸಹಕಾರಿಯ ಸಂಬಂಧದಲ್ಲಿ, ಪ್ರವೇಶತ್ವ ಸಂಖ್ಯೆ, ಸಹಕಾರಿಯ ಹೆಸರು, ಸಹಕಾರಿಯನ್ನು ಪ್ರತಿನಿಧಿಸಲು ಉದ್ದೇಶಿಸಿರುವ ಡೆಲಿಗೇಟಿನ / ಪ್ರತಿನಿಧಿ ಹೆಸರು ಇರತಕ್ಕದ್ದು.

(ಸಿ) ಮತ್ತು ಅಂಥ ಪಟ್ಟಿಗಳನ್ನು ಅಂಥ ಇಂದೀಕರೀಸಿದ ದಾಖಲೆಗಳ ಮತ್ತು ರಿಜಿಸ್ಟರುಗಳ ಸಹಿತ ಜಿಲ್ಲಾ ಚುನಾವಣಾಧಿಕಾರಿಯ ವಶಕ್ಕೆ ಒಪ್ಪಿಸತಕ್ಕದ್ದು.

(2) ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಸದಸ್ಯ ಸಹಕಾರಿಯ ಅಧಿಕೃತ ಸದಸ್ಯನ ಹೆಸರನ್ನು ಡೆಲಿಗೇಟ್ ಆಗಿ ಸಹಕಾರಿಯ ಮೊಹರನ್ನು ಒಳಗೊಂಡ ಮತ್ತು ಕ್ರಮಬದ್ಧವಾಗಿ ದೃಢೀಕರಿಸಿದ ಅಂಥ ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯ ಮತ್ತು ಅಧಿಕೃತ ಸದಸ್ಯನ (ಡೆಲಿಗೇಟ್‌ನ) / ಪ್ರತಿನಿಧಿ ಸದಸ್ಯರ ಮಾದರಿ ಸಹಿ ಮತ್ತು ಹೆಸರನ್ನು ದೃಢೀಕರಿಸಿದ ನಿರ್ಣಯ ಸಹಿತ ಪತ್ರವನ್ನು ನಿಗದಿತ ದಿನಾಂಕದೊಳಗೆ ಹಿಂದಿನ ಉಪನಿಯಮದಂತೆ ಜಿಲ್ಲಾ ಚುನಾವಣಾಧಿಕಾರಿಗೆ ಒಪ್ಪಿಸತಕ್ಕದ್ದು.

(3) [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಜಿಲ್ಲಾ ಚುನಾವಣಾಧಿಕಾರಿ ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಳಿಗಳಿಗೆ ಪದಾವಧಿ ಮುಕ್ತಾಯವಾಗುವ ದಿನಾಂಕದ ಕನಿಷ್ಠ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರಿಗಳ ಕ್ರೋಢೀಕೃತ ಪಟ್ಟಿಯೊಂದನ್ನು ಕಳುಹಿಸತಕ್ಕದ್ದು:

(ಎ) ಸಹಕಾರಿಯ ಹೆಸರು ಮತ್ತು ವಿಳಾಸ;

(ಬಿ) ಆಡಳಿತ ಮಂಡಳಿಗೆ ಆಯ್ಕೆಯಾಗಬೇಕಾಗಿರುವ ನಿರ್ದೇಶಕರ ಸಂಖ್ಯೆ;

(ಸಿ) ಆಡಳಿತ ಮಂಡಳಿಯ ಪದಾವಧಿಯು ಮುಕ್ತಾಯವಾಗುವ ದಿನಾಂಕ;

(ಡಿ) ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು.

(4) [ಸಹಕಾರ ಚುನಾವಣಾ ಪ್ರಾಧಿಕಾರ]*ವು ಜಿಲ್ಲಾ ಚುನಾವಣಾಧಿಕಾರಿಯಿಂದ ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರಿಗಳ ಪಟ್ಟಿಯನ್ನೊಳಗೊಂಡ ಅಂಥ ವರದಿಗಳು ಸ್ವೀಕೃತವಾದ ನಂತರ, ಜಿಲ್ಲೆಯೊಳಗಿನ ಪ್ರತಿ ಸಹಕಾರಿಯ ಹೆಸರು ಮತ್ತು ವಿಳಾಸ ಹಾಗೂ ಸಾಮಾನ್ಯ ಚುನಾವಣೆಯ ದಿನಾಂಕ ಮತ್ತು ಸ್ಥಳಗಳನ್ನು ತಿಳಿಸುವ, ಆಡಳಿತ ಮಂಡಳಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸುವ ಮತ್ತು ಮತದಾರರ ಪಟ್ಟಿಗಳನ್ನು ತಯಾರಿಸುವ

ಸಂಬಂಧದಲ್ಲಿ ವೇಳಾಪಟ್ಟಿಗಳನ್ನು ಚುನಾವಣೆ ದಿನಾಂಕಕ್ಕೆ ಹದಿನೈದು ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು.

(5) (ಎ) [ಸಹಕಾರ ಚುನಾವಣಾ ಪ್ರಾಧಿಕಾರ]*ವು ಜಿಲ್ಲಾ ಚುನಾವಣಾಧಿಕಾರಿಗಳ ಸಹಯೋಗದೊಂದಿಗೆ ಮತ ನೀಡುವ ಹಕ್ಕುಳ್ಳ / ಸುಸ್ತಿದಾರರ ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ ನಲವತ್ತೈದು ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು, ಪ್ರತಿ ಸಹಕಾರಿಯು ನೈಜ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗೆ ಒದಗಿಸತಕ್ಕದ್ದು.

(ಬಿ) ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಹದಿನೈದು ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು.

ಪರಂತು, ಪ್ರತಿ ಸಹಕಾರಿಯ ಮತನೀಡುವ ಹಕ್ಕುಳ್ಳ ಸದಸ್ಯರ / ಪ್ರತಿನಿಧಿ / ಡೆಲಿಗೇಟುಗಳ ಕರಡು ಅರ್ಹತಾಪಟ್ಟಿ, ಸಹಕಾರಿಯ ಸುಸ್ತಿದಾರರ ಕರಡು ಪಟ್ಟಿ ಹಾಗೂ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ / ಪ್ರತಿನಿಧಿ / ಡೆಲಿಗೇಟುಗಳ ಕರಡು ಪಟ್ಟಿಗಳನ್ನು ಹಾಗೂ ಮತದಾರರ ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಗಳನ್ನು ಸಂಬಂಧಪಟ್ಟ ಸಹಕಾರಿಯ ಸೂಚನಾಫಲಕದಲ್ಲಿ **ಹಾಗೂ** ಸಹಕಾರ ಇಲಾಖೆಯ ಸ್ಥಳೀಯ ಅಧಿಕಾರಿಯ ಸೂಚನಾಫಲಕದಲ್ಲಿ ಪ್ರಕಟಿಸತಕ್ಕದ್ದು.

(6) ಅಂತಿಮ ಮತದಾರರ ಪಟ್ಟಿಯು ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು:

ಎ) ಪ್ರಾಥಮಿಕ ಸಹಕಾರಿಯ ಸಂಬಂಧದಲ್ಲಿ, ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು; ಅಥವಾ

(ಬಿ) ಮಾಧ್ಯಮಿಕ ಸಹಕಾರಿಯ ಸಂಬಂಧದಲ್ಲಿ, ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಹಕಾರಿಗಳ ಪ್ರತಿನಿಧಿಗಳು; ಅಥವಾ

(ಸಿ) ಒಂದು ಒಕ್ಕೂಟ ಮತ್ತು ಅಪೆಕ್ಸ್ ಸಹಕಾರಿಯ ಸಂಬಂಧದಲ್ಲಿ, ಮತದಾನದ ಹಕ್ಕುಳ್ಳ ಸದಸ್ಯ ಸಹಕಾರಿಗಳ ಎಲ್ಲಾ ಪ್ರತಿನಿಧಿ ಸದಸ್ಯರು.

(7) ಪ್ರತಿ ಸಹಕಾರಿಯು ಅಂಥ ಮತದಾರರ ಪಟ್ಟಿಯ ಪ್ರತಿಯನ್ನು ಅಂಥ ಸಹಕಾರಿಯ ಕಚೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಕಚೇರಿಯಲ್ಲಿ ವೀಕ್ಷಣೆಗೆ ಮುಕ್ತವಾಗಿಟ್ಟಿರತಕ್ಕದ್ದು.

(8) ಆಡಳಿತ ಮಂಡಳಿಯ ನಿರ್ದೇಶಕರನ್ನು ಚುನಾಯಿಸಲು ಚುನಾವಣಾ ವೇಳಾಪಟ್ಟಿ ಕೆಳಕಂಡಂತಿರತಕ್ಕದ್ದು.

(ಎ) ನಾಮಪತ್ರ ಸ್ವೀಕರಿಸಲು ಚುನಾವಣೆ ಅಧಿಸೂಚನೆ ದಿನಾಂಕ

(ಬಿ) ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ

(ಸಿ) ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ

(ಡಿ) ಕ್ರಮಬದ್ಧ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ ಮತ್ತು ಸಮಯ

(ಇ) ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ಸಮಯ

(ಎಫ್) ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ ಮತ್ತು ಸಮಯ

(ಜಿ) ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಚಿಹ್ನೆಗಳ ಸಹಿತ ಪಟ್ಟಿಯ ಪ್ರಕಟಣೆ ದಿನಾಂಕ ಮತ್ತು ಸಮಯ

(ಹೆಚ್) ಮತದಾನದ ಸ್ಥಳ ದಿನಾಂಕ ಮತ್ತು ಸಮಯ

(ಐ) ಮತ ಏಣಿಕೆಯ ಸ್ಥಳ ದಿನಾಂಕ ಮತ್ತು ಸಮಯ

[1][(9) ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯು ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 4–00 ಗಂಟೆಯ ಅವಧಿಯೊಳಗೆ ಜರುಗಿಸತಕ್ಕದ್ದು.[

**5ಸಿ. ರಿಟರ್ನಿಂಗ್ ಅಧಿಕಾರಿ ಮತ್ತು ಅವರ ಪ್ರಕಾರ್ಯಗಳು :**

[2][**1**) ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆ ಅಥವಾ ನಿರ್ದೇಶಕರ / ಪದಾಧಿಕಾರಿಗಳ ಖಾಲಿ ಬಿದ್ದ ರಿಕ್ತ ಸ್ಥಾನಗಳಿಗೆ ಮಾಧ್ಯಮಿಕ, ಫೆಡರಲ್ ಮತ್ತು ಶೃಂಗ ಸಹಕಾರಿಗಳಿಗೆ ಚುನಾವಣಾ ಪ್ರಾಧಿಕಾರವು ಮತ್ತು ಪ್ರಾಥಮಿಕ ಸಹಕಾರಿಗಳಿಗೆ ಚುನಾವಣಾಧಿಕಾರಿಯು ರಿಟರ್ನಿಂಗ್ / ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸತಕ್ಕದ್ದು. ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು/ ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ರಿಟನಿಂಗ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ.]

(2) ರಿಟರ್ನಿಂಗ್ ಅಧಿಕಾರಿಯು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:–

(i) [3][ಚುನಾವಣಾಧಿಕಾರಿಯ ಮೇಲುಸ್ತುವಾರಿಯಲ್ಲಿ], ರಿಟರ್ನಿಂಗ್ ಅಧಿಕಾರಿಯ ಸಾಮಾನ್ಯ ಚುನಾವಣೆಯನ್ನು ನಡೆಸಲು ಪೂರ್ಣ ಕಾಲಾವಧಿಯ ಶೆಡ್ಯೂಲನ್ನು ತಯಾರಿಸಿ ಪ್ರಕಟಿಸತಕ್ಕದ್ದು.

(ii) [4][*****] ರಿಟರ್ನಿಂಗ್ ಅಧಿಕಾರಿಯು ಜಿಲ್ಲಾ ಚುನಾವಣಾಧಿಕಾರಿಯೊಡನೆ ಸಮಾಲೋಚಿಸಿ ಸಾಕಷ್ಟು ಸಂಖ್ಯೆಯ ಮತದಾನ ಕೇಂದ್ರಗಳನ್ನು ಒದಗಿಸಲು ವ್ಯವಸ್ಥೆ ಮಾಡತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ ಸಿಓ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
2. ಅಧಿಸೂಚನೆ ಸಂಖ್ಯೆ ಸಿಓ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
3. ಅಧಿಸೂಚನೆ ಸಂಖ್ಯೆ ಸಿಓ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
4. ಅಧಿಸೂಚನೆ ಸಂಖ್ಯೆ ಸಿಓ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(iii) ಸಾಮಾನ್ಯ ಚುನಾವಣೆಗಳನ್ನು ನಿಯಮಗಳಲ್ಲಿ ತಿಳಿಸಿರುವ ರೀತಿಯಲ್ಲಿ ಪರಿಣಾಮಕಾರಿಯಾಗಿ ನಡೆಸಲು ಅಗತ್ಯವಾದ ಕೆಳಗಿನ ಕೃತ್ಯಗಳನ್ನು ಮಾಡುವುದು ರಿಟರ್ನಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು, ಎಂದರೆ:–

(ಎ) ನಾಮಪತ್ರಗಳನ್ನು ಆಹ್ವಾನಿಸಿ ನೋಟೀಸು ನೀಡುವುದು;

(ಬಿ) ನಾಮಪತ್ರಗಳನ್ನು ಸ್ವೀಕರಿಸುವುದು ಮತ್ತು ಪರಿಶೀಲಿಸುವುದು;

(ಸಿ) ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಗಳನ್ನು ಹಂಚಿಕೆ ಮಾಡುವುದು;

(ಡಿ) ಸ್ಪರ್ಧಿಸುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದು;

(ಇ) ಮತದಾನ ಕೇಂದ್ರಗಳ ವ್ಯವಸ್ಥೆ ಮಾಡುವುದು;

(ಎಫ್) ಮತದಾನ ಕೇಂದ್ರಗಳಿಗೆ ಸಿಬ್ಬಂದಿಯನ್ನು [1][ನೇಮಕ ಮಾಡಿಕೊಳ್ಳುವುದು];

(ಜಿ) ಮತಪೆಟ್ಟಿಗೆಗಳನ್ನು ಒದಗಿಸಲು ವ್ಯವಸ್ಥೆ ಮಾಡುವುದು;

(ಹೆಚ್) ಮತಪತ್ರಗಳನ್ನು ಮುದ್ರಿಸಲು ವ್ಯವಸ್ಥೆ ಮಾಡುವುದು;

(ಐ) ಅಗತ್ಯಬಿದ್ದರೆ ವಿವಿಧ ಮತದಾನ ಕೇಂದ್ರಗಳ ಫಲಿತಗಳನ್ನು ಸಂಕಲಿಸುವುದು;

(ಜೆ) ಚುನಾವಣೆಯ ಫಲಿತಾಂಶವನ್ನು ಘೋಷಿಸುವುದು ಮತ್ತು ಚುನಾವಣಾ ಪ್ರಮಾಣ ಪತ್ರವನ್ನು ನೀಡುವುದು.

(3) ಉಪನಿಯಮ (1)ರಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು ನಿರ್ದೇಶಕರ ಚುನಾವಣೆಯ ಉದ್ದೇಶಕ್ಕಾಗಿ ಚುನಾವಣಾ ವೇಳಾಪಟ್ಟಿಯನ್ನು ಸಾಮಾನ್ಯ ಚುನಾವಣಾ ದಿನಾಂಕದ ಕನಿಷ್ಠ ಹದಿನೈದು ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಸಹಿಯಲ್ಲಿ ಸಾಮಾನ್ಯ ಚುನಾವಣೆಯ ನೋಟಿಸನ್ನು ಚುನಾವಣಾ ವೇಳಾಪಟ್ಟಿ ಸಹಿತ ಎಲ್ಲಾ ಅರ್ಹ ಸದಸ್ಯರಿಗೆ ಕೆಳಗಿನ ರೀತಿಯಲ್ಲಿ ಕಳುಹಿಸತಕ್ಕದ್ದು:

(1) (ಎ) ಸಾಮಾನ್ಯ ಅಂಚೆ [2][ಅಥವಾ ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ (Bulk post)]; ಅಥವಾ

(ಬಿ) ವಿದ್ಯುನ್ಮಾನ ಅಂಚೆ (ಇ–ಮೇಲ್ ); ಅಥವಾ

(ಸಿ) ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯವಾಗಿ ತಲುಪಿಸುವ ಮೂಲಕ; ಮತ್ತು

(2) ಕಾರ್ಯಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸುವ ಮೂಲಕ.

(4) ಚುನಾವಣಾ ವೇಳಾಪಟ್ಟಿಯ ಸಹಿತ ಸಾಮಾನ್ಯ ಚುನಾವಣಾ ನೋಟಿಸನ್ನು ಸಹಕಾರಿಯ ಮತ್ತು ಅದರ ಶಾಖೆಗಳ ಸೂಚನಾಫಲಕಗಳಲ್ಲಿ, ರಿಟರ್ನಿಂಗ್ ಅಧಿಕಾರಿಯು ಕಚೇರಿಯು ಸೂಚನಾಫಲಕದಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಸೂಚನಾಫಲಕದಲ್ಲಿ ಪ್ರಕಟಿಸತಕ್ಕದ್ದು. ಸಾಮಾನ್ಯ

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

2. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಚುನಾವಣಾ ನೋಟೀಸು ಕೆಳಗಿನ ಹೆಚ್ಚುವರಿ ಮಾಹಿತಿಯನ್ನು ಒಳಗೊಂಡಿರತಕ್ಕದ್ದು:–

(ಎ) ಸಾಮಾನ್ಯ ಚುನಾವಣೆಯಲ್ಲಿ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆ;

(ಬಿ) ನಿರ್ದೇಶಕರಗಳನ್ನು ಚುನಾಯಿಸಬೇಕಾದ ಪ್ರದೇಶ ಅಥವಾ ಮತಕ್ಷೇತ್ರ (ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ);

(ಸಿ) ಅಧಿನಿಯಮದಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ಆಡಳಿತ ಮಂಡಳಿಯ ಸದಸ್ಯನಾಗಿ ಚುನಾಯಿತರಾಗಲು ನಿರ್ದಿಷ್ಟಪಡಿಸಲಾದ ಅರ್ಹತೆಗಳು;

(5) ಪ್ರತಿಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಚುನಾವಣೆ ಸಂಬಂಧದಲ್ಲಿ ರಿಟರ್ನಿಂಗ್ ಅಧಿಕಾರಿ ಅಪೇಕ್ಷಿಸುವ ಸೂಕ್ತವಾದ ಸಹಾಯ ಮತ್ತು ನೆರವನ್ನು ಒದಗಿಸತಕ್ಕದ್ದು.

(6) ರಿಟರ್ನಿಂಗ್ ಅಧಿಕಾರಿಯು ಚುನಾವಣೆಯ ಸಂಬಂಧದಲ್ಲಿ ಚುನಾವಣಾ ಸಿಬ್ಬಂದಿಗಳಿಂದ ಬರುವ ಕಾಗದಪತ್ರಗಳನ್ನು ಸ್ವೀಕರಿಸತಕ್ಕದ್ದು.

(7) ರಿಟರ್ನಿಂಗ್ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಗೆ ಅಗತ್ಯವಾದಲ್ಲಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಮತ್ತು ಚುನಾವಣಾ ಸಿಬ್ಬಂದಿಯ (ತನ್ನ ಕಚೇರಿಯ ಸಿಬ್ಬಂದಿಯನ್ನು ಒಳಗೊಂಡಂತೆ) ನೆರವನ್ನು [1][****] ಪಡೆಯಬಹುದು.

(8) ರಿಟರ್ನಿಂಗ್ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಹಕಾರಿಯ ಸಾಮಾನ್ಯ ಚುನಾವಣೆಯಲ್ಲಿ ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಜಿಲ್ಲೆಯ ಆಡಳಿತದೊಡನೆ ಸಂಪರ್ಕವಿಟ್ಟಿರತಕ್ಕದ್ದು.

(9) ಚುನಾವಣಾ ಆಯೋಗವು ಕಾಲಕಾಲಕ್ಕೆ ನಿರ್ದೇಶಿಸಿದಂತೆ ರಿಟರ್ನಿಂಗ್ ಅಧಿಕಾರಿಯು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ವರದಿಗಳನ್ನು ಸಲ್ಲಿಸತಕ್ಕದ್ದು.

(10) ಚುನಾವಣೆಗೆ ಸಂಬಂಧಪಟ್ಟ ಎಲ್ಲ ಸಂಗತವಾದ ಚುನಾವಣಾ ದಾಖಲೆಗಳನ್ನು ಸೂಕ್ತ ಸ್ವೀಕೃತಿಯೊಂದಿಗೆ ಸಂಬಂಧಪಟ್ಟ ಸಹಕಾರಿಯ ಸುಪರ್ದಿನಲ್ಲಿ ಸಂರಕ್ಷಿಸತಕ್ಕದ್ದು, ಆದರೆ ಅಸಾಧಾರಣ ಸಂದರ್ಭಗಳಲ್ಲಿ, ಚುನಾವಣಾ ಆಯೋಗ ಅಥವಾ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಂಥ ದಾಖಲೆಗಳನ್ನು ಉಪವಿಭಾಗೀಯ ಕಚೇರಿಯಲ್ಲಿ ಸುರಕ್ಷೆಯಲ್ಲಿಡುವುದು ಅಗತ್ಯವೆಂದು ಭಾವಿಸಿದಲ್ಲಿ, ಅಂಥ ದಾಖಲೆಗಳನ್ನು ಉಪವಿಭಾಗೀಯ ಕಚೇರಿಯಲ್ಲಿ ಸುರಕ್ಷೆಯಲ್ಲಿಡಬಹುದು.

[2][*****]

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
2. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(12) ಕಾಲಕಾಲಕ್ಕೆ [ಸಹಕಾರ ಚುನಾವಣಾ ಪ್ರಾಧಿಕಾರ]*ವು ವಹಿಸುವ ಅಂಥ ಇತರ ಪ್ರಕಾರ್ಯಗಳನ್ನು ರಿಟರ್ನಿಂಗ್ ಅಧಿಕಾರಿಯು ನಿರ್ವಹಿಸತಕ್ಕದ್ದು.

**5ಡಿ. ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಚುನಾವಣಾ ಸಿಬ್ಬಂದಿ ನೇಮಕಾತಿ:–**

(1) ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನದ ಕೇಂದ್ರಕ್ಕಾಗಿ ಒಬ್ಬ ಪ್ರಿಸೈಡಿಂಗ್ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಪೋಲಿಂಗ್ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕಮಾಡಬಹುದು.

(2) ಪ್ರಿಸೈಡಿಂಗ್ ಅಧಿಕಾರಿಯು ಹಾಗೆ ನಿರ್ದೇಶಿಸಿದಲ್ಲಿ, ಪೋಲಿಂಗ್ ಅಧಿಕಾರಿಯು ಈ ನಿಯಮಗಳ ಅಡಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಎಲ್ಲ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು.

(3) ಪ್ರಿಸೈಡಿಂಗ್ ಅಧಿಕಾರಿಯು ಅನಾರೋಗ್ಯದಿಂದಾಗಿ ಅಥವಾ ಇತರ ಅನಿವಾರ್ಯ ಕಾರಣದಿಂದಾಗಿ ಮತದಾನ ಕೇಂದ್ರದಿಂದ ಗೈರುಹಾಜರಾಗಲೇಬೇಕಾದರೆ, ಯಾವುದೇ ಅಂಥ ಗೈರುಹಾಜರಿಯ ಕಾಲದಲ್ಲಿ ಅಂಥ ಪ್ರಕಾರ್ಯಗಳನ್ನು ನೆರವೇರಿಸಲು ರಿಟರ್ನಿಂಗ್ ಅಧಿಕಾರಿಯು ಈ ಹಿಂದೆಯೇ ಅಧಿಕೃತಗೊಳಿಸಿದಂಥ ಅವನ ಪ್ರಕಾರ್ಯಗಳನ್ನು ಪೋಲಿಂಗ್ ಅಧಿಕಾರಿಯು ನೇರವೇರಿಸಕ್ಕದ್ದು.

(4) ಮತದಾನ ಕೇಂದ್ರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಮತದಾನವು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಪ್ರಿಸೈಡಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು.

(5) ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಅವನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸಹಾಯ ಮಾಡುವುದು ಆ ಮತದಾನ ಕೇಂದ್ರದ ಪೋಲಿಂಗ್ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(6) ಪ್ರತಿ ಸಹಾಯಕ ರಿಟರ್ನಿಂಗ್ ಅಧಿಕಾರಿಯು, ರಿಟರ್ನಿಂಗ್ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ರಿಟರ್ನಿಂಗ್ ಅಧಿಕಾರಿಯು ಅಥವಾ [ಸಹಕಾರ ಚುನಾವಣಾ ಪ್ರಾಧಿಕಾರ]*ವು ವಹಿಸುವಂತೆ ರಿಟರ್ನಿಂಗ್ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕದ್ದು.

(7) ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಸಾಮಾನ್ಯ ಚುನಾವಣೆಯ ದಿನದಂದು ಪ್ರಿಸೈಡಿಂಗ್ ಅಧಿಕಾರಿ ಮತ್ತು ಪೋಲಿಂಗ್ ಅಧಿಕಾರಿಗಳು ಮತದಾನವನ್ನು ನಡೆಸತಕ್ಕದ್ದು ಮತ್ತು ಮತದಾನ ಮುಕ್ತಾಯವಾದ ಕೂಡಲೇ ಸದಸ್ಯರು ಅಥವಾ ಪ್ರತಿನಿಧಿಗಳು ಅಥವಾ ಡೆಲಿಗೇಟುಗಳು ಹಾಕಿದ ಮತಗಳನ್ನು ಎಣಿಸತಕ್ಕದ್ದು ಮತ್ತು ನಿರ್ದೇಶಿಸಿದಂತೆ ವರದಿಗಳನ್ನು ತಯಾರಿಸತಕ್ಕದ್ದು. ಅವರು ಸಾಮಾನ್ಯ ಚುನಾವಣೆಗೆ ಸಂಬಂಧಪಟ್ಟ ದಾಖಲೆಗಳನ್ನು ಅಥವಾ ಸಾಮಗ್ರಿಗಳನ್ನು

ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

**5ಇ. ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆ:**

(1) ಪ್ರಕರಣ 26ರಲ್ಲಿ ಉಲ್ಲೇಖಿಸಿದ ಸಾಮಾನ್ಯ ಚುನಾವಣೆಗಾಗಿ ಜಿಲ್ಲಾ ಚುನಾವಣಾಧಿಕಾರಿಯು, [ಸಹಕಾರ ಚುನಾವಣಾ ಪ್ರಾಧಿಕಾರ]*ದ ಅನುಮೋದನೆ ಪಡೆದನಂತರ, ನಮೂನೆ 1ಎರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

(2) ಜಿಲ್ಲಾ ಚುನಾವಣಾಧಿಕಾರಿಯು, ಅಂಥ ಅಧಿಸೂಚನೆಯನ್ನು ಹೊರಡಿಸುವಾಗ ಈ ಕೆಳಕಂಡ ಅಂಶಗಳನ್ನು ನಮೂದಿಸತಕ್ಕದ್ದು, ಅಂದರೆ:–

(i) ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕವು ಸಾಮಾನ್ಯ ಚುನಾವಣೆ ದಿನಾಂಕದ ಪೂರ್ವದ ಸ್ಪಷ್ಟ ಏಳು ದಿನಗಳಾಗಿರತಕ್ಕದ್ದು.

(ii) ನಾಮಪತ್ರ ಸಲ್ಲಿಕೆಗೆ ನಿಗದಿಯಾದ ಕೊನೆಯ ದಿನದ ಮರುದಿನವು ನಾಮಪತ್ರ ಪರಿಶೀಲನಾ ದಿನಾಂಕವಾಗಿರತಕ್ಕದ್ದು.

(iii) ನಾಮಪತ್ರ ಹಿಂಪಡೆಯುವ ದಿನಾಂಕವು ಸಾಮಾನ್ಯ ಚುನಾವಣೆಯ ದಿನಾಂಕ ಪೂರ್ವದ ಸ್ಪಷ್ಟ ಐದು ದಿನಗಳಾಗಿರತಕ್ಕದ್ದು.

(iv) ಮತದಾನ, ಅಗತ್ಯವಿದ್ದಲ್ಲಿ, ನಡೆಯುವ ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸತಕ್ಕದ್ದು.

(v) ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

(3) (ಎ) ಉಪನಿಯಮ (1)ರಡಿ ಅಧಿಸೂಚನೆಯನ್ನು ಹೊರಡಿಸಿದ ನಂತರ, ಉದ್ದೇಶಿತ ಸಾಮಾನ್ಯ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ 2ಎರಲ್ಲಿ ಅದನ್ನು ತನ್ನ ಕಚೇರಿಯ ಸೂಚನಾಫಲಕದಲ್ಲಿ, ಸಹಕಾರಿಯ ಕಚೇರಿಯ ಸೂಚನಾಫಲಕದಲ್ಲಿ [1][ಪ್ರಕಟಿಸತಕ್ಕದ್ದು] ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ನಾಮಪತ್ರಗಳನ್ನು ಆಹ್ವಾನಿಸಿ ಸಾರ್ವಜನಿಕ ನೋಟಿಸನ್ನು ನೀಡತಕ್ಕದ್ದು.

(ಬಿ) ಅಂಥ ನೋಟಿಸಿನಲ್ಲಿ, ರಿಟರ್ನಿಂಗ್ ಅಧಿಕಾರಿಯು ಇತರೆ ವಿಷಯಗಳ ಜೊತೆಗೆ ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ಇರುವ ಕೊನೆಯ ದಿನಾಂಕ, ನಾಮಪತ್ರಗಳನ್ನು ಸಲ್ಲಿಸಬೇಕಾದ ಸ್ಥಳ, ನಾಮಪತ್ರಗಳ ಪರಿಶೀಲನೆಯ ದಿನಾಂಕ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ, ಮತದಾನವನ್ನು ನಡೆಸುವ ದಿನಾಂಕ ಮತ್ತು ಮತದಾನದ ವೇಳೆ ಮತ್ತು ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಪೂರ್ಣಗೊಳಿಸಬೇಕೋ ಆ ದಿನಾಂಕ ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು. ಇವು ಜಿಲ್ಲಾ

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಚುನಾವಣಾಧಿಕಾರಿಯು ಆ ಬಗ್ಗೆ (2)ನೇ ಉಪನಿಯಮದ ಅಡಿಯಲ್ಲಿ ಅಧಿಸೂಚಿಸಿದ ದಿನಾಂಕಗಳಿಗೆ ಅನುಗುಣವಾಗಿರತಕ್ಕದ್ದು.

**5ಎಫ್. ನಾಮಪತ್ರ ಸಲ್ಲಿಕೆ:**

**(1)** ನಾಮಪತ್ರ ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ [2][ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ] ಈ ಬಗ್ಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ನಮೂನೆ 2ಬಿ ರಲ್ಲಿ ಪೂರ್ಣಗೊಳಿಸಿದ ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯನು ಸೂಚಕನಾಗಿ ಯುಕ್ತವಾಗಿ ರುಜುಮಾಡಿರುವ ನಾಮಪತ್ರವನ್ನು ಸಲ್ಲಿಸತಕ್ಕದ್ದು. ಅಂಥ ನಾಮಪತ್ರವು ಅಭ್ಯರ್ಥಿಯು ಸಹಕಾರಿಯ ಆಡಳಿತ ಮಂಡಳಿಗೆ ಸಾಮಾನ್ಯ ಮತಕ್ಷೇತ್ರದಿಂದ ಅಥವಾ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಅಥವಾ ಮಹಿಳೆಯರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಮತ್ತು ಆತನು ಸಹಿ ಮಾಡಿರುವ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

ಪರಂತು, ಸಂದರ್ಭಾನುಸಾರ ಯಾವ ಸದಸ್ಯನೂ ಅಥವಾ ಪ್ರತಿನಿಧಿಯೂ ಅಥವಾ ಡೆಲಿಗೇಟನೂ ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗೂ ಯಾವ ಸದಸ್ಯನೂ ಅಥವಾ ಪ್ರತಿನಿಧಿಯೂ ಅಥವಾ ಡೆಲಿಗೇಟನೂ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ.

ಮತ್ತು ಪರಂತು, ಒಂದು ಸಹಕಾರಿಯ ಪರವಾಗಿ ಸಲ್ಲಿಸಲ್ಪಟ್ಟ ನಾಮಪತ್ರವು ಆ ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯದೊಂದಿಗೆ ಇರತಕ್ಕದ್ದು ಮತ್ತು ಅದನ್ನು ಅಭ್ಯರ್ಥಿಯೇ ಸ್ವತಃ ಸಹಿ ಮಾಡಿರತಕ್ಕದ್ದು.

(2) ಯಾವುದೇ ಸಹಕಾರಿಯ ಆಡಳಿತ ಮಂಡಳಿಗೆ ನಡೆಯುವ ಸಾಮಾನ್ಯ ಚುನಾವಣೆಯಲ್ಲಿ :–

(i) ಯಾವುದೇ ಸ್ಥಾನವನ್ನು ಹಿಂದುಳಿದ ವರ್ಗಗಳಿಗೆ ಅಥವಾ ಪರಿಶಿಷ್ಟ ಜಾತಿ ಅಥವಾ ಪಂಗಡದವರಿಗೆ ಮೀಸಲಿಟ್ಟಿದ್ದರೆ ಆ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಅಭ್ಯರ್ಥಿಯ ನಾಮಪತ್ರವು ಅವನು ಸದಸ್ಯನಾಗಿರುವಂಥ ನಿರ್ದಿಷ್ಟ ವರ್ಗ, ಜಾತಿ ಅಥವಾ ಪಂಗಡವನ್ನು ನಿರ್ದಿಷ್ಟಪಡಿಸುವ ಮತ್ತು ಅವನ ಘೋಷಣೆಯನ್ನು ಒಳಗೊಂಡಿರದ ಹೊರತು ಆ ಸ್ಥಾನವನ್ನು ಭರ್ತಿಮಾಡಲು ಆಯ್ಕೆಗೊಳ್ಳಲು ಅರ್ಹನಾಗಿರುವುದಾಗಿ ಭಾವಿಸತಕ್ಕದ್ದಲ್ಲ.

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(ii) ಯಾವುದೇ ಸ್ಥಾನವನ್ನು ಮಹಿಳೆಯರಿಗಾಗಿ ಮೀಸಲಿಟ್ಟಿದ್ದರೆ, ನಾಮಪತ್ರವು ಅಭ್ಯರ್ಥಿಯು ಮಹಿಳೆಯಾಗಿರುವಳೆಂಬ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

(3) ಅಂಥ ಪ್ರತಿ ನಾಮಪತ್ರವು ಸಹಕಾರಿ ಹೆಸರಿಗೆ ಕೆಳಗಿನಂತೆ ನಗದುರೂಪದಲ್ಲಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಠೇವಣಿಸಿದ ರಶೀದಿಯನ್ನು ಒಳಗೊಂಡಿರತಕ್ಕದ್ದು.

(i) ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯಾಗಿದ್ದಲ್ಲಿ, **ಒಂದು** ಸಾವಿರ ರೂ.ಗಳು

(ii) ಒಕ್ಕೂಟ ಅಥವಾ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಐದು ಸಾವಿರ ರೂ.ಗಳು

ಪರಂತು, ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಠೇವಣಿಯು ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ ಐವತ್ತರಷ್ಟು ಇರತಕ್ಕದ್ದು.

(4) ನಾಮಪತ್ರವನ್ನು ಸಲ್ಲಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿಯ ಮತ್ತು ಅವನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಮತದಾರರ ಪಟ್ಟಿಯಲ್ಲಿ ಹೇಗೆ ನಮೂದಿತವಾಗಿವೆಯೋ ಹಾಗೇ ಇವೆ ಎಂಬುದನ್ನು ಮನದಟ್ಟು ಮಾಡಿಕೊಳ್ಳತಕ್ಕದ್ದು.

(5) ನಾಮಪತ್ರವನ್ನು ಸಲ್ಲಿಸುವಾಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗೆ ತಿಳಿಸತಕ್ಕದ್ದು ಮತ್ತು ನಾಮಪತ್ರದ ಮೇಲೆ ಅದರ ಕ್ರಮ ಸಂಖ್ಯೆಯನ್ನು ದಾಖಲಿಸಿ ಅದರ ಮೇಲೆ ನಾಮಪತ್ರವನ್ನು ಆತನಿಗೆ ತಲುಪಿಸಿದ ದಿನಾಂಕ ಮತ್ತು ಸಮಯವನ್ನು ನಮೂದಿಸಿ ಸಹಿ ಮಾಡತಕ್ಕದ್ದು ಹಾಗೂ ಅದನ್ನು ಸ್ವೀಕರಿಸಿದ ಬಗ್ಗೆ ಲಿಖಿತ ಸ್ವೀಕೃತಿಯನ್ನು ತಕ್ಷಣ ನೀಡತಕ್ಕದ್ದು. ನಾಮಪತ್ರವನ್ನು ಸ್ವೀಕರಿಸಲು ನಿಗದಿಪಡಿಸಿದ ಸಮಯ ಮುಕ್ತಾಯವಾದ ನಂತರ, ರಿಟರ್ನಿಂಗ್ ಅಧಿಕಾರಿಯು ಸ್ವೀಕೃತವಾದ ನಾಮಪತ್ರದ ಪಟ್ಟಿಯನ್ನು ತಯಾರಿಸಿ ಸಹಕಾರಿಯ ಸೂಚನಾಫಲಕದ ಮೇಲೆ ಮತ್ತು ತನ್ನ ಕಚೇರಿಯ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು.

**5ಜಿ. ನಾಮಪತ್ರಗಳ ಪರಿಶೀಲನೆ:**

**(1)** ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಗಳು ಅಥವಾ ಅವರ ಸೂಚಕರು ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಬಹುದಾದಂತಹ ವೇಳೆ ಮತ್ತು ಸ್ಥಳದಲ್ಲಿ ಹಾಜರಾಗಬಹುದು ಆದರೆ ಬೇರೆ ಯಾವುದೇ ವ್ಯಕ್ತಿಯು ಹಾಜರಿರತಕ್ಕದ್ದಲ್ಲ. ರಿಟರ್ನಿಂಗ್ ಅಧಿಕಾರಿಯು ಅವರಿಗೆ ನಿಗದಿಪಡಿಸಿದ ಅವಧಿಯೊಳಗೆ ಮತ್ತು ರೀತಿಯಲ್ಲಿ

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಸಲ್ಲಿಸಲಾದ ಎಲ್ಲಾ ಅಭ್ಯರ್ಥಿಗಳ ನಾಮಪತ್ರಗಳನ್ನು ಪರೀಕ್ಷಿಸುವುದಕ್ಕಾಗಿ ಮತ್ತು ನಾಮಪತ್ರಗಳು ಸರಿಯಿರುವಿಕೆ, ಅರ್ಹತೆ ಮತ್ತು ಪೂರ್ಣತೆಯನ್ನು ಮನಗಾಣಲು [1][ಅವಶ್ಯ ಮಾಹಿತಿಯನ್ನು ನೀಡತಕ್ಕದ್ದು.]

(2) ಆಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಯಾವುದೇ ನಾಮಪತ್ರಕ್ಕೆ ಮಾಡಿರಬಹುದಾದಂಥ ಎಲ್ಲಾ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕದ್ದು ಮತ್ತು ಅಂಥ ಆಕ್ಷೇಪಣೆಗಳ ಮೇಲೆ ಆಗಲಿ ಅಥವಾ ಸ್ವಪ್ರೇರಣೆಯಿಂದಾಗಲಿ ತಾನು ಅವಶ್ಯವೆಂದು ಯೋಚಿಸುವಂಥ ಸಂಗ್ರಹವಾದ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರುವಾಯ ಯಾವುದೇ ನಾಮಪತ್ರವನ್ನು ಈ ಕೆಳಕಂಡ ಯಾವುದೇ ಕಾರಣದ ಮೇಲೆ ತಿರಸ್ಕರಿಸಬಹುದು, ಎಂದರೆ:–

(i) ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳ ಮೇರೆಗೆ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ಅರ್ಹತೆ ಇಲ್ಲದಿರುವುದು ಅಥವಾ ಅನರ್ಹನಾಗಿರುವುದರ ಕಾರಣದಿಂದ;

(ii) ನಾಮಪತ್ರದ ಮೇಲೆ ಇರುವ ಅಭ್ಯರ್ಥಿಯ ಅಥವಾ ಸೂಚಕನ ರುಜು ನೈಜವಾದುದಲ್ಲವಾಗಿರುವುದರ ಕಾರಣದಿಂದ

ಪರಂತು, ಪ್ರಸಂಗಾನುಸಾರ ಅಭ್ಯರ್ಥಿಯ ಅಥವಾ ಆತನ ಸೂಚಕನ ಗುರುತು ಸಾಬೀತಾದಲ್ಲಿ, ಆತನ ಹೆಸರನ್ನು ಹೆಸರಿನ ಅಥವಾ ಆತನ ಸೂಚಕನ ಹೆಸರಿನ ಅಥವಾ ಮತದಾರರ ಪಟ್ಟಿಯಲ್ಲಿ ದಾಖಲಿಸಿರುವಂತೆ ಅಭ್ಯರ್ಥಿಗೆ ಅಥವಾ ಸೂಚಕನಿಗೆ ಸಂಬಂಧಪಟ್ಟ ಇತರ ಮಾಹಿತಿಗಳ ನಿಖರವಲ್ಲದ ವಿವರಣೆ ಇದೆ ಎಂಬ ಕಾರಣದ ಮೇಲೆ ಮಾತ್ರ ಯಾವುದೇ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ.

ಮತ್ತು ಪರಂತು, ರಿಟರ್ನಿಂಗ್ ಅಧಿಕಾರಿಯು ಗಣನಾರ್ಹ ಸ್ವರೂಪವಲ್ಲದ ಯಾವುದೇ ದೋಷದ ಕಾರಣದ ಮೇಲೆ ಯಾವುದೇ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ.

(iii) ನಾಮಪತ್ರಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ನಾಮಪತ್ರವನ್ನು ತಲುಪಿಸಲಾಗಿದೆ ಅಥವಾ ಸ್ವೀಕರಿಸಲಾಗಿದೆಯೆಂಬ ಕಾರಣದಿಂದ

(3) ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ನಾಮಪತ್ರದ ಮೇಲೆ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತನ್ನ ತೀರ್ಮಾನವನ್ನು ಹಿಂಬರಹ ಮಾಡತಕ್ಕದ್ದು ಮತ್ತು ನಾಮಪತ್ರವನ್ನು ತಿರಸ್ಕರಿಸಿದರೆ ಅಂಥ ತಿರಸ್ಕರಣೆಯ ಬಗ್ಗೆ ಅವನಿಗೆ ಇರುವ ಕಾರಣಗಳ ಸಂಕ್ಷಿಪ್ತ ಹೇಳಿಕೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕದ್ದು.

(4) ಎಲ್ಲ ನಾಮಪತ್ರಗಳನ್ನು ಪರಿಶೀಲಿಸಿ ಅವುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತೀರ್ಮಾನವನ್ನು ದಾಖಲು ಮಾಡಿದ ತರುವಾಯ ಕೂಡಲೇ ರಿಟರ್ನಿಂಗ್ ಅಧಿಕಾರಿಯು ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಅಂದರೆ ಯಾರ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಕಂಡುಬಂದಿದೆಯೋ ಅಂಥ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ 2ಸಿನಲ್ಲಿ ತಯಾರಿಸತಕ್ಕದ್ದು ಮತ್ತು ಅದನ್ನು ತನ್ನ ಕಛೇರಿಯ ಸೂಚನಾಫಲಕದ ಮೇಲೆ ಪ್ರಕಟಿಸತಕ್ಕದ್ದು. ಅಂಥ ಪಟ್ಟಿಯ ಒಂದು ಪ್ರತಿಯನ್ನು ಅದೇ ದಿನ ಸಹಕಾರಿಯ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು.

**5ಹೆಚ್. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವಿಕೆ:**

**(1)** ಯಾವನೇ ಅಭ್ಯರ್ಥಿಯು ನಮೂನೆ 2ಡಿ ನಲ್ಲಿ ಲಿಖಿತದಲ್ಲಿ ನೋಟಿಸು ನೀಡುವ ಮೂಲಕ ಮತ್ತು ಅದನ್ನು ನಾಮಪತ್ರ ಸಲ್ಲಿಸಿದ ನಂತರ ಆದರೆ ನಾಮಪತ್ರ ಪರಿಶೀಲನೆಗೆ ನಿಗದಿಮಾಡಿದ ದಿನಾಂಕದ ಮರುದಿನದ ಮೂರು ಗಂಟೆಯ ಒಳಗೆ ಯಾವುದೇ ಸಮಯದಲ್ಲಾದರೂ ಅಂಥ ಅಭ್ಯರ್ಥಿಯೇ ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ನೀಡುವ ಮೂಲಕ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪನಿಯಮದ ಮೇರೆಗೆ ಅಂಥ ನೋಟಿಸನ್ನು ಸ್ವೀಕರಿಸಿದ ಮೇಲೆ ರಿಟರ್ನಿಂಗ್ ಅಧಿಕಾರಿಯು ಅದರ ಮೇಲೆ ಅದನ್ನು ನೀಡಿದ ದಿನಾಂಕ ಮತ್ತು ವೇಳೆಯನ್ನು ಬರೆಯತಕ್ಕದ್ದು ಮತ್ತು ತನ್ನ ಸಹಿಯನ್ನು ಹಾಕಿ ಮೊಹರನ್ನು ಹಾಕತಕ್ಕದ್ದು.

(3) (1)ನೇ ಉಪನಿಯುಮದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟಿಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಗೆ ಸದರಿ ನೋಟಿಸನ್ನು ರದ್ದುಪಡಿಸಲು ಅವಕಾಶ ನೀಡತಕ್ಕದ್ದಲ್ಲ. ಒಬ್ಬ ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಹಿಂತೆದುಕೊಳ್ಳುವ ಬಗ್ಗೆ ಒಮ್ಮೆ ನೀಡಿದ ನೋಟಿಸು ಮಾರ್ಪಡಿಸತಕ್ಕದ್ದಲ್ಲ ಮತ್ತು ಅದು ಅಂತಿಮವಾಗಿರತಕ್ಕದ್ದು.

**5ಐ. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ತಯಾರಿಕೆ:**

**(1)** ಉಮೇದುವಾರಿಕೆಗಳನ್ನು ಹಿಂದಕ್ಕೆ ಪಡೆಯಬಹುದಾದ ಅವಧಿಯು ಮುಕ್ತಾಯವಾದ ಕೂಡಲೇ ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳ ಅಂದರೆ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿದ ಮತ್ತು ಸದರಿ ಅವಧಿಯೊಳಗೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ 2ಇ ನಲ್ಲಿ ಕನ್ನಡ ಭಾಷೆಯಲ್ಲಿ ತಯಾರಿಸಿ ಪ್ರಕಟಿಸತಕ್ಕದ್ದು. ಅಂತಹ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರತಿಯನ್ನು ಸಹಕಾರಿಯ ಸೂಚನಾಫಲಕದ ಮೇಲೆ ಅದೇ ದಿನ ಪ್ರದರ್ಶಿಸತಕ್ಕದ್ದು.

ಪರಂತು, [ಸಹಕಾರ ಚುನಾವಣಾ ಪ್ರಾಧಿಕಾರ]*ವು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಕನ್ನಡೇತರ ಭಾಷೆಯಲ್ಲಿ ತಯಾರಿಸಬಹುದೆಂದು ನಿರ್ದೇಶಿಸಬಹುದು.

(2) ಸದರಿ ಪಟ್ಟಿಯು ನಾಮಪತ್ರಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನೀಡಿರುವಂತೆ ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸಗಳನ್ನು ಒಳಗೊಂಡಿರತಕ್ಕದ್ದು.

(3) ಮತದಾನವು ಅವಶ್ಯಕವಾದಲ್ಲಿ ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರದಲ್ಲಿ ವ್ಯಕ್ತಪಡಿಸಿರುವ ಚಿಹ್ನೆಗಳ ಆಯ್ಕೆಯನ್ನು ಪರ್ಯಾಲೋಚಿಸತಕ್ಕದ್ದು ಮತ್ತು ನಿಯಮ 5ಜೆ ಅನುಸಾರವಾಗಿ ಚಿಹ್ನೆಗಳನ್ನು ಹಂಚಿಕೆ ಮಾಡತಕ್ಕದ್ದು.

(4) ಅಭ್ಯರ್ಥಿಗೆ ನೀಡಲಾದ ಯಾವುದೇ ಚಿಹ್ನೆಯ ಬಗೆಗಿನ ಹಂಚುವಿಕೆಯು ಅಂತಿಮವಾಗಿರತಕ್ಕದ್ದು.

(5) ಪ್ರತಿಯೊಬ್ಬ ಅಭ್ಯರ್ಥಿಗೆ ಅಥವಾ ಅವನ ಸೂಚಕನಿಗೆ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಕೂಡಲೇ ತಿಳಿಸತಕ್ಕದ್ದು ಮತ್ತು ಅವರಿಗೆ ಅದರ ಒಂದು ಮಾದರಿಯನ್ನು ರಿಟರ್ನಿಂಗ್ ಅಧಿಕಾರಿಯು ಒದಗಿಸತಕ್ಕದ್ದು.

**5ಜೆ. ಚಿಹ್ನೆಗಳ ಹಂಚಿಕೆ:**

**(1)** ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳತಕ್ಕದ್ದು.

ವಿವರಣೆ: ಈ ಉಪನಿಯಮದ ಉದ್ದೇಶಕ್ಕಾಗಿ, **"**ಮಾನ್ಯ ಮಾಡಿದ ರಾಜಕೀಯ ಪಕ್ಷ**"** ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ 1968ರಡಿ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷ.

(2) ಯಾವುದೇ ಒಂದು ಮುಕ್ತ ಚಿಹ್ನೆಯನ್ನು ಒಬ್ಬ ಅಭ್ಯರ್ಥಿಯು ಮಾತ್ರ ಆಯ್ಕೆ ಮಾಡಿಕೊಂಡಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಆ ಚಿಹ್ನೆಯನ್ನು ಆ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು. ಆದರೆ ಬೇರೆ ಯಾರಿಗೂ ಹಂಚಿಕೆಮಾಡತಕ್ಕದ್ದಲ್ಲ.

(3) ಒಂದೇ ಮುಕ್ತ ಚಿಹ್ನೆಯನ್ನು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಸದರಿ ಮುಕ್ತ ಚಿಹ್ನೆಯನ್ನು ಯಾವ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು ಎಂಬ ಬಗ್ಗೆ ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು. ಯಾವ ಅಭ್ಯರ್ಥಿಯ ಪರವಾಗಿ ಚೀಟಿ ಬರುತ್ತದೋ ಆ ಅಭ್ಯರ್ಥಿಗೆ ಅಂಥ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಬೇರೆ ಯಾರಿಗೂ ಹಂಚಿಕೆ ಮಾಡತಕ್ಕದ್ದಲ್ಲ.

(4) ರಿಟರ್ನಿಂಗ್ ಅಧಿಕಾರಿಯು ನಮೂನೆ 2ಇ ನಲ್ಲಿ ಚಿಹ್ನೆ ಸಹಿತ ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಹೆಸರುಗಳನ್ನು ಜೋಡಿಸಿ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಕಟಿಸತಕ್ಕದ್ದು.

**5ಕೆ. ಮತದಾನಕ್ಕೆ ಮುಂಚೆ ಅಭ್ಯರ್ಥಿಯ ಮರಣ:**

**(1)** ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಿಂದ ಆಡಳಿತ ಮಂಡಲಿಯ ನಿರ್ದೇಶಕರ ಚುನಾವಣೆಯ ಯಾವುದೇ ಅಭ್ಯರ್ಥಿಯು;–

(i) ನಾಮಪತ್ರ ಸಲ್ಲಿಸಲು ಗೊತ್ತುಪಡಿಸಿರುವ ಕೊನೆಯ ದಿನದಂದು ನಾಮಪತ್ರ ಸಲ್ಲಿಕೆ ಅವಧಿ ಮುಕ್ತಾಯದ ನಂತರ ಯಾವುದೇ ಸಮಯದಲ್ಲಿ ಮರಣ ಹೊಂದಿದ್ದು ಮತ್ತು ಆತನ ನಾಮಪತ್ರವು ಪರಿಶೀಲನೆಯ ನಂತರ ಸಕ್ರಮವಾಗಿದೆ ಎಂದು ಕಂಡುಬಂದಲ್ಲಿ; ಅಥವಾ

(ii) ಪರಿಶೀಲನೆಯ ನಂತರ ಆತನ ನಾಮಪತ್ರವು ಕ್ರಮಬದ್ಧವಾಗಿ ಇರುವುದು ಕಂಡುಬಂದಿದ್ದು ಆತನು ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದೇ ಮೃತನಾದಲ್ಲಿ;

ಅಂಥ ಯಾವುದೇ ಸಂದರ್ಭದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಆತನ ಮರಣದ ವರದಿಯನ್ನು ಸ್ವೀಕರಿಸಿದ್ದರೆ; ಅಥವಾ

(iii) ಒಬ್ಬ ಸ್ಪರ್ಧಿಸುವ ಅಭ್ಯರ್ಥಿಯಾಗಿ ಮರಣ ಹೊಂದಿದ್ದು ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಆತನ ಮರಣದ ವರದಿಯನ್ನು ಸ್ವೀಕರಿಸಿದ್ದರೆ; ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ಮರಣದ ಬಗ್ಗೆ ಮನದಟ್ಟಾದ ಮೇಲೆ ಆ ಮತದಾನವನ್ನು, [ಸಹಕಾರ ಚುನಾವಣಾ ಪ್ರಾಧಿಕಾರ]*ದ ಪೂರ್ವ ಅನುಮೋದನೆಯ ಮೇರೆಗೆ, ಮುಂದೆ ಪ್ರಕಟಿಸುವ ದಿನಾಂಕಕ್ಕೆ ಮತದಾನವನ್ನು ಮುಂದೂಡುವ ಆದೇಶವನ್ನು ಹೊರಡಿಸಿ ಮುಂದೂಡತಕ್ಕದ್ದು ಮತ್ತು ಅದನ್ನು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ವಾಸ್ತವಾಂಶಗಳ ಬಗ್ಗೆ ವಿವರವಾದ ವರದಿಯನ್ನು ಕಳಿಸತಕ್ಕದ್ದು.

ಪರಂತು, ಮರಣ ಹೊಂದಿದ ಅಭ್ಯರ್ಥಿಯ ನಾಮಪತ್ರವು ಸೇರಿದಂತೆ ಎಲ್ಲ ನಾಮಪತ್ರಗಳ ಪರಿಶೀಲನೆಯ ನಂತರದ ಹೊರತು ಈ ನಿಯಮದಡಿಯಲ್ಲಿ ಮತದಾನ ರದ್ದುಪಡಿಸಲು ಯಾವುದೇ ಆದೇಶ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪನಿಯಮದಡಿ ರಿಟರ್ನಿಂಗ್ ಅಧಿಕಾರಿಯಿಂದ ವರದಿಯು ಸ್ವೀಕೃತವಾದ ನಂತರ, [ಸಹಕಾರ ಚುನಾವಣಾ ಪ್ರಾಧಿಕಾರ]*ವು ಅಂಥ ಆದೇಶ ಹೊರಡಿಸಿದ ಏಳು ದಿನಗಳೊಳಗೆ ಅಂಥ ಪ್ರದೇಶ ಅಥವಾ ಮತಕ್ಷೇತ್ರದಿಂದ ಮತದಾನಕ್ಕಾಗಿ ಹೊಸ ನಾಮಪತ್ರವನ್ನು ಆಹ್ವಾನಿಸತಕ್ಕದ್ದು.

ಪರಂತು, ಮತದಾನ ಮುಂದೂಡುವುದಕ್ಕೆ ಮುಂಚೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಯು ಅಂಥ

ಮುಂದೂಡಿಕೆಯ ತರುವಾಯ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಅನರ್ಹನಾಗಿರತಕ್ಕದ್ದಲ್ಲ.

(3) (1)ನೇ ಉಪನಿಯಮದಡಿ ಮತದಾನವನ್ನು ಮುಂದೂಡುವುದಕ್ಕೆ ಮುಂಚೆ ಸ್ಪರ್ಧಿಸುವ ಅಭ್ಯರ್ಥಿಯ ಪಟ್ಟಿಯನ್ನು ಪ್ರಕಟಿಸಲಾಗಿದ್ದ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು ಆ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಯ ಹೆಸರನ್ನು ಸೇರಿಸಲು ಅನುವಾಗುವಂತೆ ಆ ಪ್ರದೇಶ ಅಥವಾ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಹೊಸದಾಗಿ ತಯಾರಿಸಿ ಪ್ರಕಟಿಸತಕ್ಕದ್ದು.

**5ಎಲ್. ಸ್ಪರ್ಧಿಸಿದ ಮತ್ತು ಸ್ಪರ್ಧಿಸದ ಚುನಾವಣೆಯಲ್ಲಿ ಕಾರ್ಯವಿಧಾನ:**

(1) ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಆ ಪ್ರದೇಶ ಅಥವಾ ಮತಕ್ಷೇತ್ರದಿಂದ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ, ಮತದಾನವನ್ನು ನಡೆಸತಕ್ಕದ್ದು.

(2) ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಆ ಪ್ರದೇಶ ಅಥವಾ ಮತಕ್ಷೇತ್ರದಿಂದ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮನಾಗಿದ್ದರೆ, ರಿಟರ್ನಿಂಗ್ ಅಧಿಕಾರಿಯು ಕೂಡಲೇ ಅಂಥ ಎಲ್ಲಾ ಅಭ್ಯರ್ಥಿಗಳು ಆ ಸ್ಥಾನಗಳನ್ನು ಭರ್ತಿ ಮಾಡಲು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಯುಕ್ತವೆನಿಸಬಹುದಾದಂತೆ ನಮೂನೆ 2ಎಫ್ ಅಥವಾ 2ಜಿ ನಲ್ಲಿ ಘೋಷಿಸತಕ್ಕದ್ದು.

(3) ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಆ ಪ್ರದೇಶ ಅಥವಾ ಮತಕ್ಷೇತ್ರದಿಂದ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಕಡಿಮೆಯಾಗಿದ್ದರೆ, ನಾಮಪತ್ರ ಹಿಂತೆಗೆದ ನಂತರದಲ್ಲಿ ರಿಟರ್ನಿಂಗ್ ಅಧಿಕಾರಿಯು ಕೂಡಲೇ ಅಂಥ ಎಲ್ಲಾ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಯುಕ್ತವೆನಿಸಬಹುದಾದಂತೆ ನಮೂನೆ 2ಎಫ್ ಅಥವಾ 2ಜಿ ನಲ್ಲಿ ಘೋಷಿಸತಕ್ಕದ್ದು[1][***].

**5ಎಂ. ತುರ್ತುಸ್ಥಿತಿಯಲ್ಲಿ ಮತದಾನ ಮುಂದೂಡಿಕೆ:**

**(1)** ಸಾಮಾನ್ಯ ಚುನಾವಣೆಯಲ್ಲಿ, ಯಾವುದೇ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ವ್ಯವಹಾರಣೆಗಳಿಗೆ ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸೆಯಿಂದಾಗಿ ತಡೆ ಅಥವಾ ಅಡ್ಡಿಯುಂಟಾದರೆ ಅಥವಾ ಚುನಾವಣೆಯಲ್ಲಿ ಯಾವುದೇ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಯಾವುದೇ ನೈಸರ್ಗಿಕ ವಿಪತ್ತಿನಿಂದಾಗಿ ಅಥವಾ ಇತರೆ ಯಾವುದೇ ಸಾಕಷ್ಟು ಕಾರಣದಿಂದಾಗಿ ಮತದಾನವನ್ನು ನಡೆಸುವುದು ಸಾಧ್ಯವಿಲ್ಲವೆಂದು ಸಂಬಂಧಪಟ್ಟ ಪ್ರಿಸೈಡಿಂಗ್ ಅಧಿಕಾರಿಗೆ ಮನದಟ್ಟಾದರೆ ಅಂತಹ ಅಧಿಕಾರಿಯು ಅಂಥ ಮತದಾನ ಕೇಂದ್ರ ಅಥವಾ ಸ್ಥಳದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ರಿಟರ್ನಿಂಗ್ ಅಧಿಕಾರಿಗೆ ಸೂಕ್ತ

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ವರದಿ ಸಲ್ಲಿಸಿದ್ದಲ್ಲಿ ಅಂಥ ರಿಟರ್ನಿಂಗ್ ಅಧಿಕಾರಿಯು [ಸಹಕಾರ ಚುನಾವಣಾ ಪ್ರಾಧಿಕಾರ]*ದ ಪೂರ್ವಾನುಮೋದನೆಯೊಂದಿಗೆ, ಮುಂದೆ ಅಧಿಸೂಚಿಸತಕ್ಕಂಥ ದಿನಾಂಕದವರೆಗೆ ಅಂಥ ಮತದಾನ ಕೇಂದ್ರ ಅಥವಾ ಸ್ಥಳದ ಮತದಾನದ ಮುಂದೂಡುವಿಕೆಯನ್ನು ಪ್ರಕಟಿಸತಕ್ಕದ್ದು ಮತ್ತು ಮತದಾನವನ್ನು ಪ್ರಿಸೈಡಿಂಗ್ ಅಧಿಕಾರಿಯು ಮುಂದಕ್ಕೆ ಹಾಕತಕ್ಕದ್ದು.

ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದ ಮತದಾನಕ್ಕೆ ದೊಂಬಿ ಅಥವಾ ಬಹಿರಂಗ ಹಿಂಸೆಯಿಂದಾಗಿ ತಡೆ ಅಥವಾ ಅಡ್ಡಿ ಉಂಟಾಗಿದೆ ಎಂಬ ಬಗ್ಗೆ ಸಂಬಂಧಿಸಿದ ಪ್ರಿಸೈಡಿಂಗ್ ಅಧಿಕಾರಿಯು ಸ್ಥಳದ ಕಾರ್ಯವ್ಯಾಪ್ತಿ ಹೊಂದಿರುವ ತಹಶೀಲ್ದಾರನಿಂದ ಅಥವಾ ಪೊಲೀಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(2) ಮತದಾನವನ್ನು (1)ನೇ ಉಪನಿಯಮದ ಮೇರೆಗೆ ಮುಂದೂಡಿದಾಗ, ರಿಟರ್ನಿಂಗ್ ಅಧಿಕಾರಿಯು ಕೂಡಲೇ ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಪರಿಸ್ಥಿತಿಗಳ ಬಗ್ಗೆ ವರದಿ ಮಾಡತಕ್ಕದ್ದು ಮತ್ತು [ಸಹಕಾರ ಚುನಾವಣಾ ಪ್ರಾಧಿಕಾರ]*ದ ಪೂರ್ವಾನುಮೋದನೆ ಪಡೆದು ಸಾಧ್ಯವಾದಷ್ಟು ಬೇಗ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಮತದಾನವನ್ನು ಮುಂದೂಡುವುದಕ್ಕೆ ನಿಕಟಪೂರ್ವದಲ್ಲಿದ್ದಂಥ ಹಂತದಿಂದ ಮತದಾನವು ಪುನಃ ಪ್ರಾರಂಭವಾಗತಕ್ಕ ದಿನವನ್ನು ಮತ್ತು ಮತದಾನ ನಡೆಯುವ ಅವಧಿಯನ್ನು ಗೊತ್ತುಪಡಿಸಿ ನೋಟಿಸನ್ನು ಪ್ರಕಟಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಮುಂದೆ ಹಾಕಿದ ಅಂಥ ಮತದಾನವನ್ನು ಪೂರ್ಣಗೊಳಿಸುವವರೆಗೆ ಆಡಳಿತ ಮಂಡಳಿಯ ಅಂಥ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳ ಎಣಿಕೆಯನ್ನು ಮಾಡತಕ್ಕದ್ದಲ್ಲ.

(3) ರಿಟರ್ನಿಂಗ್ ಅಧಿಕಾರಿಯು (2)ನೇ ಉಪನಿಯಮದಡಿಯಲ್ಲಿ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು [ಸಹಕಾರ ಚುನಾವಣಾ ಪ್ರಾಧಿಕಾರ]*ವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(4) ಯಾವುದೇ ಮತದಾನದ ಕೇಂದ್ರದಲ್ಲಿನ ಮತದಾನವನ್ನು (1)ನೇ ಉಪನಿಯಮದ ಮೇರೆಗೆ ಮುಂದೂಡಿದಾಗ, ರಿಟರ್ನಿಂಗ್ ಅಧಿಕಾರಿಯು ಅಂಥ ಮುಂದೂಡಿದ ಮತದಾನವು ನಡೆಯುವಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಮೊಹರು ಮಾಡಿದ ಪ್ಯಾಕೆಟ್ಟಿನಲ್ಲಿ ಮತ್ತು ಒಂದು ಹೊಸ ಮತಪೆಟ್ಟಿಗೆಯನ್ನು ಒದಗಿಸತಕ್ಕದ್ದು.

(5) ಯಾವುದೇ ಮತದಾನ ಕೇಂದ್ರದಲ್ಲಿನ ಮತದಾನವನ್ನು (1)ನೇ ಉಪನಿಯಮದ ಮೇರೆಗೆ ಮುಂದೂಡಿದರೆ, 5ಆರ್ ಯಿಂದ 5ಯು ಮತ್ತು 5ಡಬ್ಲೂ ಯಿಂದ 5 ಎಡಿ ವರೆಗಿನ ನಿಯಮಗಳ ಉಪಬಂಧಗಳು ಅಂಥ ಮುಂದೂಡಿದ ಮತದಾನ ನಡೆಸುವುದಕ್ಕೆ, ಅವು ಹಾಗೆ ಮುಂದೂಡುವ ಮುಂಚಿನ ಮತದಾನದ ಸಂಬಂಧದಲ್ಲಿ ಹೇಗೆ ಅನ್ವಯವಾಗುತ್ತವೋ ಹಾಗೆ ಅನ್ವಯವಾಗತಕ್ಕದ್ದು.

**5ಎನ್. ಮತಪೆಟ್ಟಿಗೆಗಳ ನಾಶ ಇತ್ಯಾದಿ ಸಂದರ್ಭಗಳಲ್ಲಿ ಹೊಸ ಮತದಾನ:**

**(1)** ಯಾವುದೇ ಚುನಾವಣೆಯಲ್ಲಿ;-

(i) ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಉಪಯೋಗಿಸಿದ ಯಾವುದೇ ಮತಪೆಟ್ಟಿಗೆಯನ್ನು ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯ ಸುರಕ್ಷೆ(Custody)ಯಿಂದ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಅದು ಕಳೆದುಹೋದರೆ ಅಥವಾ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ಅದನ್ನು ನಾಶಗೊಳಿಸಿದ್ದರೆ ಅಥವಾ ಕೆಡಿಸಿದ್ದರೆ; ಅಥವಾ

(ii) ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ನಿರರ್ಥಗೊಳಿಸಲು ಸಂಭವವಿರುವ ಹಾಗೆ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪು ಅಥವಾ ಅಕ್ರಮತೆಯನ್ನು ಮಾಡಿದ್ದರೆ, ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯು ಆ ಸಂಗತಿಯನ್ನು ತಕ್ಷಣವೇ [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ವರದಿ ಮಾಡತಕ್ಕದ್ದು.

ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಮತದಾನವನ್ನು ಮುಂದುವರಿಸುವುದು ಸಾಧ್ಯವಿಲ್ಲ ಅಥವಾ ಮತ ಎಣಿಕೆಯು ಅಸಾಧ್ಯವಾಗಿ ಪರಿಣಮಿಸಿದೆ ಎಂಬ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯು ತಹಶೀಲ್ದಾರನಿಂದ ಅಥವಾ ಪೋಲಿಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(2) [ಸಹಕಾರ ಚುನಾವಣಾ ಪ್ರಾಧಿಕಾರ]*ವು ಉಪಪ್ರಕರಣ (1) ರಲ್ಲಿಯೇ ಎಲ್ಲಾ ಮಹತ್ವದ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ:-

(i) ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು. ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿ ಹೊಸದಾಗಿ ಮತದಾನವನ್ನು ನಡೆಸಲು ದಿವಸವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತು ಮಾಡಿದ ದಿನ ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು; ಅಥವಾ

(ii) ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಹೊಸ ಮತದಾನವು ಯಾವುದೇ ರೀತಿಯಲ್ಲಿ ಸಾಮಾನ್ಯ ಚುನಾವಣೆಯ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಉಂಟುಮಾಡುವುದಿಲ್ಲವೆಂದು ಅಥವಾ ಪ್ರಕ್ರಿಯೆಯಲ್ಲಿನ ತಪ್ಪು ಅಥವಾ ಅಕ್ರಮತೆಯು ಮಹತ್ವವಾದುದಲ್ಲವೆಂದು ಅಭಿಪ್ರಾಯಪಟ್ಟರೆ, ಚುನಾವಣೆ ನಡೆಸುವುದನ್ನು ಮುಂದುವರಿಸುವುದಕ್ಕಾಗಿ ಮತ್ತು ಪೂರ್ತಿಗೊಳಿಸುವುದಕ್ಕಾಗಿ

ತಾನು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನವನ್ನು ರಿಟರ್ನಿಂಗ್ ಅಧಿಕಾರಿಗೆ ನೀಡತಕ್ಕದ್ದು.

(3) ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳು ಮುಂದೂಡುವ ಮುಂಚಿನ ಮತದಾನಕ್ಕೆ ಅನ್ವಯವಾಗುವಂತೆಯೇ, (2)ನೇ ಉಪನಿಯಮದ ಮೇರೆಗಿನ ಪ್ರತಿಯೊಂದು ಮುಂದೂಡಿದ ಮತದಾನಕ್ಕೂ ಅನ್ವಯವಾಗತಕ್ಕದ್ದು.

**5ಒ. ಮತಗಟ್ಟೆ ವಶಪಡಿಸುವ ಕಾರಣದ ಮೇಲೆ ಚುನಾವಣೆಯ ರದ್ದುಪಡಿಸುವಿಕೆ ಅಥವಾ ಮತದಾನದ ಮುಂದೂಡುವಿಕೆ:**

**(1)** ಯಾವುದೇ ಚುನಾವಣೆಯಲ್ಲಿ;–

(i) ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದೇ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ; ಅಥವಾ

(ii) ಮತ ಎಣಿಕೆ ಮಾಡುವ ಯಾವುದೇ ಸ್ಥಳದಲ್ಲಿ ಮತ ಎಣಿಕೆ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದೆ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ;

ರಿಟರ್ನಿಂಗ್ ಅಧಿಕಾರಿಯು ಸಂಗತಿಯನ್ನು ಕೂಡಲೇ [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಮತ್ತು ಜಿಲ್ಲಾ ಚುನಾವಣಾಧಿಕಾರಿಗೆ ವರದಿ ಮಾಡತಕ್ಕದ್ದು. ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಬಲವಂತವಾಗಿ ಮತಗಟ್ಟೆಯನ್ನು ವಶಪಡಿಸಿಕೊಂಡಿದ್ದರಿಂದ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಬಗ್ಗೆ ರಿಟರ್ನಿಂಗ್ ಅಧಿಕಾರಿಯು ಕಾರ್ಯವ್ಯಾಪ್ತಿಯ ತಹಶೀಲ್ದಾರನಿಂದ ಅಥವಾ ಪೊಲೀಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(2) [ಸಹಕಾರ ಚುನಾವಣಾ ಪ್ರಾಧಿಕಾರ]*ವು (1)ನೇ ಉಪನಿಯದಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ವರಿದಿಯನ್ನು ಸ್ವೀಕರಿಸಿದ ಮೇಲೆ ಮತ್ತು ಎಲ್ಲಾ ಮಹತ್ವದ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ:

(i) ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು. ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸದಾಗಿ ಮತದಾನವನ್ನು ನಡೆಸಲು ದಿವಸವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತು ಮಾಡಿದ ದಿನ ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು; ಅಥವಾ

(ii) ಹೆಚ್ಚಿನ ಸಂಖ್ಯೆಯ ಮತದಾನ ಕೇಂದ್ರಗಳಲ್ಲಿ ಅಥವಾ ಸ್ಥಳಗಳಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದು, ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದೆಂದು ಅಥವಾ ಮತಗಟ್ಟೆಯ ಸ್ವಾಧೀನತೆಯು

ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವಂತಹ ರೀತಿಯಲ್ಲಿ ಮತಗಳ ಎಣಿಕೆಯನ್ನು ಬಾಧಿಸುವುದೆಂದು ಅಭಿಪ್ರಾಯಪಟ್ಟರೆ, ಆ ಚುನಾವಣೆಯನ್ನು ರದ್ದುಪಡಿಸತಕ್ಕದ್ದು.

ವಿವರಣೆ: ಈ ನಿಯಮದ ಉದ್ದೇಶಗಳಿಗಾಗಿ 'ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು' ಎಂಬುದು ಇತರ ವಿಷಯಗಳೊಂದಿಗೆ ಈ ಮುಂದಿನ ಎಲ್ಲಾ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ,–

(ಎ) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ಗೊತ್ತುಪಡಿಸಿರುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಪೆಟ್ಟಿಗೆಗಳನ್ನು ಬಲವಂತವಾಗಿ ವಶಕ್ಕೆ ಒಪ್ಪಿಸುವಂತೆ ಮಾಡುವುದು ಮತ್ತು ಚುನಾವಣೆಗಳು ಶಾಂತಿಯುತವಾಗಿ ನಡೆಯುವುದಕ್ಕೆ ಬಾಧಕವನ್ನು ಉಂಟುಮಾಡುವಂಥ ಇತರ ಯಾವುದೇ ಕೃತ್ಯಗಳನ್ನು ಮಾಡುವುದು;

(ಬಿ) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಒಂದು ಮತದಾನ ಕೇಂದ್ರ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳವನ್ನು ಬಲವಂತವಾಗಿ ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅವನ ಅಥವಾ ಅವರ ಬೆಂಬಲಿಗರು ಮಾತ್ರ ತಮ್ಮ ಮತದಾನ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಟ್ಟು ಇತರರು ಮತ ಚಲಾಯಿಸದಂತೆ ತಡೆಯುವುದು;

(ಸಿ) ಯಾವನೇ ಮತದಾರನಿಗೆ ಬೆದರಿಕೆ ಹಾಕಿ ಅಥವಾ ಭಯಹುಟ್ಟಿಸಿ ಅಥವಾ ಬಲಾತ್ಕರಿಸಿ ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(ಡಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ಮಾಡುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಎಣಿಕೆ ಮಾಡುವ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಪೆಟ್ಟಿಗೆಗಳನ್ನು ಬಲವಂತವಾಗಿ ಒಪ್ಪಿಸುವಂತೆ ಮಾಡುವುದು ಮತ್ತು ಮತಗಳನ್ನು ಶಾಂತಿಯುತವಾಗಿ ಎಣಿಸುವ ಕಾರ್ಯಕ್ಕೆ ಬಾಧಕವನ್ನು ಉಂಟುಮಾಡುವಂತೆ ಯಾವುದೇ ಕೃತ್ಯ ಮಾಡುವುದು;

(ಇ) ಯಾವುದೇ ಅಭ್ಯರ್ಥಿಯು ಚುನಾಯಿತನಾಗುವ ಸಾಧ್ಯತೆಗೆ ಪ್ರೋತ್ಸಾಹ ನೀಡುವಲ್ಲಿ, ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಮೇಲೆ ಹೇಳಲಾದ ಎಲ್ಲಾ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಅಂಥ ಚಟುವಟಿಕೆಗೆ ಪ್ರೋತ್ಸಾಹ ಒದಗಿಸುವುದು ಅಥವಾ ಅದನ್ನು ಕಂಡೂ ಕಾಣದಂತಿರುವುದು.

**5ಪಿ. ಮತದಾನ ಮಾಡುವ ರೀತಿ:** ಮತದಾನವನ್ನು ನಡೆಸುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮತಪತ್ರಗಳ ಮೂಲಕ ನೀಡತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ನೀಡುವ ಎಲ್ಲಾ ಮತದಾರರು (ಸದಸ್ಯರು / ಪ್ರತಿನಿಧಿಗಳು /

ಡೆಲಿಗೇಟುಗಳು) ಮತದಾನ ಕೇಂದ್ರದಲ್ಲಿ ಖುದ್ದಾಗಿ ಮತ ನೀಡತಕ್ಕದ್ದು ಮತ್ತು ಯಾವ ಮತವನ್ನೂ ಪ್ರಾಕ್ಸಿ ಮೂಲಕ ದಾಖಲಿಸಲು ಅನುಮತಿಸತಕ್ಕದ್ದಲ್ಲ.

**5ಕ್ಯೂ. ಮತಪತ್ರ ಮತ್ತು ಮತಪೆಟ್ಟಿಗೆ:** ಪ್ರತಿಯೊಂದು ಮತಪತ್ರಕ್ಕೆ ಅದಕ್ಕೆ ಲಗತ್ತಿಸಿದ ಒಂದು ಪಕ್ಕಪ್ರತಿ (counterfoil) ಇರತಕ್ಕದ್ದು ಮತ್ತು ಸದರಿ ಮತಪತ್ರವು ಮತ್ತು ಪಕ್ಕಪ್ರತಿಯು ನಮೂನೆ 2 ಹೆಚ್ ನಲ್ಲಿ ಇರತಕ್ಕದ್ದು.

(1) ಮತಪತ್ರಗಳ ಕ್ರಮ ಸಂಖ್ಯೆಯನ್ನು ಮತಪತ್ರದ ಪಕ್ಕಪ್ರತಿಯಲ್ಲಿ ಮುದ್ರಿಸತಕ್ಕದ್ದು.

(2) ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ಹೆಸರು ಒಂದೇ ಆಗಿದ್ದರೆ ಅವರ ಉದ್ಯೋಗ ಅಥವಾ ವಾಸಸ್ಥಳವನ್ನು ಸೇರಿಸುವ ಮೂಲಕ ಅಥವಾ ಇತರೆ ಸೂಕ್ತ ರೀತಿಯಲ್ಲಿ ಅವರನ್ನು ರಿಟರ್ನಿಂಗ್ ಅಧಿಕಾರಿ ಗುರುತಿಸತಕ್ಕದ್ದು.

(3) ಮತಪತ್ರವು ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಕನ್ನಡ ವರ್ಣಮಾಲಾ ಕ್ರಮದಲ್ಲಿ ಜೋಡಿಸಿದಂತೆ ಒಳಗೊಂಡಿರತಕ್ಕದ್ದು ಮತ್ತು ಅದನ್ನು ಬೆರಳಚ್ಚಿಸತಕ್ಕದ್ದು ಅಥವಾ ನಕಲಚ್ಚಿಸತಕ್ಕದ್ದು ಅಥವಾ ಮುದ್ರಿಸತಕ್ಕದ್ದು. ಮತಪತ್ರದ ಹಿಂಭಾಗದಲ್ಲಿ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ತನ್ನ ಮೊಹರು ಮತ್ತು ಕಿರುಸಹಿ ಹಾಕಲು ಅವಕಾಶವಿರತಕ್ಕದ್ದು. ಒಬ್ಬ ಮತದಾರನು ತಾನು ಯಾವ ಅಭ್ಯರ್ಥಿಗೆ ಮತನೀಡಲು ಬಯಸುತ್ತಾನೋ ಅಂಥ ಅಭ್ಯರ್ಥಿಗಳ ಹೆಸರು ಅಥವಾ ಹೆಸರುಗಳ ಮುಂದೆ **x** ಎಂಬ ಗುರುತನ್ನು ಹಾಕಲು ಮತಪತ್ರವು ಒಂದು ಕಾಲಂನ್ನು ಒಳಗೊಂಡಿರತಕ್ಕದ್ದು.

(4) ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ಅಧಿಕಾರಿಯು ಮತಪತ್ರವನ್ನು ಮುದ್ರಿಸುವ ಉದ್ದೇಶಕ್ಕಾಗಿ ಸೂಕ್ತ ಮುದ್ರಣಾಲಯವನ್ನು ಆಯ್ಕೆಮಾಡಿಕೊಳ್ಳತಕ್ಕದ್ದು.

(5) ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ಅಧಿಕಾರಿಯು ಮತಪೆಟ್ಟಿಗೆ / ಪೆಟ್ಟಿಗೆಗಳನ್ನು ವ್ಯವಸ್ಥೆ ಮಾಡತಕ್ಕದ್ದು.

**5ಆರ್. ಮತದಾನ ಕೇಂದ್ರಗಳಲ್ಲಿನ ವ್ಯವಸ್ಥೆ: (1)** ಪ್ರತಿಯೊಂದು ಮತದಾನ ಕೇಂದ್ರದ ಹೊರಗೆ–

(ಎ) ಮತದಾನ ಕೇಂದ್ರದಲ್ಲಿ ಮತ ನೀಡಲು ಹಕ್ಕುಳ್ಳ ಮತದಾರರ (ಸದಸ್ಯರ ಅಥವಾ ಪ್ರತಿನಿಧಿಗಳ ಅಥವಾ ಡೆಲಿಗೇಟುಗಳ) ವಿವರಗಳನ್ನು ಮತ್ತು ಮತದಾನ ಪ್ರದೇಶವನ್ನು ನಿರ್ದಿಷ್ಟಪಡಿಸುವ ನೋಟಿಸನ್ನು; ಮತ್ತು

(ಬಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಪ್ರದರ್ಶಿಸತಕ್ಕದ್ದು.

(2) ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಮತದಾರರು ಇನ್ನಿತರರಿಗೆ ಕಾಣದಂತೆ ತಮ್ಮ ಮತಗಳನ್ನು ಚಲಾಯಿಸಬಹುದಾದಂಥ ಒಂದು ಅಥವಾ ಹೆಚ್ಚು ಮತದಾನದ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕೆ ಸಾಕಷ್ಟು ಸಂಖ್ಯೆಯ ಮತಪೆಟ್ಟಿಗೆಗಳು, ಮತದಾರರ ಪಟ್ಟಿಯ ಪ್ರತಿಗಳು, ಮತಪತ್ರಗಳು, ಮತಪತ್ರಗಳಿಗೆ ಗುರುತು ಮಾಡುವುದಕ್ಕಾಗಿ ಮತದಾರರಿಗೆ ಅಗತ್ಯ ಇರುವ ವಸ್ತುಗಳು ಮತ್ತು ಮತದಾನ ನಡೆಸುವುದಕ್ಕೆ ಅಗತ್ಯ ಇರುವ ವಸ್ತುಗಳು

ಮತ್ತು ಮತದಾನ ನಡೆಸುವುದಕ್ಕೆ ಅಗತ್ಯವಿರುವಂಥ ಇತರೆ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

(4) ಮತದಾನ ಕೇಂದ್ರ ಅಥವಾ ಸ್ಥಳದ ನೂರು ಮೀಟರ್ ಒಳಗೆ, ಚುನಾವಣೆ ಆರಂಭದಿಂದ ಅಂತ್ಯವಾಗುವವರೆಗೆ ಪ್ರಚಾರ ಮಾಡುವುದನ್ನು ಅಥವಾ ಮತ ಯಾಚಿಸುವುದನ್ನು ಪೂರ್ಣವಾಗಿ ನಿಷೇಧಿಸತಕ್ಕದ್ದು.

**5ಎಸ್. ಮತದಾನ ಕೇಂದ್ರಗಳಿಗೆ ಪ್ರವೇಶ:** ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಕೇಂದ್ರದ ಒಳಗಡೆ ಯಾವುದೇ ಒಂದು ಕಾಲದಲ್ಲಿ ಪ್ರವೇಶ ಮಾಡತಕ್ಕ ಮತದಾರರ ಸಂಖ್ಯೆಯನ್ನು ನಿಯಂತ್ರಿಸತಕ್ಕದ್ದು ಮತ್ತು

(ಎ) ಪೋಲಿಂಗ್ ಅಧಿಕಾರಿಗಳನ್ನು;

(ಬಿ) ಚುನಾವಣೆಗೆ ಸಂಬಂಧಿಸಿದಂತೆ ಕರ್ತವ್ಯದ ಮೇಲಿರುವಂಥ ಸಾರ್ವಜನಿಕ ನೌಕರರನ್ನು;

(ಸಿ) ಜಿಲ್ಲಾ ಚುನಾವಣಾಧಿಕಾರಿಯಿಂದ ಮತ್ತು [ಸಹಕಾರ ಚುನಾವಣಾ ಪ್ರಾಧಿಕಾರ]*ದಿಂದ ಪ್ರಾಧಿಕೃತರಾದ ವ್ಯಕ್ತಿಗಳನ್ನು;

(ಡಿ) ಅಭ್ಯರ್ಥಿಗಳನ್ನು ಅಥವಾ ಅವರ ಅಧಿಕೃತ ಏಜೆಂಟರನ್ನು;

(ಇ) ಮತದಾರರ ಸಂಗಡ ಇರುವ ಕೈಕೂಸನ್ನು;

(ಎಫ್) ಸಹಾಯವಿಲ್ಲದೆ ಚಲಿಸಲು ಸಾಧ್ಯವಿಲ್ಲದಂಥ ಅಂಧ ಅಥವಾ ಅಶಕ್ತ ಮತದಾರರ ಜೊತೆಗೆ ಬರುವ ವ್ಯಕ್ತಿಯನ್ನು;

(ಜಿ) ಚುನಾವಣೆಯ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ನಿಯೋಜಿಸಬಹುದಾದಂಥ ಇತರ ವ್ಯಕ್ತಿಗಳನ್ನು

– ಹೊರತುಪಡಿಸಿ ಇತರ ಎಲ್ಲ ವ್ಯಕ್ತಿಗಳ ಪ್ರವೇಶವನ್ನು ನಿಷೇಧಿಸತಕ್ಕದ್ದು.

**5ಟಿ. ಮತದಾರರ ಗುರುತಿಸುವಿಕೆ: (1)** ಮತದಾನ ಮಾಡುವ ಸ್ಥಳದಲ್ಲಿ ಒಂದು ರಿಜಿಸ್ಟರ್‌ನ್ನು ಇಟ್ಟಿರತಕ್ಕದ್ದು ಮತ್ತು ಪ್ರತಿಯೊಬ್ಬ ಮತದಾರನು ನಿಯಮ 4ರಡಿ ನೀಡಲಾದ ಗುರುತಿನ ಕಾರ್ಡನ್ನು ಹಾಜರುಪಡಿಸಿ ರಿಜಿಸ್ಟರ್‌ನಲ್ಲಿ ಸಹಿ ಮಾಡತಕ್ಕದ್ದು.

(2) ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರವನ್ನು ಪ್ರವೇಶಿಸುತ್ತಿದ್ದಂತೆ ಪ್ರಿಸೈಡಿಂಗ್ ಅಧಿಕಾರಿ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಪೋಲಿಂಗ್ ಅಧಿಕಾರಿಯು ಮತದಾರರ ಪಟ್ಟಿಯಲ್ಲಿ ಸುಸಂಗತ ನಮೂದುಗಳೊಂದಿಗೆ ಮತದಾರನ ಹೆಸರು ಮತ್ತು ಇತರ ವಿವರಗಳು ಇವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಆಮೇಲೆ ಕ್ರಮಸಂಖ್ಯೆ, ಹೆಸರು ಮತ್ತು ಇತರ ವಿವರಗಳನ್ನು ಘೋಷಿಸತಕ್ಕದ್ದು.

(3) ಮತಪತ್ರವನ್ನು ಪಡೆಯಲು ವ್ಯಕ್ತಿಯ ಹಕ್ಕನ್ನು ತೀರ್ಮಾನಿಸುವಲ್ಲಿ, ಸಂದರ್ಭಾನುಸಾರ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯು ಅಂಥ ವ್ಯಕ್ತಿಯ ಗುರುತು ಅಂಥ ನಮೂದು ಸಂಬಂಧಪಡುವ ಮತದಾರನೊಂದಿಗೆ ಹೋಲುತ್ತದೆಂದು ಅವನಿಗೆ ಮನದಟ್ಟಾದರೆ ಮತದಾರರ

ಪಟ್ಟಿಯಲ್ಲಿನ ನಮೂದಿನಲ್ಲಿರುವ ಕೇವಲ ಲಿಪಿಕ ಅಥವಾ ಬೆರಳಚ್ಚಿನ ಅಥವಾ ಮುದ್ರಣ ದೋಷಗಳನ್ನು ಕಡೆಗಣಿಸತಕ್ಕದ್ದು.

**5ಯು. ಮತದಾನಕ್ಕಾಗಿ ಮತಪೆಟ್ಟಿಗೆಗಳ ಸಿದ್ಧತೆ:** (1) ಮತದಾನವು ಪ್ರಾರಂಭವಾಗುವ ಪೂರ್ವದಲ್ಲಿ, ಪ್ರಸಂಗಾನುಸಾರ ರಿಟರ್ನಿಂಗ್ ಅಧಿಕಾರಿಯು ಅಥವಾ ಪ್ರಿಸೈಡಿಂಗ್ ಅಧಿಕಾರಿಯು, ಮತಪೆಟ್ಟಿಗೆಯು ಖಾಲಿ ಇದೆ ಎಂಬುದನ್ನು ಆ ಸಮಯದಲ್ಲಿ ಹಾಜರಿದ್ದ ಎಲ್ಲಾ ವ್ಯಕ್ತಿಗಳಿಗೆ ತೋರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗಳಿಗೆ ಪೂರ್ಣವಾಗಿ ಕಾಣುವಂತೆ ಮತಪೆಟ್ಟಿಗೆಯನ್ನು ಮುಚ್ಚಿ ಮೊಹರು ಮಾಡಿ ಭದ್ರಪಡಿಸತಕ್ಕದ್ದು. ಮತಪೆಟ್ಟಿಗೆಯನ್ನು ಭದ್ರಪಡಿಸುವುದಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಉಪಯೋಗಿಸಿದ ಮೊಹರನ್ನು ಅದನ್ನು ಒಡೆಯದೇ ಆ ಮತಪೆಟ್ಟಿಗೆಯನ್ನು ತರುವಾಯ ತೆರೆಯಲು ಸಾಧ್ಯವಾಗದಂಥ ರೀತಿಯಲ್ಲಿ ಅಂಟಿಸತಕ್ಕದ್ದು.

(2) ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಪ್ರತಿಯೊಂದು ಮತಪೆಟ್ಟಿಗೆಯ ಒಳಗೆ ಮತ್ತು ಹೊರಗೆ ಎರಡೂ ಕಡೆಯಲ್ಲಿ:

(i) ಮತಕ್ಷೇತ್ರದ ಹೆಸರು;

(ii) ಮತದಾನ ಕೇಂದ್ರದ ಹೆಸರು;

(iii) ಮತಪೆಟ್ಟಿಗೆಯ ಕ್ರಮಸಂಖ್ಯೆ (ಮತದಾನದ ಕೊನೆಯಲ್ಲಿ ಮತಪೆಟ್ಟಿಗೆಯ ಹೊರಗಡೆ ಮಾತ್ರ ಲೇಬಲ್ಲಿನ ಮೇಲೆ ಭರ್ತಿ ಮಾಡಬೇಕು); ಮತ್ತು

(iv) ಮತದಾನದ ದಿನಾಂಕ –

ಇವುಗಳನ್ನು ಗುರುತು ಮಾಡಿದ ಲೇಬಲ್ಲುಗಳನ್ನು ಹೊಂದಿರತಕ್ಕದ್ದು.

**5ವಿ . ಮತದಾರರಿಗೆ ಮತಪತ್ರಗಳನ್ನು ಕೊಡುವುದು:** (1) ಮತದಾರನಿಗೆ ಅದನ್ನು ಕೊಡುವುದಕ್ಕೆ ಮುಂಚೆ ಪ್ರತಿಯೊಂದು ಮತಪತ್ರ ಮತ್ತು ಅದಕ್ಕೆ ಲಗತ್ತಾದ ಪಕ್ಕ ಪ್ರತಿಗೆ ಹಿಂಭಾಗದಲ್ಲಿ [ಸಹಕಾರ ಚುನಾವಣಾ ಪ್ರಾಧಿಕಾರ]*ವು ನಿರ್ದೇಶಿಸಬಹುದಾದಂಥ ವಿಭಿನ್ನತಾ ಗುರುತುಗಳನ್ನು ಮುದ್ರೆ ಹಾಕತಕ್ಕದ್ದು ಮತ್ತು ಪ್ರತಿಯೊಂದು ಮತಪತ್ರಕ್ಕೆ ಅದನ್ನು ಕೊಡುವುದಕ್ಕೆ ಮುಂಚೆ ಅದರ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣ ರುಜು ಮಾಡತಕ್ಕದ್ದು.

(2) ಮತದಾರನಿಗೆ ಮತಪತ್ರವನ್ನು ಕೊಡುವ ಕಾಲದಲ್ಲಿ, ಪೋಲಿಂಗ್ ಅಧಿಕಾರಿಯು:

(ಎ) ಮತದಾರರ ಪಟ್ಟಿಯಲ್ಲಿ ನಮೂದಿಸಿರುವಂತೆ ಮತದಾರನ ಸಂಖ್ಯೆಯನ್ನು ಅದರ ಪಕ್ಕಪ್ರತಿಯ ಮೇಲೆ ದಾಖಲು ಮಾಡತಕ್ಕದ್ದು ಮತ್ತು ಮತದಾರನ ರುಜು ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯತಕ್ಕದ್ದು.

(ಬಿ) ಆ ಮತದಾರನಿಗೆ ಕೊಟ್ಟ ಮತಪತ್ರದ ಕ್ರಮ ಸಂಖ್ಯೆಯನ್ನು ಅದರಲ್ಲಿ ದಾಖಲು ಮಾಡದೆ, ಅವನಿಗೆ ಮತಪತ್ರವನ್ನು ಕೊಡಲಾಗಿದೆಯೆಂಬುದನ್ನು ತೋರಿಸಲು ಮತದಾರರ ಪಟ್ಟಿಯಲ್ಲಿ ಆ ಮತದಾರನ ಹೆಸರಿಗೆ ಗುರುತು ಮಾಡತಕ್ಕದ್ದು. ಪರಂತು, ಮತದಾರನಿಗೆ ಅವನು ಪಕ್ಕ ಪ್ರತಿಯ ಮೇಲೆ ತನ್ನ ರುಜು ಮಾಡಿದ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಹೊರತು ಮತಪತ್ರವನ್ನು ಕೊಡತಕ್ಕದ್ದಲ್ಲ.

ಮತ್ತು ಪರಂತು, ಮತದಾನವನ್ನು ಮುಕ್ತಾಯಗೊಳಿಸಲು ನಿಗದಿಗೊಳಿಸಿದ ವೇಳೆಗೆ ಮುಂಚೆ ಗುರುತಿನ ಚೀಟಿಗಳನ್ನು ಹಾಜರುಪಡಿಸಿ ರಿಜಿಸ್ಟರಿನಲ್ಲಿ ಸಹಿ ಮಾಡಿದವರೆಲ್ಲರಿಗೂ ಮತಪತ್ರವನ್ನು ನೀಡತಕ್ಕದ್ದು ಮತ್ತು ಮತ ನೀಡಲು ಅನುಮತಿಸತಕ್ಕದ್ದು.

**5ಡಬ್ಲ್ಯೂ. ಮತದಾನ ಕೇಂದ್ರದೊಳಗೆ ಮತದಾರರು ಮತದಾನದ ಬಗ್ಗೆ ರಹಸ್ಯವನ್ನು ಕಾಪಾಡುವುದು ಮತ್ತು ಮತದಾನ ಪ್ರಕ್ರಿಯೆ:**

ಮತಪತ್ರವನ್ನು ಕೊಡಲಾದ ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರದೊಳಗೆ ಮತದಾನ ಮಾಡಿದ ಬಗ್ಗೆ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಮತದಾನದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**5ಎಕ್ಸ್ . ದೃಷ್ಟಿಹೀನ ಮತ್ತು ಅಶಕ್ತ ಮತದಾರರ ಮತಗಳನ್ನು ದಾಖಲು ಮಾಡುವುದು:**

**(1)** ಕುರುಡುತನ ಅಥವಾ ಇತರ ದೈಹಿಕ ಅಶಕ್ತತೆಯಿಂದಾಗಿ ಮತದಾರನು ಮತಪತ್ರದ ಮೇಲಿನ ಚಿಹ್ನೆಗಳನ್ನು ಗುರುತಿಸಲು ಅಥವಾ ಸಹಾಯವಿಲ್ಲದೆ ಅದರ ಮೇಲೆ ಗುರುತು ಮಾಡಲು ಅಸಮರ್ಥನೆಂದು ಪ್ರಿಸೈಡಿಂಗ್ ಅಧಿಕಾರಿಗೆ ಮನದಟ್ಟಾದರೆ, ಪ್ರಿಸೈಡಿಂಗ್ ಅಧಿಕಾರಿಯು ಅವನ ಪರವಾಗಿ ಮತ್ತು ಅವನ ಇಚ್ಛೆಗನುಸಾರವಾಗಿ ಮತಪತ್ರದ ಮೇಲೆ ಮತವನ್ನು ದಾಖಲು ಮಾಡುವುದಕ್ಕಾಗಿ ಮತ್ತು ಅವಶ್ಯವಾದರೆ ಮತವನ್ನು ಮುಚ್ಚುವ ಹಾಗೆ ಮತಪತ್ರವನ್ನು ಮಡಿಸುವುದಕ್ಕಾಗಿ ಮತ್ತು ಅದನ್ನು ಮತಪೆಟ್ಟಿಗೆಯೊಳಗೆ ಹಾಕುವುದಕ್ಕಾಗಿ ಮತದಾನದ ವಿಭಾಗಕ್ಕೆ ಹದಿನೆಂಟು ವರ್ಷಗಳ ವಯಸ್ಸಿಗೆ ಕಡಿಮೆಯಿಲ್ಲದ ಒಬ್ಬ ಜೊತೆಗಾರನನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು ಈ ಕೆಳಗಿನಂತೆ ದಾಖಲೆಯಿಡತಕ್ಕದ್ದು:–

ಅನಕ್ಷರಸ್ಥ, ದೃಷ್ಟಿಹೀನ ಮತ್ತು ಅಶಕ್ತ ಮತದಾರರ ಪಟ್ಟಿ

.................................... ಸಹಕಾರಿಯ ನಿರ್ದೇಶಕರ / ಪ್ರತಿನಿಧಿ ಚುನಾವಣೆ

| ಮತದಾರನ ಕ್ರಮಸಂಖ್ಯೆ | ಮತದಾರನ ಪೂರ್ಣ ಹೆಸರು | ಜೊತೆಗಾರನ ಪೂರ್ಣ ಹೆಸರು | ಜೊತೆಗಾರನ ವಿಳಾಸ | ಜೊತೆಗಾರನ ಸಹಿ |
|---|---|---|---|---|
| | | | | |

ಪ್ರಿಸೈಡಿಂಗ್ ಅಧಿಕಾರಿಯ ಸಹಿ

**5ವೈ. ಮತದಾನದ ಮುಕ್ತಾಯ:** ಮತದಾನವು ಮುಕ್ತಾಯವಾದ ನಂತರ:– (1) ಪ್ರಿಸೈಡಿಂಗ್ ಅಧಿಕಾರಿಯು ಆ ಬಗ್ಗೆ ನಿಗದಿಪಡಿಸಿದ ವೇಳೆಗೆ ಮತದಾನವನ್ನು ಮುಕ್ತಾಯಗೊಳಿಸತಕ್ಕದ್ದು ಮತ್ತು ಆ ತರುವಾಯ ಯಾವನೇ ಮತದಾರನನ್ನು ಮತದಾನ ಕೇಂದ್ರದೊಳಗೆ ಬಿಡತಕ್ಕದ್ದಲ್ಲ.

(2) ಯಾವನೇ ಮತದಾರನು ಮತದಾನದ ಕೇಂದ್ರವನ್ನು ಮುಚ್ಚುವುದಕ್ಕೆ ಮುಂಚೆ ಅಲ್ಲಿ ಹಾಜರಿದ್ದನೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅದನ್ನು

ಪ್ರಿಸೈಡಿಂಗ್ ಅಧಿಕಾರಿಯು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**5ಜಡ್. ಮತದಾನದ ತರುವಾಯ ಮತಪೆಟ್ಟಿಗೆಗಳನ್ನು ಮೊಹರು ಮಾಡುವುದು: (1)** ಮತದಾನವು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೇ ಪ್ರಿಸೈಡಿಂಗ್ ಅಧಿಕಾರಿಯು ಮತಪೆಟ್ಟಿಗೆಯ ಸೀಳು ಜಾಗವನ್ನು ಮುಚ್ಚತಕ್ಕದ್ದು ಮತ್ತು ಸೀಳು ಜಾಗವನ್ನು ಮುಚ್ಚುವುದಕ್ಕಾಗಿ ಮೊಹರು ಮಾಡತಕ್ಕದ್ದು ಮತ್ತು ಆನಂತರ ಮತಪೆಟ್ಟಿಗೆಯನ್ನು ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

(2) ಮೊದಲ ಮತಪೆಟ್ಟಿಗೆಯು ಭರ್ತಿಯಾದ ಕಾರಣದಿಂದ ಎರಡನೆಯ ಪೆಟ್ಟಿಗೆಯನ್ನು ಉಪಯೋಗಿಸುವುದು ಅವಶ್ಯವಾಗಿರುವಲ್ಲಿ, ಯಾವುದೇ ಇತರ ಮತಪೆಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಮುಂಚೆ, ಮೊದಲನೆಯ ಪೆಟ್ಟಿಗೆಯನ್ನು ಮುಚ್ಚತಕ್ಕದ್ದು, ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

**5ಎಎ. ಮತಪತ್ರಗಳ ಲೆಕ್ಕ:** ಪ್ರಿಸೈಡಿಂಗ್ ಅಧಿಕಾರಿಯು ಮತದಾನವು ಮುಕ್ತಾಯವಾದ ಮೇಲೆ ಮತಪತ್ರಗಳ ಲೆಕ್ಕವನ್ನು ಫಾರಂ 2 ಐ ನಲ್ಲಿ ತಯಾರಿಸತಕ್ಕದ್ದು ಮತ್ತು ಅದನ್ನು ಪ್ರತ್ಯೇಕ ಲಕೋಟೆಯಲ್ಲಿ ಅದರ ಮೇಲೆ 'ಮತಪತ್ರಗಳ ಲೆಕ್ಕ' ಎಂಬ ಪದಗಳಿಂದ ಮೇಲ್ಬರಹ ಮಾಡತಕ್ಕದ್ದು.

**5ಎಬಿ. ಇತರೆ ಪ್ಯಾಕೆಟ್ಟುಗಳನ್ನು ಮೊಹರು ಮಾಡುವುದು: (1)** ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು:-

(ಎ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿ;

(ಬಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳು;

(ಸಿ) ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣವಾಗಿ ರುಜು ಮಾಡಿದ ಆದರೆ ಮತದಾರರಿಗೆ ಕೊಡದಿರುವ ಮತಪತ್ರಗಳು;

(ಡಿ) ಮತದಾರರಿಗೆ ಕೊಡದಿರುವ ಯಾವುದೇ ಇತರ ಮತಪತ್ರಗಳು;

(ಇ) ಮತದಾನ ಪ್ರಕ್ರಿಯೆಯ ಉಲ್ಲಂಘನೆಗಾಗಿ ರದ್ದುಪಡಿಸಿದ ಮತಪತ್ರಗಳು;

(ಎಫ್) ಯಾವುದೇ ಇತರ ರದ್ದುಪಡಿಸಿದ ಮತಪತ್ರಗಳು; ಮತ್ತು

(ಜಿ) ಮೊಹರು ಮಾಡಿದ ಲಕೋಟೆಯಲ್ಲಿಡತಕ್ಕದ್ದೆಂದು [ಸಹಕಾರ ಚುನಾವಣಾ ಪ್ರಾಧಿಕಾರ]*ವು ನಿರ್ದೇಶಿಸಿದ ಯಾವುದೇ ಕಾಗದ ಪತ್ರಗಳು.

ಇವುಗಳನ್ನು ಪ್ರತ್ಯೇಕ ಪ್ಯಾಕೆಟ್ಟುಗಳನ್ನಾಗಿ ಮಾಡತಕ್ಕದ್ದು.

(2) ಅಂಥ ಪ್ರತಿಯೊಂದು ಪ್ಯಾಕೆಟ್ಟನ್ನು ಪ್ರಿಸೈಡಿಂಗ್ ಅಧಿಕಾರಿಯ ಮೊಹರುಗಳಿಂದ ಮತ್ತು ಅಥವಾ ಅವುಗಳ ಮೇಲೆ ತನ್ನ ಮೊಹರನ್ನು ಹಾಕಲು ಇಚ್ಛಿಸುವ ಮತದಾನ ಕೇಂದ್ರದಲ್ಲಿ ಹಾಜರಿರಬಹುದಾದ ಅಭ್ಯರ್ಥಿಯ ಅಥವಾ ಅವನ ಅಧಿಕೃತ ಏಜೆಂಟನ ಮೊಹರುಗಳಿಂದ ಮೊಹರು ಮಾಡತಕ್ಕದ್ದು.

**5ಎಸಿ. ಮತಗಳ ಎಣಿಕೆ:** (1) ಮತದಾನ ಮುಕ್ತಾಯವಾದ ತರುವಾಯ, ಪ್ರಿಸೈಡಿಂಗ್ ಅಧಿಕಾರಿ / ಪೋಲಿಂಗ್ ಅಧಿಕಾರಿಯು ಮತದಾನವನ್ನು ಮುಕ್ತಾಯಗೊಳಿಸತಕ್ಕದ್ದು ಮತ್ತು ಮೊಹರು ಮಾಡಿದ ಮತಪೆಟ್ಟಿಗೆಯನ್ನು

ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸತಕ್ಕದ್ದು ಮತ್ತು ಸದರಿ ಅಧಿಕಾರಿಯು ತಕ್ಷಣ ಮತ ಎಣಿಕೆಗೆ ವ್ಯವಸ್ಥೆ ಮಾಡತಕ್ಕದ್ದು. ಮತ ಎಣಿಕೆಯನ್ನು ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಥವಾ ಅವರ ಮೇಲ್ವಿಚಾರಣೆಯಲ್ಲಿ ಮಾಡತಕ್ಕದ್ದು. ಪ್ರತಿಯೊಬ್ಬ ಅಭ್ಯರ್ಥಿಯು ಅಥವಾ ಆತನ ಅಧಿಕೃತ ಏಜೆಂಟನು ಮತ ಎಣಿಕೆಯ ವೇಳೆಯಲ್ಲಿ ಹಾಜರಿರುವ ಹಕ್ಕುಳ್ಳವನಾಗಿರತಕ್ಕದ್ದು. ಆದರೆ ಮತ ಎಣಿಕೆಯ ಸಮಯದಲ್ಲಿ ಯಾವುದೇ ಅಭ್ಯರ್ಥಿ ಅಥವಾ ಏಜೆಂಟನ ಗೈರುಹಾಜರಿಯು ಮತ ಎಣಿಕೆಯನ್ನಾಗಲೀ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ಫಲಿತಾಂಶ ಪ್ರಕಟಿಸುವುದನ್ನಾಗಲೀ ಊರ್ಜಿತವಾಗದಂತೆ ಮಾಡತಕ್ಕದ್ದಲ್ಲ. ಈ ಬಗ್ಗೆ [ಸಹಕಾರ ಚುನಾವಣಾ ಪ್ರಾಧಿಕಾರ]*ವು ಸೂಕ್ತ ಮಾರ್ಗಸೂಚಿಗಳನ್ನು ನೀಡಬಹುದಾಗಿದೆ.

(2) ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಲ್ಲಿ ಉಪಯೋಗಿಸಿದ ಎಲ್ಲಾ ಮತಪೆಟ್ಟಿಗೆಗಳಲ್ಲಿ ಇರುವ ಎಲ್ಲಾ ಮತಪತ್ರಗಳ ಎಣಿಕೆಯು ಮುಕ್ತಾಯವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ನಮೂನೆ 2ಜೆ ನಲ್ಲಿನ ಫಲಿತಾಂಶ ಹಾಳೆಯಲ್ಲಿ ನಮೂದುಗಳನ್ನು ಮಾಡತಕ್ಕದ್ದು ಮತ್ತು ವಿವರಗಳನ್ನು ಪ್ರಕಟಿಸತಕ್ಕದ್ದು.

**5ಎಡಿ. ಚುನಾವಣಾ ಫಲಿತಾಂಶದ ಘೋಷಣೆ ಮತ್ತು ಚುನಾವಣಾ ವಿವರ ಪಟ್ಟಿಯನ್ನು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಸಲ್ಲಿಸುವುದು:–**

(1) ಮತಗಳ ಎಣಿಕೆಯು ಮುಕ್ತಾಯವಾದ ನಂತರ;

(i) ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಅತ್ಯಂತ ಹೆಚ್ಚಿನ ಕ್ರಮಬದ್ಧ ಮತಗಳನ್ನು ಪಡೆದಿರುವ ಅಭ್ಯರ್ಥಿಯು ಅಥವಾ ಅಭ್ಯರ್ಥಿಗಳು ಚುನಾಯಿತನಾಗಿದ್ದಾರೆಂದು ಘೋಷಿಸತಕ್ಕದ್ದು.

(ii) ಚುನಾಯಿತರಾಗಿದ್ದಾರೆಂದು ಘೋಷಿಸಬೇಕಾದ ಯಾರೇ ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಇರುವುದು ಕಂಡು ಬಂದರೆ, ರಿಟರ್ನಿಂಗ್ ಅಧಿಕಾರಿಯು ಚೀಟಿ ಎತ್ತುವ ಮೂಲಕ ಕೂಡಲೇ ಅ ಅಭ್ಯರ್ಥಿಗಳ ನಡುವೆ ಆಯ್ಕೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಯಾವ ಅಭ್ಯರ್ಥಿಯ ಹೆಸರನಲ್ಲಿ ಚೀಟಿ ಬರುವುದೋ ಅವನು ಒಂದು ಅಧಿಕ ಮತವನ್ನು ಪಡೆದಿದ್ದಾನೆಂದು ಪರಿಗಣಿಸತಕ್ಕದ್ದು.

(2) ಮತಗಳ ಎಣಿಕೆಯು ಮುಕ್ತಾಯವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಚುನಾವಣೆಗಳ ಫಲಿತಾಂಶಗಳನ್ನು ತಕ್ಷಣ ಘೋಷಿಸತಕ್ಕದ್ದು ಮತ್ತು ಚುನಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ತನ್ನ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ನಮೂನೆ 2 ಕೆ ಯಲ್ಲಿ ಅದೇ ದಿನ ಕೊಡತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ತಕ್ಷಣ ಚುನಾವಣೆಯ ನಡವಳಿಗಳನ್ನು ಒಂದು ಸಮಗ್ರ ವರದಿಯ ರೂಪದಲ್ಲಿ ದಾಖಲಿಸತಕ್ಕದ್ದು ಮತ್ತು ಅದು ಚುನಾವಣೆಯ ದಾಖಲೆಗಳ ಭಾಗವಾಗಿರತಕ್ಕದ್ದು.

ಆತನು ಅಂಥ ವರದಿಯ ಒಂದು ಪ್ರತಿಯನ್ನು ಚುನಾವಣಾ ಫಲಿತಾಂಶದ ವರದಿಯ ಸಹಿತ ಮುಖ್ಯಕಾರ್ಯನಿರ್ವಾಹಕನಿಗೆ ಒದಗಿಸತಕ್ಕದ್ದು ಮತ್ತು ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಸಹಿ ಮಾಡಿದ ಪ್ರತಿಗಳನ್ನು ಸಲ್ಲಿಸತಕ್ಕದ್ದು.

**5ಎಇ. ಚುನಾಯಿತ ಉಮೇದುವಾರರಿಗೆ ಚುನಾವಣೆ ಪ್ರಮಾಣ ಪತ್ರವನ್ನು ಕೊಡುವುದು:–** ಯಾವುದೇ ಅಭ್ಯರ್ಥಿಯು ಚುನಾಯಿತನಾಗಿರುವುದಾಗಿ ಘೋಷಿಸಿದ ತರುವಾಯ ತಕ್ಷಣದಲ್ಲಿ ರಿಟರ್ನಿಂಗ್ ಅಧಿಕಾರಿಯು ನಮೂನೆ 2ಎಲ್ ನಲ್ಲಿ ಚುನಾವಣೆಯ ಪ್ರಮಾಣಪತ್ರವನ್ನು ಕೊಡತಕ್ಕದ್ದು ಮತ್ತು ಅದನ್ನು ಸ್ವೀಕರಿಸಿದ ಬಗ್ಗೆ ಅವನು ಕ್ರಮಬದ್ಧವಾಗಿ ರುಜು ಮಾಡಿದ ಸ್ವೀಕೃತಿಯನ್ನು ಆ ಅಭ್ಯರ್ಥಿಯಿಂದ ಪಡೆಯತಕ್ಕದ್ದು ಮತ್ತು ಅದನ್ನು ಜಿಲ್ಲಾ ಚುನಾವಣಾಧಿಕಾರಿಗೆ ಕಳುಹಿಸತಕ್ಕದ್ದು.

**5ಎಎಫ್. ಚುನಾವಣಾ ವೆಚ್ಚಗಳು:** ಯಾವುದೇ ಸಹಕಾರಿಯ ನಿರ್ದೇಶಕರ ಸಾಮಾನ್ಯ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ಲೇಖನಸಾಮಗ್ರಿ, ಮುದ್ರಣ, ಅಂಚೆ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಗಳ ಬಾಡಿಗೆ, ಅಳಿಸಲಾಗದ ಇಂಕು, ಪೋಲಿಸ್ ಭದ್ರತೆ ಮತ್ತು ಅಂಥ ಇತರ ಎಲ್ಲಾ ವೆಚ್ಚಗಳನ್ನು ಆ ಸಹಕಾರಿಯು ಭರಿಸತಕ್ಕದ್ದು. [ಸಹಕಾರ ಚುನಾವಣಾ ಪ್ರಾಧಿಕಾರ]*ವು ಕಾಲಕಾಲಕ್ಕೆ ನಿಗದಿಪಡಿಸುವ ದರಗಳಲ್ಲಿ ಮತದಾರರ ಪಟ್ಟಿ ತಯಾರಿಕೆಗೆ, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಮತ್ತು ಇತರ ಚುನಾವಣಾ ಸಿಬ್ಬಂದಿಗೆ ಕೊಡಬೇಕಾದ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳನ್ನು ಮತ್ತು ಸಂಭಾವನೆಯನ್ನೂ ಸಹ ಸಹಕಾರಿಯೇ ಭರಿಸತಕ್ಕದ್ದು.

**5ಎಜಿ. ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಸಂರಕ್ಷಣೆ:–**

(1) ಚುನಾವಣೆಯಲ್ಲಿ ಉಪಯೋಗಿಸಿದ ಎಲ್ಲಾ ಮತಪೆಟ್ಟಿಗೆಗಳನ್ನು [1][****] ಸಂರಕ್ಷಣೆಯಲ್ಲಿ ಇಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು:–

(ಎ) ಅವುಗಳೊಂದಿಗೆ ಲಗತ್ತಿಸಿದ ಪಕ್ಕಪ್ರತಿಗಳ ಸಹಿತ ಉಪಯೋಗಿಸಲಾಗದ ಮತಪತ್ರಗಳ ಪ್ಯಾಕೆಟುಗಳನ್ನು;

(ಬಿ) ಕ್ರಮಬದ್ಧವಾಗಿರುವ ಅಥವಾ ಅಸಿಂಧುವಾಗಿರುವ ಉಪಯೋಗಿಸಲಾದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

(ಸಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳ ಪ್ಯಾಕೆಟ್ಟುಗಳನ್ನು;

(ಡಿ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯ ಪ್ಯಾಕೆಟ್ಟುಗಳನ್ನು;

(ಇ) ಅವರ ಅನುಪ್ರಮಾಣಿತ ರುಜುಗಳನ್ನು ಒಳಗೊಂಡ ಮತದಾರರ ಘೋಷಣೆಗಳ ಪ್ಯಾಕೆಟ್ಟುಗಳನ್ನು; ಮತ್ತು

(ಎಫ್) ಚುನಾವಣೆಗೆ ಸಂಬಂಧಪಟ್ಟ ಇತರ ಎಲ್ಲಾ ಪತ್ರಗಳನ್ನು

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್‌ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

– ಆಯಾ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸುರಕ್ಷಿತ ಸಂರಕ್ಷಣೆಯಲ್ಲಿಡತಕ್ಕದ್ದು.

**5ಎಹೆಚ್. ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ:**

**(1)** ಆಯಾ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ತನ್ನ ಸಂರಕ್ಷಣೆಯಲ್ಲಿರುವಾಗ–

(ಎ) ಅವುಗಳೊಂದಿಗೆ ಲಗತ್ತಿಸಿದ ಪಕ್ಕಪ್ರತಿಗಳ ಸಹಿತ ಉಪಯೋಗಿಸಲಾಗದ ಮತಪತ್ರಗಳ ಪ್ಯಾಕೆಟುಗಳನ್ನು;

(ಬಿ) ಕ್ರಮಬದ್ಧವಾಗಿರುವ ಅಥವಾ ಅಸಿಂಧುವಾಗಿರುವ ಉಪಯೋಗಿಸಲಾದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

(ಸಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳ ಪ್ಯಾಕೆಟ್ಟುಗಳನ್ನು;

(ಡಿ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯ ಪ್ಯಾಕೆಟ್ಟುಗಳನ್ನು; ಮತು

(ಇ) ಅವರ ಅನುಪ್ರಮಾಣಿತ ರುಜುಗಳನ್ನು ಒಳಗೊಂಡ ಮತದಾರರ ಘೋಷಣೆಗಳ ಪ್ಯಾಕೆಟ್ಟುಗಳನ್ನು;

– ಸಕ್ಷಮ ನ್ಯಾಯಾಲಯದ ಅದೇಶಗಳಿಲ್ಲದೆ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರಿಯು ತೆರೆಯತಕ್ಕದ್ದಲ್ಲ ಮತ್ತು ಅವುಗಳ ಒಳಾಂಶಗಳನ್ನು ಪರಿಶೀಲಿಸತಕ್ಕದ್ದಲ್ಲ ಅಥವಾ ಯಾವನೇ ವ್ಯಕ್ತಿಯ ಅಥವಾ ಪ್ರಾಧಿಕಾರಿಯ ಮುಂದೆ ಅವುಗಳನ್ನು ಹಾಜರುಪಡಿಸತಕ್ಕದ್ದಲ್ಲ.

(2) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹೊರತುಪಡಿಸಿ [ಸಹಕಾರ ಚುನಾವಣಾ ಪ್ರಾಧಿಕಾರ]*ವು ನಿರ್ದೇಶಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಶುಲ್ಕದ ಸಂದಾಯಕ್ಕೆ ಒಳಪಟ್ಟು –

(ಎ) ಚುನಾವಣೆಗೆ ಸಂಬಂಧಪಟ್ಟ ಎಲ್ಲ ಇತರ ಕಾಗದ ಪತ್ರಗಳು ಸದಸ್ಯರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು; ಮತ್ತು

(ಬಿ) ಲಿಖಿತ ಕೋರಿಕೆಯ ಮೇರೆಗೆ ಅವುಗಳ ಪ್ರತಿಗಳನ್ನು ಒದಗಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು ಕಳುಹಿಸುವ ಅಧಿಕೃತ ವರದಿಗಳ ಪ್ರತಿಗಳನ್ನು [ಸಹಕಾರ ಚುನಾವಣಾ ಪ್ರಾಧಿಕಾರ]*ವು ಕಾಲಕಾಲಕ್ಕೆ ನಿರ್ಧರಿಸುವಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ರಿಟರ್ನಿಂಗ್ ಅಧಿಕಾರಿಯು ಒದಗಿಸತಕ್ಕದ್ದು.

**5ಎಐ. ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ವಿಲೇವಾರಿ: (1)** [ಸಹಕಾರ ಚುನಾವಣಾ ಪ್ರಾಧಿಕಾರ]*ವು ಅಥವಾ ಸಕ್ಷಮ ನ್ಯಾಯಾಲಯವು ಕೊಟ್ಟ ಯಾವುದೇ ನಿರ್ದೇಶನಗಳಿಗೆ ಒಳಪಟ್ಟು–

(ಎ) ಉಪಯೋಗಿಸದ ಮತಪತ್ರಗಳ ಪ್ಯಾಕೆಟ್ಟುಗಳನ್ನು ಆರು ತಿಂಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಆ ತರುವಾಯ [ಸಹಕಾರ ಚುನಾವಣಾ ಪ್ರಾಧಿಕಾರ]*ವು ನಿರ್ದೇಶಿಸಬಹುದಾದಂಥ ವಿಧಾನದಿಂದ ನಾಶಪಡಿಸತಕ್ಕದ್ದು.

(ಬಿ) ಇತರೆ ಪ್ಯಾಕೆಟ್ಟುಗಳನ್ನು ಒಂದು ವರ್ಷದ ಅವಧಿಯವರೆಗೆ ವಶದಲ್ಲಿಟ್ಟುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅವುಗಳನ್ನು ನಾಶಪಡಿಸತಕ್ಕದ್ದು.

[1][****]

[2][****]

**5ಎಜೆ. ಉಮೇದುವಾರರ ಠೇವಣಿಯನ್ನು ಹಿಂತಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು :–**

(1) 5ಜಿ ನಿಯಮದ ಮೇರೆಗೆ ಮಾಡಿದ ಠೇವಣಿಯನ್ನು ಅದನ್ನು ಇಟ್ಟ ವ್ಯಕ್ತಿ ಅಥವಾ ಅವನ ಪ್ರತಿನಿಧಿಗೆ ಹಿಂದಿರುಗಿಸತಕ್ಕದ್ದು ಅಥವಾ ಸಹಕಾರಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(2) ಈ ನಿಯಮದಲ್ಲಿ ನಮೂದಿಸಿದ ಪ್ರಕರಣದಲ್ಲಿರುವುದನ್ನು ಹೊರತುಪಡಿಸಿ ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯದ ಏಳು ದಿನಗಳೊಳಗೆ ಠೇವಣಿಯನ್ನು ಹಿಂತಿರುಗಿಸತಕ್ಕದ್ದು.

(3) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಯಾವುದೇ ಅಭ್ಯರ್ಥಿಯ ಹೆಸರು ಇಲ್ಲದಿದ್ದರೆ ಅಥವಾ ಅವನು ಮತದಾನವು ಪ್ರಾರಂಭವಾಗುವುದಕ್ಕೆ ಮುಂಚೆ ಮೃತನಾದರೆ, ಸಂದರ್ಭಾನುಸಾರ ಆ ಪಟ್ಟಿಯನ್ನು ಪ್ರಕಟಿಸಿದ ಅಥವಾ ಅವನ ಮರಣದ ತರುವಾಯ ಠೇವಣಿಯನ್ನು ಮರಣ ಪ್ರಮಾಣಪತ್ರದ ಆಧಾರದ ಮೇಲೆ ಹಾಗೂ ಮೃತ ಅಭ್ಯರ್ಥಿಯ ಸಹಕಾರಿಯ ಸದಸ್ಯತ್ವದ ಅರ್ಜಿಯಲ್ಲಿ ಕಾಣಿಸಿದ ನಾಮ ನಿರ್ದೇಶಿತ ವ್ಯಕ್ತಿಗೆ, ಏಳು ದಿವಸಗಳ ಒಳಗಾಗಿ ಹಿಂತಿರುಗಿಸತಕ್ಕದ್ದು.

(4) (3)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತವಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ ಆರನೇ ಒಂದರಷ್ಟು ಕ್ರಮಬದ್ಧ ಮತಗಳನ್ನು ಅವನು ಪಡೆಯದಿದ್ದಲ್ಲಿ, ಆತನ ಠೇವಣಿಯನ್ನು ಸಹಕಾರಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

ಪರಂತು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡದವರಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ಅಥವಾ ಮಹಿಳಾ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತವಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ ಹತ್ತನೇ ಒಂದರಷ್ಟು ಕ್ರಮಬದ್ಧ ಮತಗಳನ್ನು

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.
2. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಅವನು ಪಡೆಯದಿದ್ದಲ್ಲಿ, ಆತನ ಠೇವಣಿಯನ್ನು ಸಹಕಾರಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

**5ಎಕೆ. ಸಹಕಾರಿಯಲ್ಲಿ ಉದ್ಭವಿಸುವ ಆಕಸ್ಮಿಕ ಖಾಲಿ ಸ್ಥಾನವನ್ನು ವರದಿ ಮಾಡುವುದು:** ಯಾವುದೇ ಸಹಕಾರಿಯ ನಿರ್ದೇಶಕ/ಪ್ರತಿನಿಧಿಯ ಪದದಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆ ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕನು ಅಂಥ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ ಹದಿನೈದು ದಿನಗಳ ಒಳಗಾಗಿ, ಕಡ್ಡಾಯವಾಗಿ [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ಅಂತಹ ರಿಕ್ತತೆಯು ಉಂಟಾಗಿರುವ ಮಾಹಿತಿಯನ್ನು ಸಲ್ಲಿಸತಕ್ಕದು. ಒಂದು ವೇಳೆ ಆಡಳಿತ ಮಂಡಳಿಯ ಉಳಿದ ಪದಾವಧಿಯು ತನ್ನ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಉಳಿದಿದ್ದಲ್ಲಿ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ಅಂತಹ ಆಕಸ್ಮಿಕ ರಿಕ್ತತೆಯನ್ನು ಅಧಿನಿಯಮದಲ್ಲಿನ ಪ್ರಕರಣ 29 ರಡಿಯಲ್ಲಿ ಸಹಮತದ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದೇ ಅಥವಾ ಚುನಾವಣೆ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದೇ ಎಂದು ಸ್ಪಷ್ಟವಾಗಿ, ಅಂತಹ ಆಕಸ್ಮಿಕ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ ದಿನಾಂಕದಿಂದ ಮೂವತ್ತು ದಿನಗಳೊಳಗೆ, [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ತಿಳಿಸತಕ್ಕದ್ದು. ಸಹಕಾರಿಯು ಅಧಿನಿಯಮದಲ್ಲಿನ ಪ್ರಕರಣ 29 ರಡಿಯಲ್ಲಿ ಆಕಸ್ಮಿಕ ರಿಕ್ತತೆಗಳನ್ನು ಸಹಮತದ ಮೂಲಕ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಿದಲ್ಲಿ, ಅಂತಹ ಪ್ರಕ್ರಿಯೆಯನ್ನು ಅಂತಹ ಆಕಸ್ಮಿಕ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗೆ ಪೂರ್ಣಗೊಳಿಸತಕ್ಕದ್ದು. ಇಲ್ಲದಿದ್ದಲ್ಲಿ, [1][******] [ಸಹಕಾರ ಚುನಾವಣಾ ಪ್ರಾಧಿಕಾರ]*ವು ಖಾಲಿ ಬಿದ್ದ ನಿರ್ದೇಶಕ / ಪ್ರತಿನಿಧಿ ಹುದ್ದೆಗಳಿಗೆ ಖಾಲಿ ಬಿದ್ದ ತೊಂಭತ್ತು ದಿನಗಳ ಒಳಗಾಗಿ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ಚುನಾವಣೆ ನಡೆಸತಕ್ಕದ್ದು. ನಿಯಮ 5, 5ಎ ಯಿಂದ 5ಎಕೆ ವರೆಗಿನ ಉಪಬಂಧಗಳು ನಿರ್ದೇಶಕನ ಪದದಲ್ಲಿ ಉಂಟಾಗಿರುವ ಆಕಸ್ಮಿಕತೆಯನ್ನು ತುಂಬಲು ನಡೆಸುವ ಚುನಾವಣೆಗೆ, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು.

**6. ಪದಾಧಿಕಾರಿಗಳ ಚುನಾವಣೆ: (1)** ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸಲು ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ರಿಟರ್ನಿಂಗ್ ಅಧಿಕಾರಿಯಾಗಿರತಕ್ಕದ್ದು.

(2) ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರ ಯಾವುದೇ ಪದಾಧಿಕಾರಿಯ ಪದದಲ್ಲಿ, ಅನರ್ಹತೆ ಅಥವಾ ಮರಣ ಅಥವಾ ರಾಜೀನಾಮೆ ಅಥವಾ ಇತರ ಯಾವುದೇ ಕಾರಣಗಳಿಂದಾಗಿ, ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆಡಳಿತ ಮಂಡಳಿ

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಕೈಬಿಡಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಮತ್ತು ಮುಖ್ಯಕಾರ್ಯನಿರ್ವಾಹಕನು ಅಂಥ ರಿಕ್ತತೆ ಉಂಟಾದ ಏಳು ದಿನಗಳೊಳಗೆ ಆಕಸ್ಮಿಕ ರಿಕ್ತತೆ ಉಂಟಾಗಿರುವ ಬಗ್ಗೆ [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ವರದಿ ಕಳುಹಿಸತಕ್ಕದ್ದು. [ಸಹಕಾರ ಚುನಾವಣಾ ಪ್ರಾಧಿಕಾರ]*ವು ಪ್ರಸಂಗಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರ ಯಾವುದೇ ಪದಾಧಿಕಾರಿಯ ಪದದಲ್ಲಿ ಉಂಟಾಗಿರುವ ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡಲು ಚುನಾವಣೆ ನಡೆಸುವ ಉದ್ದೇಶಕ್ಕಾಗಿ ಒಬ್ಬ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸತಕ್ಕದ್ದು.

(3) (1)ನೇ ಅಥವಾ (2)ನೇ ಉಪನಿಯಮದಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಸಾಮಾನ್ಯ ಚುನಾವಣೆಯ ನಂತರ ಆಡಳಿತ ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ಅಥವಾ (2)ನೇ ಉಪನಿಯಮದಡಿ ನೇಮಕವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಪ್ರಸಂಗಾನುಸಾರ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಸಹಕಾರಿಯ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಇತರ ಯಾವುದೇ ಪದಾಧಿಕಾರಿಗಳನ್ನು ಚುನಾಯಿಸಲು ಆಡಳಿತ ಮಂಡಳಿಯ ಮತಹಾಕುವ ಅರ್ಹತೆಯಿರುವ ನಿರ್ದೇಶಕರುಗಳ ಸಭೆಯನ್ನು ಕರೆಯತಕ್ಕದ್ದು. ಅಂಥ ಸಭೆಯನ್ನು ಸಭೆಯ ಸ್ಥಳ, ದಿನಾಂಕ ಮತ್ತು ವೇಳೆಯನ್ನುಳ್ಳ ಏಳು ಸ್ಪಷ್ಟ ದಿನಗಳ ನೋಟೀಸನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ [1][ಅಥವಾ ಖುದ್ದಾಗಿ] ನೀಡಿ ಕರೆಯತಕ್ಕದ್ದು.

(4) ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಪದಾಧಿಕಾರಿಗಳ ಚುನಾವಣೆಗೆ ನಿಗದಿ ಪಡಿಸಿದ ಸಮಯದ ಎರಡು ಗಂಟೆಗೆ ಕಡಿಮೆಯಾಗದಂತೆ ಮೊದಲು, ಪ್ರಸಂಗಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯಾಗಿ ಚುನಾಯಿತನಾಗಲು ಇಚ್ಛಿಸುವ ಆಡಳಿತ ಮಂಡಳಿಯ ಯಾವುದೇ ಅರ್ಹ ಸದಸ್ಯನು ತನ್ನ ನಾಮಪತ್ರವನ್ನು ನಮೂನೆ 2ಎಂ ನಲ್ಲಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬಹುದು. ಅಂಥ ನಾಮಪತ್ರವು ಆಡಳಿತ ಮಂಡಳಿಯ ಒಬ್ಬ ಅರ್ಹ ಸದಸ್ಯನಿಂದ ಸೂಚಿತವಾಗಿ ಮತ್ತು ಇನ್ನೊಬ್ಬ ಆಡಳಿತ ಮಂಡಳಿಯ ಅರ್ಹ ಸದಸ್ಯನಿಂದ ಅನುಮೋದಿತವಾಗಿರತಕ್ಕದ್ದು.

(5) ಉಪನಿಯಮ (4)ರ ಮೇರೆಗೆ ಯಾವುದೇ ನಿರ್ದೇಶಕನು, ಸಹಕಾರಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯ ಪದಕ್ಕೆ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ ಅಥವಾ ಅನುಮೋದಿಸತಕ್ಕದ್ದಲ್ಲ.

ಪರಂತು, ಯಾವನೇ ನಿರ್ದೇಶಕನು ಸಹಕಾರಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯ ಪದಕ್ಕೆ ಒಬ್ಬರಿಗಿಂತ ಹೆಚ್ಚು

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ..

ಅಭ್ಯರ್ಥಿಗಳನ್ನು ಸೂಚಿಸಿದ್ದಲ್ಲಿ ಅಥವಾ ಅನುಮೋದಿಸಿದ್ದಲ್ಲಿ, ಮೊದಲು ಸ್ವೀಕೃತವಾದ ನಾಮಪತ್ರವನ್ನು ಪರಿಶೀಲನೆಗೆ ಪರಿಗಣಿಸತಕ್ಕದ್ದು.

(6) (1)ನೇ ಅಥವಾ (2)ನೇ ಉಪನಿಯಮದಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು, ಪದಾಧಿಕಾರಿಗಳನ್ನು ಚುನಾಯಿಸುವ ಅಥವಾ ಪ್ರಸಂಗಾನುಸಾರ ಸಹಕಾರಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯ ಪದದಲ್ಲಿ ಉಂಟಾಗಿರುವ ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ, ಕರೆದ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(7) ಸಭೆಯು ಪ್ರಾರಂಭವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಅಂಥಹ ಎಲ್ಲಾ ನಾಮನಿರ್ದೇಶನ ಪತ್ರಗಳನ್ನು ಪರಿಶೋಧಿಸತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರುಗಳಿಗೆ ತನ್ನ ಅಭಿಪ್ರಾಯದಲ್ಲಿ ಸೂಕ್ತವಾಗಿ ನಾಮನಿರ್ದೇಶನ ಮಾಡಲ್ಪಟ್ಟ ನಿರ್ದೇಶಕರ ಮತ್ತು ಅವರ ಸೂಚಕರ ಮತ್ತು ಅನುಮೋದಕರ ಹೆಸರುಗಳನ್ನು ಓದಿ ತಿಳಿಸತಕ್ಕದ್ದು.

(8) ನಾಮಪತ್ರಗಳ ಪರಿಶೋಧನೆಯು ಆದ ನಂತರ, ಯಾವುದೇ ಅಭ್ಯರ್ಥಿಯು ಲಿಖಿತ ನೋಟೀಸಿನಲ್ಲಿ ಸೂಕ್ತವಾಗಿ ಸಹಿ ಮಾಡಿ ರಿಟರ್ನಿಂಗ್ ಅಧಿಕಾರಿಗೆ ಮೂವತ್ತು ನಿಮಿಷಗಳೊಳಗೆ ಕೊಟ್ಟು ತನ್ನ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳಬಹುದು.

(9) ಹಿಂದಕ್ಕೆ ಪಡೆಯುವ ನೋಟೀಸನ್ನು ಅಭ್ಯರ್ಥಿಯು ಲಿಖಿತದಲ್ಲಿ ಸಹಿಯೊಂದಿಗೆ ಸ್ವತಃ ಸಲ್ಲಿಸತಕ್ಕದ್ದು.

(10) ಉಪನಿಯಮ (8)ರಡಿ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವುದೇ ನಿರ್ದೇಶಕನು ಅಂಥ ಹಿಂತೆಗೆದುಕೊಳ್ಳುವ ನೋಟೀಸನ್ನು ರದ್ದುಮಾಡಲು ಅವಕಾಶ ನೀಡತಕದ್ದಲ್ಲ.

(11) ರಿಟರ್ನಿಂಗ್ ಅಧಿಕಾರಿಯು, ಉಪನಿಯಮ (9)ರಡಿ ಹಿಂತೆಗೆದುಕೊಳ್ಳುವ ನೋಟೀಸಿನ ನೈಜತೆಯು ಮತ್ತು ಅದನ್ನು ಕೊಡುವ ನಿರ್ದೇಶಕನ ಗುರುತು ಮನದಟ್ಟಾದರೆ, ಅವನ/ಅವರ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ವ್ಯಕ್ತಿಯ/ವ್ಯಕ್ತಿಗಳ ಹೆಸರನ್ನು/ಹೆಸರುಗಳನ್ನು ಅಂಥ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರುಗಳಿಗೆ ಓದಿ ತಿಳಿಸತಕ್ಕದ್ದು.

(12) ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ನಿಗದಿಪಡಿಸಿದ ಸಮಯವು ಮುಗಿದ ತರುವಾಯ, ಚುನಾವಣೆ ನಡೆಸುವ ಯಾವುದೇ ಪದಕ್ಕೆ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಮತ್ತು ನಿರ್ದಿಷ್ಟಪಡಿಸಿದ ಸಮಯ ಮತ್ತು ರೀತಿಯಲ್ಲಿ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದಿರುವ ಅಭ್ಯರ್ಥಿಗಳ ಸಂಖ್ಯೆಯು, ಆ ಪದಕ್ಕೆ ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ಮೀರದಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ತಕ್ಷಣ ಆ ಪದಕ್ಕೆ ಕ್ರಮಬದ್ಧವಾಗಿ

ನಾಮನಿರ್ದೇಶನ ಸಲ್ಲಿಸಿದ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಭಾವಿಸತಕ್ಕದ್ದು ಎಂಬ ಘೋಷಣೆಯನ್ನು ಮಾಡತಕ್ಕದ್ದು.

(13) ಯಾವುದೇ ಪದಕ್ಕೆ ಕ್ರಮಬದ್ಧವಾಗಿ ನಾಮನಿರ್ದೇಶನ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆಯು, ಆ ಪದಕ್ಕೆ ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ಮೀರಿದಲ್ಲಿ, ರಿಟರ್ನಿಂಗ್ ಅಧಿಕಾರಿಯು ಈ ಮುಂದೆ ತಿಳಿಸಿದಂತೆ ರಹಸ್ಯ ಮತಪತ್ರದ ಮೂಲಕ ಮತದಾನವನ್ನು ನಡೆಸುವ ಕ್ರಮ ಜರುಗಿಸತಕ್ಕದ್ದು.

(14) ಮತಗಳನ್ನು ರಹಸ್ಯ ಮತದಾನದಿಂದ ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಅಭ್ಯರ್ಥಿಗೆ ಮತ ನೀಡುವ ನಿರ್ದೇಶಕರುಗಳು ಅವರಿಗೆ ಒದಗಿಸುವ ಮತಪತ್ರಗಳಲ್ಲಿ ಮತಗಳನ್ನು ದಾಖಲಿಸತಕ್ಕದ್ದು.

(15) ಸಭೆಯಲ್ಲಿ ಹಾಜರಿದ್ದ ಯಾವುದೇ ನಿರ್ದೇಶಕನು ತಾನು ಹಾಗೇ ಇಚ್ಛೆಪಟ್ಟಲ್ಲಿ ಮತದಾನ ಮಾಡದಿರಬಹುದು.

(16) ಹಾಜರಿದ್ದ ಮತ್ತು ಮತ ಹಾಕಲು ಇಚ್ಛೆಯುಳ್ಳ ನಿರ್ದೇಶಕರು ಮತದಾನ ಮಾಡಿದ ನಂತರ ರಿಟರ್ನಿಂಗ್ ಅಧಿಕಾರಿಯು ಮತಗಳನ್ನು ಎಣಿಸತಕ್ಕದ್ದು ಮತ್ತು ಅತ್ಯಂತ ಹೆಚ್ಚಿನ ಕ್ರಮಬದ್ಧ ಮತಗಳನ್ನು ಪಡೆದಿರುವ ಅಭ್ಯರ್ಥಿಗಳು ಸೂಕ್ತ ರೀತಿಯಲ್ಲಿ ಚುನಾಯಿತರಾಗಿದ್ದಾರೆ ಎಂದು ಘೋಷಿಸತಕ್ಕದ್ದು.

(17) ಎರಡು ಅಥವಾ ಹೆಚ್ಚಿನ ಅಭ್ಯರ್ಥಿಗಳು ಗಳಿಸಿದ ಕ್ರಮಬದ್ಧ ಮತಗಳು ಸಮವಾಗಿದ್ದರೆ ಅಂತಹ ಯಾವುದೇ ಅಭ್ಯರ್ಥಿಗೆ ಒಂದು ಅಧಿಕ ಮತವನ್ನು ಸೇರಿಸುವುದರಿಂದ ಅಂತಹ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಣೆಯಾಗಲು ಅರ್ಹನಾಗಿರುವುದು ಕಂಡು ಬಂದರೆ, ರಿಟರ್ನಿಂಗ್ ಅಧಿಕಾರಿಯು ಚೀಟಿ ಎತ್ತುವ ಮೂಲಕ ಕೂಡಲೇ ಆ ಅಭ್ಯರ್ಥಿಗಳ ನಡುವೆ ಆಯ್ಕೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಯಾವ ಅಭ್ಯರ್ಥಿಯ ಹೆಸರಿನಲ್ಲಿ ಚೀಟಿ ಬರುವುದೋ ಅವನು ಒಂದು ಅಧಿಕ ಮತವನ್ನು ಪಡೆದಿರುವನೆಂಬಂತೆ ಕ್ರಮಕೈಗೊಳ್ಳತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಆ ತರುವಾಯ ಯಾವ ಅಭ್ಯರ್ಥಿಯ ಹೆಸರಿನಲ್ಲಿ ಚೀಟಿ ಬರುತ್ತದೋ ಅವನು ಸೂಕ್ತ ರೀತಿಯಲ್ಲಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು.

(18) ರಿಟರ್ನಿಂಗ್ ಅಧಿಕಾರಿಯು ಸಭೆಯಲ್ಲಿ ಹಾಜರಿದ್ದ ಎಲ್ಲ ನಿರ್ದೇಶಕರ ಹೆಸರುಗಳನ್ನು ಒಳಗೊಂಡಿರುವ ಸಭಾ ನಡವಳಿಗಳನ್ನು ದಾಖಲಿಸುವಂತೆ ಮಾಡತಕ್ಕದ್ದು. ಅಂಥ ನಡವಳಿಗಳನ್ನು ರಿಟರ್ನಿಂಗ್ ಅಧಿಕಾರಿ, ಮುಖ್ಯಕಾರ್ಯನಿರ್ವಾಹಕ ಮತ್ತು ಹಾಜರಿದ್ದ ಎಲ್ಲ ನಿರ್ದೇಶಕರು ಸಹಿ ಮಾಡತಕ್ಕದ್ದು. ಸದರಿ ನಡವಳಿಯು ಯಾವುದೇ ಸದಸ್ಯನಿಗೆ ಪರಿಶೀಲನೆಗೆ ಲಭ್ಯವಾಗತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(19) ರಿಟರ್ನಿಂಗ್ ಅಧಿಕಾರಿಯು ಚುನಾವಣೆಯ ನಡವಳಿಗಳನ್ನು [1][ದಾಖಲಿಸುವುದು] ಒಂದು ಸಮಗ್ರ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯು ಚುನಾವಣೆಯ ದಾಖಲೆಗಳ ಭಾಗವಾಗಿರತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಅಂಥ ವರದಿಯ ಪ್ರತಿಯನ್ನು ಚುನಾವಣೆಯ ಫಲಿತಾಂಶದ ಪ್ರತಿಯ ಸಹಿತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ಕೊಡತಕ್ಕದ್ದು ಹಾಗೂ ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು [ಸಹಕಾರ ಚುನಾವಣಾ ಪ್ರಾಧಿಕಾರ]*ಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(20) ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ, ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ಮತಪತ್ರಗಳನ್ನು ಮತ್ತು ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ಅಥವಾ [ಸಹಕಾರ ಚುನಾವಣಾ ಪ್ರಾಧಿಕಾರ]*ದಿಂದ ಸೂಚಿಸಲ್ಪಟ್ಟವರಿಗೆ ಕೊಡತಕ್ಕದ್ದು. ಚುನಾವಣೆಯ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಸಲ್ಲಿಸಲಾದ ವ್ಯಾಜ್ಯ ಅಥವಾ ಅಪೀಲು ವಿಲೇವಾರಿ ಆಗುವವರೆಗೆ, ಇವೆರಡರಲ್ಲಿ ಯಾವುದು ಕೊನೆಯದೋ ಅಲ್ಲಿಯವರೆಗೆ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಅಥವಾ [ಸಹಕಾರ ಚುನಾವಣಾ ಪ್ರಾಧಿಕಾರ]*ದಿಂದ ಸೂಚಿಸಲ್ಪಟ್ಟವರು ಸದರಿ ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸುರಕ್ಷಿತವಾಗಿ ಸಂರಕ್ಷಿಸತಕ್ಕದ್ದು ಮತ್ತು ಆ ನಂತರ ನಾಶಪಡಿಸತಕ್ಕದ್ದು.

**6ಎ. ನೋಂದಣಿಯ ನಂತರದ ಪ್ರಥಮ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು:** ಯಾವುದೇ ಸಹಕಾರಿಯು ನೋಂದಣಿಯಾದ ನಂತರ ಪ್ರಥಮ ಆಡಳಿತ ಮಂಡಳಿಗೆ ನಡೆಸುವ ಚುನಾವಣೆಗೆ ನಿಯಮ 5, 5ಎ ಯಿಂದ 5ಎಕೆ ವರೆಗಿನ ಉಪಬಂಧಗಳು, ಯುಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು.

ಪರಂತು, ನಿಯಮ 5ಸಿ ಮೇರೆಗೆ ಸುಸ್ತಿದಾರರ ಪಟ್ಟಿಯನ್ನು ಪ್ರಕಟಿಸುವ ಅಗತ್ಯವಿರತಕ್ಕದ್ದಲ್ಲ.

ಟಿಪ್ಪಣಿ: ನಿಯಮ 5, 5ಎ ಯಿಂದ 5ಎಕೆ ವರೆಗಿನ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಸಂಯುಕ್ತ ಸಹಕಾರಿಗೂ ಅನ್ವಯವಾಗತಕ್ಕದ್ದು.

**6ಬಿ. ಪ್ರಥಮ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆ:** ಸಹಕಾರಿಯ ಪ್ರಥಮ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆಗೆ ನಿಯಮ 6ರ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು

**6ಸಿ. ಸಾಮಾನ್ಯ ಸಭೆಗಳು:** (1) ಒಂದು ಸಹಕಾರಿಯ ಆಡಳಿತ ಮಂಡಳಿಯು ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಂದರ್ಭದಲ್ಲಿ ತನ್ನ ಸದಸ್ಯರ ಸಾಮಾನ್ಯ ಸಭೆಯನ್ನು ಕರೆಯಬಹುದು.

ಪರಂತು ಪ್ರಕರಣ 23ರಲ್ಲಿ ಉಕ್ತವಾದ ಕಲಾಪವನ್ನು ನಿರ್ವಹಿಸಲು ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೈದನೇ ದಿನಾಂಕದೊಳಗೆ ವಾರ್ಷಿಕ ಸಾಮಾನ್ಯ ಸಭೆ ಎಂದು ಕರೆಯಲ್ಪಡುವ ಒಂದು ಅಂಥ ಸಭೆಯನ್ನು ಕರೆಯತಕ್ಕದ್ದು.

(2) ಆಡಳಿತ ಮಂಡಳಿಯು ಸಾಮಾನ್ಯ ಸಭೆಯ ದಿನಾಂಕ ಮತ್ತು ಸಮಯವನ್ನು ನಿರ್ಧರಿಸಿದ ನಂತರ, ಮುಖ್ಯ ಕಾರ್ಯನಿರ್ವಾಹಕನು ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಕನಿಷ್ಠ ಇಪ್ಪತ್ತು ದಿನಗಳ ಮೊದಲು ಅಥವಾ ಇತರ ಸಂದರ್ಭದಲ್ಲಿ ಕನಿಷ್ಠ ಹದಿನೈದು ಸ್ಪಷ್ಟ ದಿನಗಳ ನೋಟೀಸನ್ನು ನೀಡುವುದರ ಮೂಲಕ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಆದಾಗ್ಯೂ, ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಹತ್ತು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ಅಂಥ ನೋಟೀಸನ್ನು ಈ ಕೆಳಗಿನ ವಿಧಾನದ ಮೂಲಕ ಕಳುಹಿಸಬಹುದು.

(i) (ಎ) ಸಾಮಾನ್ಯ ಅಂಚೆ [1][ಅಥವಾ ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ (Bulk post)]; ಅಥವಾ

(ಬಿ) ವಿದ್ಯುನ್ಮಾನ ಅಂಚೆ (ಇ–ಮೇಲ್ ); ಅಥವಾ

(ಸಿ) ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯವಾಗಿ ತಲುಪಿಸುವ ಮೂಲಕ; ಮತ್ತು

(ii) ಕಾರ್ಯಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸುವ ಮೂಲಕ.

(3) ಪ್ರಕರಣ 30ರ ಉಪಪ್ರಕರಣ (2)ರಡಿ ಸಂಯುಕ್ತ ಸಹಕಾರಿಯು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆದಾಗ, ಅದು:–

(i) ಪ್ರಸಂಗಾನುಸಾರ 10 ಸ್ಪಷ್ಟ ದಿನಗಳೊಳಗೆ ಕಡಿಮೆ ಇಲ್ಲದ ಅವಧಿಗೆ ಅಂಥ ಸಭೆಯ ನೋಟೀಸಿನ ಅವಧಿಯನ್ನು;

(ii) ಅಂಥ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ; ಮತ್ತು

(iii) ಅಂಥ ಸಭೆಯಲ್ಲಿ ಪರಿಗಣಿಸಬೇಕಾದ ವಿಷಯಗಳ

ಬಗ್ಗೆ ನಿರ್ಧರಿಸಬಹುದು. ಸಂಯುಕ್ತ ಸಹಕಾರಿಯಿಂದ ನಿಯೋಜಿತನಾದ ಒಬ್ಬ ಅಧಿಕಾರಿಯು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು.

(4) ಪ್ರಕರಣ 30ರ ಉಪಪ್ರಕರಣ (3)ರಡಿ ರಿಜಿಸ್ಟ್ರಾರನು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆದಾಗ, ಆತನು:–

(i) ಪ್ರಸಂಗಾನುಸಾರ ಹತ್ತು ಸ್ಪಷ್ಟ ದಿನಗಳೊಳಗೆ ಕಡಿಮೆ ಇಲ್ಲದ ಅವಧಿಗೆ ಅಂಥ ಸಭೆಯ ನೋಟೀಸಿನ ಅವದಿಯನ್ನು ;

(ii) ಅಂಥ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ; ಮತ್ತು

(iii) ಅಂಥ ಸಭೆಯಲ್ಲಿ ಪರಿಗಣಿಸಬೇಕಾದ ವಿಷಯಗಳ

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಬಗ್ಗೆ ನಿರ್ಧರಿಸಬಹುದು. ರಿಜಿಸ್ಟ್ರಾರನು ಅಥವಾ ಅವನಿಂದ ನಿಯೋಜಿತನಾದ ಒಬ್ಬ ಅಧಿಕಾರಿಯು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು.

(5) ಸಾಮಾನ್ಯ ಸಭೆಯ ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕನು ಅಜೆಂಡಾದಲ್ಲಿ ಪ್ರತಿ ವಿಷಯದ ಮೇಲೆ ಸಂಕ್ಷಿಪ್ತವಾದ ಟಿಪ್ಪಣಿಗಳನ್ನು, ಹಿಂದಿನ ವರ್ಷದ ಲೆಕ್ಕಪರಿಶೋಧಿತ ಆಸ್ತಿ ಹೊಣೆ ಪಟ್ಟಿ, ಲಾಭ-ನಷ್ಟ ತಃಖ್ತೆ ಮತ್ತು ಲೆಕ್ಕ ಪರಿಶೋಧನಾ ವರದಿಯ ಮುಖ್ಯ ಸಾರಾಂಶಗಳನ್ನು, ಅದರ ಮೇಲೆ ಆಡಳಿತ ಮಂಡಳಿಯು ತೆಗೆದುಕೊಂಡ ಕ್ರಮಗಳ ಸಂಕ್ಷಿಪ್ತ ಅನುಸರಣಾ ವರದಿಯ ಸಹಿತ ಸಾಮಾನ್ಯ ಸಭೆಯ ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಒಂದು ವೇಳೆ ಬೈಲಾ ತಿದ್ದುಪಡಿಯ ಪ್ರಸ್ತಾವವಿದ್ದಲ್ಲಿ, ಅಂತಹ ಪ್ರಸ್ತಾವವನ್ನು ಪ್ರಸ್ತಾಪಿತ ತಿದ್ದುಪಡಿಯ ಪಾಠ ಸಹಿತ ಸಭಾ ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಆದಾಗ್ಯೂ ಮುಖ್ಯಕಾರ್ಯನಿರ್ವಾಹಕನು ಕಛೇರಿಯಲ್ಲಿಯೂ ಸಹ ಅಜೆಂಡಾದಲ್ಲಿನ ಎಲ್ಲಾ ವಿಷಯಗಳ ಮೇಲೆ ವಿವರವಾದ ಟಿಪ್ಪಣಿಗಳನ್ನು ಮತ್ತು ಹಿಂದಿನ ವರ್ಷದ ಪೂರ್ಣ ಲೆಕ್ಕಪರಿಶೋಧನಾ ವರದಿಯನ್ನು ಅಪೇಕ್ಷೆಯುಳ್ಳ ಸದಸ್ಯರಿಗೆ ಒದಗಿಸತಕ್ಕದ್ದು.

(6) ಸಹಕಾರಿಯ ಮತದಾನದ ಹಕ್ಕುಳ್ಳ ಒಟ್ಟು ಸದಸ್ಯರ ಐದನೇ ಒಂದು ಭಾಗದಷ್ಟು ಸದಸ್ಯರ ಹಾಜರಾತಿಯು ಸಾಮಾನ್ಯ ಸಭೆಯ ಕೋರಂ ಆಗಿರತಕ್ಕದ್ದು. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪವನ್ನು ನಿರ್ವಹಿಸುವ ಸಮಯದಲ್ಲಿ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಕಲಾಪವನ್ನು ನಡೆಸತಕ್ಕದ್ದಲ್ಲ.

(7) ಸಭೆಗೆ ಗೊತ್ತುಪಡಿಸಿದ ಸಮಯದಿಂದ ಒಂದು ಗಂಟೆಯೊಳಗೆ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಸಭೆಯನ್ನು ಮುಂದೂಡತಕ್ಕದ್ದು.

ಪರಂತು, ಅಂಥ ಸಭೆಯನ್ನು ಸದಸ್ಯರುಗಳ ಕೋರಿಕೆ ಮೇರೆಗೆ ಕರೆದಿದ್ದರೆ ಅದನ್ನು ಮುಂದೂಡತಕ್ಕದ್ದಲ್ಲ ಆದರೆ ವಿಸರ್ಜಿಸತಕ್ಕದ್ದು.

(8) ಸಭೆಯಲ್ಲಿ ಕಲಾಪವನ್ನು ನಡೆಸುತ್ತಿರುವಾಗ ಯಾವುದೇ ಸಂದರ್ಭದಲ್ಲಿ ಕೋರಂ ಆಗಲು ಅಗತ್ಯವಿರುವ ಸಾಕಷ್ಟು ಸಂಖ್ಯೆಯ ಸದಸ್ಯರು ಹಾಜರಿಲ್ಲದಿದ್ದಲ್ಲಿ ಅಂಥ ಕಲಾಪವನ್ನು ನಡೆಸತಕ್ಕದ್ದಲ್ಲ. ಅಧ್ಯಕ್ಷನು ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸುವ ವಹಿಸಿರುವ ಸದಸ್ಯನು, ತಾನಾಗಿಯೇ ಅಥವಾ ಈ ಸಂಗತಿಯನ್ನು ಅವನ ಗಮನಕ್ಕೆ ತಂದಾಗ ಸಭೆಯನ್ನು ಮುಂದೂಡತಕ್ಕದ್ದು ಮತ್ತು ಹಾಗೇ ಮುಂದೂಡಲ್ಪಟ್ಟ ಸಭೆಯಲ್ಲಿ ಇತ್ಯರ್ಥವಾಗಲು ಬಾಕಿ ಉಳಿದ ಕಲಾಪವನ್ನು ಮುಂದುವರೆದ ಸಭೆಯಲ್ಲಿ ಸಾಮಾನ್ಯ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(9) ಉಪನಿಯಮ (7) ಅಥವಾ ಉಪನಿಯಮ (8)ರಡಿಯಲ್ಲಾಗಲೀ ಸಭೆಯು ಮುಂದೂಡಲ್ಪಟ್ಟಾಗ, ಮುಂದುವರೆದ ಸಭೆಯು ಅದೇ ದಿನಾಂಕದಂದು ಅಥವಾ ಮುಂದೂಡಿದ ದಿನಾಂಕದಿಂದ ಏಳು ದಿನಗಳೊಳಗೆ ಸಭೆಯ ಅಧ್ಯಕ್ಷನು

ಗೊತ್ತುಪಡಿಸಿದ ಅಂಥ ಸ್ಥಳದಲ್ಲಿ, ಅಂಥ ದಿನಾಂಕ ಮತ್ತು ಸಮಯದಲ್ಲಿ ನಡೆಯತಕ್ಕದ್ದು.

ಅಂಥ ಮುಂದುವರೆದ ಸಭೆಯಲ್ಲಿ ಮುಂದೂಡಲ್ಪಟ್ಟ ಸಭೆಯ ಅಜೆಂಡಾದಲ್ಲಿ ನಮೂದಿಸಿರುವ ವಿಷಯಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯವನ್ನು ಚರ್ಚಿಸತಕ್ಕದ್ದಲ್ಲ ಮತ್ತು ನಿರ್ಣಯ ತೆಗೆದುಕೊಳ್ಳತಕ್ಕದ್ದಲ್ಲ. ಮುಂದುವರೆದ ಸಭೆಗೂ ಸಹ ವಿಷಯಗಳನ್ನು ಪರಿಗಣಿಸಲು ಅಗತ್ಯವಿರುವ ಕೋರಂ ಇರತಕ್ಕದ್ದು.

(10) ಕೋರಂ ಕೊರತೆಯಿಂದ ಹಾಗೆ ಮುಂದೂಡಲ್ಪಟ್ಟ ಸಭೆಯಲ್ಲಿ ಪರಿಗಣಿಸಲಾಗದ ಕಲಾಪವನ್ನು ಕೋರಂವುಳ್ಳ ಮುಂದುವರೆದ ಸಭೆಯಲ್ಲಿ ಅಥವಾ ಯಾವುದೇ ತರುವಾಯದ ಮುಂದುವರೆದ ಸಭೆಯಲ್ಲಿ ಮಂಡಿಸತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು.

(11) ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸದ ಹೊರತು, ಸಾಮಾನ್ಯ ಸಭೆಯಲ್ಲಿ ಎಲ್ಲಾ ತೀರ್ಮಾನಗಳನ್ನು ಸರಳ ಬಹುಮತದ ಹಾಜರಿರುವ ಸದಸ್ಯರು ತೆಗೆದುಕೊಳ್ಳತಕ್ಕದ್ದು. ಚುನಾವಣೆಯನ್ನು ಹೊರತುಪಡಿಸಿ ಯಾವುದೇ ವಿಷಯದ ಮೇಲೆ ತೀರ್ಮಾನದ ಪರ ಅಥವಾ ವಿರುದ್ಧ ಸಮಾನ ಮತಗಳು ದೊರೆತರೆ ಸಭಾಪತಿಯು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(12) ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿದ್ದ ನಿರ್ದೇಶಕರಿಂದ ಚುನಾಯಿತನಾದ ಆಡಳಿತ ಮಂಡಳಿ ಇತರ ಸದಸ್ಯನೊಬ್ಬನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(13) ಮುಖ್ಯ ಕಾರ್ಯನಿರ್ವಾಹಕನು ಸಭೆಯ ನಡವಳಿಗಳನ್ನು ಚರ್ಚೆಗಳನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ಸದಸ್ಯನು ಯಾವುದೇ ವಿಷಯದಲ್ಲಿ ಚರ್ಚೆಯಲ್ಲಿ ಭಾಗವಹಿಸಿ ತನ್ನ ಅಸಮ್ಮತಿ ವ್ಯಕ್ತಪಡಿಸಿದಾಗ ಅದನ್ನೂ ಸಹ ಯಥಾವತ್ತಾಗಿ ದಾಖಲಿಸತಕ್ಕದ್ದು. ಸದರಿ ಪುಸ್ತಕದ ಪ್ರತಿ ಪುಟದಲ್ಲಿ ಸಣ್ಣ ರುಜು ಮಾಡತಕ್ಕದ್ದು ಅಥವಾ ಸಹಿ ಮಾಡತಕ್ಕದ್ದು ಮತ್ತು ನಡವಳಿ ಪುಸ್ತಕದಲ್ಲಿ ಪ್ರತಿ ಸಭೆಯ ನಡವಳಿಯನ್ನು ದಾಖಲಿಸಿದ ಕೊನೆಯ ಪುಟದಲ್ಲಿ ದಿನಾಂಕವನ್ನು ನಮೂದಿಸಿ ಮುಖ್ಯ ಕಾರ್ಯನಿರ್ವಾಹಕನು ಮತ್ತು ಸಭಾಪತಿಯು ಸಹಿ ಮಾಡತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾದ ಮತ್ತು ಯುಕ್ತವಾದ ಸಂಗ್ರಹವನ್ನು ಒಳಗೊಂಡಿರತಕ್ಕದ್ದು.

(14) ಮುಖ್ಯ ಕಾರ್ಯನಿರ್ವಾಹಕನು ಅಂಥ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಡವಳಿಗಳ ದೃಢೀಕೃತ ಪ್ರತಿಯನ್ನು ರಿಜಿಸ್ಟ್ರಾರನಿಗೆ,

ಸಂಯುಕ್ತ ಸಹಕಾರಿಗೆ, ಸಂಬಂಧಪಟ್ಟ ಹಣಕಾಸು ಬ್ಯಾಂಕಿಗೆ, ಸಂಬಂಧಪಟ್ಟ ಕ್ರೆಡಿಟ್ ಏಜೆನ್ಸಿಗೆ ಕಳುಹಿಸತಕ್ಕದ್ದು ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ದೃಢೀಕೃತ ಪ್ರತಿಯನ್ನು ಪ್ರಕಟಿಸತಕ್ಕದ್ದು.

(15) ಯಾವುದೇ ಸಭೆಯ ನಡವಳಿಗಳನ್ನುಳ್ಳ ಪುಸ್ತಕಗಳನ್ನು,–

(ಎ) ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಇಡತಕ್ಕದ್ದು;

(ಬಿ) ಸಹಕಾರಿಯ ಕೆಲಸದ ವೇಳೆಯಲ್ಲಿ ಯಾವುದೇ ಸದಸ್ಯನು ಪರಿಶೀಲಿಸಲು ಅವಕಾಶವಿರತಕ್ಕದ್ದು.

**6ಡಿ. ವಿಶೇಷ ಸಾಮಾನ್ಯ ಸಭೆಗಳು– (1)** ಈ ನಿಯಮಗಳ ನಿಯಮ 6ಸಿ ಯ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ವಿಶೇಷ ಸಾಮಾನ್ಯ ಸಭೆಗಳಿಗೆ ಅನ್ವಯವಾಗುತ್ತವೆ.

(2) ತುರ್ತು ಪರಿಸ್ಥಿತಿ ಇದ್ದಲ್ಲಿ, ಕನಿಷ್ಠ ಹತ್ತು ಸ್ಪಷ್ಟ ದಿನಗಳ ನೋಟೀಸನ್ನು ನೀಡುವ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು, ಆದರೆ ಅಂಥ ಸಭೆಯಲ್ಲಿ ಅಜೆಂಡಾದಲ್ಲಿ ನಮೂದಿಸಿರುವ ಕಲಾಪದ ಹೊರತಾಗಿ ಯಾವುದೇ ವಿಷಯಗಳನ್ನು ಚರ್ಚಿಸಿ ನಿರ್ಣಯಿಸತಕ್ಕದ್ದಲ್ಲ.

**6ಇ. ಆಡಳಿತ ಮಂಡಳಿಯ ಸಭೆಗಳು :** (1) ಅಧಿನಿಯಮದ ಪ್ರಕರಣ 27 ಅಥವಾ ಈ ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ನಮೂದಿಸಿರುವ ಕಲಾಪವನ್ನು ನಿರ್ವಹಿಸಲು ಯಾವುದೇ ಸಹಕಾರಿಯ ಆಡಳಿತ ಮಂಡಳಿಯು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸಭೆ ನಡೆಸತಕ್ಕದ್ದು.

ಪರಂತು, ಒಂದು ಆಡಳಿತ ಮಂಡಳಿ ಸಭೆಗೂ ಮತ್ತು ಮುಂದಿನ ಮತ್ತೊಂದು ಆಡಳಿತ ಮಂಡಳಿ ಸಭೆಯ ಕಾಲಾವಧಿ ಯಾವುದೇ ಕಾರಣಕ್ಕೂ ಎರಡು ತಿಂಗಳು ಮೀರತಕ್ಕದ್ದಲ್ಲ.

(2) ಮುಖ್ಯ ಕಾರ್ಯನಿರ್ವಾಹಕನು, ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿಯೊಡನೆ ಸಮಾಲೋಚಿಸಿ, ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕನಿಷ್ಠ ಏಳು ಸ್ಪಷ್ಟ ದಿನಗಳ ನೋಟೀಸನ್ನು ನೀಡುವುದರ ಮೂಲಕ ಆಡಳಿತ ಮಂಡಳಿ ಸಭೆಯನ್ನು ಕರೆಯತಕ್ಕದ್ದು. ಆದಾಗ್ಯೂ, ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಮೂರು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ಆಡಳಿತ ಮಂಡಳಿ ಸಭೆಯನ್ನು ಕರೆಯಬಹುದು. ಅಂಥ ನೋಟೀಸನ್ನು ಈ ಕೆಳಗಿನ ವಿಧಾನದ ಮೂಲಕ ಕಳುಹಿಸಬಹುದು.

(ಎ) ಅಂಚೆ ಮತ್ತು ವಿದ್ಯುನ್ಮಾನ ಅಂಚೆ (ಇ–ಮೇಲ್); ಅಥವಾ

(ಬಿ) ತ್ವರಿತ ಅಂಚೆ; ಅಥವಾ

(ಸಿ) ಕೊರಿಯರ್; ಅಥವಾ

(ಸಿ) ಸೂಕ್ತ ಸ್ವೀಕೃತಿಯ ಸಹಿತ ಸ್ಥಳೀಯ ತಲುಪಿಸುವಿಕೆ.

(19) ಸಭಾ ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕನು ಅಜೆಂಡಾದಲ್ಲಿ

ಪ್ರತಿ ವಿಷಯದ ಮೇಲೆ ಅದರ ಸಾಧಕ–ಬಾಧಕ, ಅನ್ವಯವಾಗುವ ಕಾನೂನಿನ ಉಪಬಂಧ ಮತ್ತು ಆರ್ಥಿಕ ಪರಿಣಾಮಗಳನ್ನೊಳಗೊಂಡ ವಿವರವಾದ ಟಿಪ್ಪಣಿಗಳನ್ನು ಅಂಥ ನೋಟೀಸಿನ ಜೊತೆಯಲ್ಲಿ ಕಳುಹಿಸತಕ್ಕದ್ದು.

(20) ಉಪವಿಧಿಗಳಲ್ಲಿ ನಮೂದಿಸಿರುವಂತೆ ಆಡಳಿತ ಮಂಡಳಿಯ ಸಂಖ್ಯಾ ಬಲದ ಶೇಕಡಾ 50ರ ನಂತರದ ಪೂರ್ಣ ಸಂಖ್ಯೆಯು ಆಡಳಿತ ಮಂಡಳಿಯ ಸಭೆಯ ಕೋರಂ ಆಗಿರತಕ್ಕದ್ದು. ಯಾವುದೇ ಆಡಳಿತ ಮಂಡಳಿಯ ಸಭೆಯಲ್ಲಿ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ.

(21) ನಿಯಮ 6ಸಿ ಯ ಉಪನಿಯಮ (7) ರಿಂದ (10) ಮತ್ತು ಉಪನಿಯಮ (16)ರ ಉಪಬಂಧಗಳು ಆಡಳಿತ ಮಂಡಳಿಯ ಸಭೆಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(22) ಸಾಮಾನ್ಯವಾಗಿ ಅಜೆಂಡಾದಲ್ಲಿ ನಮೂದಿಸಿರುವ ವಿಷಯಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ. ಆದಾಗ್ಯೂ ಆಡಳಿತ ಮಂಡಳಿಯ ಮುಂದಿನ ಸಭೆಯಲ್ಲಿ ಯಾವುದೇ ವಿಷಯದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳಲು ಸಾಕಷ್ಟು ಸಮಯವಿಲ್ಲದಿದ್ದ ಪಕ್ಷದಲ್ಲಿ, ಎಲ್ಲಾ ನಿರ್ದೇಶಕರಿಗೆ ಅಂಥ ವಿಷಯದ ಮೇಲೆ ಅವಶ್ಯವಾದ ಟಿಪ್ಪಣಿಗಳನ್ನು ಒದಗಿಸಿದ ನಂತರ, ಹಾಗೂ ಅಜೆಂಡಾದಲ್ಲಿನ ಎಲ್ಲಾ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿದ ನಂತರ ಸಭಾಪತಿಯ ಅನುಮತಿ ಮೇರೆಗೆ ಅಂಥ ವಿಷಯವನ್ನು ಹೆಚ್ಚುವರಿ ವಿಷಯವನ್ನಾಗಿ ಚರ್ಚೆ ಮತ್ತು ತೀರ್ಮಾನಕ್ಕೆ ತೆಗೆದುಕೊಳ್ಳಬಹುದು. ಪರಂತು, ಕೆಳಕಂಡ ವಿಷಯಗಳನ್ನು ಹೆಚ್ಚುವರಿ ವಿಷಯವನ್ನಾಗಿ ಚರ್ಚೆಗೆ ಮತ್ತು ತೀರ್ಮಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(ಎ) ನಿರ್ದೇಶಕರುಗಳ ಚುನಾವಣೆ;

(ಬಿ) ಪದಾಧಿಕಾರಿಗಳ ಚುನಾವಣೆ;

(ಸಿ) ವೃತ್ತಿಪರ ನಿರ್ದೇಶಕನ ಹುದ್ದೆಗೆ ಸಹಮತದಿಂದ ಭರ್ತಿ ಮಾಡಿಕೊಳ್ಳುವುದು;

(ಡಿ) ಆಕಸ್ಮಿಕ ಖಾಲಿ ಸ್ಥಾನದ ನಿರ್ದೇಶಕನ ಹುದ್ದೆಗೆ ಸಹಮತದಿಂದ ಭರ್ತಿ ಮಾಡಿಕೊಳ್ಳುವುದು;

(ಇ) ನೌಕರರುಗಳ ವಿರುದ್ಧ ಶಿಸ್ತಿನ ವಿಚಾರಣಾ ವರದಿ ಮೇಲೆ ಕ್ರಮ; ಮತ್ತು

(ಎಫ್) ಆರ್ಥಿಕ ಪರಿಣಾಮಗಳನ್ನೊಳಗೊಂಡ ಯಾವುದೇ ವಿಷಯ;

ಮತ್ತು ಪರಂತು, ಹೆಚ್ಚುವರಿ ವಿಷಯಗಳಿಗೆ ಸೂಕ್ತ ವಿಷಯವಾರು ಟಿಪ್ಪಣಿ ನೀಡದೆ, ತೀರ್ಮಾನ ಕೈಗೊಳ್ಳಬಾರದು.

(7) ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ಧವಾಗಿ ಅಥವಾ ಸಹಕಾರಿಯ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ತೀರ್ಮಾನವನ್ನು ಆಡಳಿತ ಮಂಡಳಿಯು ತೆಗೆದುಕೊಳ್ಳತಕ್ಕದ್ದಲ್ಲ. ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ಧವಾಗಿ ಅಥವಾ

ಸಹಕಾರಿಯ ಹಿತಾಸಕ್ತಿಗೆ ಧಕ್ಕೆ ತರುವಂತಹ ಯಾವುದೇ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅಂತಹ ತೀರ್ಮಾನಕ್ಕೆ ಆಡಳಿತ ಮಂಡಳಿಯ ನಿರ್ದೇಶಕರುಗಳು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಸಭೆಯ ನಡವಳಿಗಳನ್ನು ಚರ್ಚೆಗಳನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ನಿರ್ದೇಶಕನು ಯಾವುದೇ ವಿಷಯದ ಚರ್ಚೆಯಲ್ಲಿ ಭಾಗವಹಿಸಿ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ, ಮುಖ್ಯ ಕಾರ್ಯನಿರ್ವಾಹಕನು ಅದನ್ನು ಚರ್ಚೆಯನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ನಡವಳಿಗಳಲ್ಲಿ ದಾಖಲಿಸತಕ್ಕದ್ದು. ಸದರಿ ಪುಸ್ತಕದ ಪ್ರತಿ ಪುಟದಲ್ಲಿ ಸಣ್ಣ ರುಜು ಮಾಡತಕ್ಕದ್ದು ಅಥವಾ ಸಹಿ ಮಾಡತಕ್ಕದ್ದು ಮತ್ತು ನಡವಳಿ ಪುಸ್ತಕದಲ್ಲಿ ಪ್ರತಿ ಸಭೆಯ ನಡವಳಿಯನ್ನು ದಾಖಲಿಸಿದ ಕೊನೆಯ ಪುಟದಲ್ಲಿ ದಿನಾಂಕವನ್ನು ನಮೂದಿಸಿ ಮುಖ್ಯ ಕಾರ್ಯನಿರ್ವಾಹಕನು ಮತ್ತು ಸಭಾಪತಿಯು ಸಹಿ ಮಾಡತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾದ ಮತ್ತು ಯುಕ್ತವಾದ ಸಂಗ್ರಹವನ್ನು ಒಳಗೊಂಡಿರತಕ್ಕದ್ದು. ಸಭೆಯ ನಡವಳಿಗಳಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ನಿರ್ದೇಶಕರುಗಳ ಹೆಸರುಗಳನ್ನು ಒಳಗೊಂಡಿರತಕ್ಕದ್ದು ಮತ್ತು ಸಭೆಯಲ್ಲಿ ತೆಗೆದುಕೊಂಡ ಪ್ರತಿ ನಿರ್ಣಯಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುವ ನಿರ್ದೇಶಕರುಗಳಿದ್ದಲ್ಲಿ ಅವರ ಹೆಸರುಗಳನ್ನು ಒಳಗೊಂಡಿರತಕ್ಕದ್ದು. ಹಾಗೇ ದಾಖಲಿಸಿ ಸಹಿ ಮಾಡಿದ ನಡವಳಿಗಳನ್ನು ಸಭೆಯು ನಡೆದ ಏಳು ದಿನಗಳೊಳಗೆ ಎಲ್ಲಾ ನಿರ್ದೇಶಕರುಗಳಿಗೆ ಕಳುಹಿಸತಕ್ಕದ್ದು.

(9) ಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ತೆಗೆದುಕೊಂಡಂತೆ ತೀರ್ಮಾನವನ್ನು ದಾಖಲಿಸಿಲ್ಲವೆಂಬ ಅಥವಾ ಸಭೆಯಲ್ಲಿ ಆ ವಿಷಯವನ್ನು ಚರ್ಚಿಸಿಲ್ಲವೆಂಬ ಕಾರಣದ ಮೇಲೆ ಯಾವುದೇ ನಿರ್ದೇಶಕನಿಗೆ ಯಾವುದೇ ವಿಷಯದ ಮೇಲಿನ ತೀರ್ಮಾನವನ್ನು ದಾಖಲಿಸುವ ಸಂಬಂಧದಲ್ಲಿ ಆಕ್ಷೇಪಣೆ ಇದ್ದಲ್ಲಿ, ಆತನು ಸಭೆಯ ನಡವಳಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ದಿವಸಗಳೊಳಗೆ ತನ್ನ ಅಭಿಪ್ರಾಯವನ್ನು ತಿಳಿಸತಕ್ಕದ್ದು. ಯಾವುದೇ ತೀರ್ಮಾನದ ಮೇಲೆ ಬಹುಸಂಖ್ಯಾ ಸದಸ್ಯರು ಅಂಥ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಲ್ಲಿ ಅಂಥ ತೀರ್ಮಾನವನ್ನು ಮುಖ್ಯ ಕಾರ್ಯನಿರ್ವಾಹಕನು ಜಾರಿಗೊಳಿಸತಕ್ಕದ್ದಲ್ಲ. ಆದರೆ ಅದನ್ನು ಆಡಳಿತ ಮಂಡಳಿಯ ತರುವಾಯದ ಸಭೆಯಲ್ಲಿ ಇಡತಕ್ಕದ್ದು.

(10) ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಆಡಳಿತ ಮಂಡಳಿ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿದ್ದ ನಿರ್ದೇಶಕರಿಂದ ಚುನಾಯಿತನಾದ ಆಡಳಿತ ಮಂಡಳಿ ಇತರ ಸದಸ್ಯನೊಬ್ಬನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(11) ಯಾವುದೇ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಅಥವಾ ಆಡಳಿತ ಮಂಡಳಿಯ ಸಭೆಯಲ್ಲಿ ಇನ್ನೊಂದು ಸಹಕಾರಿಯನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಅಂಥ ಇನ್ನೊಂದು ಸಹಕಾರಿಯ ಆಡಳಿತ ಮಂಡಳಿಯ ಪ್ರಾಧಿಕೃತನಾದ ಅದರ ಅಧ್ಯಕ್ಷ ಅಥವಾ ಆಡಳಿತ ಮಂಡಳಿಯ ಸದಸ್ಯನ ಮೂಲಕ ಮಾತ್ರ ಅಂಥ ಸಹಕಾರಿಯು ಪ್ರತಿನಿಧಿಸಲ್ಪಡತಕ್ಕದ್ದು. ಅಂಥ ಇನ್ನೊಂದು ಸಹಕಾರಿಯಲ್ಲಿ ಯಾವುದೇ ಕಾರಣಕ್ಕಾಗಿ ಆಡಳಿತ ಮಂಡಳಿಯು ಇಲ್ಲದಿದ್ದ ಪಕ್ಷದಲ್ಲಿ ಅದರ ಆಡಳಿತಗಾರ ಅಥವಾ ವಿಶೇಷಾಧಿಕಾರಿಯ ಮೂಲಕ ಪ್ರತಿನಿಧಿಸಲ್ಪಡತಕ್ಕದ್ದು.

**6ಎಫ್. ಪ್ರತಿನಿಧಿಗಳ ಚುನಾವಣೆ:** ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಸಹಕಾರಿಯಲ್ಲಿ ಚುನಾವಣಾ ಪ್ರಕ್ರಿಯೆಯು ಮೊದಲ ಹಂತದಲ್ಲಿ ಪ್ರಾತಿನಿಧಿಕ ಸಾಮಾನ್ಯ ನಿಕಾಯಕ್ಕೆ ಪ್ರತಿನಿಧಿಗಳ ಚುನಾವಣೆಯನ್ನು ಮತ್ತು ಮುಂದಿನ ಹಂತದಲ್ಲಿ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸುವ ಸಾಮಾನ್ಯ ಚುನಾವಣೆಯನ್ನು ಒಳಗೊಂಡಿರುತ್ತದೆ. [ಸಹಕಾರ ಚುನಾವಣಾ ಪ್ರಾಧಿಕಾರ]*ವು ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಸಹಕಾರಿಯ ಚುನಾವಣೆಗೆ ಸಂಬಂಧಪಟ್ಟಂತೆ ನಿರ್ದೇಶಕರ ಸಾಮಾನ್ಯ ಚುನಾವಣೆ ನಡೆಸಲು ಒಬ್ಬ ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಪ್ರತಿನಿಧಿಗಳ ಚುನಾವಣೆ ನಡೆಸಲು ಅಗತ್ಯವಾದಷ್ಟು ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸತಕ್ಕದ್ದು.

**6ಜಿ. ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿನಿಧಿಗಳ ಸಂಖ್ಯೆ:** (1) (i) ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಸಹಕಾರಿಯ ಕಾರ್ಯಕ್ಷೇತ್ರವು ಗ್ರಾಮೀಣ ಪ್ರದೇಶದಲ್ಲಿ ತಾಲ್ಲೂಕಿಗೆ ಮತ್ತು ನಗರಪಾಲಿಕೆ ಪ್ರದೇಶವಾಗಿದ್ದಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ವಿಸ್ತರಿಸಿದ್ದು ಮತ್ತು ಅದನ್ನು ಮೀರಿ ರಾಜ್ಯಕ್ಕಿಂತ ಕಡಿಮೆ ಇದ್ದಲ್ಲಿ ; ಅಥವಾ

(ii) ಸದಸ್ಯರ ಸಂಖ್ಯೆಯು ಒಂದು ಸಾವಿರಕ್ಕೆ ಮೀರಿ ಮೇಲ್ಪಟ್ಟಿದ್ದಲ್ಲಿ; ಚುನಾಯಿಸಬೇಕಾದ ಪ್ರತಿನಿಧಿಗಳ ಕನಿಷ್ಠ ಸಂಖ್ಯೆಯು ಇನ್ನೂರು ಮತ್ತು ಗರಿಷ್ಠ ಪ್ರತಿನಿಧಿಗಳ ಸಂಖ್ಯೆ ಒಂದು ಸಾವಿರ ಇರತಕ್ಕದ್ದು. ಪ್ರತಿ ತಾಲ್ಲೂಕ ಅಥವಾ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿಸಲ್ಪಡಬೇಕಾದ ಪ್ರತಿನಿಧಿಗಳ ಸಂಖ್ಯೆಯನ್ನು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಸಹಕಾರಿಯ ಕಾರ್ಯಕ್ಷೇತ್ರವು ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಿದ್ದಲ್ಲಿ, ನಗರ ಪಾಲಿಕೆಯನ್ನು ಹೊರತುಪಡಿಸಿ, ಪ್ರತಿ ತಾಲ್ಲೂಕಿನಿಂದ ಚುನಾಯಿಸಬೇಕಾದ ಪ್ರತಿನಿಧಿಗಳ ಸಂಖ್ಯೆಯು ಕನಿಷ್ಠ ಎರಡು ಇರತಕ್ಕುದು. ನಗರ ಪಾಲಿಕೆ ಸಂಬಂಧದಲ್ಲಿ ನಗರ ಪಾಲಿಕೆ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಠ ಎರಡು ಪ್ರತಿನಿಧಿ ಇರತಕ್ಕದು. ಯಾವುದೇ ತಾಲ್ಲೂಕಿನಲ್ಲಿ ಅಥವಾ ನಗರ ಪಾಲಿಕೆ ಒಳಗಿನ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಸದಸ್ಯರ ಸಂಖ್ಯೆಯು 50ಕ್ಕಿಂತ ಕಡಿಮೆ ಇದ್ದಲ್ಲಿ ಪಕ್ಕದ ತಾಲ್ಲೂಕು ಅಥವಾ ವಿಧಾನಸಭಾ ಕ್ಷೇತ್ರದಲ್ಲಿ ಕಡಿಮೆ ಸದಸ್ಯರುಳ್ಳ ಕ್ಷೇತ್ರಕ್ಕೆ ಕೂಡಿಸಲು ಉಪವಿಧಿಯಲ್ಲಿ ಅವಕಾಶ ಕಲ್ಪಿಸತಕ್ಕದ್ದು.

**6ಹೆಚ್. ಸಹಕಾರಿಯ ಸಾಮಾನ್ಯ ಚುನಾವಣೆಯಲ್ಲಿ ಮತದಾರರಗಣ :** (1) ಯಾವುದೇ ಸಹಕಾರಿಯು ತನ್ನ ಮಂಡಳಿಯ ನಿರ್ದೇಶಕರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವ ಉದ್ದೇಶಕ್ಕಾಗಿ ಸದಸ್ಯರನ್ನು ಪ್ರಾದೇಶಿಕತೆ ಅಥವಾ ಇತರೆ ಆಧಾರದ ಮೇಲೆ ವಿಭಾಗಿಸಬಹುದು.

(2) ಅಂತಹ ಸಹಕಾರ ಸಂಘದ ಉಪವಿಧಿಗಳಲ್ಲಿ ಸಹಕಾರ ಸಂಘದ ಪ್ರತಿ ಸಮೂಹವನ್ನು ಪ್ರತಿನಿಧಿಸುವ ಆಡಳಿತ ಮಂಡಳಿ ನಿರ್ದೇಶಕರ ಸಂಖ್ಯೆ ಅಥವಾ ಅನುಪಾತ ಪ್ರಮಾಣವನ್ನು ನಿಗದಿಪಡಿಸತಕ್ಕದ್ದು ಮತ್ತು ಅಂತಹ ನಿರ್ದೇಶಕರುಗಳು ಕೆಳಕಂಡಂತೆ ಆಯ್ಕೆ ಹೊಂದಬಹುದೆಂದು ನಿಗದಿಪಡಿಸತಕ್ಕದ್ದು.

(ಎ) ಸಹಕಾರಿಯ ಎಲ್ಲಾ ಸದಸ್ಯರುಗಳನ್ನೊಳಗೊಂಡ ಒಂದೇ ಮತದಾರರಗಣದಿಂದ; ಅಥವಾ

(ಬಿ) ಸಹಕಾರಿಯ ವಿವಿಧ ಸಣ್ಣ ಗುಂಪುಗಳಿಗೆ ಸೇರಿದ ನಿರ್ದೇಶಕರುಗಳು ಆಯಾ ಗುಂಪಿನ ಸದಸ್ಯರನ್ನೊಳಗೊಂಡ ಒಂದಕ್ಕಿಂತ ಹೆಚ್ಚಿನ ಮತದಾರಗಣಗಳಿಂದ. ಪರಂತು, ಪ್ರತಿ ಮತದಾರರಗಣದಿಂದ ಮಂಡಳಿಯ ಸಾಮಾನ್ಯ ಚುನಾವಣೆಯಲ್ಲಿ ಆಯ್ಕೆ ಹೊಂದಬೇಕಾದ ನಿರ್ದೇಶಕರ ಸಂಖ್ಯೆಯು ಆಯಾ ಮತದಾರರಗಣದ ಸದಸ್ಯರ ಅನುಪಾತಕ್ಕೆ ಹತ್ತಿರವಾಗಿರತಕ್ಕದ್ದು.

(3) ಆದಾಗ್ಯೂ, ಉಪನಿಯಮ (2)ರ ಖಂಡ (ಬಿ) ನಲ್ಲಿ ತಿಳಿಸಿದಂತೆ ಯಾವುದೇ ಸಂಘದ ಮಂಡಲಿಯ ನಿರ್ದೇಶಕರ ಚುನಾವಣೆಯ ಸಮಯದಲ್ಲಿ, ಅಂಥ ಸಂಘದ ಉಪವಿಧಿಗಳಲ್ಲಿ ಅಂಥ ಮತದಾರರಗಣಗಳಿಂದ ರಚನೆಗೆ ಅವಕಾಶವಿಲ್ಲದಿದ್ದರೆ, [ಸಹಕಾರ ಚುನಾವಣಾ ಪ್ರಾಧಿಕಾರ]*ವು ಅಂಥ ಮತದಾರರಗಣಗಳನ್ನು ನಿರ್ಧರಿಸಲು, ಅಧಿಸೂಚಿಸಲು ಮತ್ತು ಹಾಗೆ ಹೊರಡಿಸಿದ ಅಧಿಸೂಚನೆಯಂತೆ ಸಂಘದ ಚುನಾವಣೆಗಳನ್ನು ನಡೆಸಲು ಸಕ್ಷಮವಾಗಿರತಕ್ಕದ್ದು.

**6ಐ. ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಮತ್ತು ಹಿಂದುಳಿದವರ ವರ್ಗದವರಿಗೆ ಮೀಸಲಾತಿ:–** ಯಾವುದೇ ಸಹಕಾರಿಯ ಆಡಳಿತ ಮಂಡಳಿಯು ಮತದಾರರಗಣದ ಆಧಾರದ ಮೇಲೆ ಚುನಾಯಿತವಾದಾಗ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಕಾಯ್ದಿರಿಸಬೇಕಾದ ಮತದಾರರಗಣಗಳನ್ನು ನಿರ್ದೇಶಕರ ಸಾಮಾನ್ಯ ಚುನಾವಣಾ ದಿನಾಂಕದ ಪೂರ್ವದಲ್ಲಿ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಧರಿಸತಕ್ಕದ್ದು ಮತ್ತು ಈ ಸಂಬಂಧದಲ್ಲಿ [1][ಸರ್ಕಾರ] ನೀಡುವ ಮಾರ್ಗಸೂಚಿಗಳಿಗೆ ಒಳಪಡತಕ್ಕದ್ದು. ಹಂತಹಂತವಾಗಿ ಒಂದಾದ ಮೇಲೆ ಒಂದರಂತೆ ಸಹಕಾರಿಯ ಎಲ್ಲಾ ಮತದಾರರಗಣಗಳು ಮೀಸಲಾತಿಗೆ ಒಳಪಡುವಂತೆ ಸ್ಥಾನಗಳ ಮೀಸಲಾತಿಯು ಕ್ರಮಬದ್ಧವಾಗಿ ಆವರ್ತಿಸುವುದನ್ನು ಖಾತರಿಪಡಿಸತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಬದಲಾಯಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳೆ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಮತದಾರರಗಣದಲ್ಲಿ ಅಂಥ ವರ್ಗದ ಸದಸ್ಯರು ವಾಸವಿಲ್ಲದೆ ಲಭ್ಯವಿಲ್ಲದಿದ್ದಲ್ಲಿ, ಸಹಕಾರಿಯ ಕ್ಷೇತ್ರದಲ್ಲಿನ ಆ ವರ್ಗದ ಬೇರೆ ಮತದಾರರಗಣದ ಸದಸ್ಯರು ಸ್ಪರ್ಧಿಸಬಹುದಾಗಿದೆ.

[1][6ಐ(ಎ). **ಹಿಂದುಳಿದ ವರ್ಗಗಳ ಮೀಸಲಾತಿ ಸ್ಥಾನಗಳ ಸರದಿ** – ಈ ನಿಯಮದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ ಎರಡು ಸ್ಥಾನಗಳನ್ನು ಕೆಳಕಂಡ ರೀತಿ ತುಂಬತಕ್ಕದ್ದು, ಎಂದರೆ –

(1) ಪ್ರಥಮ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ; ಮತ್ತು

(2) ದ್ವಿತೀಯ ಮತ್ತು ತೃತೀಯ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಮತ್ತು ಪ್ರವರ್ಗ–ಬಿ ಅಭ್ಯರ್ಥಿಗಳಿಂದ; ಮತ್ತು

(3) ನಾಲ್ಕನೇ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ

– ಮತ್ತು ಈ ಪ್ರಕ್ರಿಯೆಯು ಅನುಕ್ರಮವಾಗಿ ಮುಂದುವರಿಯತಕ್ಕದ್ದು.

ಪರಂತು, ಈ ವಿಷಯದಲ್ಲಿ ಅವಶ್ಯವೆನಿಸಿದಲ್ಲಿ ರಿಜಿಸ್ಟ್ರಾರನು ಸ್ಪಷ್ಟೀಕರಣ, ನಿರ್ದೇಶನ, ಸಲಹೆ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

ವಿವರಣೆ : ಹಿಂದುಳಿದ ವರ್ಗಗಳ ಎ ಮತ್ತು ಬಿ ಪ್ರವರ್ಗಗಳೆಂದರೆ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಅಧಿನಿಯಮದಲ್ಲಿ ವಿವರಣೆ ನೀಡಿದಂತೆ ಇರತಕ್ಕದ್ದು.]

**6ಜೆ. ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು:**– ಅಧಿನಿಯಮದ ಪ್ರಕರಣ 31 ಮತ್ತು 61ರ ಉಪಪ್ರಕರಣಗಳಲ್ಲಿ ಉಕ್ತವಾದ ಅಧಿಕಾರಗಳ ಜೊತೆಗೆ, ಮುಖ್ಯ ಕಾರ್ಯನಿರ್ವಾಹಕನು ಈ ಕೆಳಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

(1) ಸಹಕಾರಿಯ ಅಧಿಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸತಕ್ಕದ್ದು;

(2) ಸಹಕಾರಿಯ ಎಲ್ಲಾ ದಾಖಲೆಗಳನ್ನು ಮತ್ತು ದಾಸ್ತಾವೇಜುಗಳ ಅಭಿರಕ್ಷಕನಾಗಿರತಕ್ಕದ್ದು ಮತ್ತು ಸಹಕಾರಿಯ ಲೆಕ್ಕಪತ್ರಗಳ, ವಿವಿಧ ಪುಸ್ತಕಗಳ ಮತ್ತು ದಾಖಲೆಗಳ ನಿಖರವಾದ ನಿರ್ವಹಣೆಗೆ ವ್ಯವಸ್ಥೆ ಮಾಡತಕ್ಕದ್ದು, ಅಧಿನಿಯಮದ, ನಿಯಮಗಳ, ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಹಾಗೂ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಥವಾ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ದೇಶಿಸಿದಂತೆ ಸಲ್ಲಿಸಬೇಕಾದ ನಿಯತಕಾಲಿಕ ತಃಖ್ತೆಗಳನ್ನು ಮತ್ತು ಅಧಿಕೃತ ವರದಿಗಳನ್ನು ಸರಿಯಾಗಿ ತಯಾರಿಸಿ ಸಕಾಲದಲ್ಲಿ ಸಲ್ಲಿಸತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(3) ಸಹಕಾರಿಯ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳ ಗುಣಮಟ್ಟವನ್ನು ನಿರ್ಧರಿಸಲು ಅಗತ್ಯವಾದ ನಿಯತಕಾಲಿಕ ಮಾಹಿತಿಯನ್ನು ಆಡಳಿತ ಮಂಡಳಿಗೆ ಒದಗಿಸತಕ್ಕದ್ದು.

(4) ಸಹಕಾರಿಯ ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರದ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

(5) ರಜೆ ಮಂಜೂರಾತಿ ಮಾಡುವುದು ಮತ್ತು ಯಾವುದೇ ಶಿಕ್ಷೆ ವಿಧಿಸುವುದು ಅಥವಾ ಅಮಾನತ್ತಿನಲ್ಲಿಡುವುದು ಸೇರಿದಂತೆ ಸಹಕಾರಿಯ ಎಲ್ಲಾ ನೌಕರರ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕದ್ದು; ಪರಂತು ಸಹಕಾರಿಯ ಉಪವಿಧಿಗಳಲ್ಲಿ ಅಥವಾ ಸೇವಾ ನಿಬಂಧನೆಗಳಲ್ಲಿ ಒಬ್ಬ ನೌಕರನನ್ನು ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡುವ ಅಥವಾ ಯಾವುದೇ ಶಿಕ್ಷೆ ವಿಧಿಸುವ ಅಧಿಕಾರವನ್ನು ಸ್ಪಷ್ಟವಾಗಿ ಕೊಡಮಾಡದಿರುವಲ್ಲಿ, ಅಂಥ ಅಮಾನತ್ತು ಅಥವಾ ಶಿಕ್ಷೆಯನ್ನು ಆಡಳಿತ ಮಂಡಳಿಯ ಅನುಮೋದನೆ ಪಡೆದು ವಿಧಿಸಲು ಜವಾಬ್ದಾರನಾಗಿರತಕ್ಕದ್ದು.

(6) ಸಹಕಾರಿಯ ನಗದು, ದಾಸ್ತಾನು ಮತ್ತು ಇತರ ಆಸ್ತಿಗಳ ಸರಿಯಾದ ನಿರ್ವಹಣೆ ಮತ್ತು ಅಭಿರಕ್ಷೆಗೆ ವ್ಯವಸ್ಥೆ ಮಾಡತಕ್ಕದ್ದು;

(7) ಸಹಕಾರಿಯ ನಿಧಿಗಳಿಂದ ವ್ಯವಸ್ಥಾಪನಾ ಮತ್ತು ಕಾರ್ಯನಿರ್ವಹಣಾ ವೆಚ್ಚಗಳನ್ನು ಪಾವತಿಸತಕ್ಕದ್ದು;

(8) ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸು ನೀಡತಕ್ಕದ್ದು;

(9) ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು ಸದರಿ ಸಭೆಗಳಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಹಾಗೂ ಸಭಾಪತಿಯೊಡನೆ ಅಂಥ ಸಭೆಗಳ ನಡವಳಿಗಳಿಗೆ ಸಹಿ ಮಾಡತಕ್ಕದ್ದು.

(10) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ತತ್ಸಂಬಂಧದ ಷೆಡ್ಯೂಲುಗಳನ್ನು ಅಧಿಕೃತ ವರದಿಗಳನ್ನು ಮತ್ತು ಇತರ ತಃಖ್ತೆಗಳ ಸಹಿತ, ತಯಾರಿಸಿ ಆಡಳಿತ ಮಂಡಳಿಯ ಅನುಮೋದನೆ ಪಡೆದು ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಮಂಡಿಸತಕ್ಕದ್ದು;

(11) ಅಧಿನಿಯಮದ ಪ್ರಕರಣ 33 ಅಥವಾ 64ರ ಲೆಕ್ಕಪರಿಶೋಧನಾ ವರದಿಗಳನ್ನು ಪ್ರಕರಣ 35 ಅಥವಾ 65ರ ವಿಚಾರಣಾ ವರದಿಗಳನ್ನು ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಆಡಳಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು;

(12) ಲೆಕ್ಕಪರಿಶೋಧನಾ ಅಥವಾ ವಿಚಾರಣಾ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡ ಕ್ರಮಗಳನ್ನುಳ್ಳ ಅನುಪಾಲನಾ ವರದಿಗೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಪಾಲನಾ ವರದಿ ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂಥಾ ಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥಾ ಪಾಲನಾ ವರದಿಗಳನ್ನು ನಿಯತಕಾಲಿಕವಾಗಿ, ಪ್ರಸಂಗಾನುಸಾರ ರಿಜಿಸ್ಟ್ರಾರನಿಗೆ ಅಥವಾ ಸಂಯುಕ್ತ ಸಹಕಾರಿಗೆ ಅಥವಾ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಸಲ್ಲಿಸುವುದನ್ನು ಮುಂದುವರಿಸತಕ್ಕದ್ದು;

(13) ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟು ಸಹಕಾರಿ ವತಿಯಿಂದ ಅಥವಾ ಸಹಕಾರಿಗೆ ವಿರುದ್ಧವಾಗಿ ಹಾಕಲ್ಪಟ್ಟ ದಾವಾ ಮತ್ತು ಇತರೆ ಕಾನೂನು ಕ್ರಮಗಳನ್ನು ಜರುಗಿಸುವುದು, ಸಮರ್ಥಿಸಿಕೊಳ್ಳುವುದು, ನಡೆಸುವುದು, ಬಗೆಹರಿಸುವುದು ಅಥವಾ ಕೈಬಿಡುವುದು;

(14) ಸಹಕಾರಿಯ ಯಾವುದೇ ನಿರ್ದೇಶಕನು ಕಾಯ್ದೆ, ನಿಯಮ ಅಥವಾ ಉಪವಿಧಿಯನ್ವಯ ತಮ್ಮ ಪದದಲ್ಲಿ ಮುಂದುವರೆಯಲು ಅನರ್ಹರಾದರೆ ಸದರಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ವರದಿಸುವುದು.

(15) ಕಾಲಕಾಲಕ್ಕೆ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಗತ್ಯಪಡಿಸುವಂತೆ ಸಹಕಾರಿಯ ವ್ಯವಹಾರಕ್ಕೆ ಸಂಬಂಧಪಟ್ಟ ಅಧಿಕೃತ ವರದಿಗಳನ್ನು, ತಃಖ್ತೆಗಳನ್ನು ಮತ್ತು ಮಾಹಿತಿಗಳನ್ನು ಸಲ್ಲಿಸುವುದು;

(16) ಅಪೆಕ್ಸ್ ಸಹಕಾರಿಯ ಸಂಬಂಧದಲ್ಲಿ, ಮುಖ್ಯ ಕಾರ್ಯನಿರ್ವಾಹಕನು:–

(i) ಅಧ್ಯಕ್ಷನೊಡನೆ ಸಮಾಲೋಚಿಸಿ ನೌಕರರನ್ನು ವರ್ಗಾಯಿಸುವ ಅಧಿಕಾರ ಹೊಂದಿರತಕ್ಕದ್ದು;

(ii) ಆತನ ವಿರುದ್ಧ ಶಿಸ್ತಿನ ವಿಚಾರಣೆಯನ್ನು ನಡೆಸಲು ಉದ್ದೇಶಿಸಿರುವ ಅಥವಾ ವಿಚಾರಣೆ ನಡೆಯುತ್ತಿರುವಾಗ, ಅಂಥಾ ನೌಕರನನ್ನು ಅಮಾನತ್ತಿನಲ್ಲಿಡಬಹುದು;

(iii) ಅಧಿನಿಯಮ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆದರೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಅಗತ್ಯವಾದ ಸಿಬ್ಬಂದಿಯನ್ನು ನೇಮಕ ಮಾಡಲು ಅಧಿಕಾರ ಹೊಂದಿರತಕ್ಕದ್ದು;

(iv) ಆಡಳಿತ ಮಂಡಳಿಯು ನೀಡುವ ಮಾರ್ಗಸೂಚಿಗಳಿಗೊಳಪಟ್ಟು ಮಾತುಕತೆ ನಡೆಸಬಹುದು ಮತ್ತು ಒಪ್ಪಂದಗಳನ್ನು ಜಾರಿಗೊಳಿಸಬಹುದು;

(v) ಸಹಕಾರಿಯ ನೌಕರರ ಅಧಿಕಾರ, ಪ್ರಕಾರ್ಯ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು;

(vi) ತನ್ನ ಯಾವುದೇ ಅಧಿಕಾರವನ್ನು ಬೇರೆ ನೌಕರನಿಗೆ ಪ್ರತ್ಯಾಯೋಜಿಸಬಹುದು;

**6ಕೆ. ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ:–** ಸರ್ಕಾರದ ಅಥವಾ ಒಂದು ಸಹಕಾರಿ ಸಂಸ್ಥೆಯ ಯಾವುದೇ ಅಧಿಕಾರಿ ಅಥವಾ ನೌಕರನನ್ನು ಅಧಿನಿಯಮದ ಪ್ರಕರಣ 38 ಅಥವಾ 57ಎ ಅಡಿ ನೇಮಕ ಮಾಡಲ್ಪಟ್ಟ

ಆಡಳಿತಗಾರ ಅಥವಾ ಪ್ರಕರಣ 38ಎ ಅಡಿಯಲ್ಲಿ ನೇಮಕವಾದ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆಯನ್ನು ಕೆಳಗಿನಂತೆ ನಿರ್ದಿಷ್ಟಪಡಿಸತಕ್ಕದ್ದು.

(i) ಆತನನ್ನು ಪೂರ್ಣಕಾಲಿಕವಾಗಿ ನೇಮಿಸಿದಲ್ಲಿ ಆತನ ಸಂಬಳ ಮತ್ತು ಭತ್ಯೆಗಳನ್ನು ಸಹಕಾರಿಯು ಭರಿಸತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು;

(ii) ಆತನನ್ನು ಆತನ ನಿಯತ ಹುದ್ದೆಗೆ ಹೆಚ್ಚುವರಿಯಾಗಿ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ನೇಮಿಸಿದ್ದಲ್ಲಿ, ಆತನಿಗೆ, ಆತನು ಧಾರಣಮಾಡಿದ ಹುದ್ದೆಯ ಮೂಲ ವೇತನದ ಶೇಕಡಾ ಹತ್ತರಷ್ಟನ್ನು ಸಂಭಾವನೆ ಎಂದು ಸಹಕಾರಿಯ ನಿಧಿಗಳಿಂದ ಕೊಡತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು.

**ಟಿಪ್ಪಣಿ:–** ನಿಯಮ6, 6ಬಿ ಯಿಂದ 6ಇ ಮತ್ತು 6ಜೆ ಮತ್ತು 6ಕೆ ನಿಯಮಗಳು ಸೌಹಾರ್ದ ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸುತ್ತದೆ.]

[1][**6ಎಲ್ ಸಹಕಾರಿಯ ಅಧಿಕಾರಿಗಳ ಮತ್ತು ನೌಕರರ ನೇರ ನೇಮಕಾತಿ : –**

(1) ಸಹಕಾರಿಗಳ ಅಧಿಕಾರಿಗಳು ಮತ್ತು ನೌಕರರು ನೇರ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ನೇಮಕಾತಿ ಸಮಿತಿಯನ್ನು ರಚಿಸತಕ್ಕದ್ದು.

| | |
|---|---|
| 1) ಸಹಕಾರಿಯ ಅಧ್ಯಕ್ಷರು | –ಅಧ್ಯಕ್ಷರು |
| 2) ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು | –ಸದಸ್ಯರು |
| 3) ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ | –ಸದಸ್ಯರು |
| 4) ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು | –ಸದಸ್ಯರು |
| 5) ಸಹಕಾರಿಯ ಮುಖ್ಯಕಾರ್ಯನಿರ್ವಾಹಕ | –ಸದಸ್ಯ ಕಾರ್ಯದರ್ಶಿ |

(2) ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.]

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

## ಅಧ್ಯಾಯ IV

7. **ಮೀಸಲು ನಿಧಿಯ ಉದ್ದೇಶ ಮತ್ತು ಅದರ ವಿನಿಯೋಗ:–**

(1) ಒಂದು ಸಹಕಾರಿಯು ತನ್ನ ಮೀಸಲು ನಿಧಿಯನ್ನು ಯಾವುದೇ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು.

(ಎ) ಮೀಸಲು ನಿಧಿಯನ್ನು ಸಹಕಾರಿಯು ಯಾವುದೇ ವ್ಯವಹಾರಕ್ಕೆ ಬಳಸತಕ್ಕದ್ದಲ್ಲ ಮತ್ತು ಇದರಲ್ಲಿ ಯಾವುದೇ ಪಾಲು ಸದಸ್ಯರಿಗೆ ಸಲ್ಲತಕ್ಕದ್ದಲ್ಲ.

(ಬಿ) ಸಹಕಾರಿಯ ಉದ್ದೇಶ ಸಾಧನೆಗಳಿಗೆ ಅಗತ್ಯವಾದ ನಿವೇಶನ ಖರೀದಿ, ಕಟ್ಟಡ ನಿರ್ಮಾಣ ಅಥವಾ ನವೀಕರಣಕ್ಕೆ ಹಣದ ಅವಶ್ಯಕತೆ ಇದ್ದಲ್ಲಿ, [1][ಸಾಮಾನ್ಯ ನಿಕಾಯವು ಅದರ ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡಿದ ಮತದಾನದ ಹಕ್ಕುಳ್ಳ ಸದಸ್ಯರ ಬಹುಮತದಿಂದ ಅಂಗೀಕರಿಸಲ್ಪಟ್ಟ ನಿರ್ಣಯದ ಮೂಲಕ ಸಾಮಾನ್ಯ ನಿಕಾಯದ] ಅನುಮೋದನೆ ಪಡೆದು ನಿಯ ಶೇ.80ರ ವರೆಗಿನ ಮೊಬಲಗನ್ನು ಈ ಉದ್ದೇಶಕ್ಕಾಗಿ ಬಳಸಬಹುದು. ಅದಾಗ್ಯೂ, ಮುಂದಿನ ಹಣಕಾಸಿನ ವರ್ಷಗಳಲ್ಲಿ ದೊರೆತ ಲಾಭದಿಂದ ಈ ಮೊತ್ತವನ್ನು ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

(2) ಒಂದು ಸಹಕಾರಿಯನ್ನು ಸಮಾಪನಗೊಳಿಸಿದ ನಂತರ ಅದರ ಆಸ್ತಿಗಳಿಂದ ತೀರಿಸಲಾಗದೇ ಉಳಿದ ಹೊಣೆಗಳನ್ನು ತೀರಿಸಲು, ಸಮಾಪಕರು ಮೀಸಲು ನಿಧಿಯನ್ನು ಮತ್ತು ಉಪವಿಧಿಗಳಿಗನುಸಾರ ರಚಿಸಿದ್ದ ಇತರ ನಿಧಿಗಳನ್ನು ಕೆಳಕಂಡ ಕ್ರಮದಲ್ಲಿ ವಿನಿಯೋಗಿಸತಕ್ಕದ್ದು.

(ಎ) ಸಹಕಾರಿಯ ಸಾಲಗಳು.

(ಬಿ) ಲಾಭಾಂಶವನ್ನು ವಿತರಿಸದೆ ಇದ್ದ ಯಾವುದೇ ಅವಧಿಗೆ ಅಥವಾ ಅವಧಿಗಳಿಗೆ ಪಾವತಿಯಾದ ಷೇರುಗಳ ಮೇಲೆ ಶೇ.6ಕ್ಕೆ ಹೆಚ್ಚಾಗದಂತೆ ಲಾಭಾಂಶವನ್ನು ಹಂಚುವುದು, ಆದರೆ ಸಹಕಾರಿಯ ಉಪವಿಧಿಗಳಲ್ಲಿ ಲಾಭಾಂಶ ಹಂಚಿಕೆಗೆ ಅವಕಾಶ ಮಾಡದಿದ್ದ ಪಕ್ಷದಲ್ಲಿ, ಷೇರು ಬಂಡವಾಳದ ಮೇಲೆ ಯಾವುದೇ ಲಾಭಾಂಶವನ್ನು ಹಂಚಿಕೆ ಮಾಡತಕ್ಕದ್ದಲ್ಲ.

(3) ಮೇಲ್ಕಂಡ ಉಪ ನಿಯಮ (2)ರಂತೆ ಹಣವನ್ನು ಸಂದಾಯ ಮಾಡಿ ನಂತರ ಉಳಿಯುವ ಯಾವುದೇ ಹೆಚ್ಚುವರಿ ನಿಧಿಗಳನ್ನು ಕೆಳಕಂಡ ರೀತಿಯಲ್ಲಿ ಮತ್ತು ಈ ಕೆಳಗಿನ ಷರತ್ತುಗಳಿಗೊಳಪಟ್ಟು ವಿನಿಯೋಗಿಸತಕ್ಕದ್ದು.

(ಎ) ಹಣಕಾಸು ಒದಗಿಸುವ ಬ್ಯಾಂಕಿನ ಹೊರತಾಗಿ ಇತರ ಸಹಕಾರಿಗಳಾದಲ್ಲಿ;

---

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಬದಲಾಯಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

(i) ಸಮಾಪನಗೊಳಿಸಲಾದ ಸಹಕಾರಿಯ ಸರ್ವ ಸದಸ್ಯರ ಸಭೆಯು ಆಯ್ಕೆ ಮಾಡಿದ ಉದ್ದೇಶಕ್ಕಾಗಿ ಹೆಚ್ಚುವರಿ ನಿಧಿಗಳನ್ನು ಉಪಯೋಗಿಸತಕ್ಕದ್ದು. ಅಂಥ ಉದ್ದೇಶವನ್ನು ಈಡೇರಿಸುವುದಕ್ಕಾಗಿ ವ್ಯಕ್ತಿಗಳ ಪೈಕಿ ಒಬ್ಬ ನ್ಯಾಸಧಾರಿ (ಟ್ರಸ್ಟೀ) ಅಥವಾ ನ್ಯಾಸಧಾರಿಗಳನ್ನು ಆಯ್ಕೆ ಮಾಡುವಂತೆ ಸರ್ವ ಸದಸ್ಯರ ಸಭೆಯನ್ನು ಕೋರಲು ಸಮಾಪಕರು ಸಕ್ಷಮನಾಗಿರತಕ್ಕದ್ದು. ಸರ್ವ ಸದಸ್ಯರ ಸಭೆಯು ನ್ಯಾಸಧಾರಿ ಅಥವಾ ನ್ಯಾಸಧಾರಿಗಳನ್ನು ಆಯ್ಕೆ ಮಾಡದಿದ್ದಲ್ಲಿ ಅಥವಾ ಸರ್ವ ಸದಸ್ಯರ ಸಭೆ ಆಯ್ಕೆ ಮಾಡಿದ ನ್ಯಾಸಧಾರಿ ಅಥವಾ ನ್ಯಾಸದಾರಿಗಳು ಸಮಾಪಕನಿಗೆ ಒಪ್ಪಿಗೆಯಾಗದಿದ್ದಲ್ಲಿ, ಸಮಾಪಕರು ಸ್ವತಃ ಒಬ್ಬ ನ್ಯಾಸಧಾರಿ ಅಥವಾ ನ್ಯಾಸಧಾರಿಗಳನ್ನು ನೇಮಕ ಮಾಡಬಹುದು. ನ್ಯಾಸಧಾರಿ ಅಥವಾ ನ್ಯಾಸಧಾರಿಗಳು ರಿಜಿಸ್ಟ್ರಾರನು ಆಗಿಂದಾಗ್ಗೆ ನಿರ್ದಿಷ್ಟಪಡಿಸಬಹು–ದಾದಂಥ ನಮೂನೆಯಲ್ಲಿ ಕರಾರು ಪತ್ರವನ್ನು ಬರೆದುಕೊಡತಕ್ಕದ್ದು. ಈ ಉಪಖಂಡದ ಮೇರೆಗೆ ರಚಿಸಲಾದ ನ್ಯಾಸವು (ಟ್ರಸ್ಟ್) ತತ್ಕಾಲದಲ್ಲಿ ಜಾರಿಯಲ್ಲಿರುವ ಸಾರ್ವಜನಿಕ ಧರ್ಮಾರ್ಥ ನ್ಯಾಸಿಗಳಿಗೆ ಸಂಬಂಧಪಡುವ ಕಾನೂನಿನ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

(ii) ಸಹಕಾರಿಯ ವ್ಯವಹಾರಗಳನ್ನು ಸಮಾಪನಗೊಳಿಸಲು ನೇಮಿಸಲಾದ ಸಮಾಪಕನು ನೋಟೀಸು ನೀಡಿದ ನಂತರದ 30 ದಿವಸಗಳೊಳಗಾಗಿ ಸರ್ವ ಸದಸ್ಯರ ಸಭೆಯು ಯಾವುದೇ ಆಯ್ಕೆಯನ್ನು ಮಾಡಲು ತಪ್ಪಿದಲ್ಲಿ ಅಂಥ ಪ್ರದೇಶದಲ್ಲಿ ಅಂಥದೇ ಉದ್ದೇಶಗಳುಳ್ಳ ಒಂದು ಸಹಕಾರಿಯು ನೋಂದಣಿ ಆಗುವವರೆಗೆ ಸಮಾಪಕನು ಹೆಚ್ಚುವರಿ ನಿಧಿಗಳನ್ನು, ಸಮಾಪನಗೊಳ್ಳಲಿರುವ ಸಹಕಾರಿಯು, ಕಾರ್ಯನಿರ್ವಹಿಸುತ್ತಿದ್ದ ಪ್ರದೇಶದಲ್ಲಿನ ಒಂದು ಹಣಕಾಸು ವ್ಯವಹಾರ ನಡೆಸುವ ಬ್ಯಾಂಕಿನಲ್ಲಿ ಠೇವಣಿಯಾಗಿಡಬಹುದು. ಅಂಥವೇ ಉದ್ದೇಶಗಳುಳ್ಳ ಸಹಕಾರಿಯು ನೋಂದಣಿಯಾದ ಸಂದರ್ಭದಲ್ಲಿ, ಸದರಿ ನಿಧಿಗಳನ್ನು ಹೊಸ ಸಹಕಾರಿಯ ಮೀಸಲು ನಿಗೆ ಜಮಾ ಮಾಡತಕ್ಕದ್ದು. ಸೂಕ್ತ ಸಮಯದೊಳಗೆ ಅಂಥ ಪ್ರದೇಶದಲ್ಲಿ ಹೊಸ ಸಹಕಾರಿಯು ನೋಂದಣಿಯಾಗುವ ಸಂಭವ ಇಲ್ಲದಿರುವಲ್ಲಿ ಸಮಾಪಕನು ಸದರಿ ಮೊಬಲಗನ್ನು ಅಂಥ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಣಕಾಸು ವ್ಯವಹಾರ ನಡೆಸುವ ಬ್ಯಾಂಕಿನಲ್ಲಿ ವಸೂಲಾಗದ ಸಾಲದ ನಿಧಿಗೆ ಅಥವಾ ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

(ಬಿ) ಸಮಾಪನಗೊಳ್ಳಲಿರುವ ಸಹಕಾರಿಯು, ಹಣಕಾಸಿನ ಬ್ಯಾಂಕು ಆಗಿದ್ದಲ್ಲಿ, ಅಂಥ ಬ್ಯಾಂಕು ಯಾವ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿತ್ತೋ, ಆ ಪ್ರದೇಶದಲ್ಲಿರುವ ಸಹಕಾರಿಗಳು ಸಂಯೋಜಕತ್ವವನ್ನು ಪಡೆದ ಇತರ ಹಣಕಾಸು ಬ್ಯಾಂಕು ಅಥವಾ ಬ್ಯಾಂಕುಗಳ ಮೀಸಲು ಅಥವಾ ಇತರ ನಿಧಿಗಳಿಗೆ ಅಂಥ

ಹೆಚ್ಚುವರಿ ಹಣವನ್ನು ಸಮಾಪಕನು ಠೇವಣಿಯಾಗಿ ಇಡತಕ್ಕದ್ದು. ಒಂದು ವೇಳೆ ಅಂಥ ಹಣಕಾಸು ಬ್ಯಾಂಕು ಇಲ್ಲದಿದ್ದಲ್ಲಿ ಹೊಸ ಬ್ಯಾಂಕು ಸ್ಥಾಪನೆಯಾಗುವವರೆಗೆ ಅಂಥ ಹೆಚ್ಚುವರಿ ಹಣವನ್ನು ರಾಜ್ಯ ಸಹಕಾರ ಬ್ಯಾಂಕಿನಲ್ಲಿರಿಸಿ, ಹೊಸ ಬ್ಯಾಂಕು ಸ್ಥಾಪನೆಯಾದ ಕೂಡಲೇ ಆ ಬ್ಯಾಂಕಿನ ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

## ಅಧ್ಯಾಯ V
## ಲೆಕ್ಕಪರಿಶೋಧನೆ

[1][**8. ಲೆಕ್ಕಪರಿಶೋಧನೆ:–**

**(1)** ಅಧಿನಿಯಮದ ಪ್ರಕರಣ 33 ಅಥವಾ ಪ್ರಕರಣ 64ರ ಉಪಪ್ರಕರಣ (1)ರಡಿಯ ಲೆಕ್ಕಪರಿಶೋಧನೆಯು, ಪ್ರಕರಣ 33ರ ಉಪಪ್ರಕರಣ (4) ಮತ್ತು (14) ರಿಂದ (18)ಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಜೊತೆಗೆ, ಕೆಳಗಿನ ವಿವರಗಳನ್ನು ಒಳಗೊಳ್ಳತಕ್ಕದ್ದು:

(ಎ) ಸಹಕಾರಿಯ ಉಪವಿಧಿಗಳಲ್ಲಿ ತಿಳಿಸಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಸಹಕಾರಿಯು ತೆಗೆದುಕೊಂಡ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಪರೀಕ್ಷಣೆ;

(ಬಿ) ಮೂಲ ರಶೀದಿ ಮತ್ತು ವೋಚರ್‌ಗಳೊಡನೆ ಜಮಾ ಮತ್ತು ಖರ್ಚುಗಳ/ ಆದಾಯ ವ್ಯಯಗಳ ನೈಜತೆ ಮತ್ತು ಔಚಿತ್ಯದ ಬಗ್ಗೆ ಪರಿಶೀಲನೆ;

(ಸಿ) ಪ್ರಸಂಗಾನುಸಾರ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ನಿರ್ಧರಿಸಿದಂಥ ಪ್ರಮಾಣದ ಸಹಕಾರಿಯ ಸಾಲಗಾರರಿಂದ ಬರಬೇಕಾದ ಬಾಕಿಗಳ ಹಾಗೂ ಠೇವಣಿದಾರರ ಮತ್ತು ಲೇಣಿದಾರರ ಜಮೆಯಲ್ಲಿರುವ ಉಳಿಕೆ ಮೊತ್ತಗಳ ಪರಿಶೀಲನೆ;

(ಡಿ) ಆಡಳಿತ ಮಂಡಳಿಯ ನಿರ್ದೇಶಕರ ವ್ಯವಹಾರಗಳ ಪರೀಕ್ಷಣೆ;

(ಇ) ನೌಕರರ ನೇಮಕ ಮತ್ತು ಪದೋನ್ನತಿ, ಸೇವಾ ಷರತ್ತುಗಳ ಹಾಗೂ ಅವರ ವಿರುದ್ಧ ತೆಗೆದುಕೊಳ್ಳಲಾದ ಶಿಸ್ತಿನ ಕ್ರಮಗಳ ಪರೀಕ್ಷಣೆ;

(ಎಫ್) ಸದಸ್ಯರುಗಳಿಗೆ ಒದಗಿಸಲಾದ ಸೇವೆಗಳ ಹಾಗೂ ಸದಸ್ಯರುಗಳು ಮತ್ತು ನಿರ್ದೇಶಕರು ಸದರಿ ಸೇವೆಗಳನ್ನು ಬಳಕೆ ಮಾಡಿಕೊಂಡ ಪ್ರಮಾಣದ ಪರೀಕ್ಷಣೆ;

(ಜಿ) ಸಹಕಾರಿಯ ಲೆಕ್ಕಪತ್ರಗಳ ನಿರ್ವಹಣೆ – ಇಂದೀಕರಣ ಮತ್ತು ಸಮರ್ಪಕತೆ – ವ್ಯವಹಾರಗಳ ಗಣಕೀಕರಣ;

(ಹೆಚ್) ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವಷ್ಟರಮಟ್ಟಿಗೆ ಸಹಕಾರಿಯ ವಿವಿಧ ವ್ಯವಹಾರ ಮತ್ತು ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಇತರ ಸಂಬಂಧಿತ ಕಾನೂನುಗಳ ಪಾಲನೆ;

(ಐ) ಪ್ರಸಂಗಾನುಸಾರ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ನಿಗದಿಪಡಿಸಿದಂಥ ನಮೂನೆಯಲ್ಲಿ ಆಡಳಿತ ಮಂಡಳಿಯು ತಯಾರಿಸುವ ಆರ್ಥಿಕ/ಲೆಕ್ಕ ತಃಖ್ತೆಗಳ ಪರೀಕ್ಷಣೆ;

(ಜೆ) ವಾಸ್ತವಾಗಿ ಗಳಿಸಿದ ಲಾಭ ಅಥವಾ ಅನುಭವಿಸಿದ ನಷ್ಟದ ದೃಢೀಕರಣ;

(ಕೆ) ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಂತೆ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ನೀಡಿರುವ ನಿರ್ದೇಶನ, ಮಾರ್ಗದರ್ಶನ ಇತ್ಯಾದಿಗಳ ಪಾಲನೆಯಾಗಿದೆಯೇ ಎಂಬ ಬಗ್ಗೆ ಪರಿಶೀಲನೆ;

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಬದಲಾಯಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

(ಎಲ್) ಪ್ರಸಂಗಾನುಸಾರ ರಿಜಿಸ್ಟ್ರಾರನು ಅಥವಾ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ಸೂಚಿಸುವ ಇತರ ಯಾವುದೇ ವಿಷಯ.

ಪರಂತು, ಲೆಕ್ಕಪರಿಶೋಧನೆಯು ಆರ್ಥಿಕ ಲೆಕ್ಕಪರಿಶೋಧನೆಯ ಜೊತೆಗೆ ಔಚಿತ್ಯತೆಯ ಲೆಕ್ಕಪರಿಶೋಧನೆಯನ್ನು ಒಳಗೊಂಡಿರತಕ್ಕದ್ದು.

(2) ಪ್ರತಿ ಸಹಕಾರಿಯ ಆಡಳಿತ ಮಂಡಳಿಯ ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಜಮಾ ಖರ್ಚು ತಃಖ್ತೆಗಳು, ಆದಾಯ ವ್ಯಯ ತಃಖ್ತೆಗಳು, ಲಾಭ ನಷ್ಟ ತಃಖ್ತೆಗಳು, ಅದಕ್ಕೆ ಸಂಬಂಧಪಟ್ಟ ಷೆಡ್ಯೂಲುಗಳು ಮತ್ತು ಇತರ ತಃಖ್ತೆಗಳ ಸಹಿತ ಆಸ್ತಿ ಹೊಣೆ ಪಟ್ಟಿ ಇತ್ಯಾದಿ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಹಾಜರುಪಡಿಸುವಂತೆ ಖಾತರಿಪಡಿಸತಕ್ಕದ್ದು.

ಪರಂತು, ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಒದಗಿಸಬೇಕಾದ ಷೆಡ್ಯೂಲುಗಳು ಮತ್ತು ರಿಟರ್ನ್‌ಗಳು ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು:

(ಎ) ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ;

(ಬಿ) ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ;

(ಸಿ) ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ;

(ಡಿ) ಸದಸ್ಯತ್ವ ಮತ್ತು ಷೇರು ಷೆಡ್ಯೂಲು;

(ಇ) ಆಡಳಿತ ಮಂಡಳಿಯ ಸದಸ್ಯರ ಮತ್ತು ನೌಕರರ ಪಟ್ಟಿ;

(ಎಫ್) ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;

(ಜಿ) ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;

(ಹೆಚ್) ತಗಾದೆ ವಸೂಲಿ ಮತ್ತು ಉಳಿಕೆ ತಃಖ್ತೆ;

(ಐ) ಸುಸ್ತಿದಾರರ ಸದಸ್ಯರ ಪಟ್ಟಿ;

(ಜೆ) ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ;

(ಕೆ) ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು;

(ಎಲ್) ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;

(ಎಂ) ಸಾಲ ದೃಢೀಕರಣ ತಃಖ್ತೆಗಳು;

(ಎನ್) ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;

(ಒ) ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರುಹಾಜರಾದ ನಿರ್ದೇಶಕರುಗಳ ಷೆಡ್ಯೂಲು;

(ಪಿ) ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರುಹಾಜರಾದ ಸದಸ್ಯರ ಷೆಡ್ಯೂಲು;

(ಕ್ಯೂ) ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸಿದ ಬಗ್ಗೆ ಸದಸ್ಯರ ಷೆಡ್ಯೂಲು;

(ಆರ್) ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;

(ಎಸ್) ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;

(ಟಿ) ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು;

(ಯು) ಮೀಸಲು ಇತರ ನಿಧಿಗಳ ಷೆಡ್ಯೂಲು;

(ವಿ) ಠೇವಣಿದಾರರ ಷೆಡ್ಯೂಲು;

(ಡಬ್ಲ್ಯೂ) ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;

(ಎಕ್ಸ್) ಆಖೈರು ದಾಸ್ತಾನಿನನ ಷೆಡ್ಯೂಲು;

(ವೈ) ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು – ವರ್ಗವಾರು;

(ಜಡ್) ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು;

(3) ಪ್ರಕರಣ 33ರ ಉಪಪ್ರಕರಣ (18)ರ ಖಂಡ (ಎ) ಮತ್ತು (ಬಿ)ನಲ್ಲಿ ತಿಳಿಸಿರುವ ಅವ್ಯವಹಾರಗಳನ್ನು ಪರಿಶೀಲಿಸುವಾಗ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಒಬ್ಬ ಸಾಮಾನ್ಯ ಪರಿಜ್ಞಾನವುಳ್ಳ ಪ್ರಾಮಾಣಿಕ, ಬುದ್ಧಿವಂತ ಮತ್ತು ವಿವೇಕಯುತ ವ್ಯವಹಾರ ಜ್ಞಾನವುಳ್ಳ ವ್ಯಕ್ತಿಯು ಸಮಾನವಾದ ಸಂದರ್ಭಗಳಲ್ಲಿ ಚಲಾಯಿಸುವಂಥ ಯುಕ್ತ, ಜಾಗರೂಕತೆ, ಶ್ರದ್ಧೆ ಮತ್ತು ಕೌಶಲ್ಯಗಳನ್ನು ಉಪಯೋಗಿಸತಕ್ಕದ್ದು ಮತ್ತು ಅದರ ಫಲಿತಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸತಕ್ಕದ್ದು.

(4) ಒಂದು ಸಹಕಾರಿಯ ಲೆಕ್ಕಪರಿಶೋಧನೆಯನ್ನು ಮಾಡುವಾಗ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು, ಲೆಕ್ಕಪರಿಶೋಧನೆ ಮಾಡುವ ಅವಧಿಯಲ್ಲಿ ಕಾಲಕಾಲಕ್ಕೆ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ಅಥವಾ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗೆ ಮಧ್ಯಂತರ ಆಕ್ಷೇಪಣೆಗಳನ್ನು ಕಳುಹಿಸಿ ಅಂಥ ಆಕ್ಷೇಪಣೆಗಳಲ್ಲಿ ತೋರಿಸಲಾದ ಲೋಪದೋಷಗಳನ್ನು ಮತ್ತು ಅಕ್ರಮಗಳನ್ನು ಐದು ದಿನಗಳ ಅವಧಿಯೊಳಗೆ ವಿವರಿಸುವಂತೆ ತಿಳಿಸಬಹುದು. ಮುಖ್ಯ ಕಾರ್ಯನಿರ್ವಾಹಕನು ಮಧ್ಯಂತರ ಆಕ್ಷೇಪಣಾ ಹಾಳೆಗಳನ್ನು ಅದರಲ್ಲಿ ಉತ್ತರ ಅಥವಾ ಪಾಲನೆ ಅನ್ನು ದಾಖಲಿಸಿ ನಿರ್ದಿಷ್ಠಪಡಿಸಿದ ಅವಧಿಯೊಳಗೆ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಹಿಂದುರಿಗಿಸತಕ್ಕದ್ದು. ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಂಥ ಪಾಲನಾ ವರದಿಯನ್ನು ಪರಾಮರ್ಶಿಸಿ, ಆತನ ಅಭಿಪ್ರಾಯದಲ್ಲಿ ಯಾವ ಆಕ್ಷೇಪಣೆಗಳಿಗೆ ಸಮರ್ಪಕವಾಗಿ ಉತ್ತರ ನೀಡಲಾಗಿದೆಯೋ ಅಥವಾ ಪಾಲನೆ ಮಾಡಲಾಗಿದೆಯೋ ಅಂತಹ ಆಕ್ಷೇಪಣೆಗಳನ್ನು ಕೈಬಿಡತಕ್ಕದ್ದು. ಮತ್ತು ಉಳಿದ ಆಕ್ಷೇಪಣೆಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸತಕ್ಕದ್ದು.

(5) ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಕೆಲವು ಅರ್ಥವಿವರಣೆಗಳು:–

(1) **"ವಾರ್ಷಿಕ ಲೆಕ್ಕಪರಿಶೋಧನೆ"** ಎಂದರೆ ಅಧಿನಿಯಮದ ಪ್ರಕರಣ 33 ಮತ್ತು 64ರಡಿ ಯಾವುದೇ ಸಹಕಾರಿಯ ಒಂದು ಸಹಕಾರಿ ವರ್ಷ ಮುಕ್ತಾಯವಾದ ನಂತರ ಮಾಡುವ ಆ ಸಹಕಾರಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆ. ಅದು ಸಹಕಾರಿಯ

ಅಥವಾ ಸಂಯುಕ್ತ ಸಹಕಾರಿಯ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಪರಿಶೋಧಿಸಿ ಪರಿಶೋಧಿತ ಆರ್ಥಿಕ ತಃಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುವುದರೊಂದಿಗೆ ಅಂತ್ಯಗೊಳ್ಳುತ್ತದೆ.

(2) **"ಔಚಿತ್ಯಪೂರ್ಣ ಲೆಕ್ಕಪರಿಶೋಧನೆ"** ಎಂದರೆ ಯಾವುದೇ ಒಂದು ವ್ಯಾಪಾರಿ ಸಂಸ್ಥೆಯು ತಾನು ನಡೆಸುವ ವ್ಯಾಪಾರ ಪದ್ಧತಿಗೆ ಅನುಗುಣವಾಗಿ ಹಾಗೂ ಅಂತಹ ವ್ಯವಹಾರದ ಆರ್ಥಿಕ ಹಿತಾಸಕ್ತಿ ಕಾಪಾಡುವ ಲೆಕ್ಕಪರಿಶೋಧನೆ.

**8ಎ. ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ನೇಮಕವಾಗಲು ಅರ್ಹತೆ:–** (1) ಕಾಯ್ದೆಯಲ್ಲಿನ ಅವಕಾಶದಂತೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳು, ಲೆಕ್ಕಪರಿಶೋಧನಾ ತಂಡದಲ್ಲಿ ಸೇರಿಸಲ್ಪಟ್ಟಿರುತ್ತವೆ.

(2) ಕೆಳಗಿನ ಯಾವುದೇ ವ್ಯಕ್ತಿಯು ಯಾವುದೇ ಒಂದು ಸಹಕಾರಿಯಲ್ಲಿ ಈ ಕೆಳಕಂಡ ಸ್ಥಾನಗಳನ್ನು ಹೊಂದಿದ್ದಲ್ಲಿ ಆ ಸಹಕಾರಿಯ ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ನೇಮಕವಾಗಲು ಅರ್ಹರಾಗಿರತಕ್ಕದ್ದಲ್ಲ:–

(i) ಸಹಕಾರಿಯ ಒಬ್ಬ ಅಧಿಕಾರಿ ಅಥವಾ ನೌಕರ

(ii) ಸಹಕಾರಿಯ ಸದಸ್ಯನಾಗಿರುವ ವ್ಯಕ್ತಿ

(iii) ಸಹಕಾರಿಯಿಂದ ಸಾಲ ಪಡೆದ ವ್ಯಕ್ತಿ ಅಥವಾ ಲೆಕ್ಕಪರಿಶೋಧನಾ ಅವಧಿಯಲ್ಲಿ ಅಥವಾ ಅದಕ್ಕಿಂತ ಪೂರ್ವದಲ್ಲಿ ಸಹಕಾರಿಯಿಂದ ಯಾವುದೇ ವ್ಯಕ್ತಿಯು ಸಾಲಪಡೆಯಲು ಭದ್ರತೆ ಅಥವಾ ಗ್ಯಾರಂಟಿ ನೀಡಿದ ವ್ಯಕ್ತಿ;

(iv) ಸಹಕಾರಿಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಆಸಕ್ತಿಯನ್ನು ಹೊಂದಿರುವ ವ್ಯಕ್ತಿ ಅಥವಾ ಆತನ ಕುಟುಂಬದ ಸದಸ್ಯ;

(v) ಯಾವುದೇ ಸಹಕಾರಿಯ ಹಿಂದಿನ ಸಹಕಾರಿಯ ವರ್ಷದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯಲ್ಲಿ ಅಧಿನಿಯಮದ ಅಥವಾ ನಿಯಮಗಳ ಉಪಬಂಧಗಳನ್ನು ಪಾಲಿಸದಿರುವ ವ್ಯಕ್ತಿ.

(3) ಪ್ರಕರಣ 33 ಅಥವಾ 64ರಡಿ ಲೆಕ್ಕಪರಿಶೋಧಕನಾಗಿ ನೇಮಕವಾಗಲು ಅರ್ಹತೆ ಮತ್ತು ಅನುಭವ ಇಲ್ಲದ ಯಾವುದೇ ವ್ಯಕ್ತಿಯನ್ನು ಹಾಗೂ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ಅನುಮೋದಿಸಿ ನಿರ್ವಹಿಸಿರುವ ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲ್ಪಡದ ಯಾವುದೇ ವ್ಯಕ್ತಿಯನ್ನು ಯಾವದೇ ಸಹಕಾರಿಯ ಲೆಕ್ಕಪತ್ರಗಳನ್ನು ಪರಿಶೋಧಿಸಲು ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ನೇಮಕಮಾಡತಕ್ಕದ್ದಲ್ಲ.

(4) ಒಬ್ಬ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು:

(ಎ) ರಾಜೀನಾಮೆ ಕೊಟ್ಟಾಗ; ಅಥವಾ

(ಬಿ) ಅವನ/ಅದರ ಪದಾವಧಿ ಮುಕ್ತಾಯವಾದಾಗ

ಅವನು / ಅದು ಅಂಥ ಪದದಲ್ಲಿ ಇರುವುದು ನಿಂತುಹೋಗತಕ್ಕದ್ದು.

(5) ಯಾವುದೇ ಸಹಕಾರಿಯ ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ನೇಮಕವಾದ ವ್ಯಕ್ತಿಯು ಮಾತ್ರ ಲೆಕ್ಕಪರಿಶೋಧನಾ ವರದಿಗೆ ಸಹಿ

ಮಾಡತಕ್ಕದ್ದು. ಲೆಕ್ಕಪರಿಶೋಧಕನಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಕಾನೂನು ಪ್ರಕಾರ ಅನುಪ್ರಮಾಣಿಸಬೇಕಾದ ಅಥವಾ ಸಹಿಮಾಡಬೇಕಾದ ಅಗತ್ಯಬಿದ್ದಲ್ಲಿ, ಸಹಕಾರಿಯ ಇತರ ಯಾವುದೇ ದಾಖಲೆಯನ್ನು ಅನುಪ್ರಮಾಣಿಸತಕ್ಕದ್ದು ಅಥವಾ ಸಹಿ ಮಾಡತಕ್ಕದ್ದು.

(6) ಲೆಕ್ಕಪರಿಶೋಧನಾ ವರದಿಯನ್ನು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಓದಿ ತಿಳಿಸತಕ್ಕದ್ದು ಮತ್ತು ಅದು ಯಾವುದೇ ಸದಸ್ಯನ ಪರಿಶೀಲಿಸಲು ಮುಕ್ತವಾಗಿರತಕ್ಕದ್ದು.

**8ಬಿ. ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಕಾರ್ಯವಿಧಾನ:–** (1)_ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಹೆಚ್ಚು ಪ್ರಸಾರವಿರುವ ಕನ್ನಡ ವೃತ್ತ ಪತ್ರಿಕೆಯಲ್ಲಿ ಮತ್ತು ಇಲಾಖಾ ಅಂತರ್ಜಾಲ ತಾಣದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿ, ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಲುವಾಗಿ ನಿರ್ವಹಿಸುವ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಅಥವಾ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳ ಪಟ್ಟಿಯಲ್ಲಿ ಸೇರಬಯಸುವ, ಅಗತ್ಯ ವಿದ್ಯಾರ್ಹತೆ ಮತ್ತು ಅನುಭವವುಳ್ಳ ಚಾರ್ಟರ್ಡ್ ಅಕೌಂಟೆಂಟ್ / ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆ [1][ಮತ್ತು ಕಾಸ್ಟ್ ಅಕೌಂಟೆಂಟ್ಸ್ ಮತ್ತು ಕಾಸ್ಟ್ ಅಕೌಂಟೆಂಟ್ ಫರ್ಮ್ಸ್]ಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು.

(2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸತಕ್ಕದ್ದು ಮತ್ತು ಅರ್ಹ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಿ ಇಲಾಖಾ ಜಾಲತಾಣದಲ್ಲಿ ಪ್ರಚುರಪಡಿಸತಕ್ಕದ್ದು.

(3) ಲೆಕ್ಕಪರಿಶೋಧಕರ ಅಥವಾ ಲೆಕ್ಕ ಪರಿಶೋಧಿಸುವ ಸಂಸ್ಥೆಗಳ ಪಟ್ಟಿಯು, ಅವನು ಹೆಸರನ್ನು ಹಿಂಪಡೆಯುವವರೆಗೆ ಅಥವಾ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯಿಂದ ಅಥವಾ ಲೆಕ್ಕಪರಿಶೋಧನಾ ನಿರ್ದೇಶಕರ ತೀರ್ಮಾನದಲ್ಲಿ ಯಾವುದೇ ತೆರನಾದ ವೃತ್ತಿ ದುರ್ವರ್ತನೆ ಮಾಡಲಾಗಿದೆಯೆಂದು ನಿರ್ಧರಿಸುವ ಅವಧಿಯವರೆಗೆ ಮುಂದುವರೆಯತಕ್ಕದ್ದು. ಮುಂದುವರೆದು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕನು ಯಾವುದೇ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿದ ಅರ್ಜಿದಾರನು ಅಗತ್ಯ ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂತಹವರ ಹೆಸರನ್ನು ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(4) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕನು ಸಹಕಾರಿಗಳ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟಿನ ಆಧಾರದ ಮೇಲೆ ಸಹಕಾರಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಆಯಾ ಪ್ರವರ್ಗಗಳ ಸಹಕಾರಿಗಳ ಲೆಕ್ಕಪರಿಶೋಧನೆಗಾಗಿ ಅನುಭವದ ಆಧಾರದ ಮೇಲೆ ಲೆಕ್ಕಪರಿಶೋಧಕರನ್ನೂ ಸಹ ಮೂರು ಗುಂಪುಗಳಾಗಿ ಈ ಕೆಳಕಂಡ ರೀತಿಯಲ್ಲಿ ವರ್ಗೀಕರಿಸತಕ್ಕದ್ದು, ಅಂದರೆ,–

---

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

| ಕ್ರ.ಸಂ. | ಸಹಕಾರಿಗಳ ಪ್ರವರ್ಗಗಳು | ಲೆಕ್ಕಪರಿಶೋಧನೆ ನಿರ್ವಹಿಸಲು ಅರ್ಹರಿರುವ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳ ಮತ್ತು ಇಲಾಖಾ ಲೆಕ್ಕಪರಿಶೋಧಕರುಗಳ ಪಟ್ಟಿ |
|---|---|---|
| 1 | ` 25 ಕೋಟಿಗಿಂತ ಹೆಚ್ಚಿಗೆ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟು ಹೊಂದಿರುವ "ಎ" ಗುಂಪಿನ ಸಹಕಾರಿಗಳು | ಕನಿಷ್ಠ 10 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು [ಲೆಕ್ಕಪರಿಶೋಧನಾ ಉಪನಿರ್ದೇಶಕರ ಹುದ್ದೆಗಿಂತ ಕಡಿಮೆ ಇಲ್ಲದ ಲೆಕ್ಕಪರಿಶೋಧನ ಇಲಾಖೆಯ ಅಧಿಕಾರಿಗಳು] |
| 2 | `10 ಕೋಟಿಗಿಂತ ಹೆಚ್ಚಿಗೆ ಮತ್ತು `25 ಕೋಟಿಗಿಂತ ಕಡಿಮೆ ದುಡಿಯುವ ಬಂಡವಾಳ /ವ್ಯಾಪಾರ ವಹಿವಾಟು ಹೊಂದಿರುವ "ಬಿ" ಗುಂಪಿನ ಸಹಕಾರಿಗಳು | ಕನಿಷ್ಠ 05 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು |
| 3 | `10 ಕೋಟಿಗಿಂತ ಕಡಿಮೆ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟು ಹೊಂದಿರುವ ಜಿಲ್ಲಾವಾರು ಗುಂಪು ಮಾಡಲಾದ "ಸಿ" ಗುಂಪಿನ ಸಹಕಾರಿಗಳು | ಕನಿಷ್ಠ 03 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು ಮತ್ತು ಜಿಲ್ಲಾವಾರು ಗುಂಪು ಮಾಡಲಾದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಸಿಬ್ಬಂದಿ. |
| | "ಎ" ಪ್ರವರ್ಗದ ಸಹಕಾರಿಗಳ ಎದುರಿಗೆ ಪಟ್ಟಿ ಮಾಡಲಾದ ಲೆಕ್ಕಪರಿಶೋಧಕರುಗಳು "ಬಿ" ಮತ್ತು "ಸಿ" ಪ್ರವರ್ಗದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸ ಬಹುದಾಗಿರುತ್ತದೆ ಮತ್ತು "ಬಿ" ಪ್ರವರ್ಗದ ಎದುರಿಗೆ ಪಟ್ಟಿ ಮಾಡಲಾದ ಲೆಕ್ಕಪರಿಶೋಧಕರುಗಳು "ಸಿ" ಪ್ರವರ್ಗದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಬಹುದಾಗಿರುತ್ತದೆ. | |

1. ಅಧಿಸೂಚನೆ ಸಂಖ್ಯೆ ಸಿಒ 6 ಸಿಎಲ್ಎಂ 2015 ಮೂಲಕ ಸೇರಿಸಲ್ಪಟ್ಟು 20.06.2015ರಿಂದ ಜಾರಿಗೆ ಬಂದಿರುತ್ತದೆ.

(5) ಪ್ರತೀ ವರ್ಷ ಆರ್ಥಿಕ ವರ್ಷ ಮುಕ್ತಾಯವಾದ ನಂತರ ಸಹಕಾರಿಗಳ ಗುಂಪು ಹಾಗೂ ಲೆಕ್ಕಪರಿಶೋಧಕರ ವರ್ಗೀಕರಣವನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಇಂದೀಕರಿಸತಕ್ಕದ್ದು.

(6) ಪ್ರತೀ ಸಹಕಾರಿಯ ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಅಂತರ್ಜಾಲ ತಾಣದಲ್ಲಿ ಸಹಕಾರಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಲುವಾಗಿ ಪ್ರಚುರಪಡಿಸಿರುವ ಅರ್ಹ ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ಸಂಸ್ಥೆಗಳ ಪಟ್ಟಿಯಲ್ಲಿನ ಆಯಾ ಲೆಕ್ಕಪರಿಶೋಧಕರುಗಳ ಗುಂಪಿನಿಂದ ಲೆಕ್ಕಪರಿಶೋಧನಾ ಸಂಸ್ಥೆ / ಲೆಕ್ಕ ಪರಿಶೋಧಕರನ್ನು (ಚಾರ್ಟರ್ಡ್ ಅಕೌಂಟೆಂಟ್ ಅಥವಾ ಇಲಾಖಾ ಲೆಕ್ಕಪರಿಶೋಧಕರು / ಸಿಬ್ಬಂದಿ) ಆಯ್ಕೆ ಮಾಡಿಕೊಳ್ಳತಕ್ಕದ್ದು. ಆದರೆ ಅದೇ ವ್ಯಕ್ತಿಗಳನ್ನು ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ಸಂಸ್ಥೆಗಳಾಗಿ ಅನುಕ್ರಮವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(7) ಸಾಮಾನ್ಯ ನಿಕಾಯದಿಂದ ಹಾಗೆ ನೇಮಕವಾದ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಧಿನಿಯಮ ಮತ್ತು ನಿಯಮಗಳ ಪ್ರಬಂಧಗಳಿಗೆ ಅನುಸಾರವಾಗಿ ಹಿಂದಿನ ಸಹಕಾರಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆಯನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸತಕ್ಕದ್ದು ಮತ್ತು ಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಲೆಕ್ಕಪರಿಶೋಧನಾ ವರದಿಯ ಸಹಿತ ಪ್ರತಿವರ್ಷ ಲೆಕ್ಕಪರಿಶೋಧನೆ ಮುಕ್ತಾಯವಾದ ದಿನದಿಂದ ಮುವತ್ತು ದಿನದೊಳಗೆ ಅಥವಾ ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಒಂದನೇ ದಿನದೊಳಗೆ, ಇವೆರಡರಲ್ಲಿ ಯಾವುದು ಮೊದಲೋ ಆ ದಿನದಂದು, ಸಹಕಾರಿಗೆ, ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ ಮತ್ತು ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಸಲ್ಲಿಸತಕ್ಕದ್ದು.

ಪರಂತು, 2012–13ನೇ ಸಾಲಿನ ಲೆಕ್ಕಪರಿಶೋಧನೆ ಹಾಗೂ ಬಾಕಿ ಲೆಕ್ಕಪರಿಶೋಧನೆ ಇದ್ದಲ್ಲಿ, ಈಗಾಗಲೇ ಸಹಕಾರಿ / ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ನೇಮಕಾತಿ ಆಗಿರುವ ಪ್ರಕರಣಗಳನ್ನು ಹೊರತುಪಡಿಸಿ, ನೇಮಕಾತಿ ಆಗಿರದ ಪ್ರಕರಣಗಳಲ್ಲಿ ಆಡಳಿತ ಮಂಡಳಿಯು ನೇಮಕಾತಿ ಮಾಡಿಕೊಳ್ಳಲು ಅಧಿಕಾರ ಹೊಂದಿರುತ್ತದೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಒಂದನೇ ಸೆಪ್ಟೆಂಬರ್ 2013ರೊಳಗೆ ಪಡೆಯತಕ್ಕದ್ದು.

(8) ಯಾವುದೇ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕಗೊಂಡ ಲೆಕ್ಕಪರಿಶೋಧಕನು/ ಲೆಕ್ಕಪರಿಶೋಧಿತ ಸಂಸ್ಥೆ ಗಳಿಗೆ, ಸಾಮಾನ್ಯ ಸಭೆ ನಡೆಸಿದ ಏಳು ದಿವಸಗಳೊಳಗಾಗಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ತಿಳಿಸತಕ್ಕದ್ದು ಹಾಗೂ ಸದರಿ ಮಾಹಿತಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕರಿಗೂ ಹಾಗೂ ಸಂಯುಕ್ತ ಸಹಕಾರಿಗೂ ಸಹಾ ತಿಳಿಸತಕ್ಕದ್ದು.

(9) ಯಾವುದೇ ಸಹಕಾರಿಯು ಹೊಸದಾಗಿ ನೋಂದಾಯಿಸಿದಾಗ ಆ ಸಹಕಾರಿಯು ಮೊದಲ ಸಾಮಾನ್ಯ ನಿಕಾಯದ ಸಭೆಯಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಅಂತರ್ಜಾಲದಲ್ಲಿ ಪ್ರಚುರ ಪಡಿಸಿರುವ ಅರ್ಹ ಲೆಕ್ಕಪರಿಶೋಧಕರು ಮತ್ತು

ಲೆಕ್ಕಪರಿಶೋಧನಾ ಸಂಸ್ಥೆಗಳ ಪಟ್ಟಿಯಲ್ಲಿನ ಆಯಾ ಗುಂಪಿನಲ್ಲಿನ ಲೆಕ್ಕಪರಿಶೋಧನಾ ಸಂಸ್ಥೆ / ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

(10) ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಸಹಕಾರಿಗಳೊಡನೆ ಮತ್ತು ಲೆಕ್ಕ ಪರಿಶೋಧಕರು ಮತ್ತು ಅಥವಾ ಲೆಕ್ಕ ಪರಿಶೋಧನಾ ಸಂಸ್ಥೆಗಳೊಡನೆ ಸಮನ್ವಯ ಮಾಡತಕ್ಕದ್ದು ಮತ್ತು ನಿಗದಿಪಡಿಸಿದಂತೆ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳಲು ಅಗತ್ಯವಾದ ಸೂಚನೆಗಳನ್ನು ನೀಡತಕ್ಕದ್ದು. ಸಕಾಲಿಕ ಲೆಕ್ಕಪರಿಶೋಧನೆಯನ್ನು ನಡೆಸುವುದರಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಯನ್ನು ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಕಳುಹಿಸತಕ್ಕದ್ದು ಮತ್ತು ಅವನು ಅಂಥ ಸಮಸ್ಯೆಯ ಪರಿಹಾರಕ್ಕಾಗಿ ವ್ಯವಸ್ಥೆಗೊಳಿಸಿ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

(11)ಲೆಕ್ಕಪರಿಶೋಧನಾ ವರದಿಯು ಕೆಳಗಿನ ವಿವರಗಳನ್ನುಳ್ಳ ಷೆಡ್ಯೂಲುಗಳನ್ನೂ ತಃಖ್ತೆಗಳನ್ನೂ ಸಹ ಒಳಗೊಂಡಿರತಕ್ಕದ್ದು:

(ಎ) ಅಧಿನಿಯಮದ ಅಥವಾ ನಿಯಮಗಳ ಅಥವಾ ಸಹಕಾರಿ ಉಪವಿಧಿಗಳ ಉಪಬಂಧಗಳಿಗೆ ವಿರುದ್ಧವಾಗಿ ಕಂಡುಬರುವ ಎಲ್ಲಾ ವ್ಯವಹಾರಗಳು;

(ಬಿ) ರಿಸರ್ವ್‌ಬ್ಯಾಂಕ್ ಮತ್ತು ನಬಾರ್ಡು ನೀಡಿರುವ ನಿರ್ದೇಶನಗಳಿಗೆ ಮತ್ತು ಮಾರ್ಗಸೂಚಿಗಳಿಗೆ ವಿರುದ್ಧವಾಗಿ ಕಂಡುಬರುವ ಎಲ್ಲಾ ವ್ಯವಹಾರಗಳು;

(ಸಿ) ನಿಯಮ 8(3)ರಲ್ಲಿ ತಿಳಿಸಿರುವ ಕ್ರಮ ಸಂಖ್ಯೆ ಎ, ಬಿ, ಇ, ಎಫ್, ಕೆ, ಎಲ್, ಎನ್, ಆರ್, ಟಿ, ಯು ಮತ್ತು ಡಬ್ಲ್ಯೂ ಇವುಗಳನ್ನು ಯುಕ್ತವಾಗಿ ಪರಿಶೀಲಿಸಿ ದೃಢೀಕರಿಸಿದ ಷೆಡ್ಯೂಲ್‌ಗಳು ಮತ್ತು ತಃಖ್ತೆಗಳು;

(12) ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ಸಹಕಾರಿಗಳ ಲೆಕ್ಕಪರಿಶೋಧನೆಯು ಸಕಾಲಿವಾಗಿ ನಡೆಯುವುದನ್ನು ಖಾತ್ರಿಗೊಳಿಸುವ ಉದ್ದೇಶಕ್ಕಾಗಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗಳಿಗೆ ಸೂಕ್ತ ಮಾರ್ಗಸೂಚಿಗಳನ್ನು ನೀಡಲು ಸಕ್ಷಮರಾಗಿರುತ್ತಾರೆ.

ಸಹಕಾರ ಲೆಕ್ಕಪರಿಶೊಧನಾ ನಿರ್ದೇಶಕನು ಪ್ರತಿ ಜಿಲ್ಲೆಯಲ್ಲಿನ ಸಹಕಾರಿಗಳ ಪಟ್ಟಿಯನ್ನು ಪ್ರತಿ ವರ್ಷ ಏಪ್ರಿಲ್ ತಿಂಗಳ ಮೊದಲನೇ ದಿನದಲ್ಲಿದ್ದಂತೆ ಇಂದೀಕರಿಸತಕ್ಕದ್ದು, ಆ ಜಿಲ್ಲೆಯ ಸಹಕಾರಿಗಳ ರಿಜಿಸ್ಟ್ರಾರನ ಪಟ್ಟಿಯೊಡನೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

**9. ಸಮಾಪನೆಯಲ್ಲಿರುವ ಸಹಕಾರಿಯ ಲೆಕ್ಕಪರಿಶೋಧನೆ:–** ಯಾವುದೇ ಸಹಕಾರಿ ಸಮಾಪನೆಯಲ್ಲಿರುವಾಗ ಇಲಾಖೆಯ ಅಂತರ್ಜಾಲ ತಾಣದಲ್ಲಿ ಪ್ರಚುರಪಡಿಸಿರುವ ಅರ್ಹ ಲೆಕ್ಕಪರಿಶೋಧಕರು ಅಥವಾ ಲೆಕ್ಕಪರಿಶೋಧನಾ ಸಂಸ್ಥೆಯ ಪಟ್ಟಿಯಿಂದ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋದನಾ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಸಾಮಾನ್ಯ ನಿಕಾಯ ಸಭೆಯನ್ನು ಆಯೋಜಿಸತಕ್ಕದ್ದು. ಸಾಮಾನ್ಯ ನಿಕಾಯ ಸಭೆಯನ್ನು ಸಮಾಪಕನು ಸಮಾವೇಶಗೊಳಿಸುವುದು ಸಾದ್ಯವಾಗದಿದ್ದಲ್ಲಿ ಸಮಾಪಕನು ಕರ್ನಾಟಕ ಸಹಕಾರಿಗಳ ಅಧಿನಿಯಮದ ಪ್ರಕರಣ 47 ರ ವಿಧಾನವನ್ನು ಅನುಸರಿಸತಕ್ಕದು.

**9ಎ. ಅಪೆಕ್ಸ್ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು:–** ಪ್ರಕರಣ 33ರ ಉಪಪ್ರಕರಣ (11)ರ ಉದ್ದೇಶಕ್ಕಾಗಿ, ಲೆಕ್ಕಪರಿಶೋಧನಾ ನಿರ್ದೇಶಕನು ಅಪೆಕ್ಸ ಸಹಕಾರಿಯ ಆಡಿಟ್ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದರ ಮೂಲಕ ಅದನ್ನು ವಿಧಾನಮಂಡಲದ ಮುಂದೆ ಮಂಡಿಸಲು ಅನುವಾಗುವಂತೆ ಕ್ರಮವಿಡತಕ್ಕದ್ದು.

**9ಬಿ. ಸಾಮಾನ್ಯ ಸಭೆಯ ಕೋರಿಕೆ ಮೇರೆಗೆ ಯಾವುದೇ ಲೆಕ್ಕದ ಮರು ಪರಿಶೋಧನೆ:–** ಯಾವುದೇ ಸಹಕಾರಿಯ ಸಾಮಾನ್ಯ ನಿಕಾಯವು ಸಹಕಾರಿಯ ಯಾವುದೇ ಲೆಕ್ಕವನ್ನು ಪ್ರಕರಣ 33ರ ಉಪಪ್ರಕರಣ (12)ರಡಿ ಮರು ಲೆಕ್ಕಪರಿಶೋಧಿಸಲು ತೀರ್ಮಾನಿಸಿದಲ್ಲಿ, ಅದು ಅಂಥ ಮರು ಲೆಕ್ಕಪರಿಶೋಧನೆ ನಡೆಸಲು ಬೇರೆಯಾದ ಒಬ್ಬ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸತಕ್ಕದ್ದು. ಅಂಥ ಮರುಲೆಕ್ಕಪರಿಶೋಧನೆಯ ವೆಚ್ಚವನ್ನು ಸಹಕಾರಿಯು ಭರಿಸತಕ್ಕದ್ದು.

**9ಸಿ. ರಾಜ್ಯ ಸಹಕಾರದ ಆದೇಶದ ಮೇರೆಗೆ ಲೆಕ್ಕಗಳ ಮರು ಪರಿಶೋಧನೆ:–** ಯಾವುದೇ ಸಹಕಾರಿಯ ಲೆಕ್ಕಪತ್ರಗಳ ಮರುಲೆಕ್ಕಪರಿಶೋಧನೆಗೆ ರಾಜ್ಯ ಸರ್ಕಾರವು ಆದೇಶಿಸಿದಾಗ, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಬೇರೊಬ್ಬ ಲೆಕ್ಕಪರಿಶೋಧಕನಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಅಂಥ ಮರುಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡತಕ್ಕದ್ದು. ಅಂಥ ಮರುಲೆಕ್ಕಪರಿಶೋಧನೆಯ ವೆಚ್ಚವನ್ನು ಸಹಕಾರಿಯು ಭರಿಸತಕ್ಕದ್ದು.

**9ಡಿ. ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಕೊಡಮಾಡುವ ಸಂಭಾವನೆ:–** ಒಂದು ಸಹಕಾರಿಯು ಯಾವುದೇ ಸಹಕಾರಿ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಅಥವಾ ಪರಿಶೋಧನೆ ಮಾಡಿದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗ ಸೂಚಿಗಳನ್ವಯ ನಿಗದಿಪಡಿಸತಕ್ಕದ್ದು.]

**10. ಪ್ರಕರಣ 35ರ ಅಡಿಯಲ್ಲಿ ವಿಚಾರಣೆ ಕೋರಿ ಅರ್ಜಿ.–** ಪ್ರಕರಣ 35ರ ಅಡಿಯಲ್ಲಿ ವಿಚಾರಣೆಯನ್ನು ಕೋರಿ ಸಲ್ಲಿಸಿದ ಅರ್ಜಿ ಜೊತೆ ನೂರು ರೂಪಾಯಿಗಳ ಶುಲ್ಕವನ್ನು ಪಾವತಿಸತಕ್ಕದ್ದು.

## [ಅಧ್ಯಾಯ VA
## ಸಹಕಾರ ಶಿಕ್ಷಣ ಮತ್ತು ತರಬೇತಿ

**10ಎ. ಸಹಕಾರ ಶಿಕ್ಷಣ ನಿದಿಗೆ ಪಾವತಿ:** ಪ್ರತಿ ಸಹಕಾರಿಯು ತನ್ನ ಸಹಕಾರ ನಿಧಿ ವಂತಿಕೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಖಾತೆಗೆ ತನ್ನ ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಜಮಾ ಮಾಡತಕ್ಕದ್ದು.

**10ಬಿ ಶಿಕ್ಷಣ ನಿಧಿಯ ನಿರ್ವಹಣೆ :** (1) ಸಹಕಾರ ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಿರ್ವಹಿಸತಕ್ಕದ್ದು ಮತ್ತು ಪೋಷಿಸತಕ್ಕದ್ದು. ಅದನ್ನು ಕೆಳಗಿನ ಸದಸ್ಯರುಗಳನ್ನುಳ್ಳ ಒಂದು ಸಲಹಾ ಸಮಿತಿಯ ಸೂಚನೆ ಮೇರೆಗೆ ಬಳಕೆ ಮಾಡತಕ್ಕದ್ದು.

| | | |
|---|---|---|
| (ಎ) | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಅಧ್ಯಕ್ಷರು | ಸಭಾಪತಿ |
| (ಬಿ) | ಸಹಕಾರ ಶಿಕ್ಷಣ / ತರಬೇತಿ ಕುರಿತು ಓರ್ವ ತಜ್ಞರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ನಾಮನಿರ್ದೇಶನ ಮಾಡತಕ್ಕದ್ದು. | ಸದಸ್ಯ |
| (ಸಿ) | ನಿರ್ದೇಶಕ, ಪ್ರಾದೇಶಿಕ ಸಹಕಾರ ವ್ಯವಸ್ಥಾಪನ ಸಂಸ್ಥೆ, ಬೆಂಗಳೂರು | ಸದಸ್ಯ |
| (ಡಿ) | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಮುಖ್ಯ ಕಾರ್ಯನಿರ್ವಾಹಕ | ಸದಸ್ಯ ಕಾರ್ಯದರ್ಶಿ |

(2) ಸದರಿ ಸಲಹಾ ಸಮಿತಿಯ ಸಭೆಗೆ ಕೋರಂ ಮೂರು ಇರತಕ್ಕದ್ದು. ಅಂತಹ ಸಮಿತಿಯ ನಾಮನಿರ್ದೇಶನ ಸದಸ್ಯನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿಯು ನಿಗದಿಪಡಿಸಿದಂತೆ, ಎರಡು ವರ್ಷಗಳಿಗೆ ಹೆಚ್ಚಿಲ್ಲದ ಅವಧಿಗೆ ಪದಗ್ರಹಣ ಹೊಂದಿರತಕ್ಕದ್ದು. ಸಲಹಾ ಸಮಿತಿಯ ಸಭೆಯನ್ನು ಕನಿಷ್ಠ ಮೂರು ತಿಂಗಳಿಗೊಮ್ಮೆ ಕರೆಯತಕ್ಕದ್ದು.

(3) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಈ ನಿಧಿಯನ್ನು ಒಂದು ಪ್ರತ್ಯೇಕ ಖಾತೆಯನ್ನು ವಾಣಿಜ್ಯ / ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ನಿರ್ವಹಿಸತಕ್ಕದ್ದು ಮತ್ತು ಸದರಿ ನಿಧಿಯ ಮೇಲಿನ ಬಡ್ಡಿ ಅಥವಾ ಇತರ ಗಳಿಕೆಯಿಂದ ಪ್ರಾಪ್ತವಾಗುವ ಆದಾಯವನ್ನು ಸದರಿ ನಿಧಿಗೆ ಜಮಾಮಾಡತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಓ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

**10ಸಿ ಶಿಕ್ಷಣ ನಿಧಿಯನ್ನು ಬಳಕೆ ಮಾಡಬಹುದಾದ ಉದ್ದೇಶಗಳು: (1)** ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಸಹಕಾರ ಶಿಕ್ಷಣ ನಿಧಿಯಿಂದ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಲೆಕ್ಕ ಪರಿಶೋಧಕರು ಈ ನಿಧಿಯ ಬಳಕೆಯನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು.

**(2)** ಸಲಹಾ ಸಮಿತಿಯು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟು ಈ ನಿಧಿಯನ್ನು ಸಹಕಾರಿ ಶಿಕ್ಷಣ ತರಬೇತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಪಟ್ಟ ಕೆಳಗಿನ ಯಾವುದೇ ಉದ್ದೇಶಗಳಿಗೆ ಉಪಯೋಗಿಸಬಹುದು.

(ಎ) ಸಹಕಾರಿಗಳ ನೌಕರರ, ನಿರ್ದೇಶಕರ (ಪದಾಧಿಕಾರಿಗಳನ್ನು ಒಳಗೊಂಡಂತೆ) ಮತ್ತು ಸದಸ್ಯರ ಶಿಕ್ಷಣ ಹಾಗೂ ಸಹಕಾರ ತತ್ವ ಮತ್ತು ಆಚರಣೆಯಲ್ಲಿ ಸಾರ್ವಜನಿಕರಿಗೆ ಶಿಕ್ಷಣ ನೀಡುವುದುದು;

(ಬಿ) ಸಹಕಾರಿಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ;

(ಸಿ) ಸಹಕಾರಿಗಳ ಅಭಿವೃದ್ಧಿ;

(ಡಿ) ಸಾಮಾನ್ಯವಾಗಿ ಸಹಕಾರಿ ಚಳುವಳಿಯ ಅಭಿವೃದ್ಧಿ;

(ಇ) ವೃತ್ತಿ ನೈಪುಣ್ಯತೆ;

(ಎಫ್) ಸಂಶೋಧನೆ ಮತ್ತು ಅಭಿವೃದ್ಧಿ;

(ಜಿ) ತಾಂತ್ರಿಕ ಸೌಲಭ್ಯಗಳನ್ನು ಇಂದೀಕರಿಸುವುದು;

(ಹೆಚ್) ಶಿಕ್ಷಣ, ತರಬೇತಿ, ಸಂಶೋಧನೆ, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ

(ಐ) ಸಹಕಾರಿ ಪ್ರಚಾರ ಮತ್ತು ಪ್ರಸಿದ್ಧಿ;

(ಜೆ) ಸಹಕಾರಿ ಚಳುವಳಿಗೆ ಸಂಬಂಧಪಟ್ಟ ಮಸ್ತಕ ಮತ್ತು ನಿಯತಕಾಲಿಕೆಗಳ ಪ್ರಕಟಣೆ;

(ಕೆ) ಸಂಶೋಧನೆ, ಸರ್ವೇಕ್ಷಣೆ ಮತ್ತು ಪ್ರಕರಣ ಅಧ್ಯಯನಗಳನ್ನು ನಡೆಸುವುದು;

(ಎಲ್) ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಪ್ರಶಂಸನೀಯ ಸೇವೆ ಸಲ್ಲಿಸಿದವರಿಗೆ ಬಹುಮಾನ ಅಥವಾ ಗೌರವಧನ ಕೊಡುವುದು;

(3) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಲಹಾ ಸಮಿತಿಯು ನೀಡುವ ಒಟ್ಟಾರೆ ಮಾರ್ಗಸೂಚಿಗಳನ್ನು ಅನುಸರಿಸಿ ಸಹಕಾರಿ ತತ್ವಗಳು ಮತ್ತು ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು, ಸದಸ್ಯರ ಶಿಕ್ಷಣ, ಸಹಕಾರಿಗಳಲ್ಲಿ ಆರ್ಥಿಕ ಮತ್ತು ವ್ಯವಹಾರ ನಿರ್ವಹಣೆ ಇತ್ಯಾದಿ ವಿಷಯಗಳ ಸಹಕಾರಿ ಚಳುವಳಿ ಮತ್ತು ಸಹಕಾರಿಗಳ ಬೆಳವಣಿಗೆಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಮತ್ತು ವಾರ್ಷಿಕ ಬಜೆಟ್‌ಗಳನ್ನು ತಯಾರಿಸತಕ್ಕದ್ದು ಹಾಗೂ ಅವುಗಳನ್ನು ಅನುಷ್ಠಾನಗೊಳಿಸತಕ್ಕದ್ದು;

(4) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಿಜಿಸ್ಟ್ರಾರನಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ವಿವರಗಳನ್ನು ತೋರಿಸುವ ಅಧಿಕೃತ ವರದಿಗಳನ್ನು ವರ್ಷಕ್ಕೊಮ್ಮೆ ಸಲ್ಲಿಸತಕ್ಕದ್ದು;

(5) ಪ್ರತಿ ಸಹಕಾರಿ ಆಡಳಿತ ಮಂಡಳಿಯು ಸಹ ತನ್ನ ವಾರ್ಷಿಕ ಆಯವ್ಯಯದಲ್ಲಿ ನೌಕರರ, ನಿರ್ದೇಶಕರ, ಸದಸ್ಯರ ಮತ್ತು ಭಾವಿ ಸದಸ್ಯರ ಶಿಕ್ಷಣದ ಖರ್ಚುಗಳನ್ನು ಅಳವಡಿಸತಕ್ಕದ್ದು. ಸಹಕಾರ ಸಿದ್ಧಾಂತ, ತತ್ವಗಳು ಮತ್ತು ಆಚರಣೆಗಳ ಬಗ್ಗೆ ಸದಸ್ಯರು ನಿರ್ದೇಶಕರು ಮತ್ತು ನೌಕರರು ಸರಿಯಾದ ತರಬೇತಿ ನೀಡಿ ಅರಿವು ಮೂಡಿಸುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು. ಯಾವುದೇ ಒಂದು ಉತ್ತಮ ಸಹಕಾರಿಯಲ್ಲಿ ಅನುಸರಿಸಬೇಕಾದ ಮಾರ್ಗದರ್ಶಕತೆ ತಿಳುವಳಿಕೆಯ ಮಟ್ಟ, ಸದಸ್ಯರ ಭಾಗವಹಿಸುವಿಕೆ ಮತ್ತು ಸದಸ್ಯರ ನಿಯಂತ್ರಣಗಳು ಸಹಕಾರಿಯ ಎಲ್ಲಾ ನೌಕರರಿಗೆ, ನಿರ್ದೇಶಕರಿಗೆ ಮತ್ತು ಸದಸ್ಯರಿಗೆ ಮುಟ್ಟುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು.]

# ಅಧ್ಯಾಯ VI
## ವಿವಾದಗಳ ಇತ್ಯರ್ಥ

**11. ವಿವಾದಗಳನ್ನು ತೀರ್ಮಾನಕ್ಕೆ ಒಪ್ಪಿಸುವುದು ಮತ್ತು ಮಧ್ಯಸ್ಥಿಕೆಯ ಕಾರ್ಯ ವಿಧಾನ :–**

(1) ಅಧಿನಿಯಮದ ಪ್ರಕರಣ 39ರ ಮೇರೆಗೆ ರಿಜಿಸ್ಟ್ರಾರರ ತೀರ್ಮಾನಕ್ಕೆ ಯಾವುದೇ ವಿವಾದವನ್ನು ಲಿಖಿತ ಪತ್ರದ ಮೂಲಕ ಕಳುಹಿಸಿಕೊಡತಕ್ಕದ್ದು, ಮತ್ತು ಈ ಬಗ್ಗೆ ಸರ್ಕಾರವು ಅಧಿಸೂಚಿಸಿದ ಮೌಲ್ಯದ ಸ್ಟಾಂಪನ್ನು ಹಚ್ಚತಕ್ಕದ್ದು.

[1][(1ಎ) ಯಾವುದೇ ಸಹಕಾರಿಯು ಮತ್ತು ಸಂಯುಕ್ತ ಸಹಕಾರಿಯು ತಾನಾಗಿ ಅದರ ಯಾವುದೇ ಪ್ರತಿನಿಧಿಯ ಅಥವಾ ಆಡಳಿತ ಮಂಡಲಿಯ ಯಾವುದೇ ಸದಸ್ಯನ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಚುನಾವಣಾ ತಕರಾರು ವಿವಾದವನ್ನು ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದಲ್ಲ ಮತ್ತು ಸಹಕಾರಿಯ ನಿಧಿಗಳಿಂದ ಯಾವುದೇ ಮೊಬಲಗನ್ನು ವೆಚ್ಚ ಮಾಡತಕ್ಕದ್ದಲ್ಲ.]

(2) ಉಪನಿಯಮ (1)ಕ್ಕೆ ಅನುಸಾರವಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ರಿಜಿಸ್ಟ್ರಾರನು, ಪ್ರಕರಣ 41(1)(ಸಿ)ರ ಅಡಿಯಲ್ಲಿ ಮಧ್ಯಸ್ಥಿಕೆಯ ಮೂಲಕ ವಿಲೆ ಮಾಡಬೇಕೆಂದು ತೀರ್ಮಾನಿಸಿದರೆ, ತಾನು ನೇಮಕ ಮಾಡಿದ ಒಬ್ಬ ಮಧ್ಯಸ್ಥಗಾರನಿಗೆ ವಿವಾದವನ್ನು ತೀರ್ಮಾನಿಸಲು ಕಳುಹಿಸಿಕೊಡತಕ್ಕದ್ದು.

(3) (ಎ) ರಿಜಿಸ್ಟ್ರಾರನು, ಮಧ್ಯಸ್ಥಗಾರನು ಅಥವಾ ವಿವಾದವನ್ನು ತೀರ್ಮಾನಿಸುವ ಇತರ ವ್ಯಕ್ತಿಯು, ಸಂಬಂಧಪಟ್ಟ ಪಕ್ಷಕಾರರಿಗೆ ಸಮನುಗಳನ್ನು ಜಾರಿ ಮಾಡಿದ ತರುವಾಯ ಹಾಜರಾದ ಪಕ್ಷಕಾರರಿಂದ ಮತ್ತು ಸಾಕ್ಷಿಗಳಿಂದ ಪಡೆದ ಸಾಕ್ಷ್ಯದ ಸಂಕ್ಷಿಪ್ತ ಟಿಪ್ಪಣಿಯನ್ನು ದಾಖಲಿಸಿಕೊಳ್ಳಬೇಕು. ನಂತರ ಪಕ್ಷಕಾರರು ಕೊಟ್ಟ ದಾಖಲೆಗಳನ್ನು ಹಾಗೂ ಸಾಕ್ಷ್ಯಗಳನ್ನು ಪರಿಶೀಲಿಸಿ ನಂತರ ನ್ಯಾಯಸಮ್ಮತವಾದ ಮತ್ತು ಉತ್ತಮ ವಿವೇಚನೆಗೆ ಅನುಗುಣವಾಗಿ ತೀರ್ಮಾನ ಅಥವಾ ಅವಾರ್ಡನ್ನು ನೀಡತಕ್ಕದ್ದು.

(ಬಿ) ರಿಜಿಸ್ಟ್ರಾರನು ಅಥವಾ ಮಧ್ಯಸ್ಥಗಾರನು ನೀಡುವ ತೀರ್ಮಾನ ಅಥವಾ ಅವಾರ್ಡ ಲಿಖಿತದಲ್ಲಿರತಕ್ಕದ್ದು ಮತ್ತು ಅದನ್ನು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸತಕ್ಕದ್ದು. ವಿಧ್ಯುಕ್ತವಾಗಿ ಸಮನು ಮಾಡಲಾದ ಪಕ್ಷಕಾರರು ಹಾಜರಾಗಲು ತಪ್ಪಿದಲ್ಲಿ ವಿವಾದವನ್ನು ಏಕಪಕ್ಷೀಯವಾಗಿ ತೀರ್ಮಾನಿಸಬಹುದು. ಪಕ್ಷಕಾರರು ತಮ್ಮ ಗೈರು ಹಾಜರಿಯ ಬಗ್ಗೆ ಸಾಕಷ್ಟು ಕಾರಣವನ್ನು ತೋರಿಸಿದಲ್ಲಿ, ಅಂಥ ಏಕಪಕ್ಷೀಯ ತೀರ್ಮಾನ ಅಥವಾ ಅವಾರ್ಡುಗಳನ್ನು ರಿಜಿಸ್ಟ್ರಾರನು ತಳ್ಳಿಹಾಕಬಹುದು ಮತ್ತು ವಿವಾದವನ್ನು ಪುನಃ ಕಡತದ ಮೇಲೆ

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

ತೆಗೆದುಕೊಳ್ಳುವಂತೆ ಮತ್ತು ಇತ್ಯರ್ಥ ಮಾಡುವಂತೆ ಆದೇಶಿಸಬಹುದು:

ಪರಂತು ಏಕಪಕ್ಷೀಯ ತೀರ್ಮಾನವನ್ನು ಅಥವಾ ಅವಾರ್ಡನ್ನು ತಳ್ಳಿಹಾಕುವಂತೆ ಅಂಥ ಪಕ್ಷಕಾರರು ಸಲ್ಲಿಸುವ ಅರ್ಜಿಯನ್ನು ಯಾವ ಪಕ್ಷಕಾರನಿಗೆ ವಿವಾದದಲ್ಲಿ ವಿಧ್ಯುಕ್ತವಾಗಿ ಸಮನು ನೀಡಲಾಗಿತ್ತೋ ಆ ಪಕ್ಷಕಾರನ ಗೈರುಹಾಜರಿ ನಿಮಿತ್ತ ಅಂಥ ತೀರ್ಮಾನ ಅಥವಾ ಅವಾರ್ಡನ್ನು ನೀಡಿರುವ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಥವಾ ಇತರ ಸಂದರ್ಭಗಳಲ್ಲಿ ಆ ತೀರ್ಮಾನ ಅಥವಾ ಅವಾರ್ಡನ್ನು ನೀಡಲಾಗಿರುವುದೆಂಬ ಸಂಗತಿಯು ತಿಳಿದುಬಂದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರರಿಗೆ ಸಲ್ಲಿಸತಕ್ಕದ್ದು ಮತ್ತು ಸದರಿ ಅರ್ಜಿಯ ಸಂಬಂಧದಲ್ಲಿ ಎದುರು ಪಕ್ಷಕಾರನಿಗೆ ಸೂಕ್ತ ರೀತಿಯಲ್ಲಿ ನೋಟೀಸು ಜಾರಿ ಮಾಡದ ಹೊರತು ಅಂಥ ತೀರ್ಮಾನ ಅಥವಾ ಅವಾರ್ಡನ್ನು ತಳ್ಳಿಹಾಕತಕ್ಕದ್ದಲ್ಲ.

(4) (ಎ) ರಿಜಿಸ್ಟ್ರಾರನು, ಪ್ರಕರಣ 41ರ ಉಪ ಪ್ರಕರಣ (1)ರ

(i) (ಎ) ಖಂಡಕ್ಕನುಸಾರವಾಗಿ ವಿವಾದವನ್ನು ತಾನೇ ತೀರ್ಮಾನಿಸಿದರೆ, ಅಥವಾ

(ii) (ಬಿ) ಖಂಡಕ್ಕನುಸಾರವಾಗಿ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕಾರಗಳನ್ನು ನಿಹಿತಗೊಳಿಸಲಾಗಿರುವ ಯಾವೊಬ್ಬ ವ್ಯಕ್ತಿಗೆ ವಿಲೆಗಾಗಿ ವಿವಾದವನ್ನು ಒಪ್ಪಿಸಿದರೆ, ಅಥವಾ

(iii) (ಸಿ) ಖಂಡಕ್ಕನುಸಾರವಾಗಿ ಒಬ್ಬ ಮಧ್ಯಸ್ಥಗಾರನಿಗೆ ವಿವಾದವನ್ನು ಒಪ್ಪಿಸಿದರೆ ತಾನು ನಿರ್ಧರಿಸಬಹುದಾದ ಶುಲ್ಕವನ್ನು ಸಂಬಂಧಪಟ್ಟ ಪಕ್ಷಕಾರನು ಮುಂಗಡವಾಗಿ ಠೇವಣಿ ಇಡುವಂತೆ ಕೇಳಲು ಅಧಿಕಾರ ಹೊಂದಿರತಕ್ಕದ್ದು.

(ಬಿ) ಪ್ರಕರಣ 41ಕ್ಕನುಸಾರ ವಿವಾದವನ್ನು ತೀರ್ಮಾನಿಸುವ ರಿಜಿಸ್ಟ್ರಾರನು ಅಥವಾ ಮಧ್ಯಸ್ಥಗಾರನು ಅಥವಾ ಇತರ ವ್ಯಕ್ತಿಯು ವಿವಾದವನ್ನು ತೀರ್ಮಾನಿಸಲು ತಗಲುವ ಫೀ ಮತ್ತು ವೆಚ್ಚಗಳನ್ನು ಸಹಕಾರಿಯ ಹಣದಿಂದ ಪಾವತಿ ಮಾಡುವಂತೆ ಅಥವಾ ತಾನು ಸೂಕ್ತವೆಂದು ಯೋಚಿಸುವಂಥ ವಿವಾದದ ಪಕ್ಷಕಾರ ಅಥವಾ ಪಕ್ಷಕಾರರು ಪಾವತಿ ಮಾಡುವಂತೆ ಆದೇಶ ನೀಡಲು ಅಧಿಕಾರ ಹೊಂದಿರತಕ್ಕದ್ದು.

(5) (ಎ) ವಿವಾದಕ್ಕೆ ಸಂಬಂಧಪಟ್ಟ ಪಕ್ಷಕಾರರಲ್ಲಿ ಒಬ್ಬನು ಅಪ್ರಾಪ್ತ ವಯಸ್ಸಿನವನಾಗಿದ್ದರೆ, ಅಥವಾ ಅಸ್ವಸ್ಥಚಿತ್ತನಾಗಿದ್ದರೆ ರಿಜಿಸ್ಟ್ರಾರನು ಅಪ್ರಾಪ್ತ ವಯಸ್ಕತೆ ಅಥವಾ ಅಸ್ವಸ್ಥಚಿತ್ತತೆ ಬಗ್ಗೆ ಮನಗಂಡ ಮೇಲೆ ಮತ್ತು ಅಂತಹ ಅಪ್ರಾಪ್ತ ವಯಸ್ಕನಿಗೆ ಅಥವಾ ಅಸ್ವಸ್ಥಚಿತ್ತನಿಗಾಗಿ

ಸೂಕ್ತ ವ್ಯಕ್ತಿಯನ್ನು ಪಾಲಕನನ್ನಾಗಿ ಸದರಿ ಉದ್ದೇಶಿತ ಪಾಲಕನಿಗೆ ನೋಟೀಸು ನೀಡಿದ ನಂತರ ನೇಮಿಸಬಹುದು. ಹಾಗೆ ನೇಮಿಸಲಾದ ವ್ಯಕ್ತಿಯು ಸಾಕಷ್ಟು ಕಾರಣಗಳನ್ನು ತೋರಿಸಿದಲ್ಲಿ ಆತನು ನಿವೃತ್ತನಾಗಲು ಅನುಮತಿಸಬಹುದು ಅಥವಾ ಅವನನ್ನು ತೆಗೆದು ಹಾಕಬಹುದು ಮತ್ತು ಅವನ ಸ್ಥಾನದಲ್ಲಿ ಬೇರೊಬ್ಬ ಪಾಲಕನನ್ನು ನೇಮಿಸಬಹುದು.

(ಬಿ) ವಿವಾದವನ್ನು ತೀರ್ಮಾನಿಸಲು ರಿಜಿಸ್ಟ್ರಾರನು ನೇಮಿಸಿದ ಮಧ್ಯಸ್ಥಗಾರನ ಮುಂದಿರುವ ವಿವಾದಕ್ಕೆ ಸಂಬಂಧಿಸಿದಂತೆ ಅಪ್ರಾಪ್ತ ವಯಸ್ಕನ ಅಥವಾ ಅಸ್ವಸ್ಥಚಿತ್ತನ ಸಲುವಾಗಿ ಪಾಲಕನನ್ನು ನೇಮಿಸುವ ಅವಶ್ಯಕತೆ ಕಂಡು ಬಂದಲ್ಲಿ ಅಂತಹ ಕಡತವನ್ನು ಪಾಲಕನ ನೇಮಕಕ್ಕಾಗಿ ರಿಜಿಸ್ಟ್ರಾರನಿಗೆ ವಾಪಸು ಕಳಿಸತಕ್ಕದ್ದು.

(6) (ಎ) ಒಂದು ಅವಾರ್ಡು / ಆದೇಶ / ತೀರ್ಮಾನ / ಡಿಕ್ರಿಯನ್ನು ನೀಡಿರುವ ಸಂದರ್ಭದಲ್ಲಿ, ಅದನ್ನು ನೀಡಿದ ವ್ಯಕ್ತಿಯು ತನ್ನ ಮುಂದೆ ತೆಗದುಕೊಂಡ ಮತ್ತು ರುಜುವಾತುಪಡಿಸಲಾದ ಯಾವುದೇ ಹೇಳಿಕೆಗಳು ಮತ್ತು ದಸ್ತಾವೇಜುಗಳ ಸಹಿತ ಅದನ್ನು ರಿಜಿಸ್ಟ್ರಾರನ ಕಚೇರಿಯಲ್ಲಿ ಫೈಲು ಮಾಡಿ ಇಡುವಂತೆ ಮಾಡತಕ್ಕದ್ದು ಮತ್ತು ಪಕ್ಷಕಾರರಿಗೆ ಈ ಬಗ್ಗೆ ನೋಟೀಸನ್ನು ಕೊಡತಕ್ಕದ್ದು.

(ಬಿ) ತೀರ್ಮಾನ ಅಥವಾ ಅವಾರ್ಡು, ಹಣ ಸಂದಾಯ ಅಥವಾ ಧಾನ್ಯದ ನೀಡಿಕೆಯನ್ನು ಒಳಗೊಂಡಿದ್ದಲ್ಲಿ ಮತ್ತು ಅಂಥ ಸಂದಾಯವನ್ನು ಒಂದು ವಾರದೊಳಗೆ ಅಥವಾ ರಿಜಿಸ್ಟ್ರಾರನು ನೀಡಬಹುದಾದ ಹೆಚ್ಚಿನ ಅವಧಿಯೊಳಗೆ ಮಾಡದಿದ್ದಲ್ಲಿ, ಡಿಕ್ರಿದಾರನ ಅರ್ಜಿಯ ಮೇಲೆ ರಿಜಿಸ್ಟ್ರಾರನು ಅಧಿನಿಯಮದ 43ನೆಯ ಪ್ರಕರಣದಲ್ಲಿ ತಿಳಿಸಿದಂತೆ ಒಂದು ಪ್ರಮಾಣ ಪತ್ರವನ್ನು ಕೊಡತಕ್ಕದ್ದು. ಈ ಪ್ರಮಾಣಪತ್ರವು ಕೆಳಕಂಡ ನಮೂನೆಯಲ್ಲಿರತಕ್ಕದ್ದು.

ಸಹಕಾರಿಗಳ ರಿಜಿಸ್ಟ್ರಾರರ ಕಛೇರಿ ................

ವಿವಾದದ ಸಂಖ್ಯೆ ...............................

ದಿನಾಂಕ ..........................................

ಇದರೊಡನೆ ಕಳುಹಿಸಿರುವ ಅಡಕಗಳಲ್ಲಿ ಹೇಳಿರುವಂತೆ ಮೇಲೆ ಹೇಳಿದ ವಿವಾದದಲ್ಲಿ ಒಂದು ಡಿಕ್ರಿ / ತೀರ್ಪು / ಅವಾರ್ಡನ್ನು ನೀಡಲಾಗಿದೆ ಎಂದು ಮತ್ತು ಸದರಿ ಡಿಕ್ರಿಯನ್ನು / ತೀರ್ಪನ್ನು / ಅವಾರ್ಡನ್ನು ಪಾಲಿಸಲಾಗಲಿಲ್ಲವೆಂದು (ಅಥವಾ ಭಾಗಶಃ ಪಾಲಿಸಲಾಗಿದೆಯೆಂದು) ಪ್ರಮಾಣೀಕರಿಸಲಾಗಿದೆ.

ರಿಜಿಸ್ಟ್ರಾರನ ಮೊಹರು ರಿಜಿಸ್ಟ್ರಾರನ ಸಹಿ

(7) ಪಕ್ಷಕಾರರ ಕೋರಿಗೆ ಮೇರೆಗೆ ಸಮನ್ ಮಾಡಲಾದ ಸಾಕ್ಷಿದಾರರಿಗೆ ಸಂದಾಯ ಮಾಡಬೇಕಾದ ಭತ್ಯೆಯ ದರವು, ಈ ಕೆಳಗಿನಂತೆ ಇರತಕ್ಕದ್ದು. ಯಾವ ಪಕ್ಷಕಾರನ ಕೋರಿಕೆಯ ಮೇರೆಗೆ ಸಾಕ್ಷಿದಾರರನ್ನು ಸಮನ್ ಮಾಡಲಾಗಿರುವುದೋ ಆ ಪಕ್ಷಕಾರನು ಸದರಿ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು. ಸಾಕ್ಷಿದಾರರನ್ನು ಎರಡು ವರ್ಗಗಳಾಗಿ ವಿಂಗಡಿಸತಕ್ಕದ್ದು.

ವರ್ಗ – I ರೂ. 3,500 ಮತ್ತು ಅದಕ್ಕಿಂತ ಹೆಚ್ಚಿನ ಮಾಸಿಕ ವರಮಾನವಿರುವವರು.

ವರ್ಗ – II ರೂ. 3,500ಕ್ಕಿಂತ ಕಡಿಮೆ ಮಾಸಿಕ ವರಮಾನವಿರುವವರು.

ಭತ್ಯೆಯ ದರ

| ಸಾಕ್ಷಿದಾರರ ವರ್ಗ | ರಸ್ತೆ ಮೂಲಕ ಪ್ರಯಾಣ | ಬಸ್ಸು, ರೈಲು ಮೂಲಕ ವಿಚಾರಣಾ ಸ್ಥಳಕ್ಕೆ ಹೋಗಿ ಬರಲು ವಾಹನ ಸೌಲಭ್ಯಕ್ಕಾಗಿ (ರೂ.) | ಪ್ರತಿದಿನದ ಖರ್ಚು ಸೇರಿ ಜೀವನಾಧಾರ ಭತ್ಯೆ | |
|---|---|---|---|---|
| | | | ಬೆಂಗಳೂರಿನಲ್ಲಿ | ಇತರೆ ಸ್ಥಳಗಳಲ್ಲಿ |
| ವರ್ಗ – I | ಸಾಮಾನ್ಯ ದರದ ಎರಡು ಪಟ್ಟು | 2.00 ಕಿ.ಮೀ.ಗೆ | ರೂ.100.00 | 80 |
| ವರ್ಗ – II | ಸಾಮಾನ್ಯ ಬಸ್ ದರ | 1.00 ಕಿ.ಮೀ.ಗೆ | ರೂ.80.00 | 60 |

**ಸೂಚನೆ :–**

1) ರೈಲು ಪ್ರಯಾಣ ಮಾಡಿದಲ್ಲಿ ಎರಡು ವರ್ಗದವರಿಗೂ ಒಂದು 2ನೇ ತರಗತಿಯ ಸ್ಲೀಪರ್ ಪ್ರಯಾಣ ದರ ಕೊಡತಕ್ಕದ್ದು. ಆದರೆ ವರ್ಗ 1ರ ಸಾಕ್ಷಿದಾರರಿಗೆ ಅವರ ಸ್ಥಾನಮಾನಕ್ಕೆ ಅನುಸಾರವಾಗಿ ಮೊದಲನೇ ದರ್ಜೆ ರೈಲ್ವೆ ಪ್ರಯಾಣದ ಒಂದು ದರವನ್ನು ಪಾವತಿಸಲು ಸಾಕ್ಷ್ಯ ನೀಡಲು ಕರೆ ಕಳುಹಿಸಿರುವ ಪ್ರಾಧಿಕಾರಿಯ ಒಪ್ಪಿಗೆ ನೀಡಬಹುದು.

2) ವಿಚಾರಣೆ ನಡೆಯುವ ಸ್ಥಳದಲ್ಲೇ ಸಾಕ್ಷಿದಾರನು ವಾಸವಾಗಿರುವಲ್ಲಿ ಸಾಕ್ಷಿದಾರನು ವಾಸಸ್ಥಳದಿಂದ ವಿಚಾರಣೆ ಸ್ಥಳಕ್ಕೆ ಹೋಗಿ ಬರಲು ಮೇಲ್ಕಾಣಿಸಿದ ದರದಂತೆ ಭತ್ಯೆಯನ್ನು ನೀಡಬಹುದು.

3) ಅನಾರೋಗ್ಯ ಅಥವಾ ವೃದ್ಧಾಪ್ಯ ಅಥವಾ ಮತ್ತಿತರ ಕಾರಣಗಳಿಂದಾಗಿ ಸಾಕ್ಷಿದಾರನು ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣಿಸಲು ಸಾಧ್ಯವಾಗದಿದ್ದಲ್ಲಿ, ಸಾಕ್ಷ್ಯ ನೀಡಲು ಕರೆ ಕಳುಹಿಸುವ ಪ್ರಾಧಿಕಾರಿಯು, ಪ್ರಯಾಣ ಭತ್ಯೆಯನ್ನು ಕೊಡಬೇಕಾಗಿರುವ ಪಕ್ಷಕಾರನ ಒಪ್ಪಿಗೆ ಪಡೆದು ಮೇಲಿನ 3ನೇ ಅಂಕಣದಲ್ಲಿ ತೋರಿಸಿದ ದರದಂತೆ ರಸ್ತೆ ಮೈಲೇಜನ್ನು ಅನುಮೋದಿಸಲು ಅಧಿಕಾರವಿರತಕ್ಕದ್ದು.

(8) (7)ನೇ ಉಪ ನಿಯಮದ ಮೇರೆಗಿನ ವೆಚ್ಚಗಳನ್ನು ವಿವಾದದ ಖರ್ಚುಗಳಂತೆ ಪರಿಗಣಿಸತಕ್ಕದ್ದು ಮತ್ತು ಅಂಥ ಖರ್ಚುಗಳು ಮತ್ತು ವಿವಾದಕ್ಕೆ ಪ್ರಾಸಂಗಿಕವಾದ ಎಲ್ಲ ಖರ್ಚುಗಳು ಯಾರಿಂದ ಅಥವಾ ಯಾವ ಸ್ವತ್ತಿನಿಂದ ಮತ್ತು ಎಷ್ಟರ ಮಟ್ಟಿಗೆ ಪಾವತಿ ಮಾಡಲ್ಪಡಬೇಕೆಂಬುದನ್ನು ನಿರ್ಧರಿಸಲು ಮತ್ತು ಮೇಲೆ ಹೇಳಿದ ಉದ್ದೇಶಗಳ ಬಗ್ಗೆ ಅವಶ್ಯವಿರುವ ಎಲ್ಲ ನಿರ್ದೇಶನಗಳನ್ನು ನೀಡಲು ವಿವಾದವನ್ನು ತೀರ್ಮಾನಿಸುವ ಪ್ರಾಧಿಕಾರಿಗಳಿಗೆ ಸಂಪೂರ್ಣ ಅಕಾರವಿರತಕ್ಕದ್ದು. ವಿವಾದವನ್ನು ತೀರ್ಮಾನಿಸುವ ಪ್ರಾಧಿಕಾರಿಯು ಯಾವುದೇ ಖರ್ಚುಗಳನ್ನು ಕೊಡಕೂಡದೆಂದು ನಿರ್ದೇಶಿಸಿದಲ್ಲಿ ಸದರಿ ಪ್ರಾಧಿಕಾರಿಯು, ಅದರ ಕಾರಣಗಳನ್ನು ಲಿಖಿತದಲ್ಲಿ ತಿಳಿಸತಕ್ಕದ್ದು. ಖರ್ಚಿನ ಮೇಲೆ ವರ್ಷಕ್ಕೆ ಶೇಕಡಾ ಆರಕ್ಕೆ ಮೀರದ ಯಾವುದೇ ದರದ ಬಡ್ಡಿಯನ್ನು ಸಂದಾಯ ಮಾಡಬೇಕೆಂದು ಅವಾರ್ಡು ನೀಡಬಹುದು ಮತ್ತು ಅಂಥ ಬಡ್ಡಿಯನ್ನು ಖರ್ಚಿನ ಲೆಕ್ಕಕ್ಕೆ ಸೇರಿಸತಕ್ಕದ್ದು ಮತ್ತು ಹಾಗೆ ವಸೂಲ್ಮಾಡತಕ್ಕದ್ದು.

**12. ಸಮನುಗಳನ್ನು ಜಾರಿ ಮಾಡುವ ರೀತಿ :–**

(1) ಅಧಿನಿಯಮದ ಮತ್ತು ಈ ನಿಯಮಗಳ ಅಡಿಯಲ್ಲಿ ನೀಡಲಾದ ಪ್ರತಿಯೊಂದು ಸಮನು ಲಿಖಿತದಲ್ಲಿರತಕ್ಕದ್ದು. ಅದಕ್ಕೆ ಜಾರಿ ಮಾಡುವ ವ್ಯಕ್ತಿಯು ಸಹಿ ಮಾಡಿ ತನ್ನ ಮೊಹರು ಹಾಕಿರತಕ್ಕದ್ದು ಮತ್ತು ಅಂಥ ಅಧಿಕಾರಿಯು ಅಥವಾ ಆತನಿಂದ ಈ ಸಂಬಂಧದಲ್ಲಿ ಲಿಖಿತವಾಗಿ ಪ್ರಾಧಿಕಾರ ನೀಡಲಾದ ಯಾವೊಬ್ಬ ವ್ಯಕ್ತಿಯು ಸಹಿ ಮಾಡತಕ್ಕದ್ದು. ಸಮನು ಮಾಡಲಾದ ವ್ಯಕ್ತಿಯು ಸದರಿ ಅಧಿಕಾರಿಯ ಮುಂದೆ, ನಿಗದಿ ಮಾಡಿದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರಾಗುವಂತೆ ಅಗತ್ಯಪಡಿಸತಕ್ಕದ್ದು. ಆತನ ಹಾಜರಾತಿಯು, ಕ್ಲೇಮಿನ ಬಗ್ಗೆ ಉತ್ತರಿಸಲು ವಿವಾದಕ್ಕೆ ಸಂಬಂಧಿಸಿದ ಪಕ್ಷಕಾರನಾಗಿ ಅಥವಾ ಸಾಕ್ಷ್ಯ ನೀಡಲು ಅಥವಾ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಎರಡೂ ಉದ್ದೇಶಗಳ ಸಲುವಾಗಿ, ಒಬ್ಬ ಸಾಕ್ಷಿದಾರನಾಗುವುದಕ್ಕೆ ಅಗತ್ಯವಾಗಿದೆಯೇ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಯಾವ ನಿರ್ದಿಷ್ಟ ದಸ್ತಾವೇಜನ್ನು ಹಾಜರುಪಡಿಸಬೇಕಾಗಿರುವುದೋ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಯಾಗಿ ಸಮನಿನಲ್ಲಿ ವಿವರಿಸತಕ್ಕದ್ದು.

(2) ಸಾಕ್ಷ್ಯ ಕೊಡಬೇಕೆಂದು ಸಮನು ಮಾಡದೆ ಒಂದು ದಸ್ತಾವೇಜನ್ನು ಹಾಜರು–ಪಡಿಸಬೇಕೆಂದು ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡಬಹುದು.

ದಸ್ತಾವೇಜನ್ನು ಹಾಜರುಪಡಿಸಲು ಮಾತ್ರ ಸಮನು ಮಾಡಲಾದ ಯಾವೊಬ್ಬ ವ್ಯಕ್ತಿಯು, ಸದರಿ ದಸ್ತಾವೇಜನ್ನು ಹಾಜರುಪಡಿಸಲು ಸ್ವತಃ ಹಾಜರಾಗುವುದಕ್ಕೆ ಬದಲಾಗಿ ಅನ್ಯಥಾ ಹಾಜರ್ಪಡಿಸುವಂತೆ ಮಾಡಿದಲ್ಲಿ ಸಮನನ್ನು ಪಾಲಿಸಿದಂತೆ ಎಂದು ಭಾವಿಸತಕ್ಕದ್ದು.

(3) ಅಧಿನಿಯಮದ ಮೇರೆಗೆ ನೀಡಲಾದ ಸಮನು ಯಾವೊಬ್ಬ ವ್ಯಕ್ತಿಗೆ ಈ ಮುಂದೆ ತಿಳಿಸಿದ ಯಾವುದೇ ರೀತಿಯಲ್ಲಿ ಎಂದರೆ :–

(ಎ) ಅಂಥ ವ್ಯಕ್ತಿಗೆ ಅದನ್ನು ಕೊಡುವ ಮೂಲಕ; ಅಥವಾ

(ಬಿ) ಅಂಥ ವ್ಯಕ್ತಿಯು ದೊರೆಯದಿದ್ದರೆ ಆತನ ಕೊನೆಯ ವಾಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದು ಬಂದ ಸ್ಥಳದಲ್ಲಿ ಅದನ್ನಿಡುವ ಮೂಲಕ ಅಥವಾ ಆತನ ಕುಟುಂಬದ ಯಾರಾದರೂ ವಯಸ್ಕ ಸದಸ್ಯನಿಗೆ ಅದನ್ನು ಕೊಡುವ ಮೂಲಕ; ಅಥವಾ

ಸಿ) ಅಂಥ ವ್ಯಕ್ತಿಯ ವಿಳಾಸವು ರಿಜಿಸ್ಟ್ರಾರನಿಗೆ ಅಥವಾ ಪ್ರಾಧಿಕೃತನಾದ ಇತರ ವ್ಯಕ್ತಿಗೆ ತಿಳಿದಿರುವಲ್ಲಿ, ಪೂರ್ವ ಸಂದಾಯ ಮಾಡಿದ ಸ್ವೀಕೃತಿ ಪತ್ರ ಸಹಿತವಾದ ನೋಂದಾಯಿತ ಅಂಚೆ ಮೂಲಕ ಆತನಿಗೆ ಅದನ್ನು ಕಳುಹಿಸಿಕೊಡುವ ಮೂಲಕ, ಅಥವಾ

ಡಿ) ಮೇಲೆ ಹೇಳಲಾದ ಯಾವುದೇ ಕ್ರಮಕ್ಕೆ ಅವಕಾಶವಿಲ್ಲದಿರುವಲ್ಲಿ ಆತನ ಕೊನೆಯ ವಾಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದುಬಂದ ಸ್ಥಳದ ಯಾವುದಾದರೂ ಎದ್ದು ಕಾಣುವ ಸ್ಥಳದಲ್ಲಿ ಅದನ್ನು ಅಂಟಿಸುವ ಮೂಲಕ

– ಜಾರಿ ಮಾಡತಕ್ಕದ್ದು.

(4) ಸಮನು ಜಾರಿ ಮಾಡುವ ಅಧಿಕಾರಿಯು, ಸಮನಿನ ಪ್ರತಿಯನ್ನು ಸಮನು ಮಾಡಲಾದ ವ್ಯಕ್ತಿಗೆ ಆತನ ಪರವಾಗಿ ಒಬ್ಬ ಏಜೆಂಟ್ ಅಥವಾ ಇತರ ವ್ಯಕ್ತಿಗೆ ಸ್ವತಃ ಕೊಟ್ಟಲ್ಲಿ, ಆತನು ಯಾವ ವ್ಯಕ್ತಿಗೆ ಸಮನಿನ ಪ್ರತಿಯನ್ನು ಹಾಗೆ ಕೊಡುತ್ತಾನೋ ಅಂಥ ವ್ಯಕ್ತಿಯ ಸಹಿಯನ್ನು ಮೂಲ ಸಮನಿನ ಮೇಲೆ ಜಾರಿಗೊಳಿಸಿದ ಬಗ್ಗೆ ಹಿಂಬರಹ ಬರೆದು ಪಡೆಯತಕ್ಕದ್ದು.

(5) ಉಪನಿಯಮ (4)ರ ಅಡಿಯಲ್ಲಿ ಸಮನು ಜಾರಿ ಮಾಡಲಾದ ಎಲ್ಲಾ ಸಂದರ್ಭಗಳಲ್ಲೂ ಜಾರಿ ಮಾಡುವ ಅಧಿಕಾರಿಯು, ಮೂಲ ಸಮನಿನ ಮೇಲೆ ಅಥವಾ ಅದಕ್ಕೆ ಲಗತ್ತಿಸಿದ ಹೇಳಿಕೆಯಲ್ಲಿ, ಸಮನನ್ನು ಯಾವಾಗ ಮತ್ತು ಯಾವ ರೀತಿಯಲ್ಲಿ ಜಾರಿ ಮಾಡಲಾಯಿತೆಂಬ ಬಗ್ಗೆ ಮತ್ತು ಜಾರಿ ಮಾಡಲಾದ ವ್ಯಕ್ತಿಯನ್ನು ಗುರುತಿಸುವ ಮತ್ತು ಸಮನನ್ನು ಕೊಟ್ಟದ್ದಕ್ಕೆ ಸಾಕ್ಷಿಯಾಗಿರುವ ವ್ಯಕ್ತಿಯು ಯಾರಾದರೂ ಇದ್ದರೆ, ಆತನ ಹೆಸರು ಮತ್ತು ವಿಳಾಸದ ವಿವರಗಳನ್ನು ಕೊಡುವ ಮಾಹಿತಿಯನ್ನು ಹಿಂಬರಹವಾಗಿ ಬರೆಯತಕ್ಕದ್ದು ಅಥವಾ ಬರೆಯುವಂತೆ ಅಥವಾ ಸೇರಿಸುವಂತೆ ಮಾಡತಕ್ಕದ್ದು.

(6) ಸಮನು ಮಾಡಬೇಕಾದ ಪಕ್ಷಕಾರನು ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದಲ್ಲಿ ಅಥವಾ ಒಂದು ರೈಲ್ವೆ ಕಂಪನಿಯ ಅಥವಾ ಸ್ಥಳೀಯ ಪ್ರಾಧಿಕಾರದ ನೌಕರನಾಗಿದ್ದಲ್ಲಿ, ಸಮನನ್ನು ನೀಡುವ ಅಧಿಕಾರಿಯು, ಹಾಗೆ ಜಾರಿಮಾಡುವುದು ಅನುಕೂಲಕರವೆಂದು ಕಂಡುಬಂದಲ್ಲಿ ಸಮನು ಮಾಡಬೇಕಾಗಿರುವ ವ್ಯಕ್ತಿಯು, ಯಾವ ಕಛೇರಿಯಲ್ಲಿ ನೇಮಕನಾಗಿರುವವನೋ ಆ ಕಛೇರಿಯ ಮುಖ್ಯಸ್ಥರಿಗೆ, ಪಕ್ಷಕಾರನು ಇಟ್ಟುಕೊಳ್ಳುವ ಪ್ರತಿಯ ಸಹಿತ ಅದನ್ನು ಪೂರ್ವ ಸಂದಾಯ ಸ್ವೀಕೃತಿಪತ್ರ ಸಹಿತವಾದ ನೋಂದಾಯಿತ ಅಂಚೆ ಮೂಲಕ ಕಳುಹಿಸಿಕೊಡಬಹುದು.

## ಅಧ್ಯಾಯ VII
## ಅವಾರ್ಡು, ಡಿಕ್ರಿ, ಆದೇಶ ಮತ್ತು ತೀರ್ಮಾನಗಳ ಜಾರಿ

**13. ವಸೂಲಿ ಅಧಿಕಾರಿಗೆ ಜಾರಿ ಮಾಡಲು ಅರ್ಜಿ :–**

(1) ಅಧಿನಿಯಮದ 43ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಡಿಕ್ರಿಯನ್ನು ಜಾರಿಗೊಳಿಸಲು ಬಯಸುವ ಪ್ರತಿಯೊಬ್ಬ ಡಿಕ್ರಿದಾರನು, ತೀರ್ಪುಋಣಿಯು ಯಾರ ಅಧಿಕಾರ ವ್ಯಾಪ್ತಿಯೊಳಗೆ ವಾಸಿಸುತ್ತಿರುವನೋ ಅಥವಾ ಸ್ವತ್ತನ್ನು ಹೊಂದಿರುವನೋ ಅಂಥ ವಸೂಲಾತಿ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ನಿರ್ಧರಿಸುವಂತೆ ಜಾರಿಗೊಳಿಸಲು ತಗಲಬಹುದಾದ ವೆಚ್ಚವನ್ನು ಮುಂಗಡವಾಗಿ ಸಂದಾಯಮಾಡತಕ್ಕದ್ದು.

(2) ಅಂಥ ಪ್ರತಿಯೊಂದು ಅರ್ಜಿಯು ನಮೂನೆ–3ರಲ್ಲಿರತಕ್ಕದ್ದು ಮತ್ತು ಡಿಕ್ರಿದಾರನು ಅದಕ್ಕೆ ಸಹಿ ಮಾಡಿರತಕ್ಕದ್ದು. ಡಿಕ್ರಿದಾರನು ತಾನು ಇಚ್ಛಿಸಿದಲ್ಲಿ ತನಗೆ ಅಡಮಾನ ಮಾಡಿಕೊಟ್ಟ ಸ್ಥಿರ ಸ್ವತ್ತಿನ ಮೇಲೆ ಅಥವಾ ಬೇರೆ ಸ್ಥಿರಸ್ವತ್ತಿನ ಮೇಲೆ ಡಿಕ್ರಿಯನ್ನು ಜಾರಿಗೊಳಿಸಬೇಕೆಂದು ಇಚ್ಛಿಸಿರುವನೋ ಅಥವಾ ಚರಸ್ವತ್ತನ್ನು ಜಪ್ತಿ ಮಾಡಿಸಬೇಕೆಂದು ಇಚ್ಛಿಸುವನೋ ಎಂಬುದನ್ನು ಸೂಚಿಸಬಹುದು. ಡಿಕ್ರಿದಾರನು, ಸ್ಥಿರಸ್ವತ್ತಿನ ಮೇಲೆ ಜಾರಿಗೊಳಿಸಬೇಕೆಂದು ಇಚ್ಛಿಸಿದಲ್ಲಿ ಆ ಸ್ವತ್ತನ್ನು ಗುರುತಿಸಲು ಅಗತ್ಯವಾದ ಸಾಕಷ್ಟು ವಿವರಣೆಯನ್ನು ತನ್ನ ಅರ್ಜಿಯಲ್ಲಿ ತಿಳಿಸತಕ್ಕದ್ದು ಮತ್ತು ಅಂಥ ಸ್ವತ್ತನ್ನು ಅದರ ಚಕ್ಕುಬಂದಿಯಿಂದ ಅಥವಾ ಹಕ್ಕು ದಾಖಲೆ ಪತ್ರ, ಕಂದಾಯ ವ್ಯವಸ್ಥೆ ಅಥವಾ ಸರ್ವೆ ನಂಬರುಗಳಿಂದ ಗುರುತು ಹಿಡಿಯಲು ಸಾಧ್ಯವಿದ್ದಲ್ಲಿ, ಅಂತಹ ಚಕ್ಕುಬಂದಿಗಳ ಅಥವಾ ನಂಬರುಗಳ ತಪಶೀಲನ್ನು ಮತ್ತು ಅಂಥ ಸ್ವತ್ತಿನಲ್ಲಿ ತೀರ್ಪುಋಣಿಯ ಪಾಲು ಅಥವಾ ಹಕ್ಕಿನ ಬಗ್ಗೆ ತಪಶೀಲನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಜಿಯಲ್ಲಿ ನಮೂದಿಸತಕ್ಕದ್ದು.

(3) ಅಂಥ ಅರ್ಜಿಯನ್ನು ಸ್ವೀಕರಿಸಿದ ನಂತರ ವಸೂಲಿ ಅಧಿಕಾರಿಯು, ಅರ್ಜಿಯಲ್ಲಿ ಕಾಣಿಸಿದ ವಿವರಗಳ ನಿಖರತೆ ಮತ್ತು ನೈಜತೆಯನ್ನು ರಿಜಿಸ್ಟ್ರಾರರ ಕಛೇರಿಯಲ್ಲಿ ದೊರಕಬಹುದಾದ ವಿವರಗಳೊಂದಿಗೆ ಪರಿಶೀಲಿಸಿ ನೋಡತಕ್ಕದ್ದು ಮತ್ತು ರಿಜಿಸ್ಟ್ರಾರನು ನಮೂನೆ–4ರಲ್ಲಿ ಒಂದು ಲಿಖಿತ ತಗಾದೆ ನೋಟೀಸನ್ನು, ದ್ವಿಪ್ರತಿಯಲ್ಲಿ ತಯಾರಿಸತಕ್ಕದ್ದು. ಸದರಿ ತಗಾದೆ ನೋಟೀಸಿನಲ್ಲಿ ತೀರ್ಪುಋಣಿಯ ಹೆಸರು ಮತ್ತು ಆತನಿಂದ ಬರಬೇಕಾದ ಮೊಬಲಗನ್ನು ತಿಳಿಸಿ ಮಾರಾಟ ಅಧಿಕಾರಿಯವರಿಗೆ ಕಳುಹಿಸತಕ್ಕದ್ದು. ಸ್ಥಿರಸ್ವತ್ತಿನ ಸಂಬಂಧದಲ್ಲಿ ಜಾರಿಮಾಡುತ್ತಿದ್ದರೆ ತಗಾದೆ ನೋಟೀಸಿನಲ್ಲಿ ಅದನ್ನು ಜಾರಿಗೊಳಿಸುವ ಬಗ್ಗೆ ಖರ್ಚು ಯಾವುದೇ ಇದ್ದಲ್ಲಿ ಅದರ ಸಹಿತ

ಪಾವತಿಸಬೇಕಾದ ಮೊಬಲಗು, ಸದರಿ ನೋಟೀಸನ್ನು ಜಾರಿ ಮಾಡುವ ವ್ಯಕ್ತಿಗೆ ಕೊಡಬೇಕಾದ ಭತ್ಯೆ, ಸದರಿ ಮೊಬಲಗನ್ನು ಪಾವತಿಸಲು ನೀಡಲಾದ ಕಾಲಾವಧಿ ಮತ್ತು ಆ ಹಣವನ್ನು ಪಾವತಿಸದಿದ್ದಲ್ಲಿ ಜಪ್ತಿ ಮಾಡಿ ಮಾರಾಟ ಮಾಡಿಸಬಹುದಾದ ಸ್ಥಿರಸ್ವತ್ತುಗಳ ವಿವರಗಳನ್ನು ಅಥವಾ ಜಪ್ತಿ ಮಾಡದೆ ಮಾರಾಟ ಮಾಡುವ ಸ್ಥಿರಸ್ವತ್ತುಗಳ ವಿವರಗಳನ್ನು ತಿಳಿಸತಕ್ಕದ್ದು;

ಪರಂತು, ತೀರ್ಪು ಋಣಿಯು ತನ್ನ ವಿರುದ್ಧ ಮಾಡಲಿರುವ ಜಾರಿ ಕ್ರಮಗಳನ್ನು ವ್ಯರ್ಥಗೊಳಿಸುವ ಅಥವಾ ವಿಳಂಬ ಮಾಡುವ ಉದ್ದೇಶದಿಂದ ತನ್ನ ಸ್ವತ್ತನ್ನು ಸಂಪೂರ್ಣವಾಗಿ ಅಥವಾ ಭಾಗಶಃ ವಿಲೇವಾರಿ ಮಾಡಲಿರುವನೆಂದು ವಸೂಲಾಧಿಕಾರಿಗೆ ಖಚಿತವಾದಲ್ಲಿ, ಆತನಿಗೆ ನೀಡಿದ ತಗಾದೆ ನೋಟೀಸಿನಲ್ಲಿ ಆತನು ಕೊಡಬೇಕಾದ ಮೊತ್ತವನ್ನು ಪಾವತಿ ಮಾಡಲು ಯಾವುದೇ ಕಾಲಾವಕಾಶವನ್ನು ಕೊಡತಕ್ಕದ್ದಲ್ಲ ಮತ್ತು ಅಂಥ ಸುಸ್ತಿದಾರನ ಸ್ವತ್ತನ್ನು ಕೂಡಲೇ ಜಪ್ತಿ ಮಾಡತಕ್ಕದ್ದು.

**14. ಜಾರಿಗೊಳಿಸುವ ಕಾರ್ಯ ವಿದಾನ :–** ನಿಯಮ 13ರ ಉಪ ನಿಯಮ (2)ರಲ್ಲಿ ಹೇಳಿರುವಂತೆ ನಿರ್ದಿಷ್ಟ ಕ್ರಮದಲ್ಲಿ ನಡವಳಿಗಳನ್ನು ಯಾವ ಕ್ರಮದಲ್ಲಿ ನಡೆಸಬೇಕೆಂದು ಡಿಕ್ರಿದಾರನು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ್ದ ಹೊರತು ಸಾಮಾನ್ಯವಾಗಿ ಈ ಮುಂದಿನ ರೀತಿಯಲ್ಲಿ ನಡೆಸತಕ್ಕದ್ದು:–

(ಎ) ತೀರ್ಪು ಋಣಿಯ ಚರ ಸ್ವತ್ತುಗಳ ಮೇಲೆ ಮೊದಲು ಕ್ರಮಕೈಗೊಳ್ಳತಕ್ಕದ್ದು, ಅವಶ್ಯವೆನಿಸಿದರೆ, ಸ್ಥಿರಸ್ವತ್ತಿನ ಮೇಲೂ ಏಕಕಾಲದಲ್ಲಿ ಕ್ರಮಕೈಗೊಳ್ಳಲು ಯಾವುದೇ ಅಡ್ಡಿ ಇರತಕ್ಕದ್ದಲ್ಲ.

ಬಿ) ಚರಸ್ವತ್ತು ಇರದಿದ್ದರೆ ಅಥವಾ ಜಪ್ತಿ ಮಾಡಿ ಮಾರಾಟ ಮಾಡಿದ ಚರಸ್ವತ್ತುಗಳ ಆಥವಾ ಸ್ವತ್ತುಗಳ ಮಾರಾಟದ ಹಣವು ಡಿಕ್ರಿದಾರನ ತಗಾದೆ ಮೊಬಲಗನ್ನು ಪೂರ್ತಿಯಾಗಿ ಪೂರೈಸಲಾಗದಿದ್ದಲ್ಲಿ, ಡಿಕ್ರಿದಾರನಿಗೆ ಪರಭಾರೆ ಮಾಡಿದ ಸ್ಥಿರ ಸ್ವತ್ತು ಅಥವಾ ಸುಸ್ತಿದಾರನಿಗೆ ಸೇರಿದ ಇತರ ಸ್ಥಿರ ಸ್ವತ್ತಿನ ಮೇಲೆ ಕ್ರಮ ಜರುಗಿಸಬಹುದು.

**15. ಜಮೀನಿನಲ್ಲಿ ಬೆಳೆದಿರುವ ಬೆಳಗಳ ಸಹಿತ ನಿರ್ದಿಷ್ಟ ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟ:–** ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಸಂಬಂಧದಲ್ಲಿ ಈ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು:–

ಎ) ಡಿಕ್ರಿದಾರನಿಗೆ ಮುಂಚಿತವಾಗಿ ನೋಟೀಸನ್ನು ಕೊಟ್ಟ ನಂತರ, ಯಾವ ಗ್ರಾಮದಲ್ಲಿ ತೀರ್ಪುಋಣಿಯು ವಾಸವಾಗಿರುವನೋ ಅಥವಾ ಜಪ್ತಿಗೆ ಗುರಿಯಾದ ಸ್ವತ್ತನ್ನು ಹೊಂದಿರುವನೋ, ಆ ಗ್ರಾಮಕ್ಕೆ ಮಾರಾಟ ಅಧಿಕಾರಿಯು ಹೋಗತಕ್ಕದ್ದು ಮತ್ತು ತೀರ್ಪು ಋಣಿಯು ಹಾಜರಿದ್ದಲ್ಲಿ ನಿಯಮ 13(2)ರ ಪ್ರಕಾರ ಅವನಿಗೆ ತಗಾದೆ ನೋಟೀಸನ್ನು ಜಾರಿ ಮಾಡತಕ್ಕದ್ದು. ಬಾಕಿಯಿರುವ ಮೊಬಲಗನ್ನು ಜಾರಿಗೊಳಿಸುವ ಖರ್ಚು ಸಹಿತ ಬಾಕಿ ಹಣವನ್ನು ಕೂಡಲೇ

ಸಂದಾಯ ಮಾಡದಿದ್ದರೆ ಮಾರಾಟ ಅಧಿಕಾರಿಯ, ತೀರ್ಪು ಋಣಿಯ ಸ್ವತ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವ ಮೂಲಕ ಅಥವಾ ಅನ್ಯಥಾ ಜಪ್ತಿ ಮಾಡತಕ್ಕದ್ದು ಮತ್ತು ಹಾಗೆ ಜಪ್ತಿ ಮಾಡಿದ ಸ್ವತ್ತುಗಳ ಪಟ್ಟಿಯನ್ನು ನಮೂನೆ–5ರಲ್ಲಿ ತಯಾರಿಸತಕ್ಕದ್ದು ಹಾಗೂ ಅದರ ನಕಲನ್ನು ತೀರ್ಪುಋಣಿಗೆ ಕೂಡಲೇ ಕೊಡತಕ್ಕದ್ದು; ಮತ್ತು ನಿಗದಿತ ದಿನಾಂಕಕ್ಕೆ ಮುಂಚೆ ಸಂದಾಯ ಮಾಡಬೇಕಾಗಿದ್ದ ಮೊತ್ತಗಳನ್ನು ಸಂದಾಯ ಮಾಡದಿದ್ದಲ್ಲಿ ಜಪ್ತಿ ಮಾಡಲಾದ ಸ್ವತ್ತನ್ನು ಯಾವ ಸ್ಥಳದಲ್ಲಿ, ಯಾವ ದಿನಾಂಕದಂದು ಮತ್ತು ಯಾವ ಸಮಯಕ್ಕೆ ಮಾರಾಟ ಮಾಡಲಾಗುವುದು ಎಂಬ ನೋಟೀಸನ್ನು ತೀರ್ಪು ಋಣಿಗೆ ಕೊಡತಕ್ಕದ್ದು. ತೀರ್ಪು ಋಣಿಯು ಗೈರು ಹಾಜರಾಗಿದ್ದಲ್ಲಿ ಮೇಲೆ ಹೇಳಿದ ತಗಾದೆ ನೋಟೀಸನ್ನು ಆತನ ಕುಟುಂಬದ ಯಾವೊಬ್ಬ ವಯಸ್ಕ ಸದಸ್ಯನ ಮೇಲೆ ಅಥವಾ ತೀರ್ಪು ಋಣಿಯ ಅಧಿಕೃತ ಏಜೆಂಟನ ಮೇಲೆ ಮಾರಾಟ ಅಧಿಕಾರಿಯು ಜಾರಿಗೊಳಿಸತಕ್ಕದ್ದು ಅಥವಾ ಹಾಗೆ ಜಾರಿಗೊಳಿಸಲಾಗದಿದ್ದಲ್ಲಿ ತೀರ್ಪುಋಣಿಯ ವಾಸ್ಥಳದಲ್ಲಿ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಥ ತಗಾದೆ ನೋಟೀಸಿನ ಒಂದು ಪ್ರತಿಯನ್ನು ಅಂಟಿಸತಕ್ಕದ್ದು. ಆ ನಂತರ ಜಪ್ತಿ ಮಾಡತಕ್ಕದ್ದು ಮತ್ತು ಜಪ್ತಿ ಮಾಡಲಾದ ಸ್ವತ್ತಿನ ಪಟ್ಟಿಯನ್ನು ಸದರಿ ಸ್ವತ್ತನ್ನು ಯಾವ ಸ್ಥಳದಲ್ಲಿ ಇಡಲಾಗುತ್ತದೆ ಎಂಬ ಬಗ್ಗೆ ಮತ್ತು ಮಾರಾಟ ಮಾಡುವ ಸ್ಥಳ, ದಿನಾಂಕ ಮತ್ತು ಸಮಯದ ಬಗ್ಗೆ, ಅದರ ಮೇಲೆ ಷರಾ ಬರೆದು ನೋಟೀಸು ಸಹಿತ ತೀರ್ಪುಋಣಿಯ ಸಾಮಾನ್ಯ ವಾಸಸ್ಥಳದ ಮೇಲೆ ಅಂಟಿಸತಕ್ಕದ್ದು.

ಬಿ) ಜಪ್ತಿ ನಂತರ, ಮಾರಾಟ ಅಧಿಕಾರಿಯು ಮಾಡಿದ ಸ್ವತ್ತಿನ ಅಭಿರಕ್ಷೆಯ ಬಗ್ಗೆ ಡಿಕ್ರಿದಾರನ ಬಳಿಯಲ್ಲಿ ಅಥವಾ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಬಹುದು. ಮಾರಾಟ ಅಧಿಕಾರಿಯು, ಡಿಕ್ರಿದಾರನು ಜಪ್ತಿ ಮಾಡಿದ ಸ್ವತ್ತುಗಳನ್ನು ಅಭಿರಕ್ಷಣೆಗೆ ತೆಗೆದುಕೊಳ್ಳಬೇಕೆಂದು ತಿಳಿಸಿದಲ್ಲಿ ಡಿಕ್ರಿದಾರನು ಸ್ವತ್ತನ್ನು ತೆಗೆದುಕೊಳ್ಳಲು ಬದ್ಧನಾಗಿರುತ್ತಾನೆ ಮತ್ತು ಆತನ ನಿರ್ಲಕ್ಷದಿಂದ ಸಂಭವಿಸಿದ ಯಾವುದೇ ನಷ್ಟವನ್ನು ಡಿಕ್ರಿದಾರನು ಭರ್ತಿ ಮಾಡತಕ್ಕದ್ದು. ಜಪ್ತಿ ಮಾಡಿದ ಸ್ವತ್ತುಗಳು ಜಾನುವಾರುಗಳಾಗಿದ್ದರೆ ಡಿಕ್ರಿದಾರನು ಅವುಗಳಿಗೆ ಹುಲ್ಲು, ನೀರು ಒದಗಿಸಬೇಕು. ಮಾರಾಟ ಅಧಿಕಾರಿಯು ತೀರ್ಪು ಋಣಿಯ ಅಥವಾ ಅಂಥ ಸ್ವತ್ತಿನಲ್ಲಿ ಹಕ್ಕುಳ್ಳವನೆಂದು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯ ಕೋರಿಕೆಯಂತೆ, ಅದು ಯಾವ ಗ್ರಾಮದಲ್ಲಿ ಅಥವಾ ಸ್ಥಳದಲ್ಲಿ ಜಪ್ತಿಯಾಯಿತೋ ಆ ಸ್ಥಳದಲ್ಲಿ, ಕೇಳಿದಾಗ ಸದರಿ ಸ್ವತ್ತನ್ನು ಹಾಜರುಪಡಿಸುವ ಬಗ್ಗೆ ಒಂದು ಅಥವಾ ಅಧಿಕ ಜಾಮೀನುಗಳ ಸಹಿತ, ರಿಜಿಸ್ಟ್ರಾರನು ನಿಗದಿಮಾಡಿದ ನಮೂನೆಯಲ್ಲಿ ತೀರ್ಪುಋಣಿಯು ಅಥವಾ ಅಂಥ ವ್ಯಕ್ತಿಯು ಒಂದು ಕರಾರು ಪತ್ರವನ್ನು ಬರೆದುಕೊಟ್ಟಲ್ಲಿ ಅಂಥ ತೀರ್ಪು ಋಣಿಯ ಅಥವಾ ಅಂಥ ವ್ಯಕ್ತಿಯ ಅಭಿರಕ್ಷೆಯಲ್ಲಿ ಇಡಬಹುದು.

ಸಿ) (ಎ) ಅಥವಾ (ಬಿ) ಖಂಡಗಳ ಮೇರೆಗೆ ಸೂರ್ಯಾಸ್ತವಾದ ಮೇಲೆ ಅಥವಾ ಸೂರ್ಯೋದಯಕ್ಕೆ ಮುಂಚೆ ಯಾವುದೇ ಜಪ್ತಿಯನ್ನು ಮಾಡತಕ್ಕದ್ದಲ್ಲ.

ಡಿ) ಜಪ್ತಿ ಮಾಡಲಾದ ಸ್ವತ್ತುಗಳ ಪ್ರಮಾಣವು ಅತಿಯಾಗಿ ಇರತಕ್ಕದ್ದಲ್ಲ ಎಂದರೆ, ಜಪ್ತಿ ಮಾಡಲಾದ ಸ್ವತ್ತಿನ ಮೌಲ್ಯ ಮತ್ತು ತೀರ್ಪು ಋಣಿಯಿಂದ ಬಾಕಿಯಿರುವ ಮೊತ್ತ, ಅದರ ಮೇಲಿನ ಬಡ್ಡಿ ಮತ್ತು ಮಾರಾಟಕ್ಕೆ ಪ್ರಾಸಂಗೀಕವಾದ ಎಲ್ಲಾ ವೆಚ್ಚ ಇವುಗಳ ಒಟ್ಟು ಮೊತ್ತ ಸಾಧ್ಯವಾದಷ್ಟು ಪ್ರಮಾಣಾನುಸಾರವಾಗಿರತಕ್ಕದ್ದು.

ಇ) ತೀರ್ಪು ಋಣಿಗೆ ಸೇರಿದ ಜಮೀನಿನ ಬೆಳೆಗಳನ್ನು ಅಥವಾ ಸಂಗ್ರಹಿಸಲಾದ ಉತ್ಪನ್ನಗಳನ್ನು ಜಪ್ತಿ ಮಾಡಿರುವಲ್ಲಿ ಮಾರಾಟ ಅಧಿಕಾರಿಯು, ಕಟಾವು ಮಾಡುವುದಕ್ಕೆ ಅಥವಾ ಸಂಗ್ರಹಿಸುವುದಕ್ಕೆ ಅವು ಯೋಗ್ಯವಾಗಿರುವಾಗ ಮಾರಾಟ ಮಾಡಿಸಬಹುದು ಅಥವಾ ತಾನು ಇಷ್ಟಪಟ್ಟಲ್ಲಿ ಅವುಗಳನ್ನು ಸೂಕ್ತ ಋತುವಿನಲ್ಲಿ ಕಟಾವು ಮಾಡಿಸಬಹುದು ಅಥವಾ ಸಂಗ್ರಹಿಸಿಡಬಹುದು ಹಾಗೂ ಅವುಗಳನ್ನು ಮಾರಾಟ ಮಾಡುವ ತನಕ ಸೂಕ್ತ ಸ್ಥಳಗಳಲ್ಲಿ ದಾಸ್ತಾನು ಮಾಡಿಸಬಹುದು. ಎರಡನೆಯ ಸಂದರ್ಭದಲ್ಲಿ, ಅಂಥ ಬೆಳೆಗಳನ್ನು ಕಟಾವು ಮಾಡಿಸುವ ಅಥವಾ ಉತ್ಪನ್ನಗಳನ್ನು ಸಂಗ್ರಹಿಸುವ ಮತ್ತು ದಾಸ್ತಾನು ಮಾಡಿಸುವ ವೆಚ್ಚವನ್ನು, ಸದರಿ ಸ್ವತ್ತನ್ನು ಬಿಡಿಸಿಕೊಳ್ಳುವಾಗ ಮಾಲೀಕರು ಭರಿತಕ್ಕದ್ದು ಅಥವಾ ಅದನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಮಾರಾಟದ ಉತ್ಪನ್ನದಿಂದ ಭರಿಸತಕ್ಕದ್ದು.

ಎಫ್) ಮಾರಾಟ ಅಧಿಕಾರಿಯು ಜಪ್ತಿ ಮಾಡಿ ವಶಕ್ಕೆ ತೆಗೆದುಕೊಂಡ ಎತ್ತುಗಳು ಅಥವಾ ದನಕರುಗಳಿಂದ ಕೆಲಸ ಮಾಡಿಸತಕ್ಕದ್ದಲ್ಲ ಅಥವಾ ವಶಕ್ಕೆ ತೆಗೆದುಕೊಂಡ ಸಾಮಾನುಗಳನ್ನು ಅಥವಾ ಚರಸ್ವತ್ತುಗಳನ್ನು ಉಪಯೋಗಿಸತಕ್ಕದ್ದಲ್ಲ ಮತ್ತು ದನಕರುಗಳಿಗೆ ಅಥವಾ ಜಾನುವಾರುಗಳಿಗೆ ಅವಶ್ಯವಾದ ಮೇವನ್ನು ಒದಗಿಸತಕ್ಕದ್ದು. ಇದಕ್ಕೆ ತಗಲುವ ಖರ್ಚನ್ನು ಸ್ವತ್ತನ್ನು ಬಿಡಿಸಿಕೊಳ್ಳುವಾಗ ಮಾಲೀಕರು ಭರಿಸತಕ್ಕದ್ದು ಅಥವಾ ಅದನ್ನು ಮಾರಾಟದ ಉತ್ಪನ್ನದಿಂದ ಭರಿಸತಕ್ಕದ್ದು.

ಜಿ) ತೀರ್ಪುಋಣಿಗೆ ಸೇರಿದ ಮತ್ತು ಅದರಲ್ಲಿ ಇರಿಸಲಾದ ಸ್ವತ್ತನ್ನು ಜಪ್ತಿ ಮಾಡುವ ಉದ್ದೇಶದಿಂದ, ಯಾವುದೇ ಕುದುರೆಲಾಯ, ದನದ ಕೊಟ್ಟಿಗೆ, ಕಣಜ, ಉಗ್ರಾಣ, ಹೊರಮನೆ ಅಥವಾ ಇತರ ಕಟ್ಟಡವನ್ನು ಬಲವಂತವಾಗಿ ತೆರೆಯಿಸಲು ಮಾರಾಟ ಅಧಿಕಾರಿಗೆ ನ್ಯಾಯಸಮ್ಮತವಾದ ಅಧಿಕಾರವಿರತಕ್ಕದ್ದು ಮತ್ತು ಆತನು ಯಾವ ವಾಸದ ಮನೆಯ ಹೊರಬಾಗಿಲು ತೆರೆದಿರುತ್ತದೋ ಅಂಥ ವಾಸದ ಮನೆಯೊಳಗೆ ಪ್ರವೇಶ ಮಾಡಬಹುದು ಮತ್ತು ಅಂಥ ವಾಸದ ಮನೆಯೊಳಗಿನ ಯಾವುದೇ ಕೊಠಡಿಯ ಬಾಗಿಲನ್ನು ಮುರಿದು ತೆಗೆಯಬಹುದು:

ಪರಂತು, ಇದರಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿದುದರ ಹೊರತಾಗಿ

ಜನಾನಾ ಅಥವಾ ಮಹಿಳೆಯರ ವಾಸದ ಉಪಯೋಗಕ್ಕೆ ಬಿಡಲಾದ ಕೋಣೆಯ ಬಾಗಿಲನ್ನು ಮುರಿದು ತೆಗೆಯಲು ಅಥವಾ ಪ್ರವೇಶಿಸಲು ಸದರಿ ಅಧಿಕಾರಿಗೆ ನ್ಯಾಯಸಮ್ಮತವಾದ ಅಧಿಕಾರವು ಇರತಕ್ಕದ್ದಲ್ಲ.

ಎಚ್) ಯಾವ ವಾಸದ ಮನೆಯ ಹೊರಬಾಗಿಲು ಮುಚ್ಚಲ್ಪಟ್ಟಿರುತ್ತದೋ ಆ ವಾಸದ ಮನೆಯೊಳಗೆ ಅಥವಾ ವಾಸದ ಮನೆಯೊಳಗೆ ಮಹಿಳೆಯರ ವಾಸಕ್ಕೆ ಬಿಡಲಾದ ಹಾಗೂ ಪದ್ಧತಿ ಅಥವಾ ರೂಢಿಗತವಾದ ಖಾಸಗಿ ಸ್ಥಳಗಳೆಂದು ಪರಿಗಣಿಸಲಾದ ಯಾವುದೇ ಕೊಠಡಿಯೊಳಗೆ ತೀರ್ಪುಋಣಿಯ ಸ್ವತ್ತು ಇರುವುದೆಂದು ನಂಬಲು ಮಾರಾಟ ಅಧಿಕಾರಿಗೆ ಕಾರಣವಿದ್ದಲ್ಲಿ, ಸದರಿ ಮಾರಾಟ ಅಧಿಕಾರಿಯು ಅತ್ಯಂತ ಸಮೀಪದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ವಾಸ್ತವಿಕ ಸಂಗತಿಗಳನ್ನು ತಿಳಿಸಿ ಮನವಿಯನ್ನು ಸಲ್ಲಿಸತಕ್ಕದ್ದು. ಅಂಥ ಮನವಿಯನ್ನು ಸಲ್ಲಿಸಿದ ಮೇಲೆ ಸದರಿ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ಒಬ್ಬ ಪೊಲೀಸ್ ಅಧಿಕಾರಿಯನ್ನು ಸದರಿ ಸ್ಥಳಕ್ಕೆ ಕಳುಹಿಸತಕ್ಕದ್ದು ಮತ್ತು ಆತನ ಸಮಕ್ಷಮದಲ್ಲಿ ಅಂತಹ ವಾಸದ ಮನೆಯ ಹೊರಬಾಗಿಲನ್ನು ಜನಾನಾವನ್ನು ಹೊರತುಪಡಿಸಿ, ಮನೆ ಒಳಗಿನ ಯಾವುದೇ ಕೊಠಡಿಯ ಬಾಗಿಲನ್ನು ಮುರಿದು ತೆಗೆಯಬಹುದು. ಅಲ್ಲದೇ ಮಾರಾಟ ಅಧಿಕಾರಿಯು ಪೊಲೀಸ್ ಅಧಿಕಾರಿಯ ಸಮಕ್ಷಮದಲ್ಲಿ ಜನಾನಾದೊಳಗಿನ ಮಹಿಳೆಯರನ್ನು ಅವರು ತಮ್ಮ ಪದ್ಧತಿಯಂತೆ ಅಥವಾ ರೂಢಿಯಂತೆ ಹೊರಗೆ ಕಾಣಿಸಿಕೊಳ್ಳಲಾಗದಿದ್ದ ಸಂದರ್ಭದಲ್ಲಿ ಅವರನ್ನು ಸ್ಥಳಾಂತರಿಸುವುದಕ್ಕೆ ಸೂಕ್ತ ವ್ಯವಸ್ಥೆ ಒದಗಿಸಿ ಸ್ಥಳಾಂತರಿಸಿದ ತರುವಾಯ, ತೀರ್ಪು ಋಣಿಯ ಸ್ವತ್ತುಗಳು ಯಾವುದಾದರೂ ಸದರಿ ಸ್ಥಳದಲ್ಲಿ ಇದ್ದರೆ ಸದರಿ ಸ್ವತ್ತುಗಳನ್ನು ಜಪ್ತಿ ಮಾಡಲು ಜನಾನಾ ಕೊಠಡಿಗಳೊಳಗೆ ಪ್ರವೇಶ ಮಾಡಬಹುದು. ಆದರೆ ಇಂಥ ಸ್ವತ್ತು ಪತ್ತೆಯಾದ ಕೂಡಲೇ ಅಂತಹ ಕೊಠಡಿಗಳಿಂದ ಅದನ್ನು ಸ್ಥಳಾಂತರಿಸತಕ್ಕದ್ದು ಮತ್ತು ಆ ತರುವಾಯ ಮೊದಲಿನಂತೆ ಆ ಕೋಣೆಗಳನ್ನು ವಾಸಕ್ಕಾಗಿ ಬಳಸಿಕೊಳ್ಳಲು ಅವಕಾಶಮಾಡಿಕೊಡತಕ್ಕದ್ದು.

ಐ) ಮಾರಾಟ ಅಧಿಕಾರಿಯು, ಮಾರಾಟದ ದಿನಕ್ಕೆ ಮುಂಚಿನ ದಿನ ಮತ್ತು ಮಾರಾಟದ ದಿನ, ತೀರ್ಪು ಋಣಿಯು ವಾಸಿಸುವ ಗ್ರಾಮದಲ್ಲಿ ಮತ್ತು ಮಾರಾಟಕ್ಕೆ ಸೂಕ್ತ ಪ್ರಚಾರ ಮಾಡಲು ಅವಶ್ಯವೆಂದು ವಸೂಲಿ ಅಧಿಕಾರಿಯು ಪರಿಗಣಿಸುವಂತಹ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಉದ್ದೇಶಿತ ಮಾರಾಟದ ಸಮಯ ಮತ್ತು ಸ್ಥಳದ ಬಗ್ಗೆ ಡಂಗುರ ಸಾರುವ ಮೂಲಕ ಘೋಷಣೆ ಮಾಡಿಸತಕ್ಕದ್ದು. (ಎ) ಖಂಡದಲ್ಲಿ ನಿಯಮಿಸಲಾದ ರೀತಿಯಲ್ಲಿ ಮಾರಾಟದ ನೋಟೀಸನ್ನು ನಮೂನೆ–6ರಲ್ಲಿ ತಯಾರಿಸತಕ್ಕದ್ದು ಹಾಗೂ ಅದನ್ನು ಜಾರಿ ಮಾಡಿದ ಅಥವಾ ಅದನ್ನು ಅಂಟಿಸಿದ ದಿನಾಂಕದಿಂದ 15 ದಿನಗಳ ಅವಧಿ ಮುಕ್ತಾಯವಾಗುವವರೆಗೆ ಯಾವುದೇ ಮಾರಾಟವು ನಡೆಯತಕ್ಕದ್ದಲ್ಲ:

ಪರಂತು, ವಶಪಡಿಸಿಕೊಳ್ಳಲ್ಪಟ್ಟ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ನಾಶವಾಗುವಂಥದ್ದಾಗಿದ್ದರೆ ಅಥವಾ ಅದನ್ನು ವಶದಲ್ಲಿಟ್ಟುಕೊಳ್ಳುವ ವೆಚ್ಚವು ಅದರ ಮೌಲ್ಯಕ್ಕಿಂತ ಅಧಿಕವಾಗುವ ಸಂಭವವಿರುವಲ್ಲಿ, ಸದರಿ ಮೊತ್ತವು, ಮುಂಚೆಯೇ ಸಂದಾಯವಾದ ಹೊರತು ಮಾರಾಟಾಧಿಕಾರಿಯು 15 ದಿನಗಳ ಅವಧಿಯು ಮುಕ್ತಾಯವಾಗುವ ಮೊದಲೇ ಯಾವುದೇ ಸಮಯದಲ್ಲಿ ಅದನ್ನು ಮಾರಾಟ ಮಾಡಬಹುದು.

ಜೆ) ಗೊತ್ತುಪಡಿಸಿದ ಸಮಯದಲ್ಲಿ ಮಾರಾಟ ಅಧಿಕಾರಿಯು ಯುಕ್ತವೆಂದು ಪರಿಗಣಿಸಬಹುದಾದಂತೆ ಸ್ವತ್ತನ್ನು ಒಂದು ಅಥವಾ ಅಧಿಕ ಲಾಟುಗಳಲ್ಲಿ ಮಾರಾಟಕ್ಕೆ ಇಡಬಹುದು ಮತ್ತು ಅತ್ಯಂತ ಹೆಚ್ಚು ಬೆಲೆಗೆ ಹರಾಜು ಕೂಗಿದವನಿಗೆ ಅದನ್ನು ಮಾರಾಟ ಮಾಡತಕ್ಕದ್ದು:

ಪರಂತು, ಮಾರಾಟದ ಬೆಲೆಯು ಬಹಳ ಕಡಿಮೆ ಎಂದು ಕಂಡುಬಂದಲ್ಲಿ ಅಥವಾ ಇತರ ಕಾರಣಗಳಿಗಾಗಿ ಅತ್ಯಂತ ಹೆಚ್ಚು ಬೆಲೆಗೆ ಕೂಗಲಾದ ಬಿಡ್ಡನ್ನು ನಿರಾಕರಿಸಲು ಮಾರಾಟ ಅಧಿಕಾರಿಗೆ ಅವಕಾಶ ಇರತಕ್ಕದ್ದು. ಆ ಸ್ವತ್ತನ್ನು ಬಾಕಿಯಿರುವ ಮೊಬಲಗಿಗಿಂತ ಹೆಚ್ಚಿನ ಮೊಬಲಗಿಗೆ ಮಾರಾಟ ಮಾಡಿದಲ್ಲಿ ಬಡ್ಡಿ ಮತ್ತು ಕಾನೂನು ಸಮ್ಮತ ವೆಚ್ಚ ಹಾಗೂ ಇತರ ಖರ್ಚುಗಳನ್ನು ವಜಾ ಹಾಕಿದ ನಂತರ ಉಳಿದ ಹೆಚ್ಚಿಗೆಯ ಮೊತ್ತವನ್ನು ತೀರ್ಪು ಋಣಿಗೆ ಪಾವತಿ ಮಾಡತಕ್ಕದ್ದು:

ಮತ್ತು ಪರಂತು, ವಸೂಲಿ ಅಧಿಕಾರಿಯಾಗಲೀ ಅಥವಾ ಮಾರಾಟ ಅಧಿಕಾರಿಯಾಗಲೀ ತನ್ನ ವಿವೇಚನಾನುಸಾರ ಮುಂದೂಡಿಕೆಯ ಬಗ್ಗೆ ಕಾರಣಗಳನ್ನು ದಾಖಲಿಸಿ ಒಂದು ಗೊತ್ತಾದ ದಿನ ಮತ್ತು ಸಮಯಕ್ಕೆ ಮಾರಾಟವನ್ನು ಮುಂದೂಡುವ ಅಧಿಕಾರ ಹೊಂದಿರತಕ್ಕದ್ದು. ಮಾರಾಟವನ್ನು ಏಳು ದಿನಗಳನ್ನು ಮೀರಿದ ಅವಧಿಗೆ ಹಾಗೆ ಮುಂದೂಡಿದಲ್ಲಿ ತೀರ್ಪು ಋಣಿಯು ಹಾಗೆ ಮುಂದೂಡಲು ಲಿಖಿತ ಅನುಮತಿಕೊಟ್ಟ ಹೊರತು (ಐ) ಖಂಡದ ಮೇರೆಗೆ ಒಂದು ಹೊಸ ಘೋಷಣೆಯನ್ನು ಮಾಡತಕ್ಕದ್ದು.

ಕೆ) ಮಾರಾಟದ ವೇಳೆಯಲ್ಲಿ ಅಥವಾ ಮಾರಾಟ ಮಾಡುವ ಅಧಿಕಾರಿಯು ಗೊತ್ತುಪಡಿಸಿದಂತೆ ಆ ತರುವಾಯ ಆದಷ್ಟು ಬೇಗನೆ ನಗದು ರೂಪದಲ್ಲಿ ಸ್ವತ್ತಿನ ಹಣವನ್ನು ಸಂದಾಯ ಮಾಡತಕ್ಕದ್ದು. ಖರೀದಿದಾರನು ಪೂರ್ಣ ಹಣವನ್ನು ಸಂದಾಯಮಾಡುವವರೆಗೆ ಸ್ವತ್ತಿನ ಯಾವುದೇ ಭಾಗವನ್ನು ತೆಗೆದುಕೊಂಡು ಹೋಗಲು ಅನುಮತಿಸತಕ್ಕದ್ದಲ್ಲ. ಖರೀದಿದಾರನು ಖರೀದಿ ಹಣವನ್ನು ಸಂದಾಯ ಮಾಡಲು ತಪ್ಪಿದಲ್ಲಿ ಸದರಿ ಸ್ವತ್ತನ್ನು ಪುನಃ ಮಾರಾಟ ಮಾಡತಕ್ಕದ್ದು.

ಎಲ್) ಈ ನಿಯಮಗಳ ಮೇರೆಗೆ ಜಪ್ತಿ ಮಾಡಲಾದ ಯಾವುದೇ ಸ್ವತ್ತನ್ನು, ಬಲವಂತವಾಗಿ ಅಥವಾ ಕಳ್ಳತನದಿಂದ ಯಾವೊಬ್ಬ ವ್ಯಕ್ತಿಯು ಸಾಗಿಸಿದ್ದಲ್ಲಿ,

ಮಾರಾಟ ಅಧಿಕಾರಿಯು, ಅಂತಹ ಸ್ವತ್ತನ್ನು ಪುನಃ ಸ್ವಾಧಿನಕ್ಕೆ ಪಡೆಯಲು, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ಆಪಾದಿಸಲಾದ ಸಂಗತಿಗಳು ನಿಜವೆಂದು ಮ್ಯಾಜಿಸ್ಟ್ರೇಟರಿಗೆ ಮನದಟ್ಟಾದರೆ ಆತನು ಅಂಥ ಸ್ವತ್ತನ್ನು ಮಾರಾಟ ಅಧಿಕಾರಿಯ ವಶಕ್ಕೆ ಪುನಃ ಒಪ್ಪಿಸುವಂತೆ ಕೂಡಲೇ ಆದೇಶ ನೀಡಬಹುದು.

ಎಂ) ಮಾರಾಟಕ್ಕೆ ಮುಂಚೆ ತೀರ್ಪು ಋಣಿಯಾಗಲಿ ಅಥವಾ ಆತನ ಪರವಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯಾಗಲೀ ಅಥವಾ ಜಪ್ತಿ ಮಾಡಲಾದ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯಾಗಲೀ ಸದರಿ ಸ್ವತ್ತನ್ನು ಜಪ್ತಿ ಮಾಡುವಲ್ಲಿ ತಗುಲಿದ ಭತ್ಯೆ, ಇತರ ಖರ್ಚುಗಳು ಮತ್ತು ಬಡ್ಡಿ ಸಹಿತ, ಬಾಕಿಯಿರುವ ಸಂಪೂರ್ಣ ಮೊತ್ತವನ್ನು ಸಂದಾಯ ಮಾಡಿದಲ್ಲಿ, ಮಾರಾಟ ಅಧಿಕಾರಿಯು ಜಪ್ತಿಯ ಆದೇಶವನ್ನು ರದ್ದು ಮಾಡತಕ್ಕದ್ದು ಮತ್ತು ಸದರಿ ಸ್ವತ್ತನ್ನು ಕೂಡಲೇ ಬಿಡುಗಡೆ ಮಾಡತಕ್ಕದ್ದು.

ಎನ್) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5ನೆಯ ಅಧಿನಿಯಮ) 60ನೇ ಪ್ರಕರಣದ ಅಡಿಯಲ್ಲಿ ಜಪ್ತಿಯಿಂದ ವಿನಾಯಿತಿ ಪಡೆದಿರುವ ಚರಸ್ವತ್ತುಗಳನ್ನು ಈ ನಿಯಮಗಳ ಮೇರೆಗೆ ಜಪ್ತಿ ಅಥವಾ ಮಾರಾಟ ಮಾಡತಕ್ಕದ್ದಲ್ಲ.

**16. ಇತರ ಚರ ಆಸ್ತಿಗಳ ಜಪ್ತಿ :–**

(1) ಜಪ್ತಿ ಮಾಡಬೇಕಾಗಿರುವ ಸ್ವತ್ತು, ಸರ್ಕಾರದ ಅಥವಾ ರೈಲ್ವೆ ಕಂಪನಿಯ ಅಥವಾ ಸ್ಥಳೀಯ ಪ್ರಾಧಿಕಾರದ ಒಬ್ಬ ಅಧಿಕಾರಿಯ ಅಥವಾ ನೌಕರನ ಸಂಬಳ ಅಥವಾ ಭತ್ಯೆಗಳು ಅಥವಾ ಮಜೂರಿಗಳು ಆಗಿದ್ದಲ್ಲಿ, ವಸೂಲಿ ಅಧಿಕಾರಿಯು ಮಾರಾಟ ಅಧಿಕಾರಿಯಿಂದ ಒಂದು ವರದಿಯನ್ನು ಸ್ವೀಕರಿಸಿದ ನಂತರ, ಸದರಿ ಮೊತ್ತವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ) 60ನೆಯ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅವನು ನಿರ್ದೇಶಿಸಬಹುದಾದಂತೆ, ಒಂದೇ ಕಂತಿನ ಮೂಲಕವಾಗಲೀ ಅಥವಾ ಮಾಸಿಕ ಕಂತುಗಳ ಮೂಲಕವಾಗಲೀ ಅಂಥ ಸಂಬಳದಿಂದ ಅಥವಾ ಭತ್ಯೆಗಳಿಂದ ಅಥವಾ ಮಜೂರಿಗಳಿಂದ ವಜಾ ಮಾಡಿಕೊಳ್ಳತಕ್ಕದ್ದೆಂದು ಆದೇಶಿಸಬಹುದು ಮತ್ತು ಸದರಿ ಆದೇಶ ನೀಡಿದ ನಂತರ ಅಂಥ ಸಂಬಳ ಅಥವಾ ಭತ್ಯೆ ಅಥವಾ ಮಜೂರಿಯನ್ನು ಬಟವಾಡೆ ಮಾಡುವ ಕರ್ತವ್ಯವನ್ನು ವಹಿಸಲಾಗಿರುವ ಅಧಿಕಾರಿಯಾಗಲೀ ಅಥವಾ ಇತರ ವ್ಯಕ್ತಿ ಆಗಲೀ ಸದರಿ ಆದೇಶದ ಮೇರೆಗೆ ಒಂದೇ ಕಂತಿನಲ್ಲಿ ಅಥವಾ ಮಾಸಿಕ ಕಂತುಗಳಲ್ಲಿ ಬಾಕಿಯಿರುವ ಮೊತ್ತವನ್ನು ಮುರಿದುಕೊಳ್ಳತಕ್ಕದ್ದು ಮತ್ತು ಮಾರಾಟ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

(2) ತೀರ್ಪು ಋಣಿ ಮತ್ತು ಇನ್ನೊಬ್ಬರು ಸಹ ಮಾಲೀಕರಾಗಿ ಹೊಂದಿರುವ

ಚರಸ್ವತ್ತಿನಲ್ಲಿ ತೀರ್ಪು ಋಣಿಯ ಪಾಲು ಅಥವಾ ಹಕ್ಕು ಜಪ್ತಿಗೆ ಒಳಪಟ್ಟ ಸ್ವತ್ತು ಆಗಿದ್ದಲ್ಲಿ, ತೀರ್ಪು ಋಣಿಯ ಪಾಲನ್ನು ಅಥವಾ ಹಕ್ಕನ್ನು ಪರಭಾರೆ ಮಾಡುವುದನ್ನು ಅಥವಾ ಯಾವುದೇ ರೀತಿಯಲ್ಲಿ ಋಣಭಾರಕ್ಕೆ ಗುರಿಮಾಡುವುದನ್ನು ನಿಷೇಧಿಸಿ ತೀರ್ಪು ಋಣಿಗೆ ಒಂದು ನೋಟೀಸನ್ನು ನೀಡಿ ಅದರ ಜಪ್ತಿಯನ್ನು ಮಾಡತಕ್ಕದ್ದು.

(3) ಜಪ್ತಿಮಾಡಬೇಕಾಗಿರುವ ಸ್ವತ್ತು ಒಂದು ನ್ಯಾಯಾಲಯದ ಅಥವಾ ಒಬ್ಬ ಸರ್ಕಾರಿ ಅಧಿಕಾರಿಯ ಅಭಿರಕ್ಷೆಯಲ್ಲಿರದ ಒಂದು ವರ್ಗಾವಣೀಯ ಲಿಖಿತ–ವಾಗಿರುವಲ್ಲಿ ಅದನ್ನು ವಾಸ್ತವಿಕವಾಗಿ ವಶಪಡಿಸಿಕೊಳ್ಳುವ ಮೂಲಕ ಜಪ್ತಿಮಾಡತಕ್ಕದ್ದು ಮತ್ತು ಸದರಿ ಲಿಖಿತವನ್ನು ಜಪ್ತಿ ಆದೇಶ ನೀಡಿದ ವಸೂಲಿ ಅಧಿಕಾರಿಯ ಕಛೇರಿಗೆ ತರತಕ್ಕದ್ದು ಮತ್ತು ಆತನು ನೀಡುವ ಮುಂದಿನ ಆದೇಶಗಳಿಗೆ ಒಳಪಟ್ಟು ಇಟ್ಟುಕೊಂಡಿರತಕ್ಕದ್ದು.

(4) ಜಪ್ತಿ ಮಾಡಬೇಕಾಗಿರುವ ಸ್ವತ್ತು ಯಾವುದೇ ನ್ಯಾಯಾಲಯದ ಅಥವಾ ಸರ್ಕಾರಿ ಅಧಿಕಾರಿಯ ಅಭಿರಕ್ಷೆಯಲ್ಲಿರುವಲ್ಲಿ ಅಂಥ ನ್ಯಾಯಾಲಯಕ್ಕೆ ಅಥವಾ ಅಧಿಕಾರಿಗೆ ಅಂಥ ಸ್ವತ್ತು ಮತ್ತು ಅದರ ಮೇಲೆ ಪ್ರಾಪ್ತವಾಗುವ ಯಾವುದೇ ಬಡ್ಡಿ ಅಥವಾ ಲಾಭಾಂಶವನ್ನು, ವಸೂಲಿ ಅಧಿಕಾರಿಯು ಮುಂದಿನ ಆದೇಶಕ್ಕೊಳಪಟ್ಟು ಹಿಡಿದಿಡುವಂತೆ ಕೋರುವ ನೋಟೀಸನ್ನು ನೀಡಿ ಜಪ್ತಿ ಮಾಡತಕ್ಕದ್ದು.

ಪರಂತು, ಅಂಥ ಸ್ವತ್ತು ಇನ್ನೊಂದು ಜಿಲ್ಲೆಯ ಒಂದು ನ್ಯಾಯಾಲಯದ ಅಥವಾ ವಸೂಲಿ ಅಧಿಕಾರಿಯ ಅಭಿರಕ್ಷೆಯಲ್ಲಿರುವಲ್ಲಿ ಡಿಕ್ರಿದಾರನ ಮತ್ತು ತೀರ್ಪುಋಣಿಯಲ್ಲದ ಆದರೆ ಯಾವುದೇ ಹಸ್ತಾಂತರಣ ಪತ್ರದ ಮೂಲಕವಾಗಲೀ ಜಪ್ತಿಯ ಮೂಲಕವಾಗಲಿ ಅಥವಾ ಅನ್ಯಥಾ ಅಂಥ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾವೊಬ್ಬ ಇತರ ವ್ಯಕ್ತಿಯ ಮಧ್ಯೆ ಹಕ್ಕಿನ ಅಥವಾ ಆದ್ಯತೆಯ ಸಂಬಂಧ ಉದ್ಭವಿಸುವ ಯಾವುದೇ ಪ್ರಶ್ನೆಯನ್ನು ಸಂದರ್ಭಾನುಸಾರ ಅಂಥ ನ್ಯಾಯಾಲಯವು ಅಥವಾ ವಸೂಲಿ ಅಧಿಕಾರಿಯು ಇತ್ಯರ್ಥಪಡಿಸತಕ್ಕದ್ದು.

(5) (ಎ) ಜಪ್ತಿ ಮಾಡಬೇಕಾಗಿರುವ ಸ್ವತ್ತು, ಒಂದು ಅಡಮಾನವನ್ನು ಅಥವಾ ಋಣಭಾರವನ್ನು ಜಾರಿಗೊಳಿಸುವುದಕ್ಕಾಗಿ ಮಾಡುವ ಮಾರಾಟಕ್ಕಾಗಿ ಅಥವಾ ಹಣ ಸಂದಾಯಕ್ಕಾಗಿ ನೀಡಲಾದ ಒಂದು ಡಿಕ್ರಿಯಾಗಿರುವಲ್ಲಿ, ಸದರಿ ಡಿಕ್ರಿಯನ್ನು ರಿಜಿಸ್ಟ್ರಾರನಾಗಲಿ ಅಥವಾ ಅಧಿನಿಯಮದ 41ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ವಿವಾದವನ್ನು ವರ್ಗಾಯಿಸಿರುವ ವ್ಯಕ್ತಿಯಾಗಲಿ ಅಥವಾ ಮಧ್ಯಸ್ಥಗಾರನಾಗಲಿ ಹೊರಡಿಸಿರುವಲ್ಲಿ ಆಗ ಸದರಿ ಡಿಕ್ರಿಯ ಸಂಬಂಧದಲ್ಲಿ ಜಪ್ತಿಯನ್ನು ರಿಜಿಸ್ಟ್ರಾರನ ಆದೇಶ ಮೂಲಕ ಮಾಡತಕ್ಕದ್ದು.

ಬಿ) (ಎ) ಖಂಡದ ಅಡಿಯಲ್ಲಿ ಒಂದು ಆದೇಶವನ್ನು ರಿಜಿಸ್ಟ್ರಾರನು ಮಾಡಿರುವಲ್ಲಿ, ಆತನು ಡಿಕ್ರಿದಾರನ ಅರ್ಜಿಯ ಮೇಲೆ, ಜಪ್ತಿಗಾಗಿ ಹೊರಡಿಸಿದ ಡಿಕ್ರಿಯನ್ನು ಜಾರಿ ಮಾಡಲು ಮುಂದುವರಿಯತಕ್ಕದ್ದು ಮತ್ತು ಅದರಿಂದ ಬರುವ ನಿವ್ವಳ ಹುಟ್ಟುವಳಿಗಳನ್ನು ಜಾರಿಮಾಡಬೇಕೆಂದು ಕೋರಲಾದ ಡಿಕ್ರಿಯ ತೀರಿಕೆಗಾಗಿ ಬಳತಕ್ಕದ್ದು.

(ಸಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಸ್ವರೂಪದ ಇನ್ನೊಂದು ಡಿಕ್ರಿಯನ್ನು ಮಾಡುವ ಮೂಲಕ ಜಾರಿಗೊಳಿಸಬೇಕೆಂದು ಉದ್ದೇಶಿತವಾದ ಒಂದು ಡಿಕ್ರಿಯ ಧಾರಕನು ಜಪ್ತಿ ಮಾಡಲಾದ ಡಿಕ್ರಿಯ ಧಾರಕನ ಪ್ರತಿನಿಧಿಯೆಂದು ಮತ್ತು ಆ ಡಿಕ್ರಿಯನ್ನು ಯಾವುದೇ ರೀತಿಯಲ್ಲಿ ಜಾರಿಗೊಳಿಸಲು ಡಿಕ್ರಿಯ ಧಾರಕನ ಹಕ್ಕುಳ್ಳವನೆಂದು ಭಾವಿಸತಕ್ಕದ್ದು.

(ಡಿ) ಯಾವೊಂದು ಡಿಕ್ರಿಯನ್ನು ಜಾರಿಗೊಳಿಸುವಾಗ ಜಪ್ತಿ ಮಾಡಬೇಕಾದ ಸ್ವತ್ತು (ಎ) ಖಂಡದಲ್ಲಿ ಉಲ್ಲೇಖಿಸಲಾದ ಡಿಕ್ರಿಗಿಂತ ಭಿನ್ನಸ್ವರೂಪದ ಡಿಕ್ರಿಯಾಗಿದ್ದರೆ, ವಸೂಲಿ ಅಧಿಕಾರಿಯು ಅಂಥ ಡಿಕ್ರಿದಾರನಿಗೆ, ಅದನ್ನು ವರ್ಗಾವಣೆ ಮಾಡದಂತೆ ಅಥವಾ ಯಾವುದೇ ರೀತಿಯಲ್ಲಿ ಋಣಭಾರಕ್ಕೆ ಗುರಿ ಮಾಡದಂತೆ ನಿಷೇಧಿಸುವ ಒಂದು ನೋಟೀಸನ್ನು ನೀಡಿ ಅದನ್ನು ಜಪ್ತಿ ಮಾಡತಕ್ಕದ್ದು.

(ಇ) ಈ ಉಪ ನಿಮಯದ ಅಡಿಯಲ್ಲಿ ಜಪ್ತಿ ಮಾಡಲಾದ ಡಿಕ್ರಿಯ ಧಾರಕನು ಡಿಕ್ರಿಯನ್ನು ಜಾರಿಗೊಳಿಸುವ ವಸೂಲಿ ಅಧಿಕಾರಿಗೆ ಯುಕ್ತವಾಗಿ ಅವಶ್ಯಕವಿರಬಹುದಾದಂಥ ಮಾಹಿತಿಯನ್ನು ಮತ್ತು ಸಹಾಯವನ್ನು ಒದಗಿಸತಕ್ಕದ್ದು.

(ಎಫ್) ಇನ್ನೊಂದು ಡಿಕ್ರಿಯ ಜಪ್ತಿಯ ಮೂಲಕ ಜಾರಿಗೊಳಿಸಲು ಉದ್ದೇಶಿಸಲಾದ ಡಿಕ್ರಿಯ ಧಾರಕನು ಅರ್ಜಿ ಸಲ್ಲಿಸಿದ ಮೇಲೆ ಈ ಉಪನಿಯಮದಡಿಯಲ್ಲಿ ಜಪ್ತಿಯ ಆದೇಶವನ್ನು ಮಾಡುವ ವಸೂಲಿ ಅಧಿಕಾರಿಯು ಹಾಗೆ ಜಪ್ತಿ ಮಾಡಲಾದ ಡಿಕ್ರಿಯ ಮೂಲಕ ಬದ್ಧನಾದ ತೀರ್ಪುಋಣಿಗೆ ಅಂಥ ಆದೇಶದ ನೋಟೀಸನ್ನು ಕೊಡತಕ್ಕದ್ದು. ಸದರಿ ನೋಟೀಸು ತಲುಪಿದ ನಂತರ, ತೀರ್ಪು ಋಣಿಯು ಅಂಥ ಆದೇಶವನ್ನು ಉಲ್ಲಂಘಿಸಿ, ವಸೂಲಿ ಅಧಿಕಾರಿಯ ಮೂಲಕವಾಗಲಿ ಅಥವಾ ಅನ್ಯಥಾ ಜಪ್ತಿ ಡಿಕ್ರಿಯ ಸಂಬಂಧದಲ್ಲಿ ಮಾಡಿದ ಹಣ ಸಂದಾಯ ಅಥವಾ ಹೊಂದಾಣಿಕೆಯು, ಜಪ್ತಿ ಜಾರಿಯಲ್ಲಿರುವವರಗೆ ಮಾನ್ಯವಾಗತಕ್ಕದ್ದಲ್ಲ.

(6) ಜಪ್ತಿ ಮಾಡಬೇಕಾದ ಚರ ಸ್ವತ್ತು,–

ಎ) ತೀರ್ಪುಋಣಿಗೆ ಬರಬೇಕಾದ ಋಣವಾಗಿರುವಲ್ಲಿ;

ಬಿ) ಯಾವೊಂದು ನಿಗಮದ ಬಂಡವಾಳದಲ್ಲಿ ಒಂದು ಷೇರು ಅಥವಾ

ಅದರಲ್ಲಿ ತೊಡಗಿಸಲಾದ ಒಂದು ಠೇವಣಿ ಆಗಿರುವಲ್ಲಿ; ಅಥವಾ

ಸಿ) ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಅಥವಾ ಅದರ ಅಭಿರಕ್ಷೆಯಲ್ಲಿ ಠೇವಣಿ ಇಡಲಾದ ಸ್ವತ್ತನ್ನು ಹೊರತುಪಡಿಸಿ, ಸುಸ್ತಿದಾರನ ಸ್ವಾಧೀನದಲ್ಲಿ ಇಲ್ಲದಿರುವ ಇತರೆ ಚರಸ್ವತ್ತು ಆಗಿರುವಲ್ಲಿ ಅದನ್ನು ವಸೂಲಿ ಅಧಿಕಾರಿಯು ಲಿಖಿತ ಆದೇಶದ ಮೂಲಕ;

(i) ಯಾವುದೇ ಋಣದ ಸಂದರ್ಭದಲ್ಲಿ ಸಾಲಿಗನು ಸದರಿ ಋಣವನ್ನು ವಸೂಲಿ ಮಾಡುವುದನ್ನು ಮತ್ತು ಸಾಲಗಾರನು ಆ ಕುರಿತು ಹಣ ಪಾವತಿ ಮಾಡುವುದನ್ನು;

(ii) ಷೇರು ಅಥವಾ ಠೇವಣಿಯ ಸಂದರ್ಭದಲ್ಲಿ, ಯಾವ ವ್ಯಕ್ತಿಯ ಹೆಸರಿನಲ್ಲಿ ಷೇರು ಅಥವಾ ಠೇವಣಿಯು ಇರುವುದೋ ಆ ವ್ಯಕ್ತಿಯು ಸದರಿ ಷೇರನ್ನು ಅಥವಾ ಠೇವಣಿಯನ್ನು ವರ್ಗಾಯಿಸುವುದನ್ನು ಅಥವಾ ಅದರ ಮೇಲೆ ಯಾವುದೇ ಲಾಭಾಂಶವನ್ನು ಅಥವಾ ಬಡ್ಡಿಯನ್ನು ಪಡೆಯುವುದನ್ನು; ಮತ್ತು

(iii) ಮೇಲೆ ಹೇಳಿರುವುದನ್ನು ಹೊರತುಪಡಿಸಿ ಇತರ ಯಾವುದೇ ಚರ ಸ್ವತ್ತಿನ ಸಂದರ್ಭದಲ್ಲಿ, ಅದರ ಸ್ವಾಧೀನತೆಯನ್ನು ಹೊಂದಿರುವ ವ್ಯಕ್ತಿಯು ತೀರ್ಪು ಋಣಿಗೆ ಅದನ್ನು ನೀಡುವುದನ್ನು

–ಪ್ರತಿಬಂಧಿಸಿ ಜಪ್ತಿ ಮಾಡಬಹುದು.

ಅಂಥ ಆದೇಶ ಪ್ರತಿಯನ್ನು, ಋಣದ ಸಂದರ್ಭದಲ್ಲಿ ಸಾಲಗಾರನಿಗೆ, ಷೇರು ಅಥವಾ ಠೇವಣಿಯ ಸಂದರ್ಭದಲ್ಲಿ ನಿಗಮದ ಸೂಕ್ತ ಅಧಿಕಾರಿಗೆ ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾದ ಅಥವಾ ಅಭಿರಕ್ಷೆಯಲ್ಲಿರುವ ಸ್ವತ್ತನ್ನು ಬಿಟ್ಟು ಇತರ ಸ್ವತ್ತಿನ ಸಂದರ್ಭದಲ್ಲಿ ಅಂಥ ಸ್ವತ್ತಿನ ಅಭಿರಕ್ಷೆಯಲ್ಲಿರುವ ವ್ಯಕ್ತಿಗೆ ಒದಗಿಸತಕ್ಕದ್ದು. (ಎ) ಖಂಡದಲ್ಲಿ ಉಲ್ಲೇಖಿಸಲಾದ ಋಣದ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಠೇವಣಿಯ ವಾಯಿದೆ ಅವಧಿಯು ಪೂರ್ಣವಾದ ಕೂಡಲೇ ವಸೂಲಿ ಅಧಿಕಾರಿಯು, ಸಂಬಂಧಪಟ್ಟ ವ್ಯಕ್ತಿಗೆ ಸದರಿ ಮೊಬಲಗನ್ನು ತನಗೆ ಸಂದಾಯ ಮಾಡುವಂತೆ ನಿರ್ದೇಶಿಸಬಹುದು. (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಷೇರು ಹಣವನ್ನು ಹಿಂತೆಗೆದುಕೊಳ್ಳುವುದನ್ನು ಸಾಧ್ಯವಿರದಿದ್ದರೆ, ವಸೂಲಿ ಅಧಿಕಾರಿಯು, ಬ್ರೋಕರ್ ಮೂಲಕ ಅದರ ಮಾರಾಟಕ್ಕೆ

ವ್ಯವಸ್ಥೆ ಮಾಡತಕ್ಕದ್ದು. ಷೇರು ಹಣವನ್ನು ಹಿಂತೆಗೆದುಕೊಳ್ಳಲು ಸಾಧ್ಯವಿದ್ದಲ್ಲಿ ಅದರ ಮೌಲ್ಯವನ್ನು ಸದರಿ ವಸೂಲಿ ಅಧಿಕಾರಿಗೆ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಪಕ್ಷಗಾರನಿಗೆ ಸಂದಾಯ ಮಾಡತಕ್ಕದ್ದು ಮತ್ತು ಅದು ಸುಸ್ತಿದಾರನಿಗೆ ಸಂದಾಯವಾಗತಕ್ಕದ್ದಾದಾಗ ಸಂಬಂಧಪಟ್ಟ ವ್ಯಕ್ತಿಯು, ಅದನ್ನು ಸದರಿ ವಸೂಲಿ ಅಧಿಕಾರಿಗೆ ಒಪ್ಪಿಸತಕ್ಕದ್ದು.

**17. ಸ್ಥಿರ ಸ್ವತ್ತಿನ ಜಪ್ತಿ ಮತ್ತು ಮಾರಾಟ :–**

(1) ಯಾವುದೇ ಡಿಕ್ರಿಯನ್ನು ಜಾರಿಗೊಳಿಸುವಾಗ ಯಾವುದೇ ಸ್ಥಿರ ಸ್ವತ್ತನ್ನು, ಈ ಮೊದಲು ಅದನ್ನು ಜಪ್ತಿ ಮಾಡಿದ್ದ ಹೊರತು ಆ ಸ್ವತ್ತನ್ನು ಮಾರಾಟ ಮಾಡತಕ್ಕದ್ದಲ್ಲ;

ಪರಂತು, ಅಂಥ ಸ್ವತ್ತಿನ ಅಡಮಾನದ ಆಧಾರದ ಮೇಲೆ ಡಿಕ್ರಿಯನ್ನು ಪಡೆಯಲಾಗಿದ್ದ ಸಂದರ್ಭದಲ್ಲಿ ಅದನ್ನು ಜಪ್ತಿ ಮಾಡುವ ಅವಶ್ಯಕತೆಯಿರುವುದಿಲ್ಲ.

(2) ಸ್ಥಿರ ಸ್ವತ್ತಿನ ಜಪ್ತಿ ಮತ್ತು ಮಾರಾಟ ಅಥವಾ ಜಪ್ತಿ ರಹಿತ ಮಾರಾಟದಲ್ಲಿ ಈ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು; ಎಂದರೆ:–

(ಎ) ಮಾರಾಟ ಅಧಿಕಾರಿಯು 13ನೇ ನಿಯಮದ (3)ನೇ ಉಪನಿಯಮದ ಅಡಿಯಲ್ಲಿ ಹೊರಡಿಸಲಾದ ತಗಾದೆ ನೋಟೀಸಿನ ಒಂದು ಪ್ರತಿಯನ್ನು ತೀರ್ಪುಋಣಿಗೆ ಅಥವಾ ಅವನು ದೊರೆಯದಿದ್ದರೆ ಅವನ ಕುಟುಂಬದ ಯಾವೊಬ್ಬ ವಯಸ್ಕ ಪುರುಷ ಸದಸ್ಯನಿಗೆ ಅಥವಾ ಅವನ ಅಧಿಕೃತ ಏಜೆಂಟನಿಗೆ ಜಾರಿ ಮಾಡತಕ್ಕದ್ದು ಅಥವಾ ಹಾಗೆ ಮಾಡಲು ಸಾಧ್ಯವಾಗದಿದ್ದಲ್ಲಿ, ಅದರ ಒಂದು ಪ್ರತಿಯನ್ನು, ಸಂದರ್ಭಾನುಸಾರ ಜಪ್ತಿ ಸಹಿತವಾಗಿ ಮಾರಾಟ ಮಾಡಲಿರುವ ಅಥವಾ ಜಪ್ತಿ ರಹಿತವಾಗಿ ಮಾರಾಟ ಮಾಡಲಿರುವ ಸ್ವತ್ತಿನ ಯಾವುದೇ ಎದ್ದು ಕಾಣುವಂಥ ಭಾಗದಲ್ಲಿ ಅಂಟಿಸತಕ್ಕದ್ದು.

(ಬಿ) ತೀರ್ಪು ಋಣಿಯು, ತಗಾದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗನ್ನು ನಿಗದಿತ ಸಮಯದೊಳಗೆ ಅಥವಾ ಸಮಯವನ್ನು ನಿರ್ದಿಷ್ಟಪಡಿಸಿರದಿದ್ದರೆ, ಕೂಡಲೇ ಸಂದಾಯ ಮಾಡಲು ತಪ್ಪಿದಲ್ಲಿ, ಮಾರಾಟ ಅಧಿಕಾರಿಯು ತಗಾದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ಸ್ಥಿರ ಸ್ವತ್ತನ್ನು ಸಂದರ್ಭಾನುಸಾರ ಜಪ್ತಿ ಮಾಡಿ ಮಾರಾಟ ಮಾಡಲು ಅಥವಾ ಜಪ್ತಿ ರಹಿತವಾಗಿ ಮಾರಾಟ ಮಾಡಲು ಮುಂದುವರಿಯತಕ್ಕದ್ದು.

(ಸಿ) ಮಾರಾಟಕ್ಕೆ ಮುಂಚೆ ಜಪ್ತಿ ಮಾಡಬೇಕಿದ್ದಲ್ಲಿ ಮಾರಾಟ ಅಧಿಕಾರಿಯು ಜಪ್ತಿ ನೋಟೀಸೊಂದನ್ನು ತೀರ್ಪು ಋಣಿಗೆ ವೈಯಕ್ತಿಕವಾಗಿ ಅಥವಾ

ಅವನ ಕುಟುಂಬದ ವಯಸ್ಕ ಪುರುಷ ಸದಸ್ಯನ ಮೇಲೆ ಅಥವಾ ಅವನ ಅಧಿಕೃತ ಏಜೆಂಟನ ಮೇಲೆ ಜಾರಿ ಮಾಡತಕ್ಕದ್ದು. ಹಾಗೆ ಜಾರಿ ಮಾಡಲು ಸಾಧ್ಯವಾಗದಿದ್ದಲ್ಲಿ ಸದರಿ ನೋಟೀಸನ್ನು ತೀರ್ಪುಋಣಿಯ ಇತ್ತೀಚಿನ ವಾಸಸ್ಥಳವೆಂದು ತಿಳಿದು ಬಂದಿರುವ ಸ್ಥಳದ ಯಾವುದೇ ಎದ್ದು ಕಾಣುವಂಥ ಭಾಗದಲ್ಲಿ ಅಂಟಿಸತಕ್ಕದ್ದು. ಜಪ್ತಿ ಮಾಡಲಾಗಿದೆ ಎಂಬ ಸಂಗತಿಯನ್ನು ಜಪ್ತಿ ಮಾಡಲಾದ ಸ್ವತ್ತಿನ ಮೇಲೆ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಸ್ಥಳದಲ್ಲಿ ಮತ್ತು ವಸೂಲಿ ಅಧಿಕಾರಿಯು ಮಾರಾಟಕ್ಕೆ ಸೂಕ್ತ ಪ್ರಚಾರವನ್ನು ಕೊಡುವ ಸಲುವಾಗಿ ಅವಶ್ಯವಿರುವುದೆಂದು ಭಾವಿಸುವ ಯಾವುದೇ ಅಂಥ ಇತರ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಡಂಗುರ ಹೊಡೆಸುವುದರ ಮೂಲಕ ಅಥವಾ ಇತರ ವಾಡಿಕೆಯ ವಿಧಾನದಿಂದ ಸಹ ಘೋಷಿಸತಕ್ಕದ್ದು. ಜಪ್ತಿಯ ನೋಟೀಸಿನಲ್ಲಿ, ಅದರಲ್ಲಿ ನಮೂದಿಸಲಾದ ದಿನಾಂಕದೊಳಗೆ ಬರಬೇಕಾದ ಬಾಕಿ ಮೊಬಲಗನ್ನು, ಬಡ್ಡಿ ಮತ್ತು ವೆಚ್ಚಗಳ ಸಹಿತ ಸಂದಾಯ ಮಾಡದಿದ್ದಲ್ಲಿ ಸದರಿ ಸ್ವತ್ತನ್ನು ಮಾರಾಟಕ್ಕೆ ಇಡಲಾಗುವುದೆಂದು ನಿರ್ದಿಷ್ಟಪಡಿಸತಕ್ಕದ್ದು. ಅಂಥ ನೋಟೀಸಿನ ಒಂದು ಪ್ರತಿಯನ್ನು ಡಿಕ್ರಿದಾರರಿಗೆ ಕಳುಹಿಸಿಕೊಡತಕ್ಕದ್ದು. ವಸೂಲಿ ಅಧಿಕಾರಿಯವರು ನಿರ್ದೇಶಿಸಿದಲ್ಲಿ ಜಪ್ತಿ ನೋಟೀಸನ್ನು ಸರ್ಕಾರಿ ರಾಜ್ಯಪತ್ರದಲ್ಲಿಯೂ ಅಸೂಚಿಸತಕ್ಕದ್ದು.

(ಡಿ) ಮಾರಾಟಕ್ಕಾಗಿ ನಿಗದಿ ಮಾಡಲಾದ ದಿನಾಂಕಕ್ಕೆ ಕನಿಷ್ಠ ಮೂವತ್ತು ದಿವಸಗಳಿಗೆ ಮುಂಚೆ ಮಾರಾಟದ ಘೋಷಣೆಯನ್ನು ನಮೂನೆ–8ರಲ್ಲಿ ತಯಾರಿಸಿ ವಸೂಲಿ ಅಧಿಕಾರಿಯವರ ಕಛೇರಿಯಲ್ಲಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಅದರ ಒಂದು ನಕಲನ್ನು ಅಂಟಿಸುವ ಮೂಲಕ ಪ್ರಕಟಿಸತಕ್ಕದ್ದು. ಅಂಥ ಘೋಷಣೆಯನ್ನು ಸದರಿ ಗ್ರಾಮದಲ್ಲಿ ಅಥವಾ ಸ್ಥಳದಲ್ಲಿ ಮಾರಾಟದ ದಿನಕ್ಕೆ ಮುಂಚಿನ ಎರಡು ಅನುಕ್ರಮಿಕ ದಿನಗಳಂದು ಮತ್ತು ಮಾರಾಟದ ದಿನದಂದು ಮಾರಾಟಕ್ಕೆ ಮುಂಚೆ ಡಂಗುರ ಹೊಡೆಸುವ ಮೂಲಕ ಪ್ರಕಟಿಸತಕ್ಕದ್ದು. ಮಾರಾಟಕ್ಕೆ ಮುಂಚೆ ಜಪ್ತಿ ಅವಶ್ಯಕವಾಗಿರುವಲ್ಲಿ, ಜಪ್ತಿಯನ್ನು ಮಾಡಿದ ನಂತರ ಅಂಥ ಘೋಷಣೆಯನ್ನು ಮಾಡತಕ್ಕದ್ದು. ಡಿಕ್ರಿದಾರನಿಗೂ ಮತ್ತು ತೀರ್ಪುಋಣಿಗೂ ಸದರಿ ಘೋಷಣೆಯ ನಕಲು ಹಾಗೂ ನಮೂನೆ–9ರಲ್ಲಿ ನೋಟೀಸು ನೀಡತಕ್ಕದ್ದು. ಸದರಿ ಘೋಷಣೆಯಲ್ಲಿ ಮಾರಾಟದ ಸಮಯ ಮತ್ತು ಸ್ಥಳಗಳನ್ನು ತಿಳಿಸತಕ್ಕದ್ದು, ಮತ್ತು ಕೆಳಗಿನವುಗಳನ್ನು ಸ್ಪಷ್ಟವಾಗಿಯೂ ಮತ್ತು ನಿಖರವಾಗಿಯೂ ನಿರ್ದಿಷ್ಟಪಡಿಸತಕ್ಕದ್ದು :–

1. ಮಾರಾಟ ಮಾಡಲಿರುವ ಸ್ವತ್ತು:

2. ಸದರಿ ಸ್ವತ್ತು ಗುರಿಯಾಗಿರುವ ಯಾವುದೇ ಋಣಭಾರ;
3. ಯಾವ ಮೊಬಲಗಿನ ವಸೂಲಿಯು ಸಲುವಾಗಿ ಮಾರಾಟಕ್ಕಾಗಿ ಆದೇಶ ಮಾಡಲಾಗಿದೆಯೋ ಆ ಮೊಬಲಗು; ಮತ್ತು
4. ಖರೀದಿದಾರನು ಸದರಿ ಸ್ವತ್ತಿನ ಸ್ವರೂಪ ಮತ್ತು ಮೌಲ್ಯವನ್ನು ಕಂಡು ಹಿಡಿಯಲು ಅತಿಮುಖ್ಯವಾಗಿ ಇರಲೇಬೇಕೆಂದು ಮಾರಾಟ ಅಧಿಕಾರಿಯು ಭಾವಿಸುವಂಥ ಇತರ ಪ್ರತಿಯೊಂದು ವಿಷಯ;

ಇ) ಈ ನಿಯಮಗಳ ಮೇರೆಗೆ ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ ಮಾಡಿದಾಗ, ಸದರಿ ಮಾರಾಟವು, ಸದರಿ ಸ್ವತ್ತಿನ ಮೇಲೆ ಇದ್ದಿರಬಹುದಾದ ಯಾವುವೇ ಹಿಂದಿನ ಋಣಭಾರಗಳಿಗೆ ಒಳಪಟ್ಟಿರತಕ್ಕದ್ದು. ಯಾವ ಮೊಬಲಗಿನ ವಸೂಲಿಯ ಸಲುವಾಗಿ ಮಾರಾಟವನ್ನು ಏರ್ಪಡಿಸಲಾಗಿದೆಯೋ ಆ ಮೊಬಲಗು 100 ರೂಪಾಯಿಗಳಿಗಿಂತ ಹೆಚ್ಚಾಗಿರುವ ಸಂದರ್ಭದಲ್ಲಿ ಮಾರಾಟ ಅಧಿಕಾರಿಯು ಅಥವಾ ವಸೂಲಿ ಅಧಿಕಾರಿಯು ನಿಗದಿ ಮಾಡಿದ ಅವಧಿಯೊಳಗೆ ಮಾರಾಟ ಮಾಡಲು ಉದ್ದೇಶಿಸಲಾದ ಸ್ವತ್ತಿನ ಜಪ್ತಿಯ ದಿನಾಂಕಕ್ಕೆ ಮುಂಚಿನ ಅಥವಾ (1)ನೇ ಉಪನಿಯಮದ ಪರಂತುಕದ ಅಡಿಯಲ್ಲಿ ಬರುವ ಸಂದರ್ಭಗಳಲ್ಲಿ ಜಾರಿಗಾಗಿ ಸಲ್ಲಿಸಲಾದ ಅರ್ಜಿಯ ದಿನಾಂಕಕ್ಕೆ ಮುಂಚಿನ ಹನ್ನೆರಡು ವರ್ಷಗಳಿಗೆ ಕಡಿಮೆಯಾಗಿರದ ಅವಧಿಗಾಗಿ ನೋಂದಣಿ ಇಲಾಖೆಯಿಂದ ಪಡೆಯಲಾದ ಒಂದು ಋಣಭಾರ ಪ್ರಮಾಣ ಪತ್ರವನ್ನು ಡಿಕ್ರಿದಾರನು ಮಾರಾಟ ಅಧಿಕಾರಿಗೆ ಒದಗಿಸತಕ್ಕದ್ದು. ಋಣಭಾರ ಪ್ರಮಾಣಪತ್ರವನ್ನು ಒದಗಿಸಲು ನಿಗದಿಪಡಿಸಿದ ಅವಧಿಯನ್ನು ಸಂದರ್ಭಾನುಸಾರ ಮಾರಾಟ ಅಧಿಕಾರಿಯ ಅಥವಾ ವಸೂಲಿ ಅಧಿಕಾರಿಯು ತನ್ನ ವಿವೇಚನೆಗನುಸಾರವಾಗಿ ವಿಸ್ತರಿಸಬಹುದು:

ಪರಂತು, ಯಾವೊಂದು ಋಣಭಾರ ಪ್ರಮಾಣಪತ್ರವು ಸಂಬಂಧಪಟ್ಟ ದಾಖಲೆಗಳು ನಾಶಹೊಂದಿದ ಕಾರಣದಿಂದ ದೊರೆಯದಂತಾಗಿರುವ ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲೆಗಳು ನಾಶಹೊಂದಿದ್ದ ಕಾರಣದಿಂದ ಋಣಭಾರ ಪ್ರಮಾಣದ ಪತ್ರವನ್ನು ಕೊಡಲು ಸಾಧ್ಯವಾಗುತ್ತಿಲ್ಲವೆಂದು ನೋಂದಣಿ ಇಲಾಖೆಯು ನೀಡಿದ ಒಂದು ಪ್ರಮಾಣಪತ್ರದ ಆಧಾರದ ಮೇಲೆ ಆ ಗ್ರಾಮದ ಲೆಕ್ಕಿಗನು ತನಗೆ ಗೊತ್ತಿರುವಂಥ ಋಣಭಾರ ಕುರಿತು ನೀಡಿದ ಶಪಥ ಪತ್ರವನ್ನು ಋಣಭಾರ ಪ್ರಮಾಣ ಪತ್ರದ ಬದಲಾಗಿ ಮಾನ್ಯ ಮಾಡತಕ್ಕದ್ದು.

(ಎಫ್) ಸಾರ್ವಜನಿಕ ಹರಾಜಿನ ಮೂಲಕ ಅತ್ಯಂತ ಹೆಚ್ಚು ಸವಾಲು ಕೂಗುವವನಿಗೆ ಮಾರಾಟವನ್ನು ಮಾಡತಕ್ಕದ್ದು:

ಪರಂತು ಹರಾಜಿನಲ್ಲಿ ಬಂದ ಬೆಲೆಯು ಅತಿ ಕಡಿಮೆಯಾಗಿದೆಯೆಂದು ಮಾರಾಟ ಅಧಿಕಾರಿಗೆ ಕಂಡುಬಂದಲ್ಲಿ ಅಥವಾ ಇತರ ಕಾರಣಗಳಿಗಾಗಿ ಅವನು ಆ ಅತ್ಯಂತ ಹೆಚ್ಚಿನ ಸವಾಲನ್ನು ನಿರಾಕರಿಸಲು ಅವಕಾಶವಿರತಕ್ಕದ್ದು:

ಮತ್ತು ಪರಂತು, ವಸೂಲಿ ಅಧಿಕಾರಿಯು ಅಥವಾ ಮಾರಾಟ ಅಧಿಕಾರಿಯು ತನ್ನ ವಿವೇಚನೆಗನುಸಾರವಾಗಿ, ಮಾರಾಟವನ್ನು ನಿರ್ದಿಷ್ಟಪಡಿಸಲಾದ ದಿನಕ್ಕೆ ಮತ್ತು ಸಮಯಕ್ಕೆ ಮುಂದೆ ಹಾಕುವ ಬಗ್ಗೆ ತನ್ನ ಕಾರಣಗಳನ್ನು ದಾಖಲಿಸಿ ಮಂದೂಡಬಹುದು. ಏಳು ದಿನಗಳಿಗಿಂತ ಹೆಚ್ಚಿನ ಅವಧಿಯವರೆಗೆ ಯಾವೊಂದು ಮಾರಾಟವನ್ನು ಹಾಗೆ ಮುಂದೂಡಿದಲ್ಲಿ ತೀರ್ಪು ಋಣಿಯು ಹಾಗೆ ಮಾಡಲು ಲಿಖಿತ ಅನುಮತಿಯನ್ನು ಕೊಟ್ಟ ಹೊರತು (ಡಿ) ಖಂಡದ ಅಡಿಯಲ್ಲಿ ಒಂದು ಹೊಸ ಘೋಷಣೆಯನ್ನು ಮಾಡತಕ್ಕದ್ದು.

(ಜಿ) ವಸೂಲಿ ಅಧಿಕಾರಿಯ ಕಛೇರಿಯಲ್ಲಿ ಘೋಷಣೆಯ ನೋಟೀಸನ್ನು ಅಂಟಿಸಿದ ದಿನಾಂಕದಿಂದ ಲೆಕ್ಕ ಮಾಡಲಾದ ಮೂವತ್ತು ದಿನಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿಯು ಮುಗಿದ ನಂತರ ಮಾರಾಟವು ನಡೆಯತಕ್ಕದ್ದು. ವಸೂಲಿ ಅಧಿಕಾರಿಯು ಮಾರಾಟದ ಸಮಯ ಮತ್ತು ಸ್ಥಳಗಳನ್ನು ನಿಗದಿ ಮಾಡತಕ್ಕದ್ದು ಮತ್ತು ಮಾರಾಟದ ಸ್ಥಳವು ಮಾರಾಟ ಮಾಡಬೇಕಾದ ಸ್ವತ್ತು ಯಾವ ಗ್ರಾಮದಲ್ಲಿ ಅಥವಾ ಸ್ಥಳದಲ್ಲಿ ಇದೆಯೋ ಆ ಗ್ರಾಮ ಅಥವಾ ಸ್ಥಳ ಆಗಿರತಕ್ಕದ್ದು ಅಥವಾ ವಸೂಲಿ ಅಧಿಕಾರಿಯು ನಿಗದಿ ಮಾಡಬಹುದಾದ ಅದಕ್ಕೆ ಹೊಂದಿಕೊಂಡಿರುವ ಪ್ರಮುಖ ಸಾರ್ವಜನಿಕ ಆವರಣ ಆಗಿರತಕ್ಕದ್ದು.

ಎಚ್) ಸ್ಥಿರ ಸ್ವತ್ತನ್ನು ಹರಾಜಿನಲ್ಲಿ ಯಾವ ಬೆಲೆಗೆ ಕೊಂಡುಕೊಳ್ಳಲಾಯಿತೋ ಆ ಬೆಲೆಯ ಶೇ. 25ಕ್ಕೆ ಸಮನಾದ ಮೊಬಲಗನ್ನು ಖರೀದಿದಾರನು ಕೊಂಡುಕೊಳ್ಳುವ ಕಾಲಕ್ಕೆ ಮಾರಾಟ ಅಧಿಕಾರಿಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಠೇವಣಿ ಇಡಲು ತಪ್ಪಿದಲ್ಲಿ, ಸದರಿ ಸ್ವತ್ತನ್ನು ಆ ಕೂಡಲೇ ಮರು ಮಾರಾಟ ಮಾಡತಕ್ಕದ್ದು:

ಪರಂತು, ಡಿಕ್ರಿದಾರನೇ ಸದರಿ ಸ್ವತ್ತಿನ ಖರೀದಿದಾರನಾಗಿದ್ದಲ್ಲಿ ಮತ್ತು (ಎಲ್) ಖಂಡದ ಮೇರೆಗೆ ಖರೀದಿ ಬೆಲೆಯನ್ನು ವಜಾವಟ್ಟು ಮಾಡಿಕೊಳ್ಳಲು ಹಕ್ಕುಳ್ಳವನಾಗಿದ್ದಲ್ಲಿ ಮಾರಾಟ ಅಧಿಕಾರಿಯು ಈ ನಿಯಮದಲ್ಲಿ ಅಗತ್ಯಪಡಿಸಿದ್ದನ್ನು ಬಿಟ್ಟುಬಿಡಬಹುದು.

ಐ) ಖರೀದಿಯ ಉಳಿದ ಹಣವನ್ನು ಮತ್ತು ಮಾರಾಟ ಪ್ರಮಾಣ ಪತ್ರದ ಸಲುವಾಗಿರುವ ಸಾಮಾನ್ಯ ಸ್ಟ್ಯಾಂಪಿಗಾಗಿ ಬೇಕಾದ ಮೊಬಲಗನ್ನು ಮಾರಾಟ ದಿನಾಂಕದಿಂದ ನಲವತ್ತೈದು ದಿವಸಗಳೊಳಗೆ ಪಾವತಿ ಮಾಡತಕ್ಕದ್ದು.

ಪರಂತು, ಈ ಖಂಡದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಲೆಕ್ಕ ಹಾಕುವಲ್ಲಿ ಖರೀದಿದಾರನು (ಎಲ್) ಖಂಡದ ಅಡಿಯಲ್ಲಿ ಅವನಿಗೆ ಹಕ್ಕಿರಬಹುದಾದ ಯಾವುದೇ ವಜಾವಟ್ಟು ಮಾಡುವ ಅವಕಾಶವನ್ನು ಹೊಂದಿರತಕ್ಕದ್ದು.

ಜೆ) (ಐ) ಖಂಡದಲ್ಲಿ ನಮೂದಿಸಲಾದ ಅವಧಿಯೊಳಗೆ ಉಳಿದ ಖರೀದಿ ಹಣವನ್ನು ಪಾವತಿ ಮಾಡುವುದಕ್ಕೆ ತಪ್ಪಿದಲ್ಲಿ, ವಸೂಲಿ ಅಧಿಕಾರಿಗೆ ಸೂಕ್ತವೆಂದು ಕಂಡುಬಂದ ಮಾರಾಟ ವೆಚ್ಚಗಳನ್ನು ಭರಿಸಿದ ನಂತರ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಸಂದಾಯ ಮಾಡಲು ತಪ್ಪಿದ ಖರೀದಿದಾರನು ಸದರಿ ಸ್ವತ್ತಿನ ಬಗ್ಗೆ ಅಥವಾ ಅದನ್ನು ಆ ನಂತರ ಮಾರಾಟ ಮಾಡಿದ ಮೇಲೆ ಬರುವ ಮೊಬಲಗಿನ ಯಾವುದೇ ಭಾಗಕ್ಕೆ ಇರುವ ತನ್ನ ಎಲ್ಲಾ ಕ್ಲೇಮುಗಳನ್ನು ಕಳೆದುಕೊಳ್ಳತಕ್ಕದ್ದು.

ಕೆ) (ಎಚ್) ಮತ್ತು (ಐ) ಖಂಡಗಳಲ್ಲಿ ನಮೂದಿಸಲಾದ ಮೊಬಲಗನ್ನು ಸಂದಾಯ ಮಾಡಲು ಅನುಮತಿ ಕೊಡಲಾದ ಅವಧಿಯೊಳಗೆ ಸಂದಾಯ ಮಾಡಲು ತಪ್ಪಿದ ಕಾರಣದಿಂದಾಗಿ ಪಡೆಯಬೇಕಾದ ಸ್ಥಿರ ಸ್ವತ್ತಿನ ಪ್ರತಿಯೊಂದು ಮರು ಮಾರಾಟವನ್ನು ಹೊಸದೊಂದು ಘೋಷಣೆಯನ್ನು ಹೊರಡಿಸಿದ ನಂತರ ಮತ್ತು ಅದರಲ್ಲಿ ಮಾರಾಟಕ್ಕಾಗಿ ನಿಯಮಿಸಲಾದ ರೀತಿಯಲ್ಲಿ ಮತ್ತು ಅವಧಿಯೊಳಗೆ ಮಾಡತಕ್ಕದ್ದು.

ಎಲ್) ಡಿಕ್ರಿದಾರನೇ ಸ್ವತ್ತನ್ನು ಖರೀದಿಸಿದಾಗ ಖರೀದಿ ಹಣ ಮತ್ತು ಡಿಕ್ರಿಯ ಸಂಬಂಧದಲ್ಲಿ ಬಾಕಿ ಇರುವ ಮೊಬಗಲು, ಇವುಗಳನ್ನು, ಒಂದಕ್ಕೊಂದು ವಜಾವಟ್ಟು ಮಾಡತಕ್ಕದ್ದು ಮತ್ತು ಮಾರಾಟ ಅಧಿಕಾರಿಯು ತದನುಸಾರವಾಗಿ, ಡಿಕ್ರಿಯ ಪಾಲನೆ ಸಂಪೂರ್ಣವಾಗಿ ಆಗಿದೆಯೋ ಅಥವಾ ಭಾಗಶಃ ಆಗಿರುವುದೇ ಎಂಬುದನ್ನು ನಮೂದಿಸತಕ್ಕದ್ದು.

(3) ತೀರ್ಪು ಋಣಿಯ ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯು ಅಥವಾ ಮಾರಾಟ ಮಾಡಲು ಉದ್ದೇಶಿಸಲಾದ ಸ್ವತ್ತಿನ ಯಾವುದೇ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಮಾರಾಟಕ್ಕೆ ಮುಂಚೆ ಬಾಕಿಯಿರುವ ಒಟ್ಟು ಮೊಬಲಗನ್ನು ಬಡ್ಡಿ, ಭತ್ಯೆ

ಮತ್ತು ಜಫ್ತಿಯ ವೆಚ್ಚಗಳು ಒಳಗೊಂಡಂತೆ ಸ್ವತ್ತನ್ನು ಮಾರಾಟ ಮಾಡುವುದಕ್ಕೆ ವಹಿಸಿದ ವೆಚ್ಚಗಳ ಸಹಿತ ಸಂದಾಯ ಮಾಡಿದರೆ, ಆ ಸ್ವತ್ತನ್ನು ಜಫ್ತಿ ಮಾಡಿರುವಲ್ಲಿ ಮಾರಾಟ ಅಧಿಕಾರಿಯು ಜಫ್ತಿ ಆದೇಶವನ್ನು ರದ್ದುಗೊಳಿಸಿ, ಆ ಕೂಡಲೇ ಸ್ವತ್ತನ್ನು ವಿಮೋಚನೆಗೊಳಿಸತಕ್ಕದ್ದು.

(4) (ಎ) ಸ್ವತ್ತನ್ನು ಮಾರಾಟ ಮಾಡಿದಾಗ, ಅಂಥ ಸ್ವತ್ತಿನ ಒಡೆತನವನ್ನು ಹೊಂದಿರುವ ಅಥವಾ ಅಂಥ ಮಾರಾಟಕ್ಕೆ ಮುಂಚೆ ಆರ್ಜಿಸಲಾದ ಸ್ವಾಮ್ಯದ ಬಲದಿಂದ ಅದರಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು, ಮಾರಾಟಕ್ಕೆ ಮುಂಚೆ ವಸೂಲಿ ಅಧಿಕಾರಿಯ ಬಳಿಯಲ್ಲಿ ಈ ಮುಂದಿನಂತೆ ಎಂದರೆ,–

(i) ಖರೀದಿದಾರನಿಗೆ ಸಂದಾಯ ಮಾಡುವುದಕ್ಕಾಗಿ ಬೆಲೆಯ ಶೇಕಡಾ 5ಕ್ಕೆ ಸಮನಾದ ಹಣವನ್ನು; ಮತ್ತು

(ii) ಡಿಕ್ರಿದಾರನಿಗೆ ಸಂದಾಯ ಮಾಡುವುದಕ್ಕಾಗಿ ಮಾರಾಟದ ಘೋಷಣೆಯಲ್ಲಿ ನಿರ್ದಿಷ್ಟಪಡಿಸಲಾದ ಬಾಕಿಗಳ ಮೊಬಗಲನ್ನು ಅಂದರೆ ಯಾವ ಮೊಬಲಗಿನ ವಸೂಲಿಯ ಸಲುವಾಗಿ ಮಾರಾಟಕ್ಕಾಗಿ ಆದೇಶ ಮಾಡಲಾಗಿದೆಯೋ ಆ ಮೊಬಲಗು ಮತ್ತು ಅದರ ಮೇಲಿನ ಬಡ್ಡಿ, ಜಫ್ತಿಯ ವೆಚ್ಚಗಳಿದ್ದಲ್ಲಿ ಅವುಗಳನ್ನು ಮತ್ತು ಮಾರಾಟದ ಮತ್ತು ಇತರ ವೆಚ್ಚಗಳೂ ಒಳಗೊಂಡಂತೆ, ಇವುಗಳಲ್ಲಿ ಘೋಷಣೆಯ ದಿನಾಂಕದಿಂದ ಡಿಕ್ರಿದಾರನು ಸ್ವೀಕರಿಸಿದ ಮೊಬಲಗನ್ನು ವಜಾ ಮಾಡಿಕೊಂಡು ಉಳಿದ ಹಣವನ್ನು

– ಠೇವಣಿ ಇಟ್ಟು ಮಾರಾಟವನ್ನು ರದ್ದು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಬಹುದು.

(ಬಿ) ಮಾರಾಟದ ದಿನಾಂಕದಿಂದ 30 ದಿವಸಗಳೊಳಗಾಗಿ ಅಂಥ ಠೇವಣಿ ಮತ್ತು ಅರ್ಜಿಯನ್ನು ಸಲ್ಲಿಸಿದಲ್ಲಿ ವಸೂಲಿ ಅಧಿಕಾರಿಯು, ಮಾರಾಟವನ್ನು ರದ್ದುಗೊಳಿಸುವ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಖರೀದಿದಾರನಿಗೆ ಸದರಿ ಖರೀದಿಯ ಹಣವನ್ನು, ಅದನ್ನು ಅರ್ಜಿದಾರನು ಠೇವಣಿ ಇಟ್ಟಿರುವಷ್ಟರ ಮಟ್ಟಿಗೆ, ಅರ್ಜಿದಾರನು ಇಟ್ಟಿದ್ದ ಠೇವಣಿಯ ಶೇಕಡಾ 5ರಷ್ಟು ಮೊತ್ತ ಸಹಿತ ಮರು ಸಂದಾಯ ಮಾಡತಕ್ಕದ್ದು:

ಪರಂತು, ಈ ಉಪನಿಯಮದ ಮೇರೆಗೆ ಒಬ್ಬನಿಗಿಂತ ಹೆಚ್ಚು ಜನರು ಠೇವಣಿ ಮತ್ತು ಅರ್ಜಿ ಸಲ್ಲಿಸಿದ್ದಲ್ಲಿ ವಸೂಲಿ ಅಧಿಕಾರಿಯು ಮೊದಲನೆಯ ಠೇವಣಿದಾರನು ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸತಕ್ಕದ್ದು.

(ಸಿ) ಯಾವೊಬ್ಬ ವ್ಯಕ್ತಿಯು (5)ನೆಯ ಉಪನಿಯಮದ ಮೇರೆಗೆ ಒಂದು ಸ್ಥಿರ ಸ್ವತ್ತಿನ ಮಾರಾಟವನ್ನು ರದ್ದುಗೊಳಿಸುವಂತೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಅವನು ಈ ಉಪನಿಯಮದ ಮೇರೆಗೆ ಅರ್ಜಿ ಸಲ್ಲಿಸಲು ಹಕ್ಕುಳ್ಳವನಾಗತಕ್ಕದ್ದಲ್ಲ.

(5) (ಎ) ಯಾವುದೇ ಸ್ಥಿರಸ್ವತ್ತಿನ ಮಾರಾಟದ ದಿನಾಂಕದಿಂದ 30 ದಿವಸಗಳ ಒಳಗಿನ ಯಾವುದೇ ಕಾಲಕ್ಕೆ ಡಿಕ್ರಿದಾರನು ಅಥವಾ ಆಸ್ತಿಗಳ ಪ್ರಮಾಣಾನುಸಾರ ಹಂಚಿಕೆಯಲ್ಲಿ ಷೇರಿಗೆ ಹಕ್ಕುಳ್ಳವನಾಗಿರುವ ಯಾವೊಬ್ಬ ವ್ಯಕ್ತಿಯು ಅಥವಾ ಮಾರಾಟದಿಂದ ಯಾರ ಹಿತಾಸಕ್ತಿಗಳಿಗೆ ಬಾಧಕವಾಗುವುದೋ ಅಂಥ ಯಾವೊಬ್ಬ ವ್ಯಕ್ತಿಯು ಸದರಿ ಮಾರಾಟದ ಬಗ್ಗೆ ಪ್ರಕಟಿಸುವಲ್ಲಿ ಅಥವಾ ಅದನ್ನು ನಡೆಸುವಲ್ಲಿ ಉಂಟಾದ ಗಣನೀಯ ಅಕ್ರಮ ಅಥವಾ ದೋಷ ಅಥವಾ ಮೋಸದ ಕಾರಣದಿಂದ ಅದನ್ನು ರದ್ದುಗೊಳಿಸಬೇಕೆಂದು ಕೋರಿ ವಸೂಲಿ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು:

ಪರಂತು, ಅರ್ಜಿದಾರನು ಅಂಥ ಅಕ್ರಮ, ದೋಷ ಅಥವಾ ಮೋಸದ ಕಾರಣದಿಂದ ಗಣನೀಯವಾದ ಹಾನಿಯನ್ನು ಅನುಭವಿಸಿರುವನೆಂದು ವಸೂಲಿ ಅಧಿಕಾರಿಗೆ ಮನದಟ್ಟಾದ ಹೊರತು, ಅಂಥ ಯಾವುದೇ ಮಾರಾಟವನ್ನು ರದ್ದುಗೊಳಿಸತಕ್ಕದ್ದಲ್ಲ.

(ಬಿ) ಸದರಿ ಅರ್ಜಿಯನ್ನು ಪುರಸ್ಕರಿಸಿದಲ್ಲಿ, ವಸೂಲಿ ಅಧಿಕಾರಿಯು ಮಾರಾಟವನ್ನು ರದ್ದುಗೊಳಿಸತಕ್ಕದ್ದು ಮತ್ತು ಹೊಸದಾಗಿ ಮಾರಾಟ ಮಾಡಲು ಆದೇಶ ನೀಡಬಹುದು.

(6) (ಎ) ಮಾರಾಟದ ದಿನಾಂಕದಿಂದ ಮೂವತ್ತು ದಿನಗಳ ಮುಕ್ತಾಯ–ವಾಗುವುದರೊಳಗೆ (4)ನೆಯ ಉಪನಿಯಮ ಅಥವಾ (5)ನೆಯ ಉಪನಿಯಮದ ಅಡಿಯಲ್ಲಿ ಸದರಿ ಮಾರಾಟವನ್ನು ರದ್ದುಗೊಳಿಸಲು ಯಾವುದೇ ಅರ್ಜಿಯನ್ನು ಸಲ್ಲಿಸಿರದಿದ್ದಲ್ಲಿ ಅಥವಾ ಅಂಥ ಅರ್ಜಿಯನ್ನು ಸಲ್ಲಿಸಿದ್ದು ಅದನ್ನು ತಿರಸ್ಕರಿಸಿದ್ದಲ್ಲಿ 30 ದಿನಗಳು ಮುಕ್ತಾಯವಾದ ಕೂಡಲೇ ವಸೂಲಿ ಅಧಿಕಾರಿಯು ಸದರಿ ಮಾರಾಟವನ್ನು ಸ್ವೀಕರಿಸುವ ಒಂದು ಆದೇಶವನ್ನು ಮಾಡತಕ್ಕದ್ದು:

ಪರಂತು, ಅಂಥ ಯಾವುದೇ ಅರ್ಜಿಯನ್ನು ಸಲ್ಲಿಸಿರದಿದ್ದಲ್ಲಿ ಅಥವಾ ಸಲ್ಲಿಸಲಾದ ಮತ್ತು ತಿರಸ್ಕರಿಸಲಾದ ಯಾವುದೇ ಅರ್ಜಿಯಲ್ಲಿ ಆಪಾದಿಸಲಾದ ಕಾರಣಗಳ ಹೊರತಾಗಿ ಇತರ ಕಾರಣಗಳಿಗಾಗಿ ಮಾರಾಟವನ್ನು ತಳ್ಳಿಹಾಕತಕ್ಕದ್ದೆಂದು ಭಾವಿಸಲು ಕಾರಣಗಳಿದ್ದರೆ ಅವನು ತನ್ನ ಕಾರಣಗಳನ್ನು ದಾಖಲಿಸಿ ಮಾರಾಟವನ್ನು ತಳ್ಳಿಹಾಕಬಹುದು.

(ಬಿ) ಯಾವುದೇ ಸ್ಥಿರ ಸ್ವತ್ತಿನ ಮಾರಾಟವನ್ನು ಸ್ಥಿರೀಕರಿಸದಿದ್ದಲ್ಲಿ, ಅಥವಾ ತಳ್ಳಿಹಾಕಿದ್ದಲ್ಲಿ, ಸಂದರ್ಭಾನುಸಾರ ಠೇವಣಿ ಅಥವಾ ಖರೀದಿ ಹಣವನ್ನು ಖರೀದಿದಾರನಿಗೆ ವಾಪಸು ಮಾಡತಕ್ಕದ್ದು.

(7) ಈ ನಿಯಮದ ಮೇರೆಗೆ ಮಾರಾಟದ ಸ್ಥಿರೀಕರಣದ ನಂತರ, ಖರೀದಿದಾರನಿಗೆ, ವಸೂಲಿ ಅಧಿಕಾರಿಯು ಮುದ್ರೆಯನ್ನು ಹಾಕಿ ಮತ್ತು ಸಹಿ ಮಾಡಿದ ಒಂದು ಪ್ರಮಾಣ ಪತ್ರವನ್ನು ನಮೂನೆ–10ರಲ್ಲಿ ನೀಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು ಮಾರಾಟ ಮಾಡಲಾದ ಸ್ವತ್ತಿನ ವಿವರಗಳನ್ನು ಮತ್ತು ಖರೀದಿದಾರನ ಹೆಸರು ಮತ್ತು ವಿಳಾಸಗಳನ್ನು ಒಳಗೊಂಡಿರತಕ್ಕದ್ದು. ಅದು ಅಂಥ ಖರೀದಿದಾರನಿಗೆ ಮಾಡಲಾದ ಮಾರಾಟದ ಸಂಗತಿಯ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ತದನಂತರ ನಮೂನೆ–11ರಲ್ಲಿ ಪ್ರಕಟಣೆ ಹೊರಡಿಸತಕ್ಕದ್ದು.

**18. ಮಾರಾಟ ಮಾಡಲಾಗದ ಸ್ವತ್ತಿನ ವರ್ಗಾವಣೆ:–**

(1) 43ನೇ ಪ್ರಕರಣದಡಿ ಜಾರಿಗೊಳಿಸಲು ಉದ್ದೇಶಿಸಲಾದ ಯಾವುದೇ ಆದೇಶವನ್ನು ಜಾರಿಗೊಳಿಸುವಾಗ ಖರೀದಿದಾರರಿಲ್ಲದೆ ಯಾವುದೇ ಸ್ವತ್ತು ಮಾರಾಟವಾಗದಿದ್ದರೆ ಅಥವಾ 43ನೇ ಪ್ರಕರಣದಡಿ ಯಾವುದೇ ಸ್ವತ್ತು ಮಾರಾಟ ಮಾಡಿದರೆ ಅಂಥ ಸ್ವತ್ತು ಸುಸ್ತಿದಾರನ ಅಥವಾ ಈ ಸಂಬಂಧದಲ್ಲಿ ಇತರ ವ್ಯಕ್ತಿಯ ಅಥವಾ ಸದರಿ ಪ್ರಕರಣದ (ಎ) ಅಥವಾ (ಬಿ) ಖಂಡದ ಮೇರೆಗೆ ರಿಜಿಸ್ಟ್ರಾರನು ಅಥವಾ ಅವನು ಅಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿಯು ಪ್ರಮಾಣ ಪತ್ರವನ್ನು ನೀಡಿದ ನಂತರ ಸುಸ್ತಿದಾರನು ಸೃಜಿಸಿದ ಹಕ್ಕಿನಡಿ ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿದ್ದರೆ ಜಾರಿ ಮಾಡುವ ಅಧಿಕಾರಿಯು ಸಾಧ್ಯವಾದಷ್ಟು ಬೇಗ ಸದರಿ ಸಂಗತಿಯನ್ನು ಸಂದರ್ಭಾನುಸಾರ ನ್ಯಾಯಾಲಯಕ್ಕೆ ಅಥವಾ ಜಿಲ್ಲಾಧಿಕಾರಿಗೆ ಅಥವಾ ರಿಜಿಸ್ಟ್ರಾರರಿಗೆ ಮತ್ತು ಸದರಿ ಆದೇಶವನ್ನು ಜಾರಿ ಮಾಡಬೇಕೆಂದು ಮನವಿ ಮಾಡಿಕೊಂಡಿರುವ ಸಹಕಾರಿಗೆ ವರದಿ ಮಾಡತಕ್ಕದ್ದು.

(2) ಉಪನಿಯಮ (1)ರ ಪ್ರಕಾರ ವರದಿಯನ್ನು ಸ್ವೀಕರಿಸಿದ ಮೇಲೆ ಸದರಿ ಸಹಕಾರಿಯು ವರದಿಯು ತಲುಪಿದ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ಯಾವುದೇ ವಿಶಿಷ್ಟ ಸಂದರ್ಭದಲ್ಲಿ ಸೂಕ್ತ ಕಾರಣಗಳಿಗಾಗಿ ನ್ಯಾಯಾಲಯವಾಗಲೀ ಅಥವಾ ಜಿಲ್ಲಾಕಾರಿಯಾಗಲೀ ಅಥವಾ ರಿಜಿಸ್ಟ್ರಾರರಾಗಲಿ ಅವಕಾಶ ಕೊಡಬಹುದಾದಂತಹ ಇನ್ನೂ ಹೆಚ್ಚಿನ ಅವಧಿಯೊಳಗೆ ಸಂದರ್ಭಾನುಸಾರ ನ್ಯಾಯಾಲಯಕ್ಕೆ ಅಥವಾ ಜಿಲ್ಲಾಧಿಕಾರಿಗೆ ಅಥವಾ ರಿಜಿಸ್ಟ್ರಾರರಿಗೆ ಅಂತಹ ಸ್ವತ್ತಿನ ಒಡೆತನವನ್ನು ತೆಗೆದುಕೊಳ್ಳಲು ತನ್ನ ಒಪ್ಪಿಗೆಯಿದೆಯೇ ಅಥವಾ ಇಲ್ಲವೆ ಎಂಬುದನ್ನು ಸೂಚಿಸಿ ಲಿಖಿತ ಅರ್ಜಿಯನ್ನು ಸಲ್ಲಿಸಬಹುದು.

(3) ಉಪನಿಯಮ (2)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಸುಸ್ತಿದಾರನಿಗೂ ಮತ್ತು ಹಕ್ಕು ದಾಖಲಾತಿಯಲ್ಲಿ ಹೆಸರಿರುವವರೂ ಸೇರಿದಂತೆ ಸದರಿ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಹೊಂದಿದ್ದಾರೆಂದು ತಿಳಿದಿರುವ ಎಲ್ಲಾ ವ್ಯಕ್ತಿಗಳಿಗೂ ಉದ್ದೇಶಿತ ಆಸ್ತಿ ವರ್ಗಾವಣೆ ಬಗ್ಗೆ ನೋಟೀಸುಗಳನ್ನು ಕೊಡತಕ್ಕದ್ದು.

(4) ಅಂತಹ ನೋಟೀಸನ್ನು ಸ್ವೀಕರಿಸಿದ ಮೇಲೆ ಸುಸ್ತಿದಾರನು ಅಥವಾ ಅಂಥ ಸ್ವತ್ತಿನ ಒಡೆತನ ಹೊಂದಿದ ಯಾವೊಬ್ಬ ವ್ಯಕ್ತಿಯು ಅಥವಾ 43ನೆಯ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ನೀಡಿದ ದಿನಾಂಕಕ್ಕೆ ಮೊದಲು, ಅಂಥ ಸ್ವತ್ತಿನಲ್ಲಿ ಆರ್ಜಿಸಿದ ಹಕ್ಕಿನಿಂದಾಗಿ ಹಿತಾಸಕ್ತಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು ಅಂತಹ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಸಹಕಾರಿಗೆ ಜಾರಿಗೊಳಿಸಬೇಕಾಗಿರುವ ಆದೇಶದಡಿ ಬಾಕಿಯಿರುವ ಮೊಬಲಗಿಗೆ ಸಮನಾದ ಮೊತ್ತವನ್ನು ಮತ್ತು ಅದರ ಮೇಲಿನ ಬಡ್ಡಿ ಮತ್ತು ಈ ಸಂಬಂಧದಲ್ಲಿ ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರನು ನಿರ್ಧರಿಸಬಹುದಾದ ಇತರ ಪ್ರಾಸಂಗಿಕ ವೆಚ್ಚಗಳ ಸಂದಾಯಕ್ಕಾಗಿ ಅಗತ್ಯವಾದ ಹೆಚ್ಚಿನ ಮೊಬಲಗನ್ನು, ಸಹಕಾರಿಗೆ ಸಂದಾಯ ಮಾಡುವ ಸಲುವಾಗಿ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾಧಿಕಾರಿಯವರಲ್ಲಿ ಅಥವಾ ರಿಜಿಸ್ಟ್ರಾರರಲ್ಲಿ ಠೇವಣಿ ಇಡಬಹುದು.

(5) ಸುಸ್ತಿದಾರನು ಅಥವಾ ಹಿತಾಸಕ್ತಿಯುಳ್ಳ ಯಾವೊಬ್ಬ ಅಥವಾ ಆ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು, (4)ನೆಯ ಉಪನಿಯಮದ ಮೇರೆಗೆ ಮೊಬಲಗನ್ನು ಠೇವಣಿ ಇಡಲು ತಪ್ಪಿದರೆ, ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರರು ನಮೂನೆ–12ರಲ್ಲಿನ ಪ್ರಮಾಣಪತ್ರದಲ್ಲಿ ತಿಳಿಸಿರುವ ಷರತ್ತುಗಳ ಮೇರೆಗೆ ಸ್ವತ್ತನ್ನು ಸಹಕಾರಿಗೆ ವರ್ಗಾಯಿಸಬೇಕೆಂದು ಆದೇಶ ನೀಡತಕ್ಕದ್ದು.

(6) (5)ನೇ ಉಪನಿಯಮದ ಅನುಸಾರ ನೀಡಲಾದ ಪ್ರಮಾಣಪತ್ರದಲ್ಲಿ ಸಹಕಾರಿಗೆ ಸುಸ್ತಿದಾರನಿಂದ ಬರಬೇಕಾದ ಸಂಪೂರ್ಣ ಅಥವಾ ಭಾಗಶಃ ಮೊಬಲಗಿನ ತೀರಿಕೆಗಾಗಿ ಸ್ವತ್ತನ್ನು ಸಹಕಾರಿಗೆ ವರ್ಗಾಯಿಸಲಾಗಿದೆಯೇ ಎಂಬುದನ್ನು ತಿಳಿಸತಕ್ಕದ್ದು.

(7) ಸುಸ್ತಿದಾರನಿಂದ ಸಹಕಾರಿಗೆ ಬರಬೇಕಾದ ಮೊಬಲಗಿನ ಭಾಗಶಃ ತೀರಿಕೆಗಾಗಿ ಆ ಸ್ವತ್ತನ್ನು ಸಹಕಾರಿಗೆ ವರ್ಗಾಯಿಸಿದರೆ, ರಿಜಿಸ್ಟ್ರಾರನು ರುಜು ಮಾಡಿದ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೇಲೆ ಸಹಕಾರಿಗೆ ಬರಬೇಕಾದ ಉಳಿದ ಮೊಬಲಗನ್ನು ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರರು 43ನೆಯ ಪ್ರಕರಣದಲ್ಲಿ ಸೂಚಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

(8) (5)ನೇ ಉಪನಿಯಮದ ಅಡಿಯಲ್ಲಿ ಸ್ವತ್ತಿನ ವರ್ಗಾವಣೆಯನ್ನು ಈ ಮುಂದಿನಂತೆ ಮಾಡತಕ್ಕದ್ದು:

(ಎ) ಸ್ವತ್ತು, ಬೆಳೆಯುತ್ತಿರುವ ಅಥವಾ ಬೆಳೆದಿರುವ ಪೈರಾಗಿದ್ದರೆ, ಅದನ್ನು ಕಟಾವು ಮಾಡುವುದಕ್ಕೆ ಮತ್ತು ಶೇಖರಿಸುವುದಕ್ಕೆ ಮೊದಲು ಸಹಕಾರಿಗೆ ಒಪ್ಪಿಸಬಹುದು ಮತ್ತು ಸಹಕಾರಿಯು ಆ ಜಮೀನಿನಲ್ಲಿ ಪ್ರವೇಶಿಸುವುದಕ್ಕೆ ಮತ್ತು ಅದನ್ನು ನೋಡಿಕೊಳ್ಳುವ ಮತ್ತು ಬೆಳೆಯನ್ನು ಕಟಾವು ಮಾಡುವ ಹಾಗೂ ಶೇಖರಿಸುವ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು;

(ಬಿ) ಆ ಸ್ವತ್ತು ಸುಸ್ತಿದಾರನ ಅಥವಾ ಆತನ ಪರವಾಗಿ ಇತರ ವ್ಯಕ್ತಿಯ ಅಥವಾ 43ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ನೀಡಿದ ನಂತರ ಸುಸ್ತಿದಾರನು ಸೃಜಿಸಿದ ಹಕ್ಕಿನ ಅಡಿಯಲ್ಲಿ ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿದ್ದರೆ, ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರರು, ಸಹಕಾರಿಗೆ ಅಥವಾ ಸಹಕಾರಿಯ ಪರವಾಗಿ ಸ್ವಾಧಿನತೆಯನ್ನು ಪಡೆಯಲು ಸಹಕಾರಿಯು ನೇಮಕ ಮಾಡಿದ ಯಾವೊಬ್ಬ ವ್ಯಕ್ತಿಗೆ ಸ್ವತ್ತಿನ ವಾಸ್ತವಿಕ ಸ್ವಾಧೀನತೆಕೊಟ್ಟು ವಶಾವಣೆ ಮಾಡಲು ಆದೇಶಿಸತಕ್ಕದ್ದು ಮತ್ತು ಅವಶ್ಯವಾದರೆ, ಸ್ವತ್ತನ್ನು ಬಿಟ್ಟುಕೊಡಲು ಕಾನೂನುಬಾಹಿರವಾಗಿ ನಿರಾಕರಿಸುವ ಯಾವೊಬ್ಬ ವ್ಯಕ್ತಿಯನ್ನು ಹೊರಹಾಕಿ ವಶಾವಣೆ ಮಾಡಲು ಆದೇಶ ನೀಡತಕ್ಕದ್ದು.

(ಸಿ) ಸ್ವತ್ತು ಗೇಣಿದಾರನ ಅಥವಾ 43ನೆಯ ಪ್ರಕರಣದ ಮೇರೆಗೆ ಪ್ರಮಾಣ–ಪತ್ರವನ್ನು ನೀಡುವ ದಿನಾಂಕಕ್ಕೆ ಮೊದಲು ಆರ್ಜಿಸಿದ ಹಕ್ಕಿನ ಮೂಲಕ ಸ್ವತ್ತಿನ ಸ್ವಾಧೀನತೆ ಹೊಂದಲು ಹಕ್ಕುಳ್ಳ ಇತರ ವ್ಯಕ್ತಿಯ ಸ್ವಾಧೀನತೆಯಲ್ಲಿದ್ದರೆ, ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರರು ಸುಸ್ತಿದಾರನ ಹಿತಾಸಕ್ತಿಯನ್ನು ಸಹಕಾರಿಗೆ ವರ್ಗಾವಣೆ ಮಾಡಲಾಗಿದೆಯೆಂದು ಸ್ವತ್ತಿನ ಪ್ರಮುಖ ಸ್ಥಳದಲ್ಲಿ ಸ್ವತ್ತಿನ ವರ್ಗಾವಣೆ ಪ್ರಮಾಣ ಪತ್ರದ ಒಂದುಪ್ರತಿಯನ್ನು ಅಂಟಿಸುವುದರ ಮೂಲಕ ಮತ್ತು ಡಂಗುರ ಸಾರುವ ಮೂಲಕ ಅಥವಾ ಅನುಕೂಲಕರವಾದ ಸ್ಥಳದಲ್ಲಿ ರೂಢಿಯಲ್ಲಿರುವ ವಿಧಾನದ ಮೂಲಕ ಅಂಥ ವ್ಯಕ್ತಿಗೆ ತಿಳಿಯುವಂತೆ ಹಿತಾಸಕ್ತಿಯನ್ನು ಉದ್ಘೋಷಿಸಿ ಸದರಿ ಸ್ವತ್ತನ್ನು ಸಹಕಾರಿಗೆ ಒಪ್ಪಿಸಿಕೊಡುವಂತೆ ಆದೇಶಿಸತಕ್ಕದ್ದು.

(9) ಮಾರಾಟಕ್ಕೆ ಪ್ರಾಸಂಗಿಕವಾದ ವೆಚ್ಚಗಳನ್ನು ಸಹಕಾರಿಯ ಕೊಡುವಂತೆ ಅಗತ್ಯಪಡಿಸತಕ್ಕದ್ದು.

(10) ಜಮೀನಿನಲ್ಲಿ ಬೆಳೆಯುತ್ತಿರುವ ಅಥವಾ ಬೆಳೆದಿರುವ ಪೈರನ್ನು ಕೊಯ್ಯುವುಕ್ಕೆ

ಮತ್ತು ಶೇಖರಿಸುವುದಕ್ಕೆ ಮೊದಲು ಜಮೀನನ್ನು ಉಪನಿಯಮ (8)ರ ಖಂಡ (ಎ) ಪ್ರಕಾರ ಸಹಕಾರಿಗೆ ವರ್ಗಾಯಿಸಿದಲ್ಲಿ ಸಹಕಾರಿಯು ಆ ಜಮೀನಿಗೆ ಸಂಬಂಧಪಟ್ಟ, ಪ್ರಸಕ್ತ ಸಾಲಿನ ಭೂ ಕಂದಾಯವನ್ನು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

(11) ಉಪನಿಯಮ (8)ರ ಖಂಡ (ಬಿ) ಅಥವಾ (ಸಿ) ಅಡಿಯಲ್ಲಿ ಸ್ವತ್ತಿನ ಯಾವುದೇ ವರ್ಗಾವಣೆಯನ್ನು, ಸಹಕಾರಿಯು ನಗರಪಾಲಿಕೆ, ಪೌರಸಭೆಗೆ ಅಥವಾ ಪಟ್ಟಣ ಪಂಚಾಯಿತಿಗೆ ಮತ್ತು ಅದು ನಗರಪಾಲಿಕೆ, ಪೌರಸಭೆ ಅಥವಾ ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಒಳಪಡದ ಪ್ರದೇಶವಾಗಿದ್ದಲ್ಲಿ ಗ್ರಾಮ ಲೆಕ್ಕಗನಿಗೆ ಮಾಹಿತಿಗಾಗಿ ಮತ್ತು ಹಕ್ಕುಗಳ ದಾಖಲಾತಿ ಪುಸ್ತಕದಲ್ಲಿ ದಾಖಲಿಸುವುದಕ್ಕಾಗಿ ಕೂಡಲೇ ತಿಳಿಸತಕ್ಕದ್ದು.

(12) ಉಪನಿಯಮ (5)ರಂತೆ ಯಾವ ಸಹಕಾರಿಗೆ ಸ್ವತ್ತನ್ನು ವರ್ಗಾಯಿಸಲಾಗಿದೆಯೋ ಆ ಸಹಕಾರಿಯು, ಪ್ರತಿಯೊಬ್ಬ ಸುಸ್ತಿದಾರನಿಗೆ ಪ್ರತ್ಯೇಕ ಲೆಕ್ಕವಿಟ್ಟು ಆ ಸಂಬಂಧದಲ್ಲಿ ತಾನು ವಹಿಸಿದ ವೆಚ್ಚಗಳು ಬಾಹ್ಯ ಋಣಭಾರಗಳು, ಭೂ ಕಂದಾಯ ಮತ್ತು ಆಸ್ತಿಯ ಮೇಲಿನ ಇತರ ಬಾಕಿಗಳಿಗಾಗಿನ ಸಂದಾಯವು ಸೇರಿದಂತೆ ಎಲ್ಲಾ ವೆಚ್ಚಗಳನ್ನು ಮತ್ತು ಸದರಿ ಸ್ವತ್ತಿನಿಂದ ಪ್ರಾಪ್ತವಾದ ಎಲ್ಲಾ ಆದಾಯಗಳ ಲೆಕ್ಕವನ್ನು ವಿವರವಾಗಿ ಇಟ್ಟುಕೊಂಡು ಬರತಕ್ಕದ್ದು.

(13) ಯಾವ ಸಹಕಾರಿಗೆ (5)ನೆಯ ಉಪನಿಯಮದ ಮೇರೆಗೆ ಸ್ವತ್ತನ್ನು ವರ್ಗಾಯಿಸಲಾಗಿದೆಯೋ ಆ ಸಹಕಾರಿಯು, ಸಾಧ್ಯವಾದಷ್ಟು ಬೇಗ ಸಹಕಾರಿಗೆ ಹಾಗೂ ಸುಸ್ತಿದಾರನಿಗೆ ಹೆಚ್ಚು ಅನುಕೂಲವಾಗುವಂತೆ ಸ್ವತ್ತನ್ನು ಮಾರಾಟ ಮಾಡಲು ಸಾಧ್ಯವಾದಷ್ಟು ಪ್ರಯತ್ನವನ್ನು ಮಾಡತಕ್ಕದ್ದು ಮತ್ತು ಸ್ವತ್ತನ್ನು ಮೂಲತಃ ಹೊಂದಿದ್ದ ಸುಸ್ತಿದಾರನಿಗೆ ಯಾವಾಗಲೂ ಕೊಳ್ಳಲು ಮೊದಲನೆಯ ಅವಕಾಶವನ್ನು ಕೊಡತಕ್ಕದ್ದು. ಸ್ವತ್ತಿನ ಮಾರಾಟವು ರಿಜಿಸ್ಟ್ರಾರರು ಸ್ಥಿರೀಕರಿಸುವುದಕ್ಕೊಳಪಟ್ಟಿರತಕ್ಕದ್ದು. ಮಾರಾಟದಿಂದ ಬಂದ ಉತ್ಪನ್ನವನ್ನು ಮಾರಾಟ ವೆಚ್ಚವನ್ನು ಮತ್ತು ಆ ಸಹಕಾರಿಯು ವಹಿಸಿದ ಹಾಗೂ (9)ನೆಯ ಮತ್ತು (12)ನೆಯ ಉಪನಿಯಮಗಳಲ್ಲಿ ಉಲ್ಲೇಖಿಸಿದ ಇತರ ವೆಚ್ಚಗಳನ್ನು ಭರಿಸುವುದಕ್ಕೆ ಮತ್ತು ಜಾರಿಯಲ್ಲಿರುವ ಆದೇಶದಡಿ ಸುಸ್ತಿದಾರನಿಂದ ಬರಬೇಕಾದ ಬಾಕಿ ಮೊಬಲಗನ್ನು ಪಾವತಿ ಮಾಡುವುದಕ್ಕೆ ವಿನಿಯೋಗಿಸತಕ್ಕದ್ದು ಮತ್ತು ಮೊಬಲಗು ಏನಾದರೂ ಮಿಕ್ಕಿ ಉಳಿದಿದ್ದರೆ ಅದನ್ನು ಸುಸ್ತಿದಾರನಿಗೆ ಸಂದಾಯ ಮಾಡತಕ್ಕದ್ದು.

(14) ಸ್ವತ್ತು ಮಾರಾಟವಾಗುವವರೆಗೆ, ಯಾವ ಸಹಕಾರಿಗೆ ಸ್ವತ್ತನ್ನು (5)ನೆಯ ಉಪನಿಯಮದ ಅಡಿಯಲ್ಲಿ ವರ್ಗಾಯಿಸಲಾಗಿದೆಯೋ ಆ ಸಹಕಾರಿಯು, ಸ್ವತ್ತನ್ನು ಗೇಣಿಗೆ ಕೊಟ್ಟು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ವಿನಿಯೋಗಿಸಿ ಸದರಿ ಸ್ವತ್ತಿನಿಂದ ಸಾಧ್ಯವಾದಷ್ಟು ಹೆಚ್ಚಿನ ವರಮಾನವನ್ನು

ಪಡೆಯಲು ಹೆಚ್ಚು ಪ್ರಯತ್ನವನ್ನು ಮಾಡತಕ್ಕದ್ದು.

(15) ಯಾವ ಸಹಕಾರಿಗೆ (5)ನೆಯ ಉಪನಿಯಮದ ಅಡಿಯಲ್ಲಿ ಸ್ವತ್ತನ್ನು ವರ್ಗಾಯಿಸಲಾಗಿದೆಯೋ ಆ ಸಹಕಾರಿಯು, ಜಾರಿಯಲ್ಲಿರುವ ಆದೇಶದ ಅಡಿಯಲ್ಲಿ ಬರಬೇಕಾದ ಎಲ್ಲಾ ಬಾಕಿಯನ್ನು ಸದರಿ ಸ್ವತ್ತಿನ ನಿರ್ವಹಣೆಯಿಂದ ಬಂದ ಉತ್ಪನ್ನದಿಂದ ಪಡೆದಾಗ, ಸ್ವತ್ತು ಮಾರಾಟವಾಗದಿದ್ದರೆ, ಅದನ್ನು ಪುನಃ ಸುಸ್ತಿದಾರನ ವಶಕ್ಕೆ ಕೊಡತಕ್ಕದ್ದು.

**19. ಡಿಕ್ರಿದಾರ ಅಥವಾ ಖರೀದಿದಾರರನು ಆಸ್ತಿಯ ಒಡೆತನದ ಸ್ವಾಧೀನ ಪಡೆಯಲು ಪ್ರತಿರೋಧ:–**

(1) ಯಾವುದೇ ಡಿಕ್ರಿಯನ್ನು ಜಾರಿಗೊಳಿಸುವಲ್ಲಿ ಮಾರಾಟ ಮಾಡಲಾದ ಸ್ಥಿರಸ್ವತ್ತು, ತೀರ್ಪುಋಣಿಯ ಅಥವಾ ಆತನ ಪರವಾಗಿ ಇತರ ವ್ಯಕ್ತಿಯ ಅಥವಾ 43ನೇ ಪ್ರಕರಣದ ಮೇರೆಗೆ ಪ್ರಮಾಣ ಪತ್ರವನ್ನು ನೀಡಿದನಂತರ ತೀರ್ಪುಋಣಿಯು ಸೃಜಿಸಿದ ಹಕ್ಕಿನ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಯ ಸ್ವಾನತೆಯಲ್ಲಿದ್ದರೆ, ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟಾರರು ಖರೀದಿದಾರನಿಗೆ, ಆ ಸ್ವತ್ತಿನ ವಾಸ್ತವಿಕ ಒಡೆತನವನ್ನು ಒಪ್ಪಿಸಿಕೊಡತಕ್ಕದ್ದು ಮತ್ತು ಅವಶ್ಯವಾದರೆ ಸ್ವತ್ತನ್ನು ಬಿಟ್ಟುಕೊಡಲು ಕಾನೂನುಬಾಹಿರವಾಗಿ ನಿರಾಕರಿಸುವ ಯಾವೊಬ್ಬ ವ್ಯಕ್ತಿಯನ್ನು ಹೊರಹಾಕಿ ಸ್ವಾಧೀನತೆ ವಹಿಸಿಕೊಡುವಂತೆ ಆದೇಶಿಸತಕ್ಕದ್ದು.

(2) ಉಪನಿಯಮ (1)ರಡಿ ಆದೇಶವನ್ನು ನೀಡಿದ ನಂತರವೂ ಸ್ವತ್ತಿನ ಖರೀದಿದಾರನು ವಾಸ್ತವಿಕ ಒಡೆತನದ ಸ್ವಾಧೀನವನ್ನು ಪಡೆದುಕೊಳ್ಳುವುದಕ್ಕೆ ಯಾವೊಬ್ಬ ವ್ಯಕ್ತಿಯು ಪ್ರತಿರೋಧಿಸಿದರೆ ಅಥವಾ ಅಡಚಣೆ ಉಂಟು ಮಾಡಿದರೆ ಆತನು ಸಂದರ್ಭಾನುಸಾರ ನ್ಯಾಯಾಲಯಕ್ಕೆ ಅಥವಾ ಜಿಲ್ಲಾಧಿಕಾರಿಗೆ ಅಥವಾ ರಿಜಿಸ್ಟ್ರಾರರಿಗೆ ಅಂಥ ಪ್ರತಿರೋಧ ಅಥವಾ ಅಡಚಣೆಯ ಬಗ್ಗೆ ದೂರು ನೀಡುವ ಅರ್ಜಿಯೊಂದನ್ನು ಸಲ್ಲಿಸಬಹುದು.

(3) ಉಪನಿಯಮ (2)ರಡಿ ಯಾವುದೇ ಅರ್ಜಿಯನ್ನು ಸಲ್ಲಿಸಿದಾಗ, ಸಂದರ್ಭಾನುಸಾರ ನ್ಯಾಯಾಲಯ ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರನು, ಸದರಿ ದೂರಿನ ಬಗ್ಗೆ ತನಿಖೆ ಮಾಡತಕ್ಕದ್ದು ಮತ್ತು ಯಾವ ವ್ಯಕ್ತಿಯ ವಿರುದ್ಧ ಅರ್ಜಿಮಾಡಲಾಗಿದೆಯೋ ಆ ವ್ಯಕ್ತಿಯು ಹಾಜರಾಗಿ ಉತ್ತರಿಸಬೇಕೆಂದು ಸಮನ್ ನೀಡತಕ್ಕದ್ದು.

(4) ಅಂಥ ತನಿಖೆಯನ್ನು ನಡೆಸಿದ ನಂತರ, ಸಂದರ್ಭಾನುಸಾರ ನ್ಯಾಯಾಲಯವು ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರನು ತೀರ್ಪುಋಣಿಯು ಅಥವಾ ಅವನ ಪ್ರಚೋದನೆಯಂತೆ ಅಥವಾ ಅವನ ಪರವಾಗಿ ಕೆಲಸ ಮಾಡುವ ಬೇರೆ ಯಾವೊಬ್ಬ ವ್ಯಕ್ತಿಯು ಅಥವಾ ಜಾರಿ ಕ್ರಮವು ಇನ್ನೂ ಬಾಕಿ ಇರುವಾಗ ಸ್ವತ್ತಿನ ವರ್ಗಾವಣೆ ಪಡೆದುಕೊಂಡಿರುವ ವ್ಯಕ್ತಿಯು, ಯಾವುದೇ ನ್ಯಾಯಯುತ

ಕಾರಣಗಳಿಲ್ಲದೆ ಪ್ರತಿರೋಧವನ್ನು ಅಥವಾ ಅಡಚಣೆಯನ್ನು ಉಂಟು ಮಾಡಿದ್ದಾನೆ ಎಂಬುದು ಖಾತರಿಯಾದರೆ ಅದು ಅಥವಾ ಆತನು ಅರ್ಜಿದಾರನಿಗೆ ಸ್ವತ್ತಿನ ವಾಸ್ತವಿಕ ಒಡೆತನವನ್ನು ಒಪ್ಪಿಸಿಕೊಡುವಂತೆ ನಿರ್ದೇಶಿಸತಕ್ಕದ್ದು. ಅರ್ಜಿದಾರನು ಆಸ್ತಿಯ ಸ್ವಾಧೀನವನ್ನು ಪಡೆಯುವುದಕ್ಕೆ ಅವರು ಮತ್ತೆ ಪ್ರತಿರೋಧ ಅಥವಾ ಅಡಚಣೆ ಉಂಟು ಮಾಡಿದಲ್ಲಿ, ಸಂದರ್ಭಾನುಸಾರ ನ್ಯಾಯಾಲಯವು ಅಥವಾ ಜಿಲ್ಲಾಧಿಕಾರಿ ಅಥವಾ ರಿಜಿಸ್ಟ್ರಾರನು ತೀರ್ಪುಋಣಿ ಅಥವಾ ಆತನ ಪ್ರಚೋದನೆಯಂತೆ ಅಥವಾ ಆತನ ಪರವಾಗಿ ಕೆಲಸ ಮಾಡುವ ಯಾವೊಬ್ಬ ವ್ಯಕ್ತಿಯನ್ನು 30 ದಿನಗಳವರೆಗೆ ಸಿವಿಲ್ ಜೈಲಿನಲ್ಲಿ ಬಂಧಿಸಿಡಲು ಆದೇಶಿಸಬಹುದು.

**20. ಖಾಸಗಿ ಪರಭಾರೆ, ಇತ್ಯಾದಿಗಳ ಮೇಲೆ ಜಫ್ತಿಯ ಪರಿಣಾಮ :–** ಈ ನಿಯಮಗಳ ಮೇರೆಗೆ ಯಾವುದೇ ಜಫ್ತಿಯನ್ನು ಮಾಡಿದಾಗ, ಜಫ್ತಿ ಮಾಡಿದ ಸ್ವತ್ತಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ವರ್ಗಾವಣೆ ಅಥವಾ ವಹಿಸಿಕೊಡುವಿಕೆಯು ಮತ್ತು ಅಂಥ ಜಫ್ತಿಗೆ ವಿರುದ್ಧವಾಗಿ ತೀರ್ಪುಋಣಿಗೆ ನೀಡಲಾದ ಯಾವುದೇ ಋಣದ, ಲಾಭಾಂಶದ ಅಥವಾ ಇತರ ಹಣದ ಯಾವುದೇ ಸಂದಾಯವು ಸದರಿ ಜಫ್ತಿಯ ಮೇರೆಗೆ ಜಾರಿಗೊಳಿಸತಕ್ಕ ಕ್ಲೇಮುಗಳ ಸಂಬಂಧದಲ್ಲಿ ಅಸಿಂಧು ಆಗಿರತಕ್ಕದ್ದು.

ವಿವರಣೆ: ಈ ಉಪನಿಯಮದ ಉದ್ದೇಶಕ್ಕಾಗಿ ಯಾವುದೇ ಜಫ್ತಿಯ ಮೇರೆಗೆ ಜಾರಿಗೊಳಿಸತಕ್ಕ ಕ್ಲೇಮುಗಳಲ್ಲಿ 25ನೇ ನಿಯಮದ ಮೇರೆಗಿನ ಸ್ವತ್ತುಗಳ ದಾಮಾಷಾ ಹಂಚಿಕೆಯ ಸಲುವಾಗಿರುವ ಕ್ಲೇಮುಗಳು ಒಳಗೊಳ್ಳುತ್ತವೆ.

**21. ಭತ್ಯೆ / ವೆಚ್ಚಗಳು ಮತ್ತು ಹಣದ ಸಂದಾಯಗಳಿಗಾಗಿ ರಸೀದಿಗಳು :–**

(1) ಈ ನಿಯಮಗಳ ಮೇರೆಗೆ ನೋಟೀಸುಗಳು ಅಥವಾ ಇತರ ಆದೇಶಿಕೆಗಳನ್ನು ಜಾರಿಗೊಳಿಸಲು ನೇಮಕ ಮಾಡಲಾದ ವ್ಯಕ್ತಿಗಳು, ಕಾಲಕಾಲಕ್ಕೆ ವಸೂಲಿ ಅಧಿಕಾರಿಯು ನಿಗದಿಪಡಿಸಬಹುದಾದಂಥ ದರಗಳಲ್ಲಿ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

(2) ಈ ನಿಯಮದ ಮೇರೆಗೆ ಚರ ಸ್ವತ್ತಿನ ಜಫ್ತಿ ಮತ್ತು ಮಾರಾಟದ ಸಂಬಂಧದಲ್ಲಿ ಅಥವಾ ಸ್ಥಿರಸ್ವತ್ತಿನ ಜಫ್ತಿ ಸಹಿತ ಅಥವಾ ಜಫ್ತಿ ರಹಿತ ಮಾರಾಟದ ಸಂಬಂಧದಲ್ಲಿ ವಹಿಸಿದ ವೆಚ್ಚಗಳು, 13ನೇ ನಿಯಮದ (1)ನೆಯ ಉಪನಿಯಮದ ಮೇರೆಗೆ ಡಿಕ್ರಿದಾರನು ಠೇವಣಿ ಇಟ್ಟ ವೆಚ್ಚದ ಮೊಬಲಗನ್ನು ಮೀರಿದ್ದಲ್ಲಿ, ಅಂಥ ಹೆಚ್ಚುವರಿ ವೆಚ್ಚವನ್ನು ಸಂದರ್ಭಾನುಸಾರ ಮಾರಾಟ ಮಾಡಲಾದ ಸ್ವತ್ತಿನ ಮಾರಾಟದಿಂದ ಪ್ರಾಪ್ತವಾದ ಹುಟ್ಟುವಳಿಯಿಂದ ಅಥವಾ ತೀರ್ಪು ಋಣಿಯು ಸಂದಾಯ ಮಾಡಿದ ಹಣಗಳಿಂದ ವಜಾ ಮಾಡಿಕೊಳ್ಳತಕ್ಕದ್ದು ಮತ್ತು ಉಳಿದ ಹಣವನ್ನು ಡಿಕ್ರಿದಾರನಿಗೆ ಕೊಡತಕ್ಕದ್ದು.

(3) ಈ ನಿಯಮಗಳ ಮೇರೆಗೆ ಬಾಕಿ ಇರುವ ಯಾವ ಹಣದ ವಸೂಲಿಯ ಬಗ್ಗೆ ಅರ್ಜಿ ಸಲ್ಲಿಸಲಾಗಿದೆಯೋ ಅಂಥ ಯಾವುದೇ ಹಣದ ಸಂಬಂಧದಲ್ಲಿ

ಮಾರಾಟ ಅಧಿಕಾರಿಗೆ ಅಥವಾ ವಸೂಲಿ ಅಧಿಕಾರಿಯು ಆ ಸಂಬಂಧದಲ್ಲಿ ಅಧಿಕೃತಗೊಳಿಸಿದ ಇತರ ಅಧಿಕಾರಿಗೆ ಸಂದಾಯ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಸಂದಾಯ ಮಾಡಿದ ಮೊಬಲಗಿನ ಸಲುವಾಗಿ ಅಂಥ ಅಧಿಕಾರಿಯು ಸಹಿ ಮಾಡಿದ ಒಂದು ರಸೀದಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. ಅಂಥ ರಸೀದಿಯು ಹಣ ಸಂದಾಯ ಮಾಡುವ ವ್ಯಕ್ತಿಯ ಹೆಸರು ಮತ್ತು ಯಾವ ವಿಷಯದ ಸಂಬಂಧದಲ್ಲಿ ಹಣ ಸಂದಾಯ ಮಾಡಲಾಗಿದೆ ಎಂಬ ವಿವರಗಳನ್ನು ಒಳಗೊಂಡಿರತಕ್ಕದ್ದು.

**22. ಜಪ್ತಿ ಮಾಡಲಾದ ಸ್ವತ್ತಿನ ಕ್ಲೇಮುಗಳ ತನಿಖೆ:**

(1) ಈ ನಿಯಮದ ಮೇರೆಗೆ ಜಪ್ತಿ ಮಾಡಲಾದ ಯಾವುದೇ ಸ್ವತ್ತು ಜಪ್ತಿಗೆ ಬದ್ಧವಾಗುವಂತಹದ್ದಲ್ಲ ಎಂಬ ಕಾರಣಕ್ಕಾಗಿ ಹಾಗೆ ಜಪ್ತಿ ಮಾಡಲಾದ ಸ್ವತ್ತಿನ ಬಗ್ಗೆ ಯಾವುದೇ ಕ್ಲೇಮನ್ನು ಅಥವಾ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿದಾಗ ಮಾರಾಟ ಅಧಿಕಾರಿಯು ಅಂಥ ಕ್ಲೇಮು ಅಥವಾ ಆಕ್ಷೇಪಣೆಯ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಕ್ಲೇಮನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಆದೇಶವೊಂದನ್ನು ಮಾಡತಕ್ಕದ್ದು ಮತ್ತು ಮಾಡಲಾದ ಜಪ್ತಿಯನ್ನು ಅಷ್ಟರಮಟ್ಟಿಗೆ ಬಿಡುಗಡೆಗೊಳಿಸತಕ್ಕದ್ದು:

ಪರಂತು, ಮಾರಾಟ ಅಧಿಕಾರಿಯು ಸದರಿ ಕ್ಲೇಮು ಅಥವಾ ಆಕ್ಷೇಪಣೆಯು ಕ್ಷುಲ್ಲಕವಾದುದೆಂದು ಪರಿಗಣಿಸಿದಲ್ಲಿ ಅಥವಾ ಅದನ್ನು ಮಾರಾಟಕ್ಕೆಂದು ನಿಗದಿ ಮಾಡಿದ ದಿನಾಂಕದಂದು ಅಥವಾ ಅದರ ನಂತರ ಮಾಡಿದ್ದರೆ ಸದರಿ ಕ್ಲೇಮಿನ ಅಥವಾ ಆಕ್ಷೇಪಣೆಯ ಬಗ್ಗೆ ತನಿಖೆ ಮಾಡಲು ನಿರಾಕರಿಸಬಹುದು.

(2) ಯಾವ ಸ್ವತ್ತಿನ ಸಂಬಂಧದಲ್ಲಿ ಕ್ಲೇಮನ್ನು ಅಥವಾ ಆಕ್ಷೇಪಣೆಯನ್ನು ಮಾಡಲಾಗಿದೆಯೋ ಆ ಸ್ವತ್ತಿನ ಮಾರಾಟಕ್ಕೆ ಜಾಹೀರಾತು ನೀಡಿದ್ದಲ್ಲಿ ಮಾರಾಟ ಅಧಿಕಾರಿಯು ಆ ಕ್ಲೇಮನ್ನು ಅಥವಾ ಆಕ್ಷೇಪಣೆಯನ್ನು ಕುರಿತು ತನಿಖೆ ನಡೆಸುವವರೆಗೆ ಅಂಥ ಮಾರಾಟವನ್ನು ಮುಂದೂಡಬಹುದು.

(3) ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಯನ್ನು ಸಲ್ಲಿಸಿರುವಾಗ, ಯಾವ ಪಕ್ಷಗಾರನ ವಿರುದ್ಧ ಯಾವುದೇ ಆದೇಶವನ್ನು ಮಾಡಲಾಗಿದೆಯೋ, ಆ ಪಕ್ಷಕಾರನು ಸದರಿ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ವಿವಾದಕ್ಕೊಳಗಾದ ಸ್ವತ್ತಿಗೆ ತನ್ನ ಹಕ್ಕುಗಳನ್ನು ಕ್ಲೇಮು ಮಾಡಲು ಒಂದು ದಾವೆಯನ್ನು ಹೂಡಬಹುದು. ಆದರೆ ಅಂಥ ದಾವೆಯ ಫಲಿತಾಂಶಕ್ಕೆ ಒಳಪಟ್ಟು ಸದರಿ ಆದೇಶವು ನಿರ್ಣಾಯಕವಾಗಿರತಕ್ಕದ್ದು.

**23. ಪ್ರಥಮ ಮಾರಾಟದಲ್ಲಿ ಖರೀದಿದಾರನು ಮಾಡಿದ ತಪ್ಪಿನಿಂದಾಗಿ ಮಾಡಿದ ಮರು ಮಾರಾಟದಲ್ಲಿ ಉಂಟಾದ ನಷ್ಟ :–**

(1) ಖರೀದಿದಾರನ ಕಡೆಯಿಂದಾದ ತಪ್ಪಿನಿಂದಾಗಿ 15ನೇ ನಿಯಮದ (ಕೆ)

ಖಂಡದ ಮೇರೆಗೆ ಅಥವಾ 17ನೇ ನಿಯಮದ (2)ನೇ ಉಪನಿಯಮದ (ಎಚ್) ಮತ್ತು (ಕೆ) ಖಂಡದ ಮೇರೆಗೆ ನಡೆಸಲಾದ ಯಾವುದೇ ಮರುಮಾರಾಟದಲ್ಲಿ ಕಡಿಮೆಬಿದ್ದ ಯಾವುದೇ ಬೆಲೆಯನ್ನು ಮತ್ತು ಆ ಮರು ಮಾರಾಟಕ್ಕೆ ತಗುಲಿದ ಎಲ್ಲ ವೆಚ್ಚಗಳನ್ನು ಮಾರಾಟದ ಅಧಿಕಾರಿಯು ವಸೂಲಿ ಅಧಿಕಾರಿಗೆ ಪ್ರಮಾಣೀಕರಿಸತಕ್ಕದ್ದು ಮತ್ತು ಅದು ತೀರ್ಪುಋಣಿ ಅಥವಾ ಡಿಕ್ರಿದಾರನ ಕೋರಿಕೆ ಮೇರೆಗೆ ಹಾಗೆ ತಪ್ಪಿದ ಖರೀದಿದಾರನಿಂದ ವಸೂಲು ಮಾಡತಕ್ಕದ್ದಾಗಿರತಕ್ಕದ್ದು. ಹಾಗೆ ವಸೂಲು ಮಾಡುವುದನ್ನು ಪ್ರಾಸಂಗಿಕವಾದ ವೆಚ್ಚಗಳನ್ನೂ ಆ ರೀತಿ ತಪ್ಪಿನ ಖರೀದಿದಾರನೇ ಭರಿಸತಕ್ಕದ್ದು.

(2) ಸ್ವತ್ತನ್ನು ಎರಡನೆಯ ಮಾರಾಟಕ್ಕೆಂದು ಇಟ್ಟಿರುವಲ್ಲಿ, ಅದನ್ನು ಮೊದಲನೆಯ ಮಾರಾಟಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡಿದಲ್ಲಿ, ಮೊದಲನೆಯ ಮಾರಾಟದ ಸಂಬಂಧದಲ್ಲಿ ತಪ್ಪಿದ ಖರೀದಿದಾರನು ಸದರಿ ವ್ಯತ್ಯಾಸಕ್ಕೆ ಅಥವಾ ಹೆಚ್ಚುವರಿ ಮೊಬಲಗಿಗೆ ಯಾವುದೇ ರೀತಿ ಕ್ಲೇಮು ಮಾಡತಕ್ಕದ್ದಲ್ಲ.

**24. ಡಿಕ್ರಿದಾರನ ತಪ್ಪಿನಿಂದಾಗಿ ಜಾರಿಗೊಳಿಸುವ ಅರ್ಜಿಯನ್ನು ವಜಾ ಮಾಡುವುದು:–** ಒಂದು ಡಿಕ್ರಿಯನ್ನು ಜಾರಿಗೊಳಿಸುವಲ್ಲಿ ಯಾವುದೇ ಸ್ವತ್ತನ್ನು ಜಫ್ತಿ ಮಾಡಲಾಗಿದ್ದು, ಆದರೆ ಡಿಕ್ರಿದಾರನ ತಪ್ಪಿನಿಂದಾಗಿ, ಮಾರಾಟ ಅಧಿಕಾರಿಯು ಅಥವಾ ವಸೂಲಿ ಅಧಿಕಾರಿಯು, ಜಾರಿಗೊಳಿಸುವುದಕ್ಕಾಗಿ ಅರ್ಜಿಯ ಸಂಬಂಧದಲ್ಲಿ ಕ್ರಮ ಕೈಗೊಳ್ಳುವುದನ್ನು ಮುಂದುವರೆಸಲು ಸಾಧ್ಯವಾಗದಿದ್ದಲ್ಲಿ ಅಂಥ ಅಧಿಕಾರಿಯು ಅಂಥ ಅರ್ಜಿಯನ್ನು ವಜಾ ಮಾಡತಕ್ಕದ್ದು ಅಥವಾ ಯಾವುದೇ ಪರ್ಯಾಪ್ತ ಕಾರಣಕ್ಕಾಗಿ ಸದರಿ ವ್ಯವಹರಣೆಗಳನ್ನು ಮುಂದಿನ ದಿನಾಂಕಕ್ಕೆ ಮುಂದೂಡತಕ್ಕದ್ದು. ಅಂಥ ಅರ್ಜಿಯು ವಜಾ ಆದ ಮೇಲೆ ಸದರಿ ಜಫ್ತಿಯು ಕೊನೆಗೊಳ್ಳತಕ್ಕದ್ದು.

**25. ಅನೇಕ ಡಿಕ್ರಿಗಳ ಕ್ಲೇಮುಗಳಿರುವಾಗ ಆಸ್ತಿಗಳ ಹಂಚಿಕೆ:–**

(1) ಈ ನಿಯಮಗಳ ಅಡಿಯಲ್ಲಿ ಮಾರಾಟ ಅಧಿಕಾರಿಯು ಯಾವುದೇ ನ್ಯಾಯಾಲಯದ ಅಭಿರಕ್ಷೆಯಲ್ಲಿಲ್ಲದ ಮತ್ತು ಯಾವುದೇ ನ್ಯಾಯಾಲಯದ ಡಿಕ್ರಿಯನ್ನು ಜಾರಿಗೊಳಿಸುವಲ್ಲಿ ಈಗಾಗಲೇ ಜಫ್ತಿಗೆ ಒಳಗಾಗಿರುವ ಯಾವುದೇ ಸ್ವತ್ತನ್ನು ಜಫ್ತಿ ಮಾಡಿದರೆ ಅಥವಾ ಮಾಡಿದ್ದರೆ ಅಂಥ ನ್ಯಾಯಾಲಯವು ಆ ಸ್ವತ್ತನ್ನು ಸ್ವೀಕರಿಸತಕ್ಕದ್ದು ಮತ್ತು ಆ ಸ್ವತ್ತನ್ನು ನಗದೀಕರಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಪಡುವ ಕ್ಲೇಮುಗಳನ್ನು ಮತ್ತು ಅದರ ಜಫ್ತಿಯ ಸಂಬಂಧದಲ್ಲಿ ಮಾಡಲಾದ ಆಕ್ಷೇಪಣೆಗಳನ್ನು ನಿರ್ಧರಿಸತಕ್ಕದ್ದು:

ಪರಂತು, ಅಂಥ ಸ್ವತ್ತನ್ನು ಒಂದಕ್ಕಿಂತ ಹೆಚ್ಚು ನ್ಯಾಯಾಲಯಗಳ ಡಿಕ್ರಿಗಳನ್ನು ಜಾರಿಗೊಳಿಸುವಲ್ಲಿ ಜಫ್ತಿಗೆ ಒಳಪಟ್ಟಾಗ, ಸದರಿ ಸ್ವತ್ತನ್ನು ಸ್ವೀಕರಿಸತಕ್ಕ ಅಥವಾ ಅದನ್ನು ನಗದೀಕರಿಸತಕ್ಕ ಮತ್ತು ಅದಕ್ಕೆ ಸಂಬಂಧಪಡುವ ಯಾವುದೇ ಕ್ಲೇಮನ್ನು ಮತ್ತು ಅದರ ಜಫ್ತಿಗೆ ಎತ್ತಿದ ಯಾವುದೇ ಆಕ್ಷೇಪಣೆಯನ್ನು ನಿರ್ಧರಿಸತಕ್ಕ ನ್ಯಾಯಾಲಯವು, ಅವುಗಳಲ್ಲಿ ಅತ್ಯುನ್ನತ ದರ್ಜೆಯ

ನ್ಯಾಯಾಲಯವಾಗಿರತಕ್ಕದ್ದು ಅಥವಾ ಅಂಥ ನ್ಯಾಯಾಲಯಗಳ ದರ್ಜೆಯಲ್ಲಿ ಯಾವುದೇ ವ್ಯತ್ಯಾಸ ಇಲ್ಲದಿದ್ದಲ್ಲಿ ಯಾವ ನ್ಯಾಯಾಲಯದ ಡಿಕ್ರಿಯ ಮೇರೆಗೆ ಸದರಿ ಸ್ವತ್ತನ್ನು ಮೊದಲ ಸಲ ಜಪ್ತಿ ಮಾಡಲಾಯಿತೋ ಆ ನ್ಯಾಯಾಲಯವಾಗಿರತಕ್ಕದ್ದು.

(2) ಮಾರಾಟ ಅಧಿಕಾರಿಯು ಸ್ವತ್ತುಗಳನ್ನು ಧಾರಣ ಮಾಡಿರುವಲ್ಲಿ ಮತ್ತು ಅಂಥ ಸ್ವತ್ತುಗಳನ್ನು ಸ್ವೀಕರಿಸುವುದಕ್ಕೆ ಮುಂಚೆ ಅದೇ ತೀರ್ಪು ಋಣಿಯ ವಿರುದ್ಧ ಡಿಕ್ರಿಯ ಜಾರಿಗಾಗಿ ಸಲ್ಲಿಸಿದ್ದ ಅರ್ಜಿಗಳಿಗನುಸಾರವಾಗಿ ಒಬ್ಬರಿಗಿಂತ ಹೆಚ್ಚು ಜನ ಡಿಕ್ರಿದಾರರಿಂದ ತಗಾದೆ ನೋಟೀಸುಗಳು ಬಂದಿದ್ದಲ್ಲಿ ಮತ್ತು ಸದರಿ ಡಿಕ್ರಿದಾರರು ತೀರಿಕೆಯನ್ನು ಪಡೆದಿರದಿದ್ದಲ್ಲಿ, ಆ ಆಸ್ತಿಯ ನಗದೀಕರಣದ ವೆಚ್ಚಗಳನ್ನು ವಜಾಮಾಡಿದ ನಂತರ, ಸದರಿ ಆಸ್ತಿಗಳನ್ನು ಮಾರಾಟ ಅಧಿಕಾರಿಯು 1908ನೆಯ ಸಿವಿಲ್ ಪ್ರಕ್ರಿಯಾ ಸಂಹಿತೆಯ 73ನೆಯ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಅಂಥ ಎಲ್ಲಾ ಡಿಕ್ರಿದಾರರಿಗೆ ದಾಮಾಷಾ ಪ್ರಕಾರ ಹಂಚಿಕೆ ಮಾಡತಕ್ಕದ್ದು.

**26. ತೀರ್ಪುಋಣಿಯು ಮೃತನಾದಾಗ ಅವನ ಕಾನೂನು ಸಮ್ಮತ ಪ್ರತಿನಿಧಿಯ ವಿರುದ್ಧ ಜಾರಿ:–**

(1) ಯಾವೊಬ್ಬ ತೀರ್ಪುಋಣಿಯು, ಡಿಕ್ರಿಯು ಸಂಪೂರ್ಣವಾಗಿ ಕಾರ್ಯಗತ–ವಾಗುವುದಕ್ಕೆ ಮುಂಚೆ ಮೃತನಾದರೆ ಮೃತನ ಕಾನೂನು ಸಮ್ಮತ ಪ್ರತಿನಿಧಿಯ ವಿರುದ್ಧ 13ನೆಯ ನಿಯಮದ (1)ನೆಯ ಉಪನಿಯಮದ ಮೇರೆಗೆ ಅರ್ಜಿಯನ್ನು ಸಲ್ಲಿಸಬಹುದು ಅಥವಾ ಮುಂದುವರಿಸಬಹುದು ಮತ್ತು ಅನಂತರ ಈ ಅಧ್ಯಾಯದ ಎಲ್ಲಾ ಉಪಬಂಧಗಳು, ಈ ನಿಯಮದಲ್ಲಿ ಅನ್ಯಥಾ ಉಪಬಂಧಿಸಲಾದಂತೆ ಹೊರತುಪಡಿಸಿ, ಅಂಥ ಕಾನೂನು ಸಮ್ಮತ ಪ್ರತಿನಿಯು, ತೀರ್ಪು ಋಣಿಯಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು:

ಪರಂತು, ಅಂಥ ಕಾನೂನು ಸಮ್ಮತ ಪ್ರತಿನಿಧಿಗೆ, ಅವನ ವಿರುದ್ಧ ಜಾರಿಯನ್ನು ಮುಂದುವರಿಸುವುದಕ್ಕೆ ಮುಂಚೆ ಒಂದು ನೋಟೀಸನ್ನು ಕೊಡತಕ್ಕದ್ದು ಮತ್ತು ಅವರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಆ ಬಗ್ಗೆ ಸುನಾವಣೆ ಮಾಡತಕ್ಕದ್ದು.

(2) ಅಂಥ ಕಾನೂನುಬದ್ಧ ಪ್ರತಿನಿಧಿಯ ವಿರುದ್ಧ ಡಿಕ್ರಿಯನ್ನು ಜಾರಿಗೊಳಿಸಿರುವಲ್ಲಿ, ಅವನು, ತನ್ನ ಒಡೆತನಕ್ಕೆ ಬಂದಿರುವಂಥ ಮೃತನ ಆಸ್ತಿಯಷ್ಟಕ್ಕೆ ಮಾತ್ರ ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ಬದ್ಧತೆಯನ್ನು ಖಚಿತಪಡಿಸಿಕೊಳ್ಳಲು ಸದರಿ ಡಿಕ್ರಿಯನ್ನು ಜಾರಿಗೊಳಿಸುವ ವಸೂಲಿ ಅಧಿಕಾರಿಯು, ಸ್ವಪ್ರೇರಣೆಯಿಂದ ಅಥವಾ ಡಿಕ್ರಿದಾರನ ಅರ್ಜಿಯ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಲೆಕ್ಕಗಳನ್ನು ಹಾಜರುಪಡಿಸುವಂತೆ ಕಾನೂನುಸಮ್ಮತ ಪ್ರತಿನಿಧಿಯನ್ನು ಒತ್ತಾಯ ಮಾಡಬಹುದು.

**27. ತೀರ್ಮಾನಕ್ಕೆ ಮೊದಲು ಜಪ್ತಿ ಮಾಡುವ ವಿಧಾನ :–**

(1) ಅಧಿನಿಯಮದ 44ನೆಯ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಜಪ್ತಿಯನ್ನು 15,16 ಮತ್ತು 17ನೇ ನಿಯಮಗಳಲ್ಲಿ ತಿಳಿಸಲಾದ ರೀತಿಯಲ್ಲಿ ಮಾಡತಕ್ಕದ್ದು.

(2) (1)ನೆಯ ಉಪನಿಯಮದ ಮೇರೆಗೆ ಜಪ್ತಿ ಮಾಡಲಾದ ಸ್ವತ್ತಿನ ಬಗ್ಗೆ ಒಂದು ಕ್ಲೇಮನ್ನು ಸಲ್ಲಿಸಲಾಗಿದ್ದಲ್ಲಿ ಅಂಥ ಕ್ಲೇಮನ್ನು 23ನೆಯ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಯು ತನಿಖೆ ಮಾಡತಕ್ಕದ್ದು.

(3) (1)ನೆಯ ಉಪನಿಯಮದ ಮೇರೆಗೆ ಯಾವುದೇ ಸ್ವತ್ತನ್ನು ಜಪ್ತಿ ಮಾಡಿದ್ದಲ್ಲಿ ವಸೂಲಿ ಅಧಿಕಾರಿಯು,

(ಎ) ಸಂಬಂಧಪಟ್ಟ ಪಕ್ಷಕಾರನು, ಅವಶ್ಯವಾದ ಭದ್ರತೆಯನ್ನು ಜಪ್ತಿಯ ವೆಚ್ಚದ ಸಲುವಾಗಿ ಭದ್ರತೆಯ ಜೊತೆಯಲ್ಲಿ ಒದಗಿಸಿದ್ದಲ್ಲಿ, ಅಥವಾ

(ಬಿ) ಸಮಾಪಕನು ಸಂಬಂಧಪಟ್ಟ ಪಕ್ಷಕಾರನು ಯಾವುದೇ ವಂತಿಗೆಯನ್ನು ಕೊಡಬೇಕಾಗಿಲ್ಲವೆಂದು ನಿರ್ಧರಿಸಿದಲ್ಲಿ, ಅಥವಾ

(ಸಿ) 41ನೆಯ ಪ್ರಕರಣ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿವಾದವು ಯಾವ ಪಕ್ಷಕಾರನ ಕೋರಿಕೆಯ ಮೇರೆಗೆ ಜಪ್ತಿ ಮಾಡಲಾಯಿತೋ ಆ ಪಕ್ಷಗಾರನ ವಿರುದ್ಧವಾಗಿ ತೀರ್ಮಾನಿತವಾಗಿದ್ದಲ್ಲಿ ಜಪ್ತಿಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಆದೇಶಿಸತಕ್ಕದ್ದು.

(4) (1)ನೆಯ ಉಪನಿಯಮದ ಮೇರೆಗೆ ಜಪ್ತಿ ಮಾಡಿದಾಗ ಸದರಿ ಜಪ್ತಿಯನ್ನು ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಮಾಡಲಾಯಿತೋ ಅವುಗಳಿಗೆ ಪಕ್ಷಕಾರರಾಗಿಲ್ಲದ ವ್ಯಕ್ತಿಗಳ ಅದು ಜಪ್ತಿ ಪೂರ್ವದ ಹಕ್ಕುಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಅಥವಾ ಯಾವ ವ್ಯಕ್ತಿಗಳ ಸ್ವತ್ತನ್ನು ಜಪ್ತಿ ಮಾಡಲಾಗಿದೆಯೋ ಆ ವ್ಯಕ್ತಿಗಳ ವಿರುದ್ಧ ಡಿಕ್ರಿಯನ್ನು ಹೊಂದಿರುವವನು ಅಂಥ ಡಿಕ್ರಿಯನ್ನು ಜಾರಿಗೊಳಿಸುವಾಗ ಜಪ್ತಿಯಾಗಿರುವ ಸ್ವತ್ತನ್ನು ಮಾರಾಟ ಮಾಡುವ ಸಲುವಾಗಿ ಅರ್ಜಿ ಸಲ್ಲಿಸದಂತೆ ತಡೆಹಿಡಿಯತಕ್ಕದ್ದಲ್ಲ.

(5) ಈ ನಿಯಮದ ಉಪಬಂಧಗಳ ಮೇರೆಗೆ ಸ್ವತ್ತನ್ನು ಜಪ್ತಿ ಮಾಡಿರುವಲ್ಲಿ ಮತ್ತು ಯಾವ ವ್ಯಕ್ತಿಯ ಸ್ವತ್ತು ಜಪ್ತಿಯಾಗಿರುವುದೋ ಆತನ ವಿರುದ್ಧ ಆ ನಂತರ ಒಂದು ಡಿಕ್ರಿಯನ್ನು ಹೊರಡಿಸಿದಲ್ಲಿ, ಅಂಥ ಡಿಕ್ರಿಯನ್ನು ಜಾರಿಗೊಳಿಸಲು ಅರ್ಜಿ ಸಲ್ಲಿಸಿದ ಮೇಲೆ ಸದರಿ ಸ್ವತ್ತಿನ ಮರು ಜಪ್ತಿಯ ಸಲುವಾಗಿ ಅರ್ಜಿ ಸಲ್ಲಿಸಬೇಕಾದ ಅವಶ್ಯಕತೆ ಇರುವುದಿಲ್ಲ.

## ಅಧ್ಯಾಯ VIII
## ಸಂಕೀರ್ಣ ವಿಷಯಗಳು

**28. ನ್ಯಾಯವಾದಿಗಳಾಗಿ ಹಾಜರಾಗುವ ವ್ಯಕ್ತಿಗಳ ಮೇಲೆ ನಿರ್ಬಂಧ :–** ಯಾವೊಂದು ಸಹಕಾರಿಯ ನಿರ್ದೇಶಕ ಅಥವಾ ಪದಾಧಿಕಾರಿಯು,–

(1) ಅಂಥ ಸಹಕಾರಿಯ ವಿರುದ್ಧ ಅಥವಾ ಅಂತಹ ಸಹಕಾರಿಯು ಸದಸ್ಯರಾಗಿ–ರುವಂಥ ಯಾವುದೇ ಸಹಕಾರಿಯ ವಿರುದ್ಧ; ಅಥವಾ

(2) ಅನ್ಯಥಾ ಅಂಥ ಸಹಕಾರಿಯ ಪರವಾಗಿ ಅಥವಾ ಅಂತಹ ಸಹಕಾರಿಯ ಸದಸ್ಯವಾಗಿರುವಂತಹ ಯಾವುದೇ ಸಹಕಾರಿಯ ಪರವಾಗಿ

– ನ್ಯಾಯವಾದಿಯಾಗಿ ಹಾಜರಾದಾಗ, ಅವನು ಸಹಕಾರಿಯಲ್ಲಿಯ ತನ್ನ ಪದವನ್ನು ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು.

**29. ದಸ್ತಾವೇಜುಗಳ ಪರಿಶೀಲನೆ :–** ಯಾವೊಂದು ಸಹಕಾರಿಯ ಯಾವೊಬ್ಬ ಸದ್ಯಸ್ಯನು ಅಥವಾ ಸಾರ್ವಜನಿಕರೊಬ್ಬರು ಕೆಲವು ದಸ್ತಾವೇಜುಗಳನ್ನು ರಿಜಿಸ್ಟ್ರಾರರ ಕಛೇರಿಯಲ್ಲಿ ಉಚಿತವಾಗಿ ನೋಡಬಹುದು ಅಥವಾ ಅವುಗಳ ದೃಢೀಕೃತ ಪ್ರತಿಗಳನ್ನು ಕೆಳಗೆ ಕಾಣಿಸಿದಂತೆ ಶುಲ್ಕ ಕೊಟ್ಟು ಪಡೆಯಬಹುದು.

| ಅ.ಕ್ರ. | ವಿಷಯ | ರೂ. |
|---|---|---|
| 1 | ಸಹಕಾರಿಯ ನೋಂದಣಿಯ ಅರ್ಜಿ ಪ್ರತಿಗೆ | 5 |
| 2. | ನೋಂದಣಿ ಪ್ರಮಾಣ ಪತ್ರ ಪ್ರತಿ ಪುಟಕ್ಕೆ | 5 |
| 3. | ಸಹಕಾರಿಯ ನೋಂದಾಯಿತ ಉಪವಿಧಿಗಳು, ಪ್ರತಿ ಪುಟಕ್ಕೆ | 3 |
| 4. | ಸಹಕಾರಿಯ ಉಪವಿಧಿಗಳ ತಿದ್ದುಪಡಿ, ಪ್ರತಿ ಪುಟಕ್ಕೆ | 3 |
| 5 | ಒಂದು ಸಹಕಾರಿಯ ನೋಂದಣಿ ರದ್ದತಿಯಾದ ದಾಖಲೆ ಪ್ರತಿಗೆ | 5 |
| 6 | ಪ್ರಕರಣ 41ರ ಮೆರೆಗೆ ಮಧ್ಯಸ್ಥಗಾರಿಕೆಯ ಆದೇಶದ ಪ್ರತಿ ಪುಟಕ್ಕೆ | 3 |
| 7 | ಅಪೀಲು ಹೋಗಬಹುದಾದ ಇನ್ನಾವುದೇ ಆದೇಶದ ಪ್ರತಿ ಪುಟಕ್ಕೆ | 3 |

**ನಮೂನೆ – 1**

**ಸಹಕಾರಿಗಳ ನೋಂದಣಿಗಾಗಿ ಅರ್ಜಿಯ ನಮೂನೆ**

(ನಿಯಮ – 3 ನೋಡಿ)

ಸಹಕಾರಿಗಳ ರಿಜಿಸ್ಟ್ರಾರ್ /ಜಂಟಿ/ಉಪ/ಸಹಾಯಕ ರಿಜಿಸ್ಟ್ರಾರ್

.....................................

ಮಾನ್ಯರೇ,

................ ಸಹಕಾರಿ ನಿಯಮಿತ, ಇದರ ನೋಂದಣಿಗಾಗಿ ಸಂಬಂಧಪಟ್ಟ ಅಡಕಗಳ ಸಹಿತ ಪ್ರಸ್ತಾವನ್ನು ಸಲ್ಲಿಸುತ್ತಿದ್ದೇನೆ.

2. ಈ ಕೆಳಗೆ ನೀಡಿರುವ ಮತ್ತು ಲಗತ್ತಿಸಿದ ಅಡಕಗಳಲ್ಲಿ ನೀಡಿರುವ ಮಾಹಿತಿಗಳು ಸರಿಯಾಗಿವೆ ಮತ್ತು ನಿಖರವಾಗಿವೆ ಎಂದು ಘೋಷಿಸುತ್ತೇನೆ.

(1) ಸಹಕಾರಿಯ ಹೆಸರು

(2) ನೋಂದಣಿಯಾಗಬೇಕಾದ ವಿಳಾಸ

(3) ಉದ್ದೇಶಿತ ಸಹಕಾರಿಯ ಕಾರ್ಯವ್ಯಾಪ್ತಿ

(4) ಸದಸ್ಯರ ಹೊಣೆಗಾರಿಕೆ ಪರಿಮಿತವೇ ಅಥವಾ ಅಪರಿಮಿತವೇ

(5) ಮುಖ್ಯ ಉದ್ದೇಶಗಳು

(6) ಸಹಕಾರಿಯ ನೋಂದಣಿಯ ಅವಶ್ಯಕತೆ

(7) ಪ್ರಕರಣ 4ರ ಪಾಲನೆ ಬಗ್ಗೆ ಪ್ರಮಾಣ ಪತ್ರ

(8) ಪ್ರಕರಣ 5(2) ಮತ್ತು 5(3)ರ ಪಾಲನೆ ಬಗ್ಗೆ ಪ್ರಮಾಣ ಪತ್ರ

(9) ಮುಂದಿನ ಪತ್ರ ವ್ಯವಹಾರಕ್ಕಾಗಿ ಮುಖ್ಯ ಪ್ರವರ್ತಕರ : ಅರ್ಜಿದಾರರ ಹೆಸರು ಮತ್ತು ವಿಳಾಸ

(10) ಅಧಿನಿಯಮದ ಪ್ರಕರಣ 10(2)ರ ಖಂಡ (1)ರಿಂದ (24), 11(1), 12ರಿಂದ 17, 20ರಿಂದ 24, 26(1), 27, 28, 30ರಿಂದ 34 ಮತ್ತು 47ನೇ ಪ್ರಕರಣಗಳಿಗೆ ಹಾಗೂ 4, 10, 11 ಮತ್ತು 31ನೇ ನಿಯಮಗಳಿಗೆ ಅನುಗುಣವಾಗಿ ಉಪವಿಧಿಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆಯೇ? ಹೌದಾದಲ್ಲಿ ವಿವರಗಳನ್ನು ಒದಗಿಸುವುದು.

(11) ಉದ್ದೇಶಿತ ಸಹಕಾರಿಯ ಹೆಸರಿನಲ್ಲಿ ಪಾವತಿಸಿರುವ ಮೊಬಲಗನ್ನು ತೋರಿಸುವ ಬ್ಯಾಂಕಿನ ದೃಢೀಕರಣ ಪತ್ರವನ್ನು ಲಗತ್ತಿಸುವುದು.

(12) ಉದ್ದೇಶಿತ ಸಹಕಾರಿಯನ್ನು ಆರ್ಥಿಕ ಸದೃಢತೆ ಮತ್ತು ತಾಂತ್ರಿಕ ಸಾಧ್ಯತೆಗಳಿಂದ ನಡೆಸುವ ಬಗ್ಗೆ ಪರಿಣಿತರು ತಯಾರಿಸಿದ ಪ್ರಾಜೆಕ್ಟ್ ವರದಿಯನ್ನು ಲಗತ್ತಿಸುವುದು.

(13) ಷೇರು ಹಣ ನೀಡಿರುವವರ ಹೆಸರು; ವಿಳಾಸ, ಷೇರು ಹಣ ಮತ್ತು ಸಹಿಗಳು ಇರುವ ಪಟ್ಟಿಯನ್ನು ಲಗತ್ತಿಸುವುದು.

ತಮ್ಮ ವಿಶ್ವಾಸಿ

ಅರ್ಜಿದಾರನ ಸಹಿ

[1][ನಮೂನೆ –1 ಎ

(ನಿಯಮ 5ಇ ಅನ್ನು ನೋಡಿ)
ಅಧಿಸೂಚನೆ

ನಂ. ದಿನಾಂಕ:

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ಉಪಬಂಧಗಳ ಅಡಿಯಲ್ಲಿ ___________ ಜಿಲ್ಲೆಯಲ್ಲಿ ನೋಂದಾಯಿತ ಕಚೇರಿಗಳನ್ನುಳ್ಳ ಸಹಕಾರಿಗಳ ಆಡಳಿತ ಮಂಡಳಿಗಳಿಗೆ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿರುವಂತೆ ವಿವಿಧ ಮತಕ್ಷೇತ್ರಗಳಿಂದ ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ

*(1) ದಿನಾಂಕ ___________ ಕ್ಕೆ ಪದಾವಧಿ ಮುಕ್ತಾಯವಾಗಲಿರುವ ___________ ಪ್ರಾಥಮಿಕ / ಮಾಧ್ಯಮಿಕ/ಒಕ್ಕೂಟ/ಅಪೆಕ್ಸ್/ಸಹಕಾರಿಯ ಆಡಳಿತ ಮಂಡಳಿಗೆ ನಿರ್ದೇಶಕರುಗಳ ಸ್ಥಾನಗಳನ್ನು ತುಂಬಲು ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ

*(2) ___________ ಇವರ ಮರಣ/ರಾಜೀನಾಮೆ/ಅನರ್ಹತೆ/ಅಥವಾ ಇನ್ನಿತರ ಕಾರಣದಿಂದಾಗಿ ___________ ಮತಕ್ಷೇತ್ರದ ಸ್ಥಾನವು ಖಾಲಿಯಾಗಿರುವುದರಿಂದ *ಖಾಲಿಯಾಗಿರುವುದಾಗಿ ಘೋಷಿಸಿರುವುದರಿಂದಾಗಿ ಉಂಟಾದ ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ

ಆದುದರಿಂದ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಎಫ್ ಗೆ ಅನುಸಾರವಾಗಿ ___________ ಜಿಲ್ಲಾ ಚುನಾವಣಾಧಿಕಾರಿಯಾದ ___________ ಎಂಬ ಹೆಸರಿನ ನಾನು ಸದರಿ ಚುನಾವಣೆಗೆ ಸಂಬಂಧಿಸಿದ ಈ ಕೆಳಕಂಡ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಈ ಮೂಲಕ ನಿಗದಿಪಡಿಸುತ್ತೇನೆ.

| ಕ್ರ.ಸಂ. | ಸಹಕಾರಿಗಳ ವರ್ಗೀಕರಣ | ಚುನಾವಣೆಗಳ ಅವಧಿ |
|---|---|---|
| 1 | ಪ್ರಾಥಮಿಕ | ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಗಳ |
| 2 | ಮಾಧ್ಯಮಿಕ | ಸ್ಥಳ, ದಿನ ಮತ್ತು ದಿನಾಂಕ ನಿಗದಿಪಡಿಸಿ |
| 3 | ಒಕ್ಕೂಟ | ಪ್ರತ್ಯೇಕವಾಗಿ ಚುನಾವಣಾ ವೇಳಾಪಟ್ಟಿಯನ್ನು |
| 4 | ಅಪೆಕ್ಸ್ | ಪ್ರಕಟಿಸತಕ್ಕದ್ದು. |

ಜಿಲ್ಲಾ ಚುನಾವಣಾಧಿಕಾರಿ

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ]

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

**ನಮೂನೆ –2**

**ನಾಮಪತ್ರ**

(ನಿಯಮ 6 ನೋಡಿ)

**ನಿರ್ದೇಶಕ ಮಂಡಳಿಯ ಚುನಾವಣೆಗಾಗಿ ಅರ್ಜಿ**

(1) ಸಹಕಾರಿಯ ಹೆಸರು ಮತ್ತು ವಿಳಾಸ

(2) ಅಭ್ಯರ್ಥಿಯ ಹೆಸರು ಅಥವಾ ಪ್ರತಿನಿಧಿಯ ಹೆಸರು ಮತ್ತು ಅವನು ಪ್ರತಿನಿಧಿಸುವ ಸದಸ್ಯ ಸಹಕಾರಿಯ ಹೆಸರು ಮತ್ತು ವಿಳಾಸ

(3) ಸದಸ್ಯತ್ವ ರಿಜಿಸ್ಟರ್‌ನಲ್ಲಿ ಕ್ರಮ ಸಂಖ್ಯೆ

(4) ತಂದೆ ಅಥವಾ ಗಂಡನ ಹೆಸರು (ಮನುಷ್ಯ ವ್ಯಕ್ತಿಯ ಸಂದರ್ಭದಲ್ಲಿ)

(5) ಸೂಚಕನು ಒಬ್ಬ ಮನುಷ್ಯ ವ್ಯಕ್ತಿಯಾಗಿದ್ದಲ್ಲಿ ಅವನ ಹೆಸರು. ಸೂಚಕನು ಒಂದು ಸಹಕಾರಿಯ ಪ್ರತಿನಿಯಾಗಿದ್ದಲ್ಲಿ ಆ ಸಹಕಾರಿಯ ಮತ್ತು ಅದರ ಪ್ರತಿನಿಧಿಯ ಹೆಸರು.

(6) ಸದಸ್ಯತ್ವ ರಿಜಿಸ್ಟರಿನಲ್ಲಿ ಸೂಚಕನ ಕ್ರಮ ಸಂಖ್ಯೆ

(7) ಸೂಚಕನ ಸಹಿ

(8) ಅನುಮೋದಕನು ಒಬ್ಬ ಮನುಷ್ಯ ವ್ಯಕ್ತಿಯಾಗಿಲ್ಲದಲ್ಲಿ ಅವನ ಹೆಸರು; ಅನುಮೋದಕನು ಒಂದು ಸಹಕಾರಿಯ ಪ್ರತಿನಿಧಿಯಾಗಿದ್ದಲ್ಲಿ, ಆ ಸಹಕಾರಿಯ ಮತ್ತು ಅದರ ಪ್ರತಿನಿಧಿಯ ಹೆಸರು.

(9) ಸದಸ್ಯತ್ವ ರಿಜಿಸ್ಟರಿನಲ್ಲಿ ಅನುಮೋದಕನ ಕ್ರಮ ಸಂಖ್ಯೆ

(10) ಅನುಮೋದಕನ ಸಹಿ

**ಅಭ್ಯರ್ಥಿಯ ಘೋಷಣೆ**

ನಾನು, ದಿನಾಂಕ ................. ರಂದು ನಡೆಯುವ ಚುನಾವಣೆಯಲ್ಲಿ ಉಮೇದುದಾರನಾಗಲು ಇಚ್ಛೆ ಉಳ್ಳವನಾಗಿದ್ದೇನೆ ಹಾಗೂ ನನ್ನ ಬಹುಮಟ್ಟಿನ ನಂಬಿಕೆ ಮತ್ತು ತಿಳುವಳಿಕೆಯ ಮೇರೆಗೆ .......... ಸಹಕಾರಿಯ ನಿರ್ದೇಶಕ ಮಂಡಳಿಗೆ ನಿರ್ದೇಶಕನಾಗಿ ಚುನಾಯಿತನಾಗಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ನಿಯಮಗಳು ಮತ್ತು ಸಹಕಾರಿಯ ಉಪವಿಧಿಗಳ ಪ್ರಕಾರ ಯಾವುದೇ ಅನರ್ಹತೆಯನ್ನು ಹೊಂದಿರುವುದಿಲ್ಲವೆಂದು ನಾನು ಈ ಮೂಲಕ ಘೋಷಿಸುತ್ತೇನೆ.

(ಅಭ್ಯರ್ಥಿಯ ಹೆಸರು ಮತ್ತು ಸಹಿ)

**ಚುನಾವಣಾಧಿಕಾರಿಯ ಹಿಂಬರಹ**

ದಿನಾಂಕ :.............. ರಂದು ............ ಗಂಟೆಗೆ ಈ ನಾಮಪತ್ರವನ್ನು ........... ಇವರು ನನಗೆ ಸ್ವತಃ ಸಲ್ಲಿಸಿದ್ದಾರೆ / ಈ ನಾಮಪತ್ರವು ರಿಜಿಸ್ಟರ್ಡ್ ಅಂಚೆಯ ಮೂಲಕ ಸ್ವೀಕೃತವಾಗಿದೆ.

ಸ್ಥಳ: ಚುನಾವಣಾಧಿಕಾರಿ ಅಥವಾ ಅವರಿಂದ

ದಿನಾಂಕ: ಅಧಿಕೃತನಾದ ವ್ಯಕ್ತಿಯ ಸಹಿ

## ರಿಜಿಸ್ಟ್ರಾರನು ನೋಂದಣಿಗಾಗಿ ಸ್ವೀಕರಿಸಿದ ಅರ್ಜಿಗಳ ರಿಜಿಸ್ಟರ

| ಕ್ರಮ ಸಂಖ್ಯೆ | ಉದ್ದೇಶಿತ ಸಹಕಾರಿ0ಯ ಹೆಸರು ಮತ್ತು ಪೂರ್ಣ ವಿಳಾಸ | ಮುಖ್ಯ ಪ್ರವರ್ತಕರ ಹೆಸರು ಮತ್ತು ಪೂರ್ಣ ವಿಳಾಸ | ಅರ್ಜಿ ಸ್ವೀಕರಿಸಿದ ದಿನಾಂಕ ಮತ್ತು ಹೇಗೆ ಸ್ವೀಕೃತವಾಗಿದೆ ? | ಸ್ವೀಕೃತಿ ನೀಡಿದ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ | ಹೆಚ್ಚಿನ ಮಾಹಿತಿ ಕೇಳಿದ ಪತ್ರದ ಸಂಖ್ಯೆ ಮತ್ತು ದಿನಾಂಕ | ಹೆಚ್ಚಿನ ಮಾಹಿತಿ0ಯನ್ನು ಕೊಡಬೇಕಾದ ಕೊನೆ ದಿನಾಂಕ | ಹೆಚ್ಚಿನ ಮಾಹಿತಿ0ಯನ್ನು ಸಲ್ಲಿಸಿದ ದಿನಾಂಕ | ಆದೇಶ ಸಂಖ್ಯೆ ಮತ್ತು ನೋಂದಣಿ ದಿನಾಂಕ | ಅರ್ಜಿ0ಯನ್ನು ತಿರಸ್ಕರಿಸಿದ್ದಲ್ಲಿ ಆದೇಶ ಸಂಖ್ಯೆ ಮತ್ತು ದಿನಾಂಕ | ಸಹಿ | ಷರಾ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

[1][ನಮೂನೆ –2ಎ

(ನಿಯಮ 5ಇ(3) ಅನ್ನು ನೋಡಿ)

**ಚುನಾವಣಾ ನೋಟೀಸು**

__________ ಸಹಕಾರಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು __________ (ಸ್ಥಳ) __________ (ದಿನಾಂಕ) __________ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ __________ ಮತಕ್ಷೇತ್ರ (ಸಾಮಾನ್ಯ / ಹಿಂದುಳಿದ ವರ್ಗ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳೆಯರು) ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದೂ ನೋಟೀಸು ನೀಡಲಾಗಿದೆ.

| | | |
|---|---|---|
| (ಎ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 5ಇ) | ಚುನಾವಣಾ ದಿನಾಂಕ ಪೂರ್ವದ ಏಳನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಬಿ) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 5ಜಿ) | ಚುನಾವಣಾ ದಿನಾಂಕ ಪೂರ್ವದ ಆರನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಸಿ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ಚುನಾವಣಾ ದಿನಾಂಕ ಪೂರ್ವದ ಆರನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಡಿ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆತಕ್ಕೆ ಕೊನೆಯ ದಿನ. (ನಿಯಮ 5ಹೆಚ್) | ಚುನಾವಣಾ ದಿನಾಂಕ ಪೂರ್ವದ ಐದನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಇ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ಚುನಾವಣಾ ದಿನಾಂಕ ಪೂರ್ವದ ಐದನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |

1. ಅಧಿಸೂಚನೆ ಸಂಖ್ಯೆ ಸಿಒ 15 ಸಿಎಲ್ಎಂ 2013 ಮೂಲಕ ಸೇರಿಸಲ್ಪಟ್ಟು 19.09.2013ರಿಂದ ಜಾರಿಗೆ ಬಂದಿರುತ್ತದೆ.

| | | |
|---|---|---|
| (ಎಫ್) | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 5ಜೆ) | ಚುನಾವಣಾ ದಿನಾಂಕ ಪೂರ್ವದ ಐದನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಜಿ) | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ (ನಿಯಮ **5ಜೆ**) | ಚುನಾವಣಾ ದಿನಾಂಕ ಪೂರ್ವದ ಮೂರನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಹೆಚ್) | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ ____________ ಸಮಯ: ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ |
| (ಐ) | ಮತ ಎಣಿಕೆಯ ದಿನ ಮತ್ತು ದಿನಾಂಕ | ಮತದಾನದ ದಿನದಂದು ಮತದಾನದ ಅವಧಿ ಮುಗಿದ ತಕ್ಷಣ |
| (ಜೆ) | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ಮತದಾನದ ದಿನದಂದು ಎಣಿಕೆ ಮುಗಿದ ತಕ್ಷಣ |

(a) ಚುನಾಣೆಯಲ್ಲಿ ಭರ್ತಿ ಮಾಡಬೇಕಾಗಿರುವ ಖಾಲಿ ಸ್ಥಾನಗಳ ಸಂಖ್ಯೆ;

(b) ನಿರ್ದೇಶಕರನ್ನು ಚುನಾಯಿಸಬೇಕಾದ ಮತಕ್ಷೇತ್ರ (ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ);

(c) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳು;

(d) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳು.

ಸ್ಥಳ: ____________
ದಿನಾಂಕ : ____________

**ರಿಟರ್ನಿಂಗ್ ಅಧಿಕಾರಿ**

**ನಮೂನೆ– 2ಬಿ**

[ನಿಯಮ 5ಎಫ್ ಯನ್ನು ನೋಡಿ]

**ನಾಮಪತ್ರ**

__________ ಸಹಕಾರಿ __________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ __________ ಮತಕ್ಷೇತ್ರದಿಂದ __________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಅಭ್ಯರ್ಥಿಯಾಗಿ ಶ್ರೀ / ಶ್ರೀಮತಿ __________________ ಅವರನ್ನು ನಾನು ನಾಮನಿರ್ದೇಶನ ಮಾಡುತ್ತೇನೆ.

*ಅಭ್ಯರ್ಥಿಯ ಹೆಸರು :

ಅವನ / ಅವಳ ತಂದೆಯ/ ಗಂಡನ ಹೆಸರು :

ಅಂಚೆಯ ವಿಳಾಸ:

ಅವನು ಡೆಲಿಗೇಟ್ ಆಗಿರುವ ಸಹಕಾರಿಯ ಹೆಸರು:

ಅವನ / ಅವಳ ಹೆಸರನ್ನು ಮತದಾರರ ಪಟ್ಟಿಯಲ್ಲಿರುವ __________ **ಭಾಗದಲ್ಲಿ __________ ಕ್ರಮಸಂಖ್ಯೆಯಲ್ಲಿ ನಮೂದಿಸಲಾಗಿದೆ.

ನನ್ನ ಹೆಸರು __________________ ಮತ್ತು ಅದನ್ನು ಮತದಾರರ ಪಟ್ಟಿಯಲ್ಲಿರುವ __________ **ಭಾಗದಲ್ಲಿ __________ ಕ್ರಮಸಂಖ್ಯೆಯಲ್ಲಿ ನಮೂದಿಸಲಾಗಿದೆ.

ದಿನಾಂಕ : **ಸೂಚಕನ ಸಹಿ**

---

***ಅಭ್ಯರ್ಥಿಯು**

(i) ಸಹಕಾರಿಯ ಬಿಡಿವ್ಯಕ್ತಿ ಸದಸ್ಯ; ಅಥವಾ

(ii) ಸಹಕಾರಿಯ ಒಂದು ಗುಂಪಿನ ಸದಸ್ಯರ ಪ್ರತಿನಿಧಿ; ಅಥವಾ

(iii) ಸದಸ್ಯ ಸಹಕಾರಿಯ ಡೆಲಿಗೇಟ್

**ಭಾಗ 1: - A: ಪ್ರಾಥಮಿಕ ಸಹಕಾರಿಯ ಮತದಾನದ ಹಕ್ಕುಳ್ಳ ಬಿಡಿವ್ಯಕ್ತಿ ಸದಸ್ಯರು

B: ಪ್ರಾಥಮಿಕ ಸಹಕಾರಿಯ ಒಂದು ಗುಂಪಿನ ಸದಸ್ಯರ ಮತದಾನದ ಹಕ್ಕುಳ್ಳ ಪ್ರತಿನಿಧಿಗಳು

**ಭಾಗ II: - A: ಮಾಧ್ಯಮಿಕ ಸಹಕಾರಿಯ ಮತದಾನದ ಹಕ್ಕುಳ್ಳ ಬಿಡಿವ್ಯಕ್ತಿ ಸದಸ್ಯರು ಮತ್ತು ಸದಸ್ಯ ಸಹಕಾರಿಗಳ ಡೆಲಿಗೇಟ್‌ಗಳು

B: ಮಾಧ್ಯಮಿಕ ಸಹಕಾರಿಯ ಒಂದು ಗುಂಪಿನ ಸದಸ್ಯರ ಮತದಾನದ ಹಕ್ಕುಳ್ಳ ಪ್ರತಿನಿಧಿಗಳು ಮತ್ತು ಸದಸ್ಯ ಸಹಕಾರಿಗಳ ಮತದಾನದ ಹಕ್ಕುಳ್ಳ ಡೆಲಿಗೇಟ್‌ಗಳು

**ಭಾಗ III: - ಒಕ್ಕೂಟ/ಅಪೆಕ್ಸ್ ಸಹಕಾರಿಯ ಸದಸ್ಯ ಸಹಕಾರಿಗಳ ಡೆಲಿಗೇಟ್‌ಗಳು

**ಅಭ್ಯರ್ಥಿಯಿಂದ ಘೋಷಣೆ**

ಮೇಲೆ ಹೇಳಿದ ಅಭ್ಯರ್ಥಿಯಾದ ನಾನು, ಈ ನಾಮ ನಿರ್ದೇಶನಕ್ಕೆ ಒಪ್ಪಿದ್ದೇನೆ ಮತ್ತು ಈ ಮೂಲಕ

(ಎ) ನನಗೆ ____________ ವರ್ಷ ವಯಸ್ಸು ತುಂಬಿದೆ ಎಂದು:

(ಬಿ) ನಾನೊಬ್ಬ ಮಹಿಳೆಯಾಗಿದ್ದೇನೆಂದು,

(ಸಿ) ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ/ ಅನುಸೂಚಿತ ಪಂಗಡ, ಹಿಂದುಳಿದ ವರ್ಗವಾಗಿರುವ ____________ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ಸದಸ್ಯನಾಗಿದ್ದೇನೆ. ಸಕ್ರಮ ಪ್ರಾಧಿಕಾರಿಯು ಈ ಸಂದರ್ಭದಲ್ಲಿ ನೀಡಿದ ಅನುಸೂಚಿತ ಜಾತಿ / ಅನುಸೂಚಿತ ಪಂಗಡ / ಹಿಂದುಳಿದ ವರ್ಗದ ಪ್ರಮಾಣ ಪತ್ರದ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗಿದೆ ಎಂದು:

(ಡಿ) ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ದಿಷ್ಟ ಪಡಿಸಿರುವ ಯಾವುದೇ ಅನರ್ಹತೆಗಳನ್ನು ಹೊಂದಿಲ್ಲ ಎಂದು:

(ಇ) ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ದಿಷ್ಟ ಪಡಿಸಿರುವ ಯಾವುದೇ ಅಗತ್ಯ ಅರ್ಹತೆಗಳನ್ನು ಹೊಂದಿದ್ದೇನೆ ಎಂದು:

(ಎಫ್) ನಾನು ಆಯ್ಕೆ ಮಾಡಿದ ಚಿಹ್ನೆಗಳು, ಆದ್ಯತೆ ಕ್ರಮದಲ್ಲಿ ಹೀಗಿದೆ :

1. ____________
2. ____________ ಮತ್ತು
3. ____________ ಎಂದು ಘೋಷಿಸುತ್ತೇನೆ.

ದಿನಾಂಕ ........................ **ಅಭ್ಯರ್ಥಿಯ ಸಹಿ**

---

**(ರಿಟರ್ನಿಂಗ್ ಅಧಿಕಾರಿಯಿಂದ ಭರ್ತಿ ಮಾಡಬೇಕಾದುದು)**

ನಾಮಪತ್ರದ ಕ್ರಮಸಂಖ್ಯೆ ____________

ಶ್ರೀ/ಶ್ರೀಮತಿ ________________________ (ಅಭ್ಯರ್ಥಿ) ಅವರು ಈ ನಾಮಪತ್ರವನ್ನು ____________ ದಿನಾಂಕದಂದು ____________ ಗಂಟೆಗೆ ನನ್ನ ಕಚೇರಿಯಲ್ಲಿ ನನಗೆ ಒಪ್ಪಿಸಲಾಗಿದೆ.

ದಿನಾಂಕ ____________ **ರಿಟರ್ನಿಂಗ್ ಅಧಿಕಾರಿ**

**ನಮೂನೆ –2ಸಿ**

**ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ**
[ನಿಯಮ 5ಜಿ(4) ಅನ್ನು ನೋಡಿ]

___________ ಸಹಕಾರಿ ___________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ ___________ * ಸಾಮಾನ್ಯ ___________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ ___________ ಮತಕ್ಷೇತ್ರದಿಂದ ___________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

| **ಕ್ರಮ ಸಂಖ್ಯೆ** | **ವರ್ಗೀಕರಣ** | **ಅಭ್ಯರ್ಥಿಯ ಹೆಸರು** | **ಅಭ್ಯರ್ಥಿಯ ತಂದೆ/ ಗಂಡನ ಹೆಸರು** | **ಅಭ್ಯರ್ಥಿಯ ವಿಳಾಸ** |
|---|---|---|---|---|
| **1** | **2** | **3** | **4** | **5** |
| | ಸಾಮಾನ್ಯ | | | |
| | ಹಿಂದುಳಿದ ವರ್ಗ | | | |
| | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ | | | |
| | ಮಹಿಳೆಯರು | | | |

ಸ್ಥಳ: ___________
ದಿನಾಂಕ : ___________

**ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಡಿ**

## ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸು

[ನಿಯಮ 5ಹೆಚ್ ಅನ್ನು ನೋಡಿ]

___________ ಸಹಕಾರಿ ___________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ ___________ * ಸಾಮಾನ್ಯ ___________ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ ___________ ಮತಕ್ಷೇತ್ರದಿಂದ ___________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

ಗೆ :

ರಿಟರ್ನಿಂಗ್ ಅಧಿಕಾರಿ,
______________________
______________________

ನಾನು, ಮೇಲಿನ ಚುನಾವಣೆಯಲ್ಲಿ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯಾಗಿದ್ದು ನನ್ನ ಉಮೇದುವಾರಿಕೆ / ಅಭ್ಯರ್ಥಿತನವನ್ನು ಹಿಂತೆಗೆದುಕೊಳ್ಳುತ್ತೇನೆಂದು ಈ ಮೂಲಕ ನೋಟೀಸು ನೀಡುತ್ತೇನೆ.

ಸ್ಥಳ :
ದಿನಾಂಕ : **ಅಭ್ಯರ್ಥಿಯ ಸಹಿ**

---

## ಹಿಂತೆಗೆತದ ನೋಟೀಸಿನ ಸ್ವೀಕೃತಿ

(ನೋಟೀಸನ್ನು ನೀಡುವ ವ್ಯಕ್ತಿಗೆ ಕೊಡತಕ್ಕುದಾದದ್ದು)

___________ ಸಹಕಾರಿಯ ___________ ಸಹಕಾರಿಯ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಗೆ ___________ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ನಾಮನಿರ್ದೇಶನ ಸಲ್ಲಿಸಿರುವ ಅಭ್ಯರ್ಥಿ ಆದ ಶ್ರೀ / ಶ್ರೀಮತಿ ______________________ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ನನ್ನ ಕಚೇರಿಯಲ್ಲಿ ___________ ದಿನಾಂಕಕ್ಕೆ ___________ ಗಂಟೆಗೆ ನನಗೆ ಸಲ್ಲಿಸಿದ್ದಾನೆ/ಳೆ.

ಸ್ಥಳ : ___________
ದಿನಾಂಕ : ___________ **ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಇ**

**ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ**
[ನಿಯಮ 5ಐ ಮತ್ತು 5ಜೆ ಅನ್ನು ನೋಡಿ]

__________ ಸಹಕಾರಿ __________ ಇದರ ಆಡಳಿತ ಮಂಡಲಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ __________ ಮತಕ್ಷೇತ್ರದಿಂದ __________ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ವಿಳಾಸ | ಹಂಚಿಕೆ ಮಾಡಿದ ಚಿಹ್ನೆ |
|---|---|---|---|
| **1** | **2** | **3** | **4** |
| 1. | | | |
| 2. | | | |
| 3. | | | |
| 4. | | | |

ಸ್ಥಳ: __________
ದಿನಾಂಕ : __________

**ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಎಫ್**

**ಚುನಾವಣಾ ಫಲಿತಾಂಶ ಘೋಷಣೆ**

[ನಿಯಮ 5ಎಲ್ ಅನ್ನು ನೋಡಿ]

(ಸ್ಥಾನಕ್ಕೆ ಸ್ಪರ್ಧೆಯಿಲ್ಲದಿದ್ದಾಗ ಉಪಯೋಗಿಸಬೇಕಾದುದು)

__________ ಸಹಕಾರಿ __________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ __________ ಮತಕ್ಷೇತ್ರದಿಂದ __________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಎಲ್ ನಲ್ಲಿನ ಉಪಬಂಧಾನುಸಾರ, ನಾನು

ಹೆಸರು

ವಿಳಾಸ

ಸದರಿ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಿರ್ದೇಶಕನಾಗಿ __________ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುತ್ತೇನೆ.

ಸ್ಥಳ: __________

ದಿನಾಂಕ : __________ ರಿಟರ್ನಿಂಗ್ ಅಧಿಕಾರಿ

**ನಮೂನೆ –2ಜಿ**

**ಚುನಾವಣಾ ಫಲಿತಾಂಶ ಘೋಷಣೆ**

[ನಿಯಮ 5ಎಲ್ ಅನ್ನು ನೋಡಿ]

(ಸ್ಥಾನಕ್ಕೆ ಸ್ಪರ್ಧೆ ಇಲ್ಲದಿರುವಾಗ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಉಪಯೋಗಿಸಬೇಕಾದುದು)

___________ ಸಹಕಾರಿ ___________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ ___________ * ಸಾಮಾನ್ಯ ___________ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ ___________ ಮತಕ್ಷೇತ್ರದಿಂದ ___________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ **5ಎಲ್** ನಲ್ಲಿನ ಉಪಬಂಧಾನುಸಾರ, ನಾನು

ಹೆಸರು

ವಿಳಾಸ

ಸದರಿ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಿರ್ದೇಶಕನಾಗಿ ___________ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುತ್ತೇನೆ.

ಶ್ರೀ / ಶ್ರೀಮತಿ _________________ ಅನರ್ಹತೆಯಿಂದ

ಶ್ರೀ / ಶ್ರೀಮತಿ _________________ ರಾಜೀನಾಮೆಯಿಂದ

ಶ್ರೀ / ಶ್ರೀಮತಿ _________________ ಮರಣದಿಂದ

ಶ್ರೀ / ಶ್ರೀಮತಿ _________________ ಚುನಾವಣೆಯನ್ನು ಅಸಿಂಧುಗೊಳಿಸಿರುವುದರಿಂದ

ಶ್ರೀ / ಶ್ರೀಮತಿ _________________ ಮತಕ್ಷೇತ್ರದ ಸ್ಥಾನವು ಖಾಲಿಯಾಗಿರುವುದರಿಂದ / ಖಾಲಿಯಾಗಿದೆಯೆಂದು ಘೋಷಿಸಲಾಗಿರುವುದರಿಂದ ಉಂಟಾದ ಖಾಲಿ ಸ್ಥಾನ.

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಹೆಚ್**

[ನಿಯಮ 5ಕ್ಯೂ ಅನ್ನು ನೋಡಿ]

<table>
<tr><td>

<u>**ಮತ ಪತ್ರದ ಪಕ್ಕ ಪ್ರತಿ (Counterfoil)**</u>

ನಿರ್ದೇಶಕ/ಪ್ರತಿನಿಧಿ/ಡೆಲಿಗೇಟ್ ಚುನಾವಣೆಗೆ ಸಹಕಾರಿ

ಪ್ರದೇಶ/ಕ್ಷೇತ್ರದ ಹೆಸರು

ಸದಸ್ಯ/ಪ್ರತಿನಿಧಿ/ಡೆಲಿಗೇಟ್ ಇವರ ಕ್ರಮ ಸಂಖ್ಯೆ

ಸದಸ್ಯ/ಪ್ರತಿನಿಧಿ/ಡೆಲಿಗೇಟ್ ರವರ ಸಹಿ ಅಥವಾ ಹೆಬ್ಬಟ್ಟಿನ ಗುರುತು

</td></tr>
<tr><td>

<u>**ಪರ್‌ಪೋರೇಷನ್ (perforation)**</u>

ನಿರ್ದೇಶಕ/ಪ್ರತಿನಿಧಿ/ಡೆಲಿಗೇಟ್

ಪ್ರದೇಶ/ಕ್ಷೇತ್ರದ ಹೆಸರು

</td></tr>
</table>

**ನಮೂನೆ – 2ಐ**

**ಮತಪತ್ರಗಳ ಲೆಕ್ಕ**

[ನಿಯಮ 5ಎಎ ಅನ್ನು ನೋಡಿ]

**........................................................ ಸಹಕಾರಿಯ ನಿರ್ದೇಶಕರ / ಪ್ರತಿನಿಧಿ ಚುನಾವಣೆ**

**ಮತದಾನ ಕೇಂದ್ರ ಹೆಸರು ..........................................................**

**1. ಮತಪತ್ರಗಳು ಸ್ವೀಕೃತ / ಮುದ್ರಿತ ಕ್ರಮಸಂಖ್ಯೆ**

**ಇಂದ ಗೆ**

**ಒಟ್ಟು ..................................................**

**2. ಉಪಯೋಗಿಸದಿರುವ ಮತ ಪತ್ರಗಳು (ಅಂದರೆ ಮತದಾರರಿಗೆ ಕೊಡದಿರುವವು)**

**(ಎ) ಪ್ರಿಸೈಡಿಂಗ್ ಅಧಿಕಾರಿಯ ಸಹಿ ಸಹಿತ**

**(ಬಿ) ಪ್ರಿಸೈಡಿಂಗ್ ಅಧಿಕಾರಿಯ ಸಹಿ ರಹಿತ**

**ಒಟ್ಟು [(ಎ) + (ಬಿ)] ...................**

**3. ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಮತ ಪತ್ರಗಳು**

**ಒಟ್ಟು (1–2)=3**

**4. ಉಪಯೋಗಿಸಿದ ಆದರೆ ಮತಪೆಟ್ಟಿಗೆಯೊಳಗೆ ಹಾಕದ ಮತಪತ್ರಗಳು**

**(ಎ) ಮತದಾನ ಪ್ರಕ್ರಿಯೆಯ ಉಲ್ಲಂಘನೆಗಾಗಿ ರದ್ದುಪಡಿಸಿದ ಮತಪತ್ರಗಳು**

**(ಬಿ) ಇತರ ಯಾವುದೇ ಕಾರಣಕ್ಕಾಗಿ ರದ್ದುಪಡಿಸಿದ ಮತಪತ್ರಗಳು**

**ಒಟ್ಟು [(ಎ) + (ಬಿ)] ...................**

**5. ಮತಪೆಟ್ಟಿಗೆಯಲ್ಲಿರಬೇಕಾದ ಮತಪತ್ರಗಳು**

**(3–4=5) ..............................**

**ಪ್ರಿಸೈಡಿಂಗ್ ಅಧಿಕಾರಿಯ ಸಹಿ**

**ನಮೂನೆ – 2ಜೆ**

## ಅಂತಿಮ ಫಲಿತಾಂಶದ ಹಾಳೆ

[ನಿಯಮ 5ಎಸಿ(2) ಅನ್ನು ನೋಡಿ]

__________ ಸಹಕಾರಿ __________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ __________ ಮತಕ್ಷೇತ್ರದಿಂದ __________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

| **ಮತದಾನ ಕೇಂದ್ರದ ಸಂಖ್ಯೆ** | **ಮತಪೆಟ್ಟಿಗೆ / ಪೆಟ್ಟಿಗೆಗಳಲ್ಲಿ ಬಂದ ಒಟ್ಟು ಮತಗಳು** |
|---|---|
| 1. | |
| 2. | |
| 3. | |
| 4. | |
| 5. | |
| ಒಟ್ಟು | |

**ದಾಖಲಿಸಿದ ಒಟ್ಟು ಸಿಂಧುವಾದ ಮತಗಳು**

| ಅಭ್ಯರ್ಥಿ | ಸಿಂಧುವಾದ ಒಟ್ಟು ಮತಗಳು | ತಿರಸ್ಕೃತವಾದ ಮತಪತ್ರಗಳು | ಗಳಿಸಿದ ಸಿಂಧುವಾದ ಮತಗಳು |
|---|---|---|---|
| 1 | 2 | 3 | 4 |

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಕೆ**

**ಚುನಾವಣಾ ಫಲಿತಾಂಶದ ಘೋಷಣೆ**

[ನಿಯಮ 5ಎಡಿ ಅನ್ನು ನೋಡಿ)

(ಸ್ಪರ್ಧೆ ಇದ್ದಾಗ ಉಪಯೋಗಿಸಬೇಕಾದುದು)

__________ ಸಹಕಾರಿ __________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ __________ ಮತಕ್ಷೇತ್ರದಿಂದ __________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ **5ಎಡಿ** ನಲ್ಲಿನ ಉಪಬಂಧಾನುಸಾರ, ನಾನು

ಹೆಸರು
ವಿಳಾಸ

ಸದರಿ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಿರ್ದೇಶಕನಾಗಿ __________ ಮತಕ್ಷೇತ್ರದಿಂದ ಚುನಾಯಿತನಾಗಿದ್ದಾನೆಂದು ಘೋಷಿಸುತ್ತೇನೆ.

ಸ್ಥಳ: __________
ದಿನಾಂಕ : __________

**ರಿಟರ್ನಿಂಗ್ ಅಧಿಕಾರಿ**

**ನಮೂನೆ – 2ಎಲ್**

**ಚುನಾವಣಾ ಪ್ರಮಾಣ ಪತ್ರ**

[ನಿಯಮ 5ಎಇ ಅನ್ನು ನೋಡಿ)

___________ ಸಹಕಾರಿ ___________ ಇದರ ಆಡಳಿತ ಮಂಡಳಿಗೆ ನಿರ್ದೇಶಕರ ಚುನಾವಣೆ ___________ * ಸಾಮಾನ್ಯ ___________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ ___________ ಮತಕ್ಷೇತ್ರದಿಂದ ______________________ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯ ರಿಟರ್ನಿಂಗ್ ಅಧಿಕಾರಿ ಆದ ನಾನು ಶ್ರೀ / ಶ್ರೀಮತಿ ______________________ ಇವರು ___________ ದಿನಾಂಕದಂದು ___________ ಸಹಕಾರಿಯ ಅಡಳಿತ ಮಂಡಳಿಗೆ ನಿರ್ದೇಶಕನಾಗಿ ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಮತ್ತು ಅದರ ಗುರುತಾಗಿ ಅವರಿಗೆ ಈ ಚುನಾವಣಾ ಪ್ರಮಾಣ ಪತ್ರವನ್ನು ನಾನು ಕೊಟ್ಟಿದ್ದೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: __________

**ರಿಟರ್ನಿಂಗ್ ಅಧಿಕಾರಿ**

ದಿನಾಂಕ : __________

**ನಮೂನೆ – 2ಎಂ**

**ಸಹಕಾರಿಯ ಪದಾಧಿಕಾರಿ ಚುನಾವಣೆಗೆ ನಾಮಪತ್ರ**

[ನಿಯಮ 6(4) ಅನ್ನು ನೋಡಿ)

1) ಸ್ಪರ್ಧಿಸಲಾಗುವ ಪದ
2) ಅಭ್ಯರ್ಥಿಯ ಹೆಸರು
3) ಸದಸ್ಯರ ವಹಿಯಲ್ಲಿ ಕ್ರಮ ಸಂಖ್ಯೆ
4) ಅಭ್ಯರ್ಥಿಯ ತಂದೆಯ ಅಥವಾ ಗಂಡನ ಹೆಸರು
5) ಅಭ್ಯರ್ಥಿಯ ವಿಳಾಸ
6) ಸೂಚಕನ ಹೆಸರು
7) ಸದಸ್ಯರ ವಹಿಯಲ್ಲಿ ಸೂಚಕನ ಕ್ರಮ ಸಂಖ್ಯೆ
8) ಸೂಚಕನ ಸಹಿ
9) ಅನುಮೋದಕನ ಹೆಸರು
10) ಸದಸ್ಯರ ವಹಿಯಲ್ಲಿ ಅನುಮೋದಕನ ಕ್ರಮ ಸಂಖ್ಯೆ
11) ಅನುಮೋದಕನ ಸಹಿ

ಅಭ್ಯರ್ಥಿಯ ಘೋಷಣೆ

ನಾನು ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರೆ ಯಾವುದೇ ಪದಾಧಿಕಾರಿ (ನಿರ್ದಿಷ್ಟಪಡಿಸಿ) ಪದಕ್ಕೆ ಚುನಾವಣೆಗಾಗಿ ಅಭ್ಯರ್ಥಿಯಾಗಿ ಇಚ್ಛಿಸುತ್ತೇನೆ ಎಂದು ಮತ್ತು ನನ್ನ ತಿಳಿವಳಿಕೆ ಮತ್ತು ನಂಬಿಕೆ ಇರುವಷ್ಟರಮಟ್ಟಿಗೆ ಕೆಳಗಿನ ಮಾಹಿತಿ ಸತ್ಯವಾಗಿರುತ್ತದೆಂದು ಘೋಷಿಸುತ್ತೇನೆ.

ಎ) ನನ್ನ ವಯಸ್ಸು ............................ ವರ್ಷಗಳು ತುಂಬಿದೆ.

ಬಿ) ನಾನು ಮಹಿಳೆಯಾಗಿದ್ದೇನೆ.

ಸಿ) ನಾನು ....................... ವರ್ಗ/ಜಾತಿ/ಪಂಗಡದ ಸದಸ್ಯನಾಗಿದ್ದು ಅದು ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಎಂದು ಪರಿಗಣಿಸಲ್ಪಟ್ಟಿದೆ.

ಡಿ) ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಉಕ್ತವಾಗಿರುವ ಯಾವುದೇ ಅನರ್ಹತೆಗಳನ್ನು ಹೊಂದಿರುವುದಿಲ್ಲ.

ಇ) ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಉಕ್ತವಾಗಿರುವ ಅಗತ್ಯ ಅರ್ಹತೆಗಳನ್ನು ಹೊಂದಿರುತ್ತೇನೆ.

ಸ್ಥಳ: __________

ದಿನಾಂಕ : __________ **ಅಭ್ಯರ್ಥಿಯ ಸಹಿ**

(ರಿಟರ್ನಿಂಗ್ ಅಧಿಕಾರಿಯು ಭರ್ತಿ ಮಾಡಬೇಕಾದದ್ದು)

ಈ ನಾಮಪತ್ರವನ್ನು ಅಭ್ಯರ್ಥಿಯಾದ ಶ್ರೀ / ಶ್ರೀಮತಿ .................................................. ಅವನು / ಅವಳು ದಿನಾಂಕ .................. ದಂದು .................................. ಘಂಟೆಗೆ ನನಗೆ ಸಲ್ಲಿಸಿದ್ದಾನೆ/ಳೆ.

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**]

**ನಮೂನೆ – 3**

## ನಿಯಮ 13(1) ಮತ್ತು (2)ರ ಅಮಲ್ಜಾರಿ ಅರ್ಜಿ

ನಂಬರ್ ........... ನೇ ............. ಸಹಕಾರಿಯ ಪರವಾಗಿ ಡಿಕ್ರಿಯನ್ನು / ಅವಾರ್ಡನ್ನು/ ತೀರ್ಪನ್ನು / ಹಣವನ್ನು ವಸೂಲ್ಮಾಡಲು ಆದೇಶವನ್ನು ಪಡೆದಿರುವ ಸದರಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಾದ ನಾನು 2004ರ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ ನಿಯಮ 13(1)ರ ಮೇರೆಗೆ ಸದರಿ ಡಿಕ್ರಿಯ / ಅವಾರ್ಡಿನ / ತೀರ್ಪಿನ (ಇದಕ್ಕೆ ಲಗತ್ತಿಸಿರುವ) ಆದೇಶವನ್ನು ಜಾರಿಗೊಳಿಸಬೇಕೆಂದು ಸಲ್ಲಿಸಿದ ಅರ್ಜಿ.

1. ಅರ್ಜಿದಾರ / ಮುಖ್ಯ ಕಾರ್ಯನಿರ್ವಾಹಕ

   (ಅ) ......................... ಸೌಹಾರ್ದ ಸಹಕಾರಿ :

   (ಆ) ಪ್ರತಿವಾದಿ (ಸುಸ್ತಿದಾರನೆಂದು ಈ ಕೆಳಗೆ ಕರೆಯಲಾಗಿದೆ):

   (ಇ) ಡಿಕ್ರಿ/ಅವಾರ್ಡ್/ತೀರ್ಪು ಅಥವಾ ಆದೇಶದಲ್ಲಿ ಸುಸ್ತಿದಾರನೆಂದು ಇನ್ನು ಮುಂದೆ ಕರೆಯಲ್ಪಡುವವ :

2. ಡಿಕ್ರಿಯ/ಅವಾರ್ಡಿನ/ತೀರ್ಪಿನ ಅಥವಾ ಆದೇಶದ ತಾ:....... :
3. ಡಿಕ್ರಿಯ / ಅವಾರ್ಡಿನ / ತೀರ್ಪಿನ ಅಥವಾ ಆದೇಶದ ನಂತರ ಯಾವುದೇ ವಸೂಲಿ ಮಾಡಿದ್ದರೆ ಅದರ ವಿವರ :
4. ಈ ಮೊದಲು ಮಾಡಿದ್ದ ಜಾರಿ ದಿನಾಂಕ ಮತ್ತು ಅದರ ಫಲಿತಾಂಶ :
5. ಡಿಕ್ರಿ/ಅವಾರ್ಡ್/ತೀರ್ಪು/ಅಥವಾ ಆದೇಶದ ಪ್ರಕಾರ ಬಡ್ಡಿ ಸಮೇತ ಬರತಕ್ಕ ಹಣ ಎಷ್ಟು?:
6. ಯಾರ ಮೇಲೆ ಜಾರಿಗೊಳಿಸಲಾಗುತ್ತಿದೆ? :
7. ಸಹಾಯಕ ರಿಜಿಸ್ಟ್ರಾರನು ಮಾಡಬೇಕಾದ ಸಹಾಯ

   ಉದಾಹರಣೆ : ಅಸಲು ಹಣದ ಮೇಲೆ ವಸೂಲು ದಿನಾಂಕದವರೆಗೆ ಬಡ್ಡಿ ಮತ್ತು ಈ ಜಾರಿಗೊಳಿಸುವಿಕೆಗಾಗಿ ತಗಲುವ ಖರ್ಚು ಸೇರಿ ರೂ...........ನ್ನು ಈ ಕೆಳಗೆ ನಮೂದಿಸಿದ ರೀತಿಯಲ್ಲಿ ವಸೂಲು ಮಾಡಬೇಕಾಗಿ ಪ್ರಾರ್ಥನೆ

   (i) ಚರಸ್ವತ್ತುಗಳ ಮಾರಾಟದಿಂದ :

   (ii) ಲಗತ್ತಿಸಿದ ಪಟ್ಟಿ ಪ್ರಕಾರ ಸುಸ್ತಿದಾರನ ಸ್ಥಿರ ಸ್ವತ್ತುಗಳ ಜಪ್ತಿ ಮತ್ತು ಮಾರಾಟದಿಂದ:

   (iii) ಏಕಕಾಲಕ್ಕೆ ಚರಸ್ವತ್ತುಗಳ ಹಾಗೂ ಸ್ಥಿರ ಸ್ವತ್ತುಗಳ ಜಪ್ತಿ ಮಾರಾಟದಿಂದ (ಕಾರಣಗಳನ್ನು ಕೊಡತಕ್ಕದ್ದು) :

ಈ ಮೇಲೆ ಹೆಸರಿಸಿದ ಅರ್ಜಿದಾರನಾದ ನಾನು, ಈ ಮೇಲೆ ನಮೂದಿಸಿದ ಎಲ್ಲಾ ಸಂಗತಿಗಳೂ ನನ್ನ ಬಹುಮಟ್ಟಿನ ತಿಳಿವಳಿಕೆ ಮೇರೆಗೆ ನಿಜವಾಗಿರುತ್ತವೆಂದು ಘೋಷಿಸುತ್ತೇನೆ.

ಸ್ಥಳ : ಸೌಹಾರ್ದ ಸಹಕಾರಿಯ ಪರವಾಗಿ

ದಿನಾಂಕ : ಮುಖ್ಯ ಕಾರ್ಯನಿರ್ವಾಹಕ

**ವಿವರಣಾ ಪಟ್ಟಿ/ತಪಶೀಲು ಪಟ್ಟಿ**

........... ಜಿಲ್ಲಾ............. ತಾಲ್ಲೂಕು, ನಂಬರ್........... ನೇ ............... ಸಹಕಾರಿಯ ಪರವಾಗಿ ಅರ್ಜಿದಾರನು ಹೊಂದಿದ ಡಿಕ್ರಿಯ/ಅವಾರ್ಡಿನ/ತೀರ್ಪಿನ ಅಥವಾ ಆದೇಶದ ವಿವರಗಳನ್ನು ತೋರಿಸುವ ತಃಖ್ತೆ.

| | | |
|---|---|---|
| 1 | ಪ್ರವೇಶ ನಂಬರು | |
| 2 | ಸದಸ್ಯನ ಹೆಸರು | |
| 3 | ತಂದೆಯ ಹೆಸರು | |
| 4 | ಸದಸ್ಯನ ವಾಸಸ್ಥಳ | |
| 5 | ಡಿಕ್ರಿ ಯಲ್ಲಿ /ಅವಾರ್ಡಿನಲ್ಲಿ ಅಥವಾ ತೀರ್ಪಿನಲ್ಲಿ ಅಥವಾ ಆದೇಶದಲ್ಲಿ ತಿಳಿಸಿದ ಮೊಬಲಗು | |
| 6 | ಡಿಕ್ರಿಯ/ ಅವಾರ್ಡಿನ/ತೀರ್ಪಿನ ಅಥವಾ ಆದೇಶದ ದಿನಾಂಕದಿಂದ ಈ ಅರ್ಜಿಯನ್ನು ದಾಖಲು ಮಾಡುವ ದಿನಾಂಕದವರೆಗೆ ಬಡ್ಡಿ. ಈ ಮದ್ಯೆ ಯಾವುದೇ ಹಣವನ್ನು ಪಾವತಿ ಮಾಡಿದ್ದರೆ ಅದನ್ನು ಕಳೆದು ತಪಶೀಲುಗಳನ್ನು ಕೊಡುವುದು | |
| 7 | ತದನಂತರ ಚಾಲ್ತಿ ಬಡ್ಡಿಯ ದರ | |
| 8 | ಬೇಕಾದ ಸಹಾಯ:ಚರಸ್ವತ್ತುಗಳ ಸ್ಥಿರ ಸ್ವತ್ತುಗಳ ಮೇಲೆ ಪ್ರಥಮ ಋಣಭಾರದ ಜಾರಿ | |
| 9 | ಜಪ್ತಿ ಮಾಡಬೇಕಾದ ಸ್ಥಿರ ಸ್ವತ್ತುಗಳ ವಿವರ (ವಿಸ್ತೀರ್ಣ,ಸರ್ವೆ ನಂಬರು, ಸ್ಥಳ,ಸ್ವರೂಪ, ಗೇಣಿ ಮೌಲ್ಯ ಮತ್ತು ಆಸ್ತಿಯ ಮೌಲ್ಯ ಮುಂತಾದ ವಿವರಗಳನ್ನುನೀಡಬೇಕು) | |
| 10 | ಸುಸ್ತಿದಾರನಿಗೆ ಸ್ಥಿರ ಸ್ವತ್ತುಗಳಲ್ಲಿ ಇರುವ ಪಾಲು ಅಥವಾ ಹಕ್ಕು | |
| 11 | ಆಸ್ತಿಯ ಮೇಲೆ ಇರುವ ಋಣಭಾರಗಳು | |
| 12 | ಷರಾ | |

ಸೂಚನೆ : 11ನೇ ಅಂಕಣದಲ್ಲಿ ನಮೂದಿಸಬೇಕಾದ ವಿವರಗಳನ್ನು ಒದಗಿಸದಿದ್ದರೆ, ಸದರಿ ಸ್ಥಿರ ಸ್ವತ್ತುಗಳಿಗೆ ಸಂಬಧಪಟ್ಟ ಜಾರಿಗೊಳಿಸುವಿಕೆಯ ಅರ್ಜಿಯ ದಿನಾಂಕಕ್ಕೆ ಹಿಂದಿನ 12 ವರ್ಷಗಳ ಒಂದು ಋಣಭಾರ ಪತ್ರವನ್ನು ನೋಂದಣಿ ಇಲಾಖೆಯಿಂದ ಪಡೆದು ಡಿಕ್ರಿದಾರನು/ಅರ್ಜಿದಾರನ ಸ್ಥಿರ ಸ್ವತ್ತುಗಳನ್ನು ಜಪ್ತಿ ಮಾಡಿದ ದಿನಾಂಕದಿಂದ 20 ದಿನಗಳೊಳಗೆ ಮಾರಾಟ ಅಧಿಕಾರಿಗೆ ಕೊಡತಕ್ಕದ್ದು.

**ನಮೂನೆ – 4**

ನಿಯಮ 13(3)

**ತಗಾದೆ ನೋಟೀಸು (ಜಫ್ತಿ ವಾರೆಂಟು)**

ಸಹಕಾರ ಇಲಾಖೆಯ ಅಧಿಕಾರಿಯಾದ :..................... ಇವರಿಗೆ ..................... ಸಹಕಾರಿಗೆ ಬಾಕಿ ಪಾವತಿಸದೇ ಸುಸ್ತಿಯಾದ ಈ ಕೆಳಗೆ ಹೆಸರಿಸಿದ ಸುಸ್ತಿದಾರರ ಸ್ವತ್ತುಗಳನ್ನು ಜಫ್ತಿ ಮಾಡಲು ಅಧಿಕಾರ ನೀಡಲಾಗಿರುತ್ತದೆ.

| | | |
|---|---|---|
| 1 | ಗ್ರಾಮದ ಮತ್ತು ತಾಲ್ಲೂಕಿನ ಹೆಸರು | |
| 2 | ಸುಸ್ತಿದಾರನ ಹೆಸರು | |
| 3 | ಡಿಕ್ರಿ/ಆವಾರ್ಡ್/ತೀರ್ಪು ಆದೇಶದ ಪ್ರಕಾರ ಬಾಕಿ ಮೊತ್ತ | |
| 4 | ಜಫ್ತಿ ಮಾಡುವವನಿಗೆ ಭತ್ಯೆ | |
| 5 | ಅವಾರ್ಡ/ತೀರ್ಪು ಅಥವಾ ಆದೇಶದಮೊತ್ತದ ಮೇಲೆ ಮುಂದಿನ/ಆನಂತರದ ಬಡ್ಡಿ | |
| 6 | ಕೂಡಿ ಬರುವ ಮುಂದಿನ ಬಡ್ಡಿಯದರ | |
| 7 | ಜಫ್ತಿಯ ದಿನಾಂಕ ಮತ್ತು ಪ್ರತಿಯನ್ನು ಸುಸ್ತಿದಾರನಿಗೆ ನೀಡಿದ ದಿನಾಂಕ ಜಫ್ತಿಮಾಡದಿದ್ದಲ್ಲಿ ಬಾಕಿ ಮೊತ್ತ ಪಾವತಿಸಿದ ದಿನಾಂಕ | |

ಜಫ್ತಿಯ ವೆಚ್ಚ ಸೇರಿ ಬಾಕಿ ಮೊತ್ತವನ್ನು ಮುಂಚಿತವಾಗಿ ಪಾವತಿಸಿ ಋಣಮುಕ್ತರಾಗದಿದ್ದಲ್ಲಿ ಜಫ್ತಿ ಮಾಡಲಾದ ಸ್ವತ್ತುಗಳನ್ನು ಬಹಿರಂಗವಾಗಿ ಮಾರಾಟ ಮಾಡಲು ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ಸುಸ್ತಿದಾರರಿಗೆ ತಿಳಿಸಲಾಗಿದೆ.

ಸ್ಥಳ : ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್

ದಿನಾಂಕ : ...................... ಉಪ ವಿಭಾಗ

**ಸೂಚನೆ :** 1) ಜಫ್ತಿ ಆದೇಶವನ್ನು ನೀಡಿದ ತಕ್ಷಣ ಸುಸ್ತಿದಾರನ ಬಾಕಿ ಮೊತ್ತದ ಜೊತೆಗೆ ವೆಚ್ಚಗಳನ್ನು ಮಾರಾಟ ಅಧಿಕಾರಿಗೆ ಪಾವತಿಸತಕ್ಕದ್ದು ಹಾಗೂ ಈ ಬಗ್ಗೆ

ರಸೀದಿಯನ್ನು ಪಡೆಯತಕ್ಕದ್ದೆಂದು ಸುಸ್ತಿದಾರರಿಗೆ ತಿಳಿಸಲಾಗಿದೆ.

2) ಜಪ್ತಿ ಮಾಡುವ ವ್ಯಕ್ತಿಯು ಈ ಆದೇಶವನ್ನು ಹಾಜರುಪಡಿಸತಕ್ಕದ್ದು ಹಾಗೂ ಬಾಕಿ ಇರುವ ಮೊತ್ತವನ್ನು ಒಮ್ಮೆಲೇ ಪಾವತಿ ಮಾಡದೇ ಇದ್ದಲ್ಲಿ ಜಪ್ತಿ ಮಾಡಿದ ಆಸ್ತಿಗಳ ಪಟ್ಟಿ ಅಥವಾ ತಹಶೀಲು ಪಟ್ಟಿಯನ್ನು ತಕ್ಷಣ ಸುಸ್ತಿದಾರನಿಗೆ ನೀಡಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 15ರ ಪ್ರಕಾರ ಮುಂಚಿತವಾಗಿ ಬಾಕಿ ಪಾವತಿಸದೇ ಇದ್ದಲ್ಲಿ ಜಪ್ತಿ ಮಾಡಲ್ಪಟ್ಟ ಆಸ್ತಿಗಳನ್ನು ಯಾವ ಸ್ಥಳದಲ್ಲಿ ಯಾವ ದಿನಾಂಕ ಮತ್ತು ಸಮಯದಂದು ಮಾರಾಟಕ್ಕೆ ಇಡಲಾಗುವುದೆಂದು ತಿಳಿಸತಕ್ಕದ್ದು.

**ನಮೂನೆ – 5**

ನಿಯಮ 15(ಎ)

**ಜಪ್ತಿ ಮಾಡಲಾದ ಚರ ಸ್ವತ್ತುಗಳ ಪಟ್ಟಿ**

ಸುಸ್ತಿದಾರನಾದ.................................................................. ಇವರಿಂದ ಬರಬೇಕಾದ ಹಣಗಳಿಗೆ ................................ ಗ್ರಾಮದಲ್ಲಿರುವ ......................................... ನಿಂದ ಜಪ್ತಿ ಮಾಡಲಾದ ಚರ ಸ್ವತ್ತುಗಳ ಪಟ್ಟಿ

| ಕ್ರ.ಸಂ. | ಸ್ವತ್ತುಗಳ ವಿವರ | ಅಂದಾಜು ಮೌಲ್ಯ | ಬರಬೇಕಾದ ಹಣ | ಜಪ್ತಿ ಮಾಡಿದ ಮತ್ತು ಸುಸ್ತಿದಾರನಿಗೆ ನಕಲನ್ನು ಕೊಟ್ಟ ದಿನಾಂಕ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | | | | | |

ಸ್ಥಳ :

ದಿನಾಂಕ:

ಮಾರಾಟ ಅಧಿಕಾರಿ

**ನಮೂನೆ – 6**

**ನಿಯಮ 15(ಎ)**

**ಜಪ್ತಿ ಮಾಡಲಾದ ಚರ / ಸ್ಥಿರ ಸ್ವತ್ತುಗಳ ಹರಾಜು ಅಸೂಚನೆ**

...................... ತಾಲ್ಲೂಕು .................. ಗ್ರಾಮದಲ್ಲಿರುವ ................................ ಸಹಕಾರಿಯ............................ ಗ್ರಾಮದಲ್ಲಿರುವ ಸುಸ್ತಿದಾರರಾದ ............................ಇವರ ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ಚರ/ಸ್ಥಿರ ಸ್ವತ್ತುಗಳನ್ನು ಆತನಿಂದ ಬರತಕ್ಕ ಹಣಗಳ ಬಾಕಿಯನ್ನು ತೀರಿಸುವುದಕ್ಕಾಗಿ ಜಪ್ತಿ ಮಾಡಲಾಗಿದೆ. ಈ ಬಾಕಿಯನ್ನು ಬಡ್ಡಿ ಅಥವಾ ಇತರೆ ಖರ್ಚುಗಳ ಸಹಿತ ಮುಂಚಿತವಾಗಿ ಸಂದಾಯ ಮಾಡದೆ ಇದ್ದರೆ ಸದರಿ ಗ್ರಾಮದಲ್ಲಿರುವ ................................ ನ ಮನೆಯ ಬಳಿ ....................... ನೇ ಇಸವಿ ...................... ತಿಂಗಳ .......................... ನೇ ದಿನಾಂಕ .................. ವಾರ ದಿವಸ ಅಥವಾ ಹರಾಜು ಮುಂದುವರಿಸಿ ಇತರ ದಿನ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತದೆ. ಹರಾಜು ಹಗಲು ................... ಘಂಟೆಗೆ ಪ್ರಾರಂಭವಾಗಿ, ಅತ್ಯಧಿಕ ಬಿಡ್ಡುದಾರನಿಗೆ ನಗದು ಮೊಬಲಗಿನ ಸಂದಾಯದ ಮೇಲೆ ಸ್ವತ್ತನ್ನು ಒಪ್ಪಿಸಲಾಗುವುದು. ಪೂರ್ತಿಯಾಗಿ ಕ್ರಯದ ಹಣವನ್ನು ಕೊಟ್ಟ ಹೊರತು ಯಾವುದೇ ಸ್ವತ್ತನ್ನು ಅಥವಾ ಭಾಗಶಃ ಸ್ವತ್ತನ್ನು ಖರೀದಿದಾರನಿಗೆ ಕೊಡಲಾಗುವುದಿಲ್ಲ.

ಖರೀದಿದಾರನು ಕ್ರಯದ ಹಣವನ್ನು ಸಂದಾಯ ಮಾಡಲು ತಪ್ಪಿದಲ್ಲಿ ಸ್ವತ್ತನ್ನು ಎರಡನೇ ಬಾರಿ ಹರಾಜು ಮಾಡಲಾಗುವುದು. ಅಂಥ ಎರಡನೇ ಹರಾಜಿನಲ್ಲಿ ಉಂಟಾಗಬಹುದಾದ ಯಾವುದೇ ನಷ್ಟವನ್ನು ಹಾಗೂ ಅಂಥ ಹರಾಜು ಮಾಡುವಾಗ ತಗಲುವ ಖರ್ಚನ್ನು ಸಹ ನೀಡಲು, ಮೊದಲು ತಪ್ಪಿದ ಖರೀದಿದಾರನು ಜವಾಬ್ದಾರನಾಗುವನು.

ಈ ಅಧಿಸೂಚನೆಯನ್ನು .......................... ನೇ ಇಸವಿಯ ..................... ತಿಂಗಳ ......................... ನೇ ದಿನಾಂಕದಂದು ಸ್ವತ್ತುಗಳನ್ನು ಜಪ್ತಿ ಮಾಡಲಾದ ಸುಸ್ತಿದಾರನ (ಸಂದರ್ಭಾನುಸಾರವಾಗಿ) ಮನೆ ಅಥವಾ ವಠಾರ (ಮಳಿಗೆ)ಗಳಿಗೆ ಅಂಟಿಸಲಾಗುತ್ತದೆ.

**ಜಪ್ತಿ ಮಾಡಲಾದ ಸ್ವತ್ತುಗಳ ಪಟ್ಟಿ**

ಸ್ಥಳ :

ದಿನಾಂಕ : ಮಾರಾಟ ಅಧಿಕಾರಿ

ಸೂಚನೆ : ಈ ಅಧಿಸೂಚನೆಯನ್ನು ಮನೆ ಅಥವಾ ವಠಾರಗಳಿಗೆ ಅಂಟಿಸಿದ ದಿನಾಂಕದಿಂದ ಹರಾಜು ಆಗುವವರೆಗೆ ಹದಿನೈದು ದಿನಗಳ ಕಾಲಾಂತರವಿರತಕ್ಕದ್ದು. ಜಪ್ತಿ ಮಾಡಲಾದ ಸ್ವತ್ತು ಬೇಗನೇ ಹಾಳಾಗುವ ಸ್ವರೂಪದ್ದಾಗಿದ್ದರೆ, ಬಾಕಿಯಾದ ಹಣವನ್ನು ಈ ಮೊದಲೇ ಸಂದಾಯ

ಮಾಡಿರದಿದ್ದರೆ ಸದರಿ ಹದಿನೈದು ದಿನಗಳ ಮುಕ್ತಾಯವಾಗುವ ಮುಂಚೆಯೇ ಯಾವ ಸಮಯದಲ್ಲಾದರೂ ಮಾರಾಟ ಅಧಿಕಾರಿಯು ಅವುಗಳನ್ನು ಮಾರಾಟ ಮಾಡಬಹುದು.

ಷರಾ : ಅತ್ಯಧಿಕ ಬಿಡ್ಡಿನ ಮೊಬಲಗು ಸ್ವತ್ತಿನ ಸೂಕ್ತ ಮೌಲ್ಯವಲ್ಲವೆಂದು ಕಂಡುಬಂದ ಕಾರಣದಿಂದ ಅಥವಾ ಇತರೆ ಕಾರಣಗಳಿಂದ ಅತ್ಯಧಿಕ ಬಿಡ್ಡನ್ನು ಸ್ವೀಕರಿಸುವುದು ಯುಕ್ತವಲ್ಲವೆಂದು ಹರಾಜು ಮಾಡುವ ಅಧಿಕಾರಿಗೆ ಕಂಡುಬಂದರೆ, ಸದರಿ ಅತ್ಯಧಿಕ ಬಿಡ್ಡನ್ನು ನಿರಾಕರಿಸುವುದು ಹರಾಜು ಮಾಡುವ ಅಧಿಕಾರಿಯ ವಿವೇಚನೆಗೆ ಸೇರಿರತಕ್ಕದ್ದು.

**ನಮೂನೆ – 7**

ನಿಯಮ 17(2)(ಎ) ಮತ್ತು (ಬಿ)

**(ಆಧಾರ ಮಾಡಲಾದ ಸ್ಥಿರ ಸ್ವತ್ತುಗಳನ್ನು ಮಾರಾಟ ಮಾಡುವ ಮುಂಚೆ ನೀಡಬೇಕಾದ ತಗಾದೆ ನೋಟೀಸು)**

**ಸ್ಥಿರಸ್ವತ್ತಿನ ಜಫ್ತಿಗಾಗಿ ನೋಟೀಸ್**

.....................ಜಿಲ್ಲೆಯ......................ತಾಲ್ಲೂಕಿನ ...............ಗ್ರಾಮದ ಇವರಿಗೆ ನೀಡಲಾದ ತಗಾದೆ ನೋಟೀಸು.

............ ಸಹಕಾರಿಯು ಪಡೆದುಕೊಂಡಿರುವ ದಿನಾಂಕ : ................... ರ ಡಿಕ್ರಿ / ಅವಾರ್ಡ್ / ತೀರ್ಪು / ಆದೇಶ ಸಂಖ್ಯೆ .........ದಿನಾಂಕ : ................ ಪ್ರಕಾರ, ಬಾಕಿ ಮೊತ್ತ ...................ಗಳನ್ನು ಈ ನೋಟೀಸು ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಪಾವತಿಸತಕ್ಕದ್ದು. ಪಾವತಿಸದೇ ಇದ್ದಲ್ಲಿ ಅನುಸೂಚಿಯಲ್ಲಿ ನಮೂದಿಸಿದ ಸ್ವತ್ತುಗಳನ್ನು ಜಫ್ತಿಮಾಡಿ ಮಾರಾಟ ಮಾಡಲಾಗುವುದೆಂದು ಈ ಮೂಲಕ ನೋಟೀಸು ನೀಡಲಾಗಿದೆ.

ಸ್ಥಳ : ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್
ದಿನಾಂಕ : ...................... ಉಪ ವಿಭಾಗ

**ಅನುಸೂಚಿ**

ಇಲ್ಲಿ ಜಫ್ತಿ ಮಾಡಬೇಕಾದ ಸ್ವತ್ತುಗಳ ವಿವರಗಳನ್ನು ದಾಖಲಿಸತಕ್ಕದ್ದು.

ಈ ನೋಟೀಸನ್ನು ಜಾರಿ ಮಾಡುವ ವ್ಯಕ್ತಿಯು ಈ ನೋಟೀಸನ್ನು ಸುಸ್ತಿದಾರನಿಗೆ ಅಥವಾ ಅವನ ಕುಟುಂಬದ ಒಬ್ಬ ವಯಸ್ಕ ಪುರುಷ ಸದಸ್ಯನಿಗೆ ಅವರ ಮೇಲ್ಕಾಣಿಸಿದ ಸಾಮಾನ್ಯ ವಿಳಾಸದಲ್ಲಿ ತಲುಪಿಸತಕ್ಕದ್ದು ಅಥವಾ ಅವನಿಂದ ಅಧಿಕಾರ ಹೊಂದಿದ ಏಜೆಂಟನಿಗೆ ತಲುಪಿಸತಕ್ಕದ್ದು ಅಥವಾ ಈ ರೀತಿ ವೈಯಕ್ತಿಕವಾಗಿ ಜಾರಿ ಮಾಡಲು ಆಗದಿದ್ದ ಪಕ್ಷದಲ್ಲಿ, ಸುಸ್ತಿದಾರನ ಗೊತ್ತಿರುವ ಅಂಚೆಯ ವಿಳಾಸದಲ್ಲಿ ಅಥವಾ ಜಫ್ತಿ ಮಾಡಬೇಕಾಗಿರುವ/ಮಾಡಬೇಕಾದ ಸ್ಥಿರಾಸ್ತಿಯ ಎದ್ದುಕಾಣುವ ಭಾಗದಲ್ಲಿ ಅಂಟಿಸತಕ್ಕದ್ದು.

ಯಾವ ರೀತಿ ನೋಟೀಸನ್ನು ಜಾರಿ ಮಾಡಲಾಗಿದೆಯೆನ್ನುವ ಬಗ್ಗೆ ಜಾರಿಗೊಳಿಸುವ ವ್ಯಕ್ತಿಯು ಸದರಿ ನೋಟೀಸಿನ ಮೇಲೆ ದಾಖಲೆ ಮಾಡತಕ್ಕದ್ದು.

**ನಮೂನೆ – 8**

**ನಿಯಮ 17(2) (ಡಿ)**

1. ನಂ. ................ ನೇ .................. ಸಹಕಾರಿಯ ಸುಸ್ತಿದಾರ ................... ನಿಂದ ಬಾಕಿಯಾಗಿರುವ ..................ರೂಪಾಯಿಗಳ ಸಂದಾಯದ ಬಗ್ಗೆ ಈ ಕೆಳಗೆ ನಮೂದಿಸಲಾದ ಸ್ಥಿರ ಸ್ವತ್ತುಗಳ ಜಪ್ತಿಯನ್ನು 200......... ನೇ ಇಸವಿ ................. ತಿಂಗಳ ............. ದಿನಾಂಕ ........... ವಾರದಂದು ಬಹಿರಂಗ ಹರಾಜು ಮೂಲಕವಾಗಿ ಅಥವಾ ಹರಾಜನ್ನು ಮುಂದೂಡಲಾದ ದಿನಾಂಕದಂದು ............... ಜಿಲ್ಲೆ ............ತಾಲ್ಲೂಕು .................................. ಗ್ರಾಮದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಹಗಲು ...................... ಗಂಟೆಗೆ ಪ್ರಾರಂಭವಾಗಿ ಅತ್ಯಧಿಕ ಬಿಡ್ ಕೂಗುವುವವರಿಗೆ ಸ್ವತ್ತನ್ನು ಮೂರು ಸಲಕ್ಕಾಗಿ, ಖಾಯಂ ಮಾಡಿ ಕೊಡಲಾಗುವುದು.
2. ಬಿಡ್ಡುದಾರರು ಹರಾಜಿನ ಮೊಬಲಗಿನ ಪೈಕಿ ಅದರ ಶೇಕಡಾ 15ಕ್ಕೆ ಸಮನಾದ ಮೊಬಲಗನ್ನು ಹರಾಜಿನ ಸಮಯದಲ್ಲಿ ಠೇವಣಿ ಇಡತಕ್ಕದ್ದು ಮತ್ತು ಬಿಡ್ಡು ಹಣದ ಉಳಿದ ಮೊಬಲಗನ್ನು ಮಾರಾಟದ ದಿನಾಂಕದಿಂದ 15 ದಿವಸಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ ಅವರು ಇಟ್ಟಿದ್ದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು.
3. ಮೇಲೆ ಹೇಳಿದ ಪ್ರಕಾರ ನಿಗದಿತ ಸಮಯದೊಳಗೆ ಹಣವನ್ನು ಠೇವಣಿ ಇಡದಿದ್ದರೆ ಅಥವಾ ಅಂಥ ಮೊಬಲಗಿನ ಪೈಕಿ ಉಳಿದ ಮೊಬಲಗನ್ನು ಸಂದಾಯ ಮಾಡದಿದ್ದರೆ ಪ್ರಥಮ ಬಿಡ್ಡುದಾರನ ಸಂಬಂಧದಲ್ಲಿ ಆದ ವೆಚ್ಚ ಅಥವಾ ನಷ್ಟ ಒಳಗೊಂಡಂತೆ, ಆ ಸ್ವತ್ತಿನ ಮರು ಮಾರಾಟಕ್ಕಾಗಿ ಹೊಸ ಅಸೂಚನೆಯನ್ನು ಪ್ರಕಟಿಸಿದ ನಂತರ ಭೂಮಿಗಳನ್ನು ಪುನಃ ಮಾರಾಟ ಮಾಡಲಾಗುವುದು.
4. ಮಾರಾಟದ ಕಾಲದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಪರವಾಗಿಯೇ ಬಿಡ್ಡು ಮಾಡುತ್ತಾರೋ ಅಥವಾ ಅನ್ಯ ವಕ್ತಿಯ ಪರವಾಗಿ ಬಿಡ್ಡು ಮಾಡುತ್ತಾರೋ ಎಂಬುವುದನ್ನು ತಿಳಿಸಬೇಕೆಂದು ಕೋರಬಹುದು. ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಆ ಅನ್ಯ ವ್ಯಕ್ತಿಯು ಸ್ವತಃ ಸಹಿ ಮಾಡಿದ ಅಧಿಕಾರ ಪತ್ರವನ್ನು ಹಾಜರು ಮಾಡುವಂತೆ ಕೋರಬಹುದು. ಈ ಪ್ರಕಾರ ಹಾಜರುಪಡಿಸದೇ ಇದ್ದರೆ ಅವರ ಬಿಡ್ಡನ್ನು ತಿರಸ್ಕರಿಸಬಹುದು.
5. ಸುಸ್ತಿದಾರನಾಗಲೀ ಅಥವಾ ಅವರ ಪರವಾಗಿ ಯಾವೊಬ್ಬ ಏಜೆಂಟನಾಗಲೀ ಅಥವಾ ಜಪ್ತಿ ಮಾಡಲಾದ ಸ್ವತ್ತುಗಳ ಸಂಬಂಧದಲ್ಲಿ ಹಿತಾಸಕ್ತಿಯುಳ್ಳ ಕ್ಲೇಮುದಾರನಾಗಲಿ ಅಥವಾ ಯಾರೊಬ್ಬರು ಬಡ್ಡಿ ಮತ್ತು ಇತರ ಖರ್ಚುಗಳ ಸಹಿತ ಪೂರಾ ಮೊಬಲಗನ್ನು ಸಂದಾಯ ಮಾಡಿದರೆ ಹರಾಜನ್ನು ನಿಲ್ಲಿಸತಕ್ಕದ್ದು. ಪರಂತು, ಹಾಗೆ ಸಂದಾಯ ಮಾಡುವುದು ಹರಾಜು ಮಾಡಲು ನಿಗದಿಪಡಿಸಿದ ದಿನಾಂಕದ ಹಿಂದಿನ ದಿನದ ಸೂರ್ಯಾಸ್ತಕ್ಕೆ ಮುಂಚೆಯಾಗಿರತಕ್ಕದ್ದು.

6. ಹರಾಜು, ಉಪ ವಿಭಾಗೀಯ ಸಹಕಾರಿಯ ರಿಜಿಸ್ಟ್ರಾರರು ಅದನ್ನು ಖಾಯಂ ಮಾಡುವವರಿಗೆ ಖಾಯಂ ಆಗತಕ್ಕದ್ದಲ್ಲ. ಮಾರಾಟವು ಮುಕ್ತಾಯವಾದ ನಂತರ ಅದರ ಮೇಲಣ ಸ್ಟಾಂಪು ಶುಲ್ಕವನ್ನು ಪಾವತಿ ಮಾಡಿದಲ್ಲಿ ಸದರಿ ಉಪ ವಿಭಾಗದ ಸಹಾಯಕ ರಿಜಿಸ್ಟ್ರಾರನು ಸಹಿ ಹಾಗೂ ಮೊಹರು ಹಾಕಿರುವ ಮಾರಾಟದ ಪ್ರಮಾಣಪತ್ರವನ್ನು ಅವನಿಗೆ ನೀಡತಕ್ಕದ್ದು.
7. ಭೂಮಿಗಳ ವಿವರಣೆಯಲ್ಲಿ ಅಥವಾ ಅವುಗಳ ಅಂದಾಜು ವಿಸ್ತೀರ್ಣ ವಿಷಯದಲ್ಲಿ ತಪ್ಪುಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಸರ್ಕಾರವು ಜವಾಬ್ದಾರಿಯಾಗಿರುವುದಿಲ್ಲ ಎಂಬುದನ್ನು ಗಮನಿಸಿಬೇಕು.

| ತಾಲ್ಲೂಕು | ಗ್ರಾಮ | ಸುಸ್ತಿದಾರನ ಹೆಸರು | ಸುಸ್ತಿದಾರನಿಗೆ ಸೇರಿದ ಸ್ಥಿರ ಸ್ವತ್ತುಗಳ ವಿವರ, ಭೂಮಿ0ು ಸ.ನಂ. | ಅಂದಾಜು ವಿಸ್ತೀರ್ಣ | | ತೀರ್ಪು ಮೊಬಲಗು | | ಸ್ವತ್ತುಗಳ ಮೇಲೆ ಯಾವುದಾದರೂ ಋಣಗಳು ಇದ್ದ ಪಕ್ಷಕ್ಕೆ ಅವುವಗಳ ವಿವರ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | | 6 | | 7 | 8 |
| | | | | ಎ | ಸಂ | ರೂ. | ಪೈ. | | |

ಸ್ಥಳ : ಸಹಾಯಕ ರಿಜಿಸ್ಟ್ರಾರ್

ದಿನಾಂಕ : .................... ...... ಉಪವಿಭಾಗ

ಷರಾ : ಈ ನೋಟೀಸನ್ನು ಮಾರಾಟದ ಮೂವತ್ತು ದಿನಗಳ ಮುಂಚಿತವಾಗಿಯಾದರೂ ಸಹಾಯಕ ರಿಜಿಸ್ಟಾರ್‌ರವರ ಕಛೇರಿಯಲ್ಲಿ ತಾಲ್ಲೂಕು ಕಛೇರಿಯಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಮತ್ತು ಮಾರಾಟದ ದಿನಾಂಕಕ್ಕೆ ಮುಂಚೆ ನಿರಂತರ ಮೂರು ದಿನಗಳು ಸದರೀ ಗ್ರಾಮದಲ್ಲಿ ಡಂಗೂರ ಸಾರುವ ಮೂಲಕ ಪ್ರಕಟಿಸತಕ್ಕದ್ದು.

**ನಮೂನೆ – 9**

ನಿಯಮ 17(2) (ಡಿ)

**(ಸುಸ್ತಿದಾರನಿಗೆ ಮತ್ತು ಡಿಕ್ರಿದಾರನಿಗೆ ಮಾರಾಟದ ನೋಟೀಸು)**

.................................... ರಿಗೆ, ................................ ಸಹಕಾರಿಯ ಪರವಾಗಿ ಪಡೆದಿರುವ ಡಿಕ್ರಿ / ಅವಾರ್ಡ್ / ತೀರ್ಪು / ಆದೇಶದ ಸಂಬಂಧದಲ್ಲಿ ಬಾಕಿಯ ಸಂದಾಯದ ಬಗ್ಗೆ ಜಫ್ತಿಗೆ ಒಳಪಟ್ಟು ಈ ಕೆಳಗೆ ನಮೂದಿಸಿದ ಸ್ಥಿರಸ್ವತ್ತುಗಳನ್ನು 200.............. ನೇ ಇಸವಿ ................. ತಿಂಗಳು .......................ನೇ ದಿನಾಂಕ ..................... ವಾರ, ದಿನ ಅಥವಾ ಸದರಿ ಹರಾಜು ಬೇರೆ ಯಾವ ದಿನಾಂಕಕ್ಕೆ ಮುಂದೂಡಲಾಗುವುದೋ ಆ ದಿನಾಂಕ ...................... ಜಿಲ್ಲೆ.......................... ತಾಲ್ಲೂಕು ............................ ಗ್ರಾಮದಲ್ಲಿ ಬಹಿರಂಗ ಹರಾಜಿನ ಮೂಲಕವಾಗಿ ಮಾರಾಟ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಹಗಲು ................ ಗಂಟೆಗೆ ಪ್ರಾರಂಭವಾಗಿ, ಅತ್ಯಕ ಬಿಡ್ಡುದಾರನಿಗೆ ಮಾರಾಟದ ಸಂಬಂಧದಲ್ಲಿ ವಾಡಿಕೆಯಲ್ಲಿರುವ ಷರುತ್ತಗೊಳಪಟ್ಟು ಸ್ವತ್ತುಗಳನ್ನು ಮಾರಾಟ ಮಾಡಲಾಗುವುದು.

ಸ್ಥಳ : .....................                                        ಸಹಾಯಕ ರಿಜಿಸ್ಟ್ರಾರ್

ದಿನಾಂಕ : ..........................

**ಮಾರಾಟದ ಸ್ವತ್ತುಗಳ ಪಟ್ಟಿ**

| ತಾಲ್ಲೂಕು | ಗ್ರಾಮ | ಸುಸ್ತಿದಾರನ ಹೆಸರು | ಮಾರಾಟ ಮಾಡಲಾಗುವ ಸ್ಥಿರ | ಅಂದಾಜು ವಿಸ್ತೀರ್ಣ | ಯಾವ ಹಣದ ವಸೂಲಿಗಾ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಷರಾ : ನಿಯಮ 17(2)(ಎಫ್)ರ ಪ್ರಕಾರ ಮಾರಾಟದ ಅಸೂಚನೆಯನ್ನು ಪ್ರಕಟಿಸಿದ ನಂತರ ಈ ನೋಟೀಸನ್ನು ಸುಸ್ತಿದಾರನಿಗೆ ಮತ್ತು ಡಿಕ್ರಿದಾರನಿಗೆ ಕೊಡತಕ್ಕದ್ದು.

| ತಾಲ್ಲೂಕು | ಗ್ರಾಮ | ಸುಸ್ತಿದಾರನ ಹೆಸರು | ಸುಸ್ತಿದಾರನಿಗೆ ಸೇರಿದ ಮಾರಾಟ ಮಾಡಬೇಕಾದ ಸ್ಥಿರ ಸ್ವತ್ತುಗಳ ವಿವರ, ಭೂಮಿ0ು ಸ.ನಂ. | ಅಂದಾಜು ವಿಸ್ತೀರ್ಣ | | ತೀರ್ಪು ಮೊಬಲಗು | | ಸ್ವತ್ತುಗಳ ಮೇಲೆ ಯಾವುದಾದರೂ ಋಣಭಾರಗಳು ಇದ್ದ ಪಕ್ಷಕ್ಕೆ ಅವುವಗಳ ವಿವರ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | | 6 | | 7 | 8 |
| | | | | ಎ | ಸಂ | ರೂ. | ಪೈ. | | |

ಸ್ಥಳ:....... ಸಹಾಯಕ ರಿಜಿಸ್ಟ್ರಾರ್

ದಿನಾಂಕ: ........... ಉಪ ವಿಭಾಗ

ಷರಾ : ಈ ನೋಟೀಸನ್ನು ಮಾರಾಟದ ಮೂವತ್ತು ದಿನಗಳ ಮುಂಚಿತವಾಗಿಯಾದರೂ ಸಹಾಯಕ ರಿಜಿಸ್ಟ್ರಾರ್‌ರರ ಕಛೇರಿಯಲ್ಲಿಯೂ ತಾಲ್ಲೂಕು ಕಛೇರಿಯಲ್ಲಿಯೂ ಸೂಚನಾ ಫಲಕದಲ್ಲಿ ಅಂಟಿಸಿ ಮತ್ತು ಮಾರಾಟದ ದಿನಾಂಕಕ್ಕೆ ಮುಂಚೆ ಅನುಕ್ರಮವಾಗಿ ಮೂರು ದಿನಗಳು ಸದರೀ ಗ್ರಾಮದಲ್ಲಿ ಡಂಗುರ ಸಾರುವ ಮೂಲಕ ಪ್ರಕಟಿಸತಕ್ಕದ್ದು.

**ನಮೂನೆ – 10**

**ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 17(7)ರಡಿ ನೀಡಲಾದ ಮಾರಾಟದ ಪ್ರಮಾಣ ಪತ್ರ**

ಹೆಸರು..........................................................................................

ಸಹಕಾರಿಗಳ ಸಹಾಯಕ ರಿಜಿಸ್ಟಾರ್ .......................... ಉಪ ವಿಭಾಗ

ಅಮಲ್ಜಾರಿ ಅರ್ಜಿ ಸಂಖ್ಯೆ : .......................................... 200

................................................................ ಡಿಕ್ರಿದಾರರು

ವಿರುದ್ಧ

....................................... ತೀರ್ಪುಋಣಿ .......................... ಇವರ ಮಗನಾದ / ಮಗಳಾದ .......................... ಇವರು ..................... ಜಿಲ್ಲೆ..........................ತಾಲ್ಲೂಕು ............................ ಗ್ರಾಮದ ನಿವಾಸಿ ಆಗಿದ್ದು ಅವರು ....................................ಸಹಕಾರಿಗೆ ಬಾಕಿ ಇರುವ ಮೊಬಲಗಿನ ವಸೂಲಿಗಾಗಿ ಅಮಲ್ಜಾರಿ ಸಂಖ್ಯೆ :.......................... ದಿನಾಂಕ : ...................... ರನ್ವಯ ಕೆಳಗಿನ ಸ್ಥಿರ ಸ್ವತ್ತನ್ನು ................................ರವರ ಮಗನಾದ / ಮಗಳಾದ ............................ ಇವರು ...................... ಜಿಲ್ಲೆ ................. ತಾಲ್ಲೂಕು .......................... ಗ್ರಾಮದ ಇವರಿಗೆ ಮಾರಾಟ ಮಾಡಲಾಗಿರುತ್ತದೆ ಮತ್ತು ಸದರಿ ............................... ಅವರು ಪೂರ್ಣ ಖರೀದಿ ಮೊತ್ತ ರೂ.............. ಗಳನ್ನು ಪಾವತಿಸಿರುತ್ತಾರೆ ಮತ್ತು ಸದರಿ ಮಾರಾಟವನ್ನು ............................ ದಿನಾಂಕ ..............................ರಂದು ಪ್ರಮಾಣೀಕರಿಸಲಾಗಿರುತ್ತದೆ.

ಸಹಕಾರಿಗಳ ಸಹಾಯಕ ರಿಜಿಸ್ಟಾರ್
....................... ಉಪ ವಿಭಾಗ

**ನಮೂನೆ – 11**

ನಿಯಮ 17(7)

**ಸ್ಥಿರಸ್ವತ್ತುಗಳ ಖರೀದಿಯ ಪ್ರಕಟಣೆ**

................ ಜಿಲ್ಲಾ ................ ತಾಲ್ಲೂಕು ............ ಗ್ರಾಮದಲ್ಲಿರುವ ................ರು ಈ ಕೆಳಗೆ ನಮೂದಿಸಿದ ಸ್ಥಿರಸ್ವತ್ತುಗಳನ್ನು ಬಹಿರಂಗ ಹರಾಜಿನಲ್ಲಿ 200 ............... ನೇ ಇಸವಿ ............. ತಿಂಗಳ ......................... ನೇ ದಿನಾಂಕದಂದು ಖರೀದಿ ಮಾಡಿದ್ದಾರೆಂದು ಮತ್ತು ಹರಾಜಿನ ಹಣ ರೂ.......................ನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದಾರೆಂದು ಈ ಮೂಲಕ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಆದ್ದರಿಂದ ಸದರಿ ಸ್ಥಿರ ಸ್ವತ್ತುಗಳಲ್ಲಿರುವ ಸುಸ್ತಿದಾರನ ಎಲ್ಲಾ ಹಕ್ಕು ಮತ್ತು ಪ್ರಯೋಜನಗಳಿಗೆ ಸದರಿ ............................. ಇವರು ಉತ್ತರಾಧಿಕಾರಿಗಳಾಗಿದ್ದಾರೆ ಎಂಬುದಾಗಿ ಈ ಮೂಲಕ ಪ್ರಮಾಣೀಕರಿಸಲಾಗಿದೆ.

| ಗ್ರಾಮ ಮತ್ತು ತಾಲ್ಲೂಕು | ಸ್ಥಿರ ಸ್ವತ್ತುಗಳ ವಿವರ ಸ್ವರೂಪ | ಭೂಮಿಗಳ ವಿವರ | | | ಅಂದಾಜು ವಿಸ್ತೀರ್ಣ | ಷರಾ |
|---|---|---|---|---|---|---|
| | | ನಂ. | ಡು ನಂ. | ಖಾತೆದಾರನ ಹ ಸರು | | |
| 1 | 2 | 3 | 4 | 5 | 6 | 7 |
| | | | | | | |

ಸ್ಥಳ : .....................
ದಿನಾಂಕ : .................

ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್
.......... ಉಪ ವಿಭಾಗ

ಸೂಚನೆ : ಮಾರಾಟ ಮಾಡಲಾದ ಸ್ಥಿರಸ್ವತ್ತುಗಳು ಇರುವ ಗ್ರಾಮಗಳಲ್ಲಿಯೂ ರಾಜ್ಯಪತ್ರದಲ್ಲಿಯೂ ಈ ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು

**ಸ್ವತ್ತುಗಳ ಅನುಸೂಚಿ**

ಜಿಲ್ಲೆ : (ನೋಂದಣಿಗೆ ಸಂಬಂಧಿಸಿದಂತೆ)

ತಾಲ್ಲೂಕು :

ಗ್ರಾಮ :

ಸ್ವತ್ತು ವಿವರಗಳು ಹಾಗೂ ಚಕ್ಕುಬಂದಿ

ಸ.ನಂ.............................

ಪತ್ರ .............................

ಹೆಸರು............................

ಅಂದಾಜು ವಿಸ್ತೀರ್ಣ .................................... ಎ.ಗುಂ.

ಕಂದಾಯ ನಿರ್ಧರಣೆ ( ) ರೂ.ಪೈ

ಮಾರಾಟದ ಬೆಲೆ ಪ್ರತಿ ................................. ರೂ. ಪೈ.

ಮಾರಾಟದ ದಿನಾಂಕ :...............................

........................................................................................ ನನ್ನ ಸಹಿ ಹಾಗೂ ಮುದ್ರೆಯೊಂದಿಗೆ ................................. ದಿನಾಂಕದಂದು ನೀಡಲಾಗಿರುತ್ತದೆ.

ಸ್ಥಳ : ..................... ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್

ದಿನಾಂಕ : ................. .......... ಉಪ ವಿಭಾಗ

**ನಮೂನೆ – 12**

ನಿಯಮ 18(5)

**ಸ್ವತ್ತುಗಳ ಹಸ್ತಾಂತರ ವರ್ಗಾವಣೆ ದೃಢೀಕರಣ ಪತ್ರ**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ 43ನೇ ಪ್ರಕರಣದ ಅಡಿ ಪ್ರಸ್ತಾಪಿಸಲಾದ ಅವಾರ್ಡ್ ಅಥವಾ ಆದೇಶ ಅಥವಾ ಆವಾರ್ಡ್‌ಗಳ ಅಥವಾ ಆದೇಶಗಳನ್ವಯ ಜಾರಿ ಆದೇಶ ಇಲ್ಲವೇ ಸಮಾಪಕನು 50ನೇ ಪ್ರಕರಣದ ಅಡಿ ಸಹಕಾರಿಯ ಪರವಾಗಿ ಮಾಡಿದ ಆದೇಶ ಅಥವಾ ಆದೇಶಗಳನ್ವಯ, ಈ ಕೆಳಗೆ ನಮೂದಿಸಲಾದ ವ್ಯಕ್ತಿ ಅಥವಾ ವ್ಯಕ್ತಿಗಳ (ಸಾಲಗಾರನ ಅಥವಾ ಸಾಲಗಾರರ) ಆಸ್ತಿಗಳನ್ನು ಮಾರಾಟ ಮಾಡುವ ಸಲುವಾಗಿ .................... ದಿನಾಂಕದಂದು ಆದೇಶಿಸಲಾಗಿದೆ ಮತ್ತು ಸದರಿ ಸ್ವತ್ತನ್ನು ಕೊಂಡುಕೊಳ್ಳುವವರು ಇಲ್ಲವೆಂದು ಮತ್ತು ಮಾರಾಟ ಮಾಡಲಿಕ್ಕಾಗುವುದಿಲ್ಲವೆಂದು ನ್ಯಾಯಾಲಯ / ಜಿಲ್ಲಾಧಿಕಾರಿ / ರಿಜಿಸ್ಟ್ರಾರ್ ಅವರಿಗೆ ಮನವರಿಕೆಯಾಗಿದೆ.

ಆದ್ದರಿಂದ, ಅಂತಹ ಆಸ್ತಿಯ ಮೇಲೆ ಇರುವ ಸುಸ್ತಿದಾರನ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿ ಇವು ಸದರಿ ಸಹಕಾರಿಯಲ್ಲಿ ನಿಹಿತವಾಗತಕ್ಕದ್ದೆಂದೂ ಮತ್ತು ಅನುಸೂಚಿಯಲ್ಲಿರುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಸದರಿ ಸ್ವತ್ತು ಸಹಕಾರಿಗೆ ಹಸ್ತಾಂತರಿಸತಕ್ಕದ್ದೆಂದು ಈ ಮೂಲಕ ಆದೇಶಿಸಲಾಗಿರುತ್ತದೆ.

**ಸ್ವತ್ತಿನ ವಿವರಗಳು**

| ಸರ್ವೆ ನಂ. | ವಿಸ್ತೀರ್ಣ ಮತ್ತು ಕಂದಾಯ ನಿರ್ಧರಣೆ | ಸುಸ್ತಿ ಸಾಲಗಾರನ ಹಕ್ಕು, ಸ್ವಾಮ್ಯ, ಆಸಕ್ತಿ ಸ್ವರೂಪ | ಸ್ವತ್ತಿಗೆ ಸಂಬಂಧಿಸಿದ ಋಣಭಾರಗಳ ವಿವರಗಳು |
|---|---|---|---|
| 1 | 2 | 3 | 4 |
| | | | |

**ಅನುಸೂಚಿ**

ಸುಸ್ತಿ ಸಾಲಗಾರನು ಸಹಕಾರಿಗೆ ಸಂದಾಯ ಮಾಡಬೇಕಾದ ಬಾಕಿ ಮೊತ್ತದ ಸಂಪೂರ್ಣ / ಭಾಗಶಃ ತೀರಿಕೆಗಾಗಿ ಸದರಿ ಸ್ವತ್ತನ್ನು ಸಹಕಾರಿಗೆ ಹಸ್ತಾಂತರಿಸಲಾಗಿರುತ್ತದೆ.

ನನ್ನ ಸಹಿ ಹಾಗೂ ನ್ಯಾಯಾಲಯ / ಜಿಲ್ಲಾಧಿಕಾರಿ / ರಿಜಿಸ್ಟ್ರಾರ್ ಕಛೇರಿಯ ಮುದ್ರೆಯೊಂದಿಗೆ ದಿನಾಂಕ : ...................... ರಂದು ನೀಡಲಾಗಿರುತ್ತದೆ.

ನ್ಯಾಯಾಲಯ/ಜಿಲ್ಲಾಧಿಕಾರಿ
ಸಹಕಾರಿಗಳ ರಿಜಿಸ್ಟ್ರಾರ್

**ಅನುಬಂಧ – 1**

# GOVERNMENT OF KARNATAKA

No. CMW 34 CLM 2001

Karnataka Government Secretariat,
M.S. Building,
Bangalore, dated 28.02.2003

## ORDER

In exercise of the powers conferred by sub-section (3) of Section 3 of the Karnataka Souharda Sahakari Act, 1997 (Karnataka Act 17 of 2000) and in supersession of the order No. CMW 34 CLM 2001, dated 1st March, 2002, the Government of Karnataka hereby delegates the powers of the Registrar of Cooperative under the said Act, specified in column (3) of the table below, to the officers specified in the corresponding entries in column (2) thereof.

**TABLE**

| Sl. No. | Designation | Delegated powers under various sections of the Act |
|---|---|---|
| (1) | (2) | (3) |
| 1. | Assistant Registrar of Co-operatives, in sub-division (Except the Assistant Registrar of Co-operative in Bangalore Urban Districts)<br>(i) All Cooperatives whose area of operation is less than a taluk.<br>(ii) All Cooperatives whose registered offices are situated within the jurisdiction of the Assistant Registrar of Cooperatives concerned irrespective of their area of operation. | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, 48(5)<br><br>Section 43 |
| 2. | Assistant Registrar of Cooperatives, in Bangalore Urban District.<br>(i) Cooperatives whose area of operation is less than a taluk and whose registered office is situated in the jurisdiction of the Assistant Registrar concerned.<br>(ii) All Cooperatives whose registered offices are situated within the jurisdiction of the Assistant Registrar of Cooperatives concerned irrespective of their area of operation. | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, 48(5)<br><br>Section 43 |

| (1) | (2) | (3) |
|---|---|---|
| 3 | Deputy Registrar of Cooperatives in the District (Except the Deputy Registrar of Cooperatives of Bangalore Urban District)<br>Cooperatives whose area of operation extends to a taluk and below District. | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, and 48(5) |
| 4 | Deputy Registrar of Cooperatives I and II of Bangalore Urban District.<br>Cooperatives whose area of operation extends to a taluk and below District and whose registered office is situated within the jurisdiction of Deputy Registrar concerned. | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, and 48(5) |
| 5 | Joint Registrar of Cooperatives in Regional Office (Except Bangalore Region I and II)<br>Cooperative whose area of operation extends to a District but does not extend beyond a region. | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, and 48(5) |
| 6 | Joint Registrar of Cooperatives in Bangalore Region I and II<br>Cooperatives whose area of operation extends to a District but does not extend beyond a region and whose registered office is situated within the jurisdiction of the Joint Registrar of Cooperatives concerned Region | **Sections:-**<br>5, 6, 11, 30(3), 34, 35(3), (4) and (5), 36, 37, 39, 40, 41, 44, 45, and 48(5) |

BY ORDER AND IN THE NAME OF
THE GOVERNOR OF KARNATAKA

Sd/-
**(R.S. Huchachary)**
Officer on Special Duty
Cooperation Department.

**ಅನುಬಂಧ – 2**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ,**

ನಂ. 1, ಅಲಿ ಅಸ್ಕರ್ ರಸ್ತೆ , ಬೆಂಗಳೂರು

ಸಂಖ್ಯೆ : ಆರ್‌ಎಸ್‌ಆರ್/ಸೌಕಾ/164/ಎಕ್ಸ್ ಎಂಸಿ/2003–04

ದಿನಾಂಕ : 6–12–2003

ಗೆ,

ವ್ಯವಸ್ಥಾಪಕ ನಿರ್ದೇಶಕರು,

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು

ಮಾನ್ಯರೇ,

ವಿಷಯ : **ಡಿಸಿಸಿ ಬ್ಯಾಂಕುಗಳ ಸದಸ್ಯತ್ವಕ್ಕೆ ಹಾಗೂ ಸೌಲಭ್ಯಗಳಿಗೆ ಸಂಬಂಸಿದಂತೆ ಸ್ಪಷ್ಟೀಕರಣ ಕೋರಿ**

ಉಲ್ಲೇಖ : **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರ ಪತ್ರ ಸಂಖ್ಯೆ : 2/17/2003–04 ದಿನಾಂಕ 3–10–2003**

ವಿಷಯಕ್ಕೆ ಸಂಬಂಸಿದಂತೆ ದಿನಾಂಕ 1–1–2001ರಿಂದ ಜಾರಿಗೆ ತಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ನೋಂದಣಿಯಾದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಸದಸ್ಯತ್ವ ನೀಡಲು ನಿರಾಕರಿಸುತ್ತಿರುವ ಬಗ್ಗೆ ಉಲ್ಲೇಖದ ಪತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಈ ಕಛೇರಿಯ ಗಮನಕ್ಕೆ ತಂದು ಈ ಕುರಿತು ಗೊಂದಲ ನಿವಾರಿಸಲು ಕೋರಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16(1)(ಇ) ನಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ರಚಿತವಾದ ಒಂದು ಸಂಸ್ಥೆ ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆಯಬಹುದಾಗಿದ್ದು, ಈ ಅನ್ವಯ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಸದಸ್ಯತ್ವ ನೀಡಬಹುದಾಗಿದೆ ಎಂದು ಸ್ಪಷ್ಟೀಕರಿಸಲಾಗಿದೆ. ಈ ಸಹಕಾರಿಗಳಿಗೆ ಸಾಲ ಮತ್ತಿತರೆ ಸೌಲಭ್ಯಗಳನ್ನು ನೀಡುವ ಬಗ್ಗೆ ಆಯಾ ಜಿಲ್ಲಾ ಬ್ಯಾಂಕುಗಳ, ಆಡಳಿತ ಮಂಡಳಿಗಳು ಚಾಲ್ತಿಯಲ್ಲಿರುವ ನಬಾರ್ಡ ಮತ್ತು ಆರ್.ಬಿ.ಐ. ರವರು ನೀಡಿರುವ ಸೂಚನೆಗಳಂತೆ ನಿರ್ಣಯಿಸಿ ಅರ್ಹ ಮುಂದಿನ ಕ್ರಮವಿಡಬಹುದಾಗಿದೆಯೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ

ಸಹಿ/–

ಸಹಕಾರಿಗಳ ಸಂಯುಕ್ತ ನಿಬಂಧಕರು

(ಕೇಂದ್ರ ಸ್ಥಾನ)

**ಅನುಬಂಧ-3**

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಂಖ್ಯೆ: ಆರ್‌ಸಿಎಸ್/ಸೌಹಾರ್ದ/76/2020-21

ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ.1 ಅಲಿ_ಆಸ್ಕರ ರಸ್ತೆ,
ಬೆಂಗಳೂರು-560052
ದಿನಾಂಕ: 24 -12-2020

ಗೆ,

ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್ ಹಾಗೂ ವಸೂಲಾತಿ ಅಧಿಕಾರಿ
ಕರ್ನಾಟಕ ನಾಗರಿಕ ಸೇವಾ ನಿಯಮ-441
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು
ಡಾ.ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು

ಮಾನ್ಯರೇ,

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 43(1)ಸಿ ರಡಿಯಲ್ಲಿ ದತ್ತವಾದ ಅಧಿಕಾರದನ್ವಯ ಆದೇಶಗಳನ್ನು ಇತ್ಯಾದಿಗಳನ್ನು ಜಾರಿಗೊಳಿಸಲು ಮಾರಾಟಾಧಿಕಾರಿ ಅಧಿಕಾರ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂ. ಸರ್ಕಾರದ ಪತ್ರ ಸಂ.ಸಿಒ/40/ ಸಿಎಲ್‌ಎಮ್/2020(ಇ), ದಿ:18-06-2020.

******

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 43(1)ಸಿ ಪ್ರಾವಧಾನದಲ್ಲಿ ಅಧಿನಿಯಮದ 41ನೇ ಪ್ರಕರಣ, 50ನೇ ಪ್ರಕರಣ ಹಾಗೂ 46ನೇ ಪ್ರಕರಣದಡಿಯಲ್ಲಿ ಮಾಡಲಾದ/ಹೊರಡಿಸಲಾದ ಆದೇಶವನ್ನು ಜಾರಿಗೊಳಿಸಲು, ಸ್ವತ್ತಿನ ಜಪ್ತಿ ಮತ್ತು ಮಾರಾಟ, ಜಪ್ತಿ ಇಲ್ಲದೆ ಮಾರಾಟ ಮಾಡುವ ಅಧಿಕಾರವನ್ನು ಸಹಕಾರಿಗಳ ನಿಬಂಧಕರು ಬೇರೊಬ್ಬ ವ್ಯಕ್ತಿಗೆ ಪ್ರಾಧಿಕೃತಗೊಳಿಸಲು ಅವಕಾಶವಿರುತ್ತದೆ.

ಈ ಅವಕಾಶದನ್ವಯ ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಸಂಬಂಧಪಟ್ಟಂತೆ, ಸಹಾಯಕ ದರ್ಜೆ ಮತ್ತು ಮೇಲ್ಪಟ್ಟು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮಾರಾಟಧಿಕಾರಿ ಕರ್ತವ್ಯ ನಿರ್ವಹಿಸಲು ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾಧಿಕೃತಗೊಳಿಸಿದೆ.

1) ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ/ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ ಸಹಾಯಕ ದರ್ಜೆ ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ, ಅಮಲ್ಜಾರಿ ಅರ್ಜಿಯನ್ನು ಜಾರಿ ಮಾಡುವ ಕಾರ್ಯ ನಿರ್ವಹಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿ/ಒಕ್ಕೂಟ ಸಹಕಾರಿಯಲ್ಲಿ ಸಹಾಯಕ ದರ್ಜೆ ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ, ಸದಸ್ಯ ಸಹಕಾರಿಗಳಲ್ಲಿನ ಅಮಲ್ಜಾರಿ ಅರ್ಜಿಯನ್ನು ಜಾರಿ ಮಾಡುವ ಕಾರ್ಯ ನಿರ್ವಹಿಸತಕ್ಕದ್ದು.

2) ಅಮಲ್ಜಾರಿ ಕಾರ್ಯ ನಿರ್ವಹಿಸಬೇಕಾದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ/ ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ/ಸಂಯುಕ್ತ ಸಹಕಾರಿಯಲ್ಲಿ/ಒಕ್ಕೂಟ ಸಹಕಾರಿಯಲ್ಲಿ ಸಿಬ್ಬಂದಿಯ ಸೇವೆಯನ್ನು ಅಮಲ್ಜಾರಿಯ ಕಾರ್ಯಕ್ಕೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯಲ್ಲಿರುವ ಸಂಬಂಧಪಟ್ಟ ನಿಬಂಧಕರ ನಿಯಂತ್ರಣಕ್ಕೆ ನೀಡತಕ್ಕದ್ದು ಹಾಗೂ ಅಮಲ್ಜಾರಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಟಿ.ಎ ಮತ್ತು ಡಿ.ಎ ಗಳನ್ನು ಆಯಾ ಸಂಸ್ಥೆಯ ವತಿಯಿಂದಲೇ ಭರಿಸುವುದಕ್ಕೆ ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರಿಗಳು, ಸಂಯುಕ್ತ ಸಹಕಾರಿ ಮತ್ತು ಒಕ್ಕೂಟ ಸಹಕಾರಿಗಳು ಒಪ್ಪಿಗೆ ನೀಡತಕ್ಕದ್ದು.

3) ನಿಯೋಜಿತ ಸಿಬ್ಬಂದಿಯನ್ನು ಅಮಲ್ಜಾರಿ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ನಿಬಂಧಕರ ಅಧೀನ ಅಧಿಕಾರಿಗಳೆಂದು ಪಟ್ಟಣ ಸಹಕಾರಿ ಬ್ಯಾಂಕುಗಳು/ ಕೃಷಿಯೇತರ ಪತ್ತಿನ ಸಹಕಾರಿಗಳು/ಸಂಯುಕ್ತ ಸಹಕಾರಿ/ಒಕ್ಕೂಟ ಸಹಕಾರಿಗಳು ನಿರ್ಣಯ ಮಾಡತಕ್ಕದ್ದು ಹಾಗೂ ಅಮಲ್ಜಾರಿಗೆ ಸಂಬಂಧಿಸಿದಂತೆ ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರಿಗಳು, ಸಂಯುಕ್ತ ಸಹಕಾರಿ ಮತ್ತು ಒಕ್ಕೂಟ ಸಹಕಾರಿಗಳು ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

4) ಪಟ್ಟಣ ಸಹಕಾರಿ ಬ್ಯಾಂಕುಗಳು/ಕೃಷಿಯೇತರ ಪತ್ತಿನ ಸಹಕಾರಿಗಳು/ಸಂಯುಕ್ತ ಸಹಕಾರಿ/ಒಕ್ಕೂಟ ಸಹಕಾರಿಗಳು ತಮ್ಮ ವೃಂದ ಬಲದಲ್ಲಿ ವಸೂಲಾತಿಗೆ ಸಂಬಂಧಿಸಿದ ಕಾರ್ಯವನ್ನು ನಿರ್ವಹಿಸಲು ಸೂಕ್ತ ಹುದ್ದೆಗಳನ್ನು ಸೂಚಿಸತಕ್ಕದ್ದು.

5) ಕಾಲಕಾಲಕ್ಕೆ ಈ ಕಛೇರಿಯಿಂದ ಹೊರಡಿಸುವ ನಿರ್ದೇಶನ/ಸೂಚನೆಗಳನ್ನು ಪಾಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ಸಹಿ/–

(ಎಸ್.ಜಿಯಾಉಲ್ಲಾ,ಭಾ.ಆ.ಸೇ)

ಸಹಕಾರಿಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

**ಅನುಬಂಧ – 4**

Telegrams : "RUPLACARD"
Telex : 011 - 2318
011 - 2455

## RESERVE BANK OF INDIA

Rural Planning & Credit Department,
CENTRAL OFFICE
Central Office Building, 13th Floor, Fort, Mumbai - 400 001

Please quote in reply
RPCD NB. No. BC. 68.03.03.34/99-2000 March 10, 2000

All Scheduled Commercial Banks
(including Regional Rural Banks)

Dear Sir,

Bank finance to Co-operative Societies

1. In his budget speech on February 29, 2000, the Hon. Union Finance Minister, inter alia, had announced that RBI will advise banks to accord priority to the credit needs of the cooperatives which are entirely controlled by user-members and managed by them prudently.
2. As your are aware, certain States viz., Andhra Pradesh, Bihar, Jammu & Kashmir and Karnataka have enacted new State Co-operative Societies Acts, 1996, J&K Self Reliant Co-operative Societies Act, 1997 and Karnataka Souharda Sahakari Act, 1997. The co-operative societies registered under these Acts are entirely controlled by user members and managed by them. They can sek and obtain funding from commercial banks in normal course based on the bankability of their enterprise. It is, however, reported that these co-operative societies are not getting finance either from co-operative banks or commercial banks. The co-operative banks are not financing such co-operaive societies as these are not made members of District Central Co-operative Banks in view of their not conforming to the existing Co-operative Societies Acts. The commercial banks are also not financing these societies at present as they are under the impression that they have to deal with the cooperaives only which are ceded to them.
3. It has, therefore, been decided that commercial banks/RRBs should accord priority to the credit needs of the above co-operative societies which are registered under the new Acts and are entirely controlled by user-members and managed by them prudently.
4. You may please issue suitable guidelines to your Controlling Offices/branches to extend finance to the types of co-operative societies depending on bankability.
5. Please acknowledge receipt.

Yours faithfully
Sd/-
(R.M.Joshi), Chief General Manager

**ಅನುಬಂಧ – 5**

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

## ಸಹಕಾರಿಗಳ ನಿಂಬಂಧಕರು, ಕರ್ನಾಟಕ ರಾಜ್ಯ,

ನಂ. 1, ಆಲಿ ಅಸ್ಕರ್ ರಸ್ತೆ, ಬೆಂಗಳೂರು–560 052 ಇವರ ನಡವಳಿಕೆಗಳು

ನಂ.ಆರ್ಎಸ್ಆರ್/ಸೌಕಾ/46/ಎಕ್ಸ್ಎಂ.ಸಿ/2005–06 ದಿನಾಂಕ : 15.06.2005

ಗೆ,

(1) ಎಲ್ಲಾ ಪ್ರಾಂತಗಳ ಸಹಕಾರಿಗಳ ಸಂಯುಕ್ತ ನಿಬಂಧಕರು

(2) ಎಲ್ಲಾ ಜಿಲ್ಲೆಗಳ ಸಹಕಾರಿಗಳ ಉಪ ನಿಬಂಧಕರು

(3) ಎಲ್ಲಾ ಉಪ–ವಿಭಾಗಗಳ ಸಹಕಾರಿಗಳ ಸಹಾಯಕ ನಿಬಂಧಕರು

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿ ಕಾಯ್ದೆ ಅಡಿಯ ಸಹಕಾರಿಗಳ ಅಮಾನತ್ ಖಾತೆಯ ಹಣವನ್ನು ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾಯಿಸುವ ಕುರಿತು.

ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರ ಪತ್ರ ಸಂಖ್ಯೆ 34/2005–06 ದಿನಾಂಕ 29.04.2005.

ರಾಜ್ಯದ ಅನೇಕ ಕಡೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರಡಿ ನೋಂದಣಿಯಾಗುವ ಸಹಕಾರಿಗಳ ನೋಂದಣಿ ಪೂರ್ವದಲ್ಲಿ ಸಂಗ್ರಹಿಸಲಾಗುವ ಷೇರು ಹಣವನ್ನು ಯಾವುದಾದರೂ ಸಹಕಾರಿ ಬ್ಯಾಂಕಿನ ಅಮಾನತ್ ಖಾತೆಯಲ್ಲಿ ತೊಡಗಿಸ–ಲಾಗುತ್ತಿದೆ. ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾವಣೆ ಮಾಡಲು ಅನುಮತಿ ನೀಡುವಾಗ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ರೂ.20,000.00ಗಳ ಭದ್ರತಾ ಠೇವಣಿ ಮಾಡಿಸಿಕೊಳ್ಳಲು ಒತ್ತಾಯಪಡಿಸುತ್ತಿರುವುದಾಗಿ ಉಲ್ಲೇಖಗಳೊಂದಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು, ಈ ಕಛೇರಿಯ ಗಮನಕ್ಕೆ ತಂದು, ಈ ಬಗ್ಗೆ ಅಧೀನ ಕಛೇರಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಕೋರಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಸಹಕಾರಿಯ ನೋಂದಣಿ ನಂತರ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಕಾರಿಗಳಿಂದ ಭದ್ರತಾ ಠೇವಣಿ ಮಾಡಲು ಇಲಾಖಾಧಿಕಾರಿಗಳು ಆಗ್ರಹ ಮಾಡಬಾರದೆಂದು ತಿಳಿಸಲು ಮಾನ್ಯ ಸಹಕಾರಿಗಳ ನಿಬಂಧಕರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ

ಸಹಿ/–

**(ಎನ್.ಎಂ.ಪಾಟೀಲ್)**

ಸಹಕಾರಿಗಳ ಸಂಯುಕ್ತ ನಿಬಂಧಕರು (ಕೇಂದ್ರಸ್ಥಾನ)

**ಅನುಬಂಧ – 6**

## ಸಹಕಾರಿಗಳ ನಿಬಂಧಕರ ಕಚೇರಿ, ಕರ್ನಾಟಕ ರಾಜ್ಯ

ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು 560052

ನಂ: ಆರ್ ಎಸ್ ಆರ್/ಸೌ ಕಾ/64/ಎಕ್ಸ್ ಎಂ ಸಿ/2005–06 ದಿನಾಂಕ:17.6.2005

1) ಎಲ್ಲಾ ಪ್ರಾಂತೀಯ ಸಹಕಾರಿಗಳ ಸಂಯುಕ್ತ ನಿಬಂಧಕರಿಗೆ
2) ಎಲ್ಲಾ ಜಿಲ್ಲಾ ಸಹಕಾರಿಗಳ ಉಪನಿಬಂಧಕರಿಗೆ
3) ಎಲ್ಲಾ ಉಪ ವಿಭಾಗೀಯ ಸಹಾಯಕ ನಿಬಂಧಕರಿಗೆ

ಮಾನ್ಯರೇ

ವಿಷಯ : ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ ಅಡಿಯ ಸಹಕಾರಿಗಳ ಉಪವಿಧಿಗಳ ತಿದ್ದುಪಡಿಗೆ ಆಗುತ್ತಿರುವ ವಿಳಂಬ ಮತ್ತು ಮಾರ್ಗದರ್ಶನ ನೀಡುವ ಕುರಿತು

ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರ ಮನವಿ ಸಂಖ್ಯೆ 53: 2005–06 ದಿ: 9.05.2005

ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ ಅಡಿಯ ಸಹಕಾರಿಗಳ ಉಪವಿಧಿ ತಿದ್ದುಪಡಿ ಪ್ರಕ್ರಿಯೆ ಅಧೀನ ಕಛೇರಿಗಳಲ್ಲಿ ತುಂಬಾ ವಿಳಂಬವಾಗುತ್ತಿದ್ದು, ಕೆಲವು ಜಿಲ್ಲೆಗಳಲ್ಲಿ ಸೆಪ್ಟೆಂಬರ್ 2004ರಲ್ಲಿ ಸಲ್ಲಿಸಿದ ಪ್ರಸ್ತಾವೆಗಳಿಗೆ ಇನ್ನೂ ಅನುಮೋದನೆ ನೀಡದಿರುವುದನ್ನು ಸಹಕಾರಿಗಳು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಗಮನಕ್ಕೆ ತಂದಿರುವುದಾಗಿ ತಿಳಿಸಿ ಈ ಬಗ್ಗೆ ಕೆಲವೊಂದು ಅಂಶಗಳ ಬಗ್ಗೆ ಅಧೀನ ಕಛೇರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಈ ಕಛೇರಿಯನ್ನು ಕೋರಿರುತ್ತಾರೆ. ಆದುದರಿಂದ ಈ ಕೆಳಕಂಡ ಸೂಚನೆ ನೀಡಲಾಗಿದೆ.

1) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997 ಹಾಗೂ ನಿಯಮಗಳು 2004ರಲ್ಲಿ ಸಹಕಾರಿಗಳ ಉಪವಿಧಿ ತಿದ್ದುಪಡಿಗೆ ಯಾವುದೇ ನೋಂದಣಿ ಶುಲ್ಕ ಪಡೆಯುವ ಅವಕಾಶ ಇರುವುದಿಲ್ಲ. ಆದುದರಿಂದ ನೋಂದಣಿ ಶುಲ್ಕ ಸಂಗ್ರಹಿಸುವ ಅಗತ್ಯವಿಲ್ಲ.

2) ಕಲಂ 11(4)ರಡಿಯಲ್ಲಿ ಉಪವಿಧಿಗಳ ನೋಂದಣಿ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿದ್ದಲ್ಲಿ ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳ ಒಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಾಯಿಸಬೇಕು. ತಿದ್ದುಪಡಿಗಳು ನಿಯಮಾನುಸಾರ ಇಲ್ಲದಿದ್ದಲ್ಲಿ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ತಿರಸ್ಕರಿಸತಕ್ಕದ್ದು. ಇಲ್ಲದಿದ್ದಲ್ಲಿ ತೊಂಬತ್ತು ದಿನಗಳ ನಂತರ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸುವ ಅವಕಾಶವಿರುತ್ತದೆ. ಆದುದರಿಂದ ಅಧೀನಾಧಿಕಾರಿಗಳು 90 ದಿನಗಳೊಳಗಾಗಿ ನೋಂದಣಿಗೆ ಕ್ರಮವಿಡತಕ್ಕದ್ದು. ಕಲಂ 11(6)ರಡಿ ತಿದ್ದುಪಡಿಗಳು ನೋಂದಾಯಿತವಾಗಿವೆ ಎಂದು ಭಾವಿಸಲಾದ ಉಪವಿಧಿಗಳಿಗೆ ಕಾಯ್ದೆ ಕಲಂ 11(5)ರಡಿ ಸಂಬಂಧಪಟ್ಟ ಪ್ರಾಧಿಕಾರ ಪ್ರಮಾಣಪತ್ರ ನೀಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ತಿದ್ದುಪಡಿಗಳ ಪ್ರಸ್ತಾವೆಯನ್ನು ತೊಂಬತ್ತು ದಿನಗಳೊಳಗೆ ನೋಂದಾಯಿಸುವ ಅಥವಾ ತಿರಸ್ಕರಿಸುವ ಆದೇಶ ಹೊರಡಿಸಲು ಸೂಚಿಸಿದೆ.

3) ಸಹಕಾರಿಗಳ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಧಿಕಾರ ಪ್ರತ್ಯಾಯೋಜಿಸಲ್ಪಟ್ಟಿದ್ದು, ತಮ್ಮ ತಮ್ಮ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಸಹಕಾರಿಗಳು ಉಪವಿಧಿಗಳ ನೋಂದಣಿಗೆ ಪ್ರಸ್ತಾವ ಸಲ್ಲಿಸಿದಾಗ ಅಧೀನ ಕಛೇರಿಗಳ ಮುಖಾಂತರ ಪ್ರಸ್ತಾವ ಸಲ್ಲಿಸುವಂತೆ ಸೂಚಿಸುವುದು ಸರಿಯಾದ ಕ್ರಮವಲ್ಲ. ನೋಂದಣಿ ಪ್ರಾಧಿಕಾರಿಗಳು ಪ್ರಸ್ತಾವೆಯನ್ನು ಸ್ವೀಕರಿಸಿದ ನಂತರ ನಿಯಮಾನುಸಾರ ನೋಂದಣಿಗೆ ಕ್ರಮವಿಡಬೇಕಾಗುತ್ತದೆ. ಅಗತ್ಯವಾದಲ್ಲಿ ಮಾತ್ರ ಅಧೀನ ಕಛೇರಿಗಳಿಂದ ವರದಿ ಪಡೆಯಬಹುದಾಗಿದೆ.

4) ಸಹಕಾರಿಗಳು ತಮ್ಮ ಹಾಲಿ ಇರುವ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಲು ಉಪವಿಧಿಗೆ ತಿದ್ದುಪಡಿ ಮಾಡಲು ಉದ್ದೇಶಿಸಿದಲ್ಲಿ ಕಾರ್ಯವ್ಯಾಪ್ತಿ ಹೆಚ್ಚಿಸುವ ತಿದ್ದುಪಡಿಗೆ ಪೂರ್ವದಲ್ಲಿ ಇದ್ದಂತಹ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ ಆ ಅಧಿಕಾರಿಗಳು ಕಾರ್ಯವ್ಯಾಪ್ತಿ ಹೆಚ್ಚಿಸುವ ಬಗ್ಗೆ ಮನವರಿಕೆ ಮಾಡಿಕೊಂಡು ತಮ್ಮ ಮೇಲಕಾರಿಗಳಿಗೆ ಪ್ರಸ್ತಾವೆಯನ್ನು ಶಿಫಾರಸು ಮಾಡಬೇಕು.

ಉಪವಿಧಿಗಳ ತಿದ್ದುಪಡಿಗಳ ಪ್ರಸ್ತಾವೆಯಲ್ಲಿ ಆಗುತ್ತಿರುವ ವಿಳಂಬವನ್ನು ಪರಿಗಣಿಸಿ, ಈ ಮೇಲಿನ ಸೂಚನೆ ನೀಡಲಾಗುತ್ತಿದ್ದು ಯಾವುದೇ ಆಕ್ಷೇಪಣೆಗಳಿಗೆ ಗೊಂದಲಗಳಿಗೆ ಅವಕಾಶ ನೀಡದಂತೆ ಕ್ರಮವಿಡಲು ಸೂಚನೆ ನೀಡಲಾಗಿದೆ.

ಸಹಿ/–

(ಸಹಕಾರಿಗಳ ನಿಬಂಧಕರು)

ಕರ್ನಾಟಕ ರಾಜ್ಯ, ಬೆಂಗಳೂರು

## ಅನುಬಂಧ – 7

ಕರ್ನಾಟಕ ಸರ್ಕಾರ.

ಸಂಖ್ಯೆ:ಸಿಒ 176 ಸಿಎಲ್‌ಎಂ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08-01-2016.

### ಅಧಿಸೂಚನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ಪ್ರಕರಣ 3ರ ಉಪಪ್ರಕರಣ (3)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ:ಸಿಒ 220 ಸಿಎಲ್‌ಎಂ 2005 ದಿನಾಂಕ:22-08-2005 ಹಾಗೂ ಸಂಖ್ಯೆ ಸಿಒ 295 ಸಿಎಲ್‌ಎಂ 2005, ದಿನಾಂಕ:21-08-2006 ಅನ್ನು ರದ್ದುಪಡಿಸಿ ಮತ್ತು ಅಧಿಸೂಚನೆ ಸಂಖ್ಯೆ:ಸಿಒ 355 ಸಿಎಲ್‌ಎಂ 2005 ದಿನಾಂಕ:12-04-2006 ಅನ್ನು ಭಾಗಶಃ ಮಾರ್ಪಡಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ಉಪಬಂಧಗಳಡಿಯಲ್ಲಿ ಸಹಕಾರಿಗಳ ರಿಜಿಸ್ಟ್ರಾರರಿಗೆ ಪ್ರದತ್ತವಾದ ಅಧಿಕಾರಗಳನ್ನು ಈ ಕೆಳಕಂಡ ಕೋಷ್ಟಕದ ಅಂಕಣ (4)ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳನ್ನು ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳಿಗೆ ಕ್ರಮವಾಗಿ ಅಂಕಣ (3) ರಲ್ಲಿ ನಿರ್ದಿಷ್ಟಪಡಿಸಿರುವ ಸಹಕಾರಿಗಳ ಕಾರ್ಯವ್ಯಾಪ್ತಿಗೆ ಒಳಪಟ್ಟು ಪ್ರಧಾನ ಮಾಡಿದೆ, ಅಂದರೆ:

| ಕ್ರಮ ಸಂಖ್ಯೆ | ಅಧಿಕಾರಿಗಳು | ಸಹಕಾರಿಗಳು | ಪ್ರಧಾನ ಮಾಡಲಾದ ಅಧಿಕಾರಗಳು |
|---|---|---|---|
| 01 | 02 | 03 | 04 |
| 01 | ಉಪ ವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳನ್ನು ಹೊರತುಪಡಿಸಿ) | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 02 | ಬೆಂಗಳೂರು ನಗರ ಜಿಲ್ಲೆಗಳ ಉಪವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು. | ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳ ವ್ಯಾಪ್ತಿಯಲ್ಲಿ ನೋಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ ಎಲ್ಲಾ ಸಹಕಾರಿಗಳು | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 03 | ಜಿಲ್ಲಾ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳನ್ನು ಹೊರತುಪಡಿಸಿ) | ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 04 | ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು. | ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳ ಕಾರ್ಯ ವ್ಯಾಪ್ತಿಯಲ್ಲಿ ನೋಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |

//2//

| | | | |
|---|---|---|---|
| ೦೫ | ಪ್ರಾಂತೀಯ ಸಹಕಾರಿಗಳ ಜಂಟಿ ರಿಜಿಸ್ಟ್ರಾರ್‌ಗಳು | ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಮತ್ತು ವಿಭಾಗೀಯ ಮಟ್ಟದ ಕಾರ್ಯವ್ಯಾಪ್ತಿ ಮೀರದ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| ೦6 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮ-441 ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 37ಎ, 39, 40, 41 (41ರ ಉಪ ಪ್ರಕರಣ (1) (ಜಿ) ಮತ್ತು (ಸಿ) ಹೊರತುಪಡಿಸಿ) 44 ಮತ್ತು 45<br>**ನಿಯಮ:** 11, 27 ಮತ್ತು 29 |
| 07 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮ-441 ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 43<br>**ನಿಯಮ :** 13, '4, 16, 17, 18,19 ಮತ್ತು 29 |

ನಿಯಮ 441 ರಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದಕ್ಕೆ ನೇಮಕ ಹೊಂದಿದ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ಯಾವುದೇ ಸ್ಥಳದಲ್ಲಿ ಅಗತ್ಯಕ್ಕೆ ತಕ್ಕಂತೆ ಉಪವೇಶನಗಳನ್ನು ನಡೆಸಿ ಕಾರ್ಯ ನಿರ್ವಹಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಚ್. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.
ದೂರವಾಣಿ ಸಂಖ್ಯೆ 080-22032368.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. ಮತ್ತು ಅದರ 50 ಪ್ರತಿಗಳನ್ನು ಸಹಕಾರ ಇಲಾಖೆಗೆ ಕೂಡಲೇ ಕಳುಹಿಸಿಕೊಡಲು ಕೋರಲಾಗಿದೆ.

**ಪ್ರತಿಗಳು:**

1) ಸಹಕಾರ ಸಂಘಗಳ ನಿಬಂಧಕರು, ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52.
2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ. 17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-04
3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು.
4) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ॥ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10
5) ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
7) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಸಹಕಾರಿ ತತ್ವಗಳು

(1) ಸಹಕಾರಿಗಳು, ತಮ್ಮ ಸೇವೆಯನ್ನು ಬಳಸಿಕೊಳ್ಳಬಲ್ಲ ಹಾಗೂ ಸದಸ್ಯತ್ವದ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಇಚ್ಛೆಯಿರುವ ಎಲ್ಲಾ ವ್ಯಕ್ತಿಗಳಿಗೆ, ಲಿಂಗಬೇಧವಿಲ್ಲದೆ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ಮುಕ್ತವಾಗಿರುವ ಸ್ವಯಂಸೇವಾ ಸಂಸ್ಥೆಗಳಾಗಿರುತ್ತವೆ.

(2) ಸಹಕಾರಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಅವುಗಳ ಕಾರ್ಯನೀತಿಯನ್ನು ರೂಪಿಸುವ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಸದಸ್ಯರಿಂದ ನಿಯಂತ್ರಿತವಾದ ಸಂಸ್ಥೆಗಳಾಗಿರುತ್ತವೆ. ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುವ ಪುರುಷರು ಮತ್ತು ಮಹಿಳೆಯರು ಸದಸ್ಯತ್ವಕ್ಕೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿಗಳ ಸದಸ್ಯರು ಸಮನಾದ ಮತಚಲಾವಣೆ ಹಕ್ಕನ್ನು ಹೊಂದಿರುತ್ತಾರೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿ ಸಹಕಾರಿಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸಲಾಗಿದೆ.

(3) ಸದಸ್ಯರು ತಮ್ಮ ಸಹಕಾರಿಗೆ ನ್ಯಾಯಸಮ್ಮತವಾಗಿ ವಂತಿಗೆ ನೀಡುತ್ತಾರೆ ಮತ್ತು ಅದರ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕಡೇ ಪಕ್ಷ ಒಂದು ಭಾಗ ಸಾಮಾನ್ಯವಾಗಿ ಸಹಕಾರಿಯ ಸಾಮಾನ್ಯ ಸ್ವತ್ತಾಗಿರುತ್ತದೆ. ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ. ಸದಸ್ಯರು, ಹೆಚ್ಚುವರಿ ಹಣವನ್ನು ಈ ಮುಂದಿನ ಯಾವುದೇ ಅಥವಾ ಎಲ್ಲ ಉದ್ದೇಶಗಳಿಗೆ ಹಂಚಿಕೆ ಮಾಡುತ್ತಾರೆ; ಕಡೆಯ ಪಕ್ಷ ಮೀಸಲು ನಿಧಿಯ ಒಂದು ಭಾಗ ಅವಿಭಾಜ್ಯವಾಗಿರುವಂತೆ ಅದನ್ನು ಸ್ಥಾಪಿಸುವ ಮೂಲಕ ಸಹಕಾರಿಯ ಅಭಿವೃದ್ಧಿ, ಸಹಕಾರಿಯೊಡನೆ ಸದಸ್ಯರಿಗಿರುವ ವ್ಯವಹಾರಗಳ ಪ್ರಮಾಣಕ್ಕನುಗುಣವಾಗಿ ಸದಸ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಸದಸ್ಯರಿಂದ ಅನುಮೋದನೆಯಾದ ಇತರ ಚಟುವಟಿಕೆಗಳನ್ನು ಬೆಂಬಲಿಸುವುದು.

(4) ಎಲ್ಲ ಸಹಕಾರಿಗಳು ಅವುಗಳ ಸದಸ್ಯರಿಂದ ನಿಯಂತ್ರಿತವಾದ ಸ್ವಾಯತ್ತ ಸ್ವ-ಸಹಾಯ ಸಂಸ್ಥೆಗಳಾಗಿವೆ. ಸರ್ಕಾರವೂ ಸೇರಿದಂತೆ ಇತರ ಸಂಘ-ಸಂಸ್ಥೆಗಳೊಡನೆ ಸಹಕಾರಿಗಳು ಒಪ್ಪಂದ ಮಾಡಿಕೊಂಡರೆ ಅಥವಾ ಹೊರಗಿನ ಮೂಲಗಳಿಂದ ಬಂಡವಾಳ ಸಂಗ್ರಹಿಸಿದರೆ ಅವು ಅವುಗಳ ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೊಳಪಡುತ್ತದೆಂಬ ಹಾಗೂ ಅವು ತಮ್ಮ ಸಹಕಾರಿ ಸ್ವಾಯತ್ತತೆಯನ್ನು ಉಳಿಸಿಕೊಂಡು ಬರುತ್ತದೆಂಬ ನಿಬಂಧನೆಗಳ ಮೇಲೆ ಹಾಗೆ ಮಾಡುತ್ತವೆ.

(5) ಸಹಕಾರಿಗಳ ಅಭಿವೃದ್ಧಿಗೆ ತಮ್ಮ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲನುವಾಗುವಂತೆ ಸಹಕಾರಿಗಳು, ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ. ಇದರಿಂದ ಅವರು ಸಹಕಾರಿಯ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ಅವು ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಮತ್ತು ಮುಖಂಡರುಗಳಿಗೆ ತಿಳಿಸುತ್ತವೆ.

(6) ಸಹಕಾರಿಗಳು ತಮ್ಮ ಸದಸ್ಯರಿಗೆ ಹೆಚ್ಚು ಪರಿಣಾಮಕಾರಿ ಸೇವೆಯನ್ನು ಸಲ್ಲಿಸುತ್ತವೆ ಮತ್ತು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟಕಗಳ ಮೂಲಕ ಜೊತೆಗೂಡಿ ಕೆಲಸ ಮಾಡುವುದರಿಂದ ಸಹಕಾರಿ ಆಂದೋಲನವನ್ನು ಬಲಪಡಿಸುತ್ತವೆ.

(7) ಸದಸ್ಯರ ಅವಶ್ಯಕತೆಗಳಿಗೆ ಗಮನ ನೀಡುವುದರ ಜೊತೆ ಸಹಕಾರಿಗಳು ಅವುಗಳ ಸದಸ್ಯರು ಒಪ್ಪಿದ ಕಾರ್ಯನೀತಿಗಳ ಮೂಲಕ ಅವರವರ ಕೋಮುಗಳ ಸತತ ಅಭಿವೃದ್ಧಿಗೆ ಶ್ರಮಿಸುತ್ತವೆ.

ಬೆಲೆ: ರೂ.100/–